ಬುಧವಾರ, ಮಾರ್ಚ್ 16, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 75 | ಪುಟ 16
• www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಯುಪಿಐ ಹಾಗೂ ಡಿಜಿಟಲ್ ವಾಲೆಟ್ ಈ ಎರಡರ ಬಗ್ಗೆ ಜನರಲ್ಲಿ ಹಲವು ರೀತಿಯ ಗೊಂದಲಗಳಿವೆ. ಹಾಗಿದ್ದರೆ ಇವುಗಳ ನಡುವಿನ ವ್ಯತ್ಯಾಸವೇನು?

ಭೂಮಿ ರೈತರ ಅಸ್ಮಿತೆ ಪ್ರಶ್ನೆ: ನಿವೃತ್ತ ನ್ಯಾಯಮೂರ್ತಿ ನಾಗಮೋಹನದಾಸ್ 6
'ಹಿಜಾಬ್ ಅತ್ಯವಶ್ಯಕ ಧಾರ್ಮಿಕ ಆಚರಣೆಯಲ್ಲ' 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
55,776	16,663	₹53,000 (ಬೆಂಗಳೂರು)	₹69,000 (ಬೆಂಗಳೂರು)	76.62

ಶಾಲಾ–ಕಾಲೇಜುಗಳಲ್ಲಿ ಹಿಜಾಬ್‌ಗೆ ನಿರ್ಬಂಧ: ಸರ್ಕಾರದ ನಿಲುವಿಗೆ ಹೈಕೋರ್ಟ್ ಬಲ

'ಹಿಜಾಬ್ ಹಿಂದೆ ಕಾಣದ ಕೈ'

• ಬಿ.ಎಸ್.ಷಣ್ಮುಖಪ್ಪ

ಬೆಂಗಳೂರು: 'ಸರ್ಕಾರಿ ಕಾಲೇಜುಗಳ ತರಗತಿಗಳಲ್ಲಿ ಹಿಜಾಬ್ ಧರಿಸಲು ಅವಕಾಶ ನೀಡುವಂತೆ ನಿರ್ದೇಶಿಸಬೇಕು' ಎಂದು ಕೋರಲಾಗಿದ್ದ ಎಲ್ಲಾ ವೈಯಕ್ತಿಕ ಹಾಗೂ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಸಾರಾಸಗಟಾಗಿ ತಿರಸ್ಕರಿಸಿರುವ ಹೈಕೋರ್ಟ್, 'ಈ ವಿಷಯವನ್ನು ದೇಶದಾದ್ಯಂತ ವಿವಾದದ ವಿಷಯವನ್ನಾಗಿ ಮಾಡಿರುವ ಹಿಂದೆ ಕಾಣದ ಕೈಗಳು ಅಡಗಿವೆ' ಎಂಬ ಬಲವಾದ ಸಂಶಯ ವ್ಯಕ್ತಪಡಿಸಿದೆ.

ಈ ಕುರಿತಂತೆ ಕಾಯ್ದಿರಿಸಲಾಗಿದ್ದ ತೀರ್ಪನ್ನು ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ, ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಹಾಗೂ ನ್ಯಾಯಮೂರ್ತಿ ಜೈಬುನ್ನೀಸಾ ಮೊಹಿಯುದ್ದೀನ್ ಖಾಜಿ ಅವರನ್ನು ಒಳಗೊಂಡ ವಿಸ್ತೃತ ನ್ಯಾಯಪೀಠ ಮಂಗಳವಾರ ಬೆಳಗ್ಗೆ 10.35ಕ್ಕೆ ಪ್ರಕಟಿಸಿತು.

'ಹಿಜಾಬ್ ಇಸ್ಲಾಂನ ಅತ್ಯಾವಶ್ಯಕ ಧಾರ್ಮಿಕ ಆಚರಣೆ (ಇಆರ್‌ಪಿ–ಎಸೆನ್ಶಿಯಲ್ ರಿಲಿಜಿಯಸ್ ಪ್ರ್ಯಾಕ್ಟೀಸ್) ಎಂಬುದನ್ನು ಸಾಬೀತುಪಡಿಸುವಲ್ಲಿ ಅರ್ಜಿದಾರರು ವಿಫಲವಾಗಿದ್ದಾರೆ. ಅಂತೆಯೇ ಇಸ್ಲಾಂ ಧರ್ಮದ ಅನುಸಾರ ಹಿಜಾಬ್ ಅತ್ಯಾವಶ್ಯಕ ಆಚರಣೆ ಎಂಬ ಉಲ್ಲೇಖಕ್ಕೆ ಕುರಾನಿನಲ್ಲಿ ಯಾವುದೇ ಅಧಿಕೃತ ಆಧಾರವಿಲ್ಲ' ಎಂದು ನ್ಯಾಯಪೀಠದ ಮೂವರೂ ಸದಸ್ಯರು ಸಂಪೂರ್ಣ ಸಹಮತದ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ಸರ್ಕಾರ ಸಮವಸ್ತ್ರ ಸಂಹಿತೆ ಕುರಿತಂತೆ 2022ರ ಫೆಬ್ರುವರಿ 5ರಂದು ಸುತ್ತೋಲೆ ಹೊರಡಿಸುವುದಕ್ಕೂ ಮುನ್ನವೇ ಉಡುಪಿಯ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆರು ಮುಸ್ಲಿಂ ವಿದ್ಯಾರ್ಥಿನಿಯರು ಹೈಕೋರ್ಟ್ ಮೆಟ್ಟಿಲೇರಿ ಹಿಜಾಬ್ ಧರಿಸಲು ಅವಕಾಶ ನೀಡಬೇಕು ಎಂದು ಕೋರಿದ್ದರು. ಇದನ್ನು ಗಮನಿಸಿದಾಗ, 2021ರ ಡಿಸೆಂಬರ್ ಮೊದಲ ವಾರದಲ್ಲೇ ಈ ಕಾಲೇಜಿನಲ್ಲಿ ಹಿಜಾಬ್ ಕುರಿತಂತೆ ಹುನ್ನಾರ ರೂಪಿಸುವ ಪ್ರಯತ್ನ ನಡೆದಿದೆ' ಎಂದು ತೀರ್ಪು ಉಲ್ಲೇಖಿಸಿದೆ.

'ಬೇರೆ ಯಾವುದೇ ವಿದ್ಯಾರ್ಥಿನಿಯರು ಹಿಜಾಬ್ ಕುರಿತಂತೆ ಪ್ರಸ್ತಾಪ ಮಾಡದಿದ್ದ ಸನ್ನಿವೇಶದಲ್ಲಿ ಅರ್ಜಿದಾರ ವಿದ್ಯಾರ್ಥಿನಿಯರು ಮಾತ್ರವೇ ಈ ಕುರಿತಂತೆ ವಿವಾದ ಎಬ್ಬಿಸಲು ಮುಂದಾಗಿರುವುದು ಸಂಶಯಕ್ಕೆ ಆಸ್ಪದ ನೀಡಿದೆ. ಈ ಸಂಶಯದ ಹಿಂದೆ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ, ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ ಹಾಗೂ ಜಮಾತೆ ಇಸ್ಲಾಂನಂತಹ ಸಂಘಟನೆಗಳ ಕೈವಾಡ ಕಂಡುಬರುತ್ತಿದೆ. ಈ ಸಂಘಟನೆಯ ಮುಖ್ಯಸ್ಥರು ಅರ್ಜಿದಾರ ವಿದ್ಯಾರ್ಥಿನಿಯರ ಕಾಲೇಜಿನ ಪ್ರಾಂಶುಪಾಲರಿಗೆ ಬೆದರಿಕೆ ಹಾಕಿ ದಾಂದಲೆ ಎಬ್ಬಿಸಿರುವುದನ್ನು ಗಮನಿಸಿದರೆ ಇಲ್ಲೇನೊ ಮಸಲತ್ತು ನಡೆಯುತ್ತಿದೆ ಎಂಬ ಮತ್ತೊಂದು ಅರ್ಜಿಯ ಅರ್ಜಿದಾರರ ವಾದಕ್ಕೆ ಪುಷ್ಟಿ ದೊರೆಯುವಂತಿದೆ.

10ನೇ ಪುಟ ನೋಡಿ

'ಹುಸಿಯಾದ ನಿರೀಕ್ಷೆ: ಕಾನೂನು ಹೋರಾಟ'

ಉಡುಪಿ: ಹಿಜಾಬ್ ಪರವಾಗಿ ಹೈಕೋರ್ಟ್ ತೀರ್ಪು ಬರಬಹುದೆಂಬ ನಿರೀಕ್ಷೆ ಹುಸಿಯಾಗಿದೆ ಎಂದು ಹಿಜಾಬ್ ಪರವಾಗಿ ಕಾನೂನು ಹೋರಾಟ ನಡೆಸುತ್ತಿರುವ ವಿದ್ಯಾರ್ಥಿನಿಯರು ಮಂಗಳವಾರ ಬೇಸರ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿದ್ಯಾರ್ಥಿನಿ ಅಲ್ಮಾಸ್, 'ಹೈಕೋರ್ಟ್ ಆದೇಶದ ವಿರುದ್ಧ ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸುವ ಸಂಬಂಧ ವಕೀಲರ ಜತೆ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳಲಾಗುವುದು' ಎಂದರು.

10ನೇ ಪುಟ ನೋಡಿ

'ಸುಪ್ರೀಂ'ಗೆ ಮೇಲ್ಮನವಿ ಸಲ್ಲಿಕೆ

ನವದೆಹಲಿ: ಹಿಜಾಬ್ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಹೈಕೋರ್ಟ್ ನೀಡಿರುವ ತೀರ್ಪನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಮಂಗಳವಾರ ಮೇಲ್ಮನವಿ ಸಲ್ಲಿಸಲಾಗಿದೆ. ವಿದ್ಯಾರ್ಥಿಗಳಿಗೆ ಕಡ್ಡಾಯವಾದ ಸಮವಸ್ತ್ರ ರೂಪಿಸಿ ರಾಜ್ಯ ಸರ್ಕಾರ ಕಾಯ್ದೆ ಅಥವಾ ನಿಯಮ ಜಾರಿಗೊಳಿಸಿಲ್ಲ. ಹಾಗಾಗಿ, ಹಿಜಾಬ್ ಧರಿಸು ವುದನ್ನು ನಿಷೇಧಿಸಿ ಆದೇಶಿಸಿರುವುದು ಸರಿಯಲ್ಲ ಎಂದು ನಿಬಾ ನಾಜ್ ಎಂಬುವವರು ವಕೀಲ ಅನಾಸ್ ತನ್ವೀರ್ ಅವರ ಮೂಲಕ ಸಲ್ಲಿಸಿರುವ ಮೇಲ್ಮನವಿಯಲ್ಲಿ ದೂರಲಾಗಿದೆ.

10ನೇ ಪುಟ ನೋಡಿ

ಹೈಕೋರ್ಟ್ ಆದೇಶ ಪಾಲಿಸಬೇಕು: ಸಿ.ಎಂ



ಬೆಂಗಳೂರು: ಶಾಲೆಗಳಲ್ಲಿ ಸಮವಸ್ತ್ರ ಧರಿಸುವುದನ್ನು ಹೈಕೋರ್ಟ್ ಎತ್ತಿ ಹಿಡಿದಿದೆ. ಹಿಜಾಬ್ ಅತ್ಯಗತ್ಯ ಧಾರ್ಮಿಕ ಆಚರಣೆಯಲ್ಲ ಎಂದೂ ಹೇಳಿದೆ. ತೀರ್ಪಿನಿಂದ ಪ್ರಕರಣ ಇತ್ಯರ್ಥವಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ ಕಾನೂನನ್ನು ಕೈಗೆತ್ತಿಕೊಂಡರೆ ಗೃಹ ಇಲಾಖೆ ಕಠಿಣ ಕ್ರಮ ಜರುಗಿಸಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರಿಗೆ ಮಂಗಳವಾರ ಪ್ರತಿಕ್ರಿಯೆ ನೀಡಿದ ಅವರು, 'ಇದು ನಮ್ಮ ಮಕ್ಕಳ ಭವಿಷ್ಯ ಹಾಗೂ ಶಿಕ್ಷಣದ ಪ್ರಶ್ನೆ. ಮಕ್ಕಳಿಗೆ ವಿದ್ಯೆಗಿಂತ ಮುಖ್ಯವಾದದ್ದು ಬೇರೊಂದಿಲ್ಲ. ಹೀಗಾಗಿ ಹೈಕೋರ್ಟ್ ತ್ರಿಸದಸ್ಯ ಪೀಠ ನೀಡಿರುವ ತೀರ್ಪನ್ನು ಮಕ್ಕಳ ಹಿತದೃಷ್ಟಿಯಿಂದ ಎಲ್ಲರೂ ಪಾಲಿಸಬೇಕು. ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಎಲ್ಲರೂ ಸಹಕಾರ ನೀಡಬೇಕು' ಎಂದು ತಿಳಿಸಿದರು.

'ಎಲ್ಲ ಸಮುದಾಯದ ನಾಯಕರು, ಪಾಲಕರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ತೀರ್ಪನ್ನು ಒಪ್ಪಿಕೊಂಡು ಶಾಂತಿ ಸುವ್ಯವಸ್ಥೆಯನ್ನು ಕಾಪಾಡಿ, ತೀರ್ಪಿನ ಅನ್ವಯ ಶಿಕ್ಷಣ ನೀಡಲು ಸಹಕರಿಸಬೇಕು. ವಿದ್ಯಾರ್ಥಿಗಳು ಪರೀಕ್ಷೆಗಳಿಂದ ಹೊರಗುಳಿಯದೇ, ತರಗತಿಗಳಿಗೆ ಹಾಜರಾಗಬೇಕು. ನಿಮ್ಮ ಭವಿಷ್ಯವನ್ನು ಉತ್ತಮ ರೀತಿಯಲ್ಲಿ ರೂಪಿಸಲು ನಾವು ನೀವೆಲ್ಲರೂ ಸೇರಿ ಚಿಂತಿಸಬೇಕು' ಎಂದರು.

ಹೈಕೋರ್ಟ್ ನೀಡಿರುವ ತೀರ್ಪಿಗೆ ಎಲ್ಲರೂ ತಲೆ ಬಾಗಬೇಕು. ರಾಜಕೀಯ ಲಾಭ–ನಷ್ಟದ ಬಗ್ಗೆ ಯೋಚಿಸದೆ, ಅಲ್ಪಸಂಖ್ಯಾತ ಸಮುದಾಯದ ಮಕ್ಕಳ ಶಿಕ್ಷಣದ ಕುರಿತು ಚಿಂತಿಸಬೇಕು

ಎಚ್.ಡಿ. ದೇವೇಗೌಡ, ಜನತಾದಳ (ಎಸ್) ರಾಷ್ಟ್ರೀಯ ಅಧ್ಯಕ್ಷ

ಹೈಕೋರ್ಟ್ ಆದೇಶಕ್ಕೆ ತಲೆಬಾಗಬೇಕು. ಆದರೆ, ತೀರ್ಪಿನ ಬಗ್ಗೆ ಯಾವುದೇ ವ್ಯಾಖ್ಯಾನ ಮಾಡಲು ಹೋಗಲ್ಲ. ನಾನು ಪೂರ್ಣಪಾಠ ನೋಡಿಲ್ಲ. ಪೂರ್ತಿ ಓದಿದ ಬಳಿಕವೇ ಪ್ರತಿಕ್ರಿಯೆ ನೀಡುತ್ತೇನೆ

ಸಿದ್ದರಾಮಯ್ಯ, ವಿರೋಧಪಕ್ಷದ ನಾಯಕ

ಪ್ರಜೆಗಳಿಗೆ ಸಂವಿಧಾನ ನೀಡಿರುವ ಹಕ್ಕುಗಳನ್ನು ಹೈಕೋರ್ಟ್ ನಿರಾಕರಿಸಿದೆ. ಇದನ್ನು ನಾವು ಒಪ್ಪಿಕೊಳ್ಳುವುದಿಲ್ಲ. ನಮ್ಮ ಹೋರಾಟಕ್ಕೆ ಕೈಜೋಡಿಸಲು ಮನವಿ

ಎಂ.ಎಸ್.ಸಾಜಿದ್, ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾದ ರಾಷ್ಟ್ರೀಯ ಅಧ್ಯಕ್ಷ

ತೀರ್ಪಿನ ಮುಖ್ಯಾಂಶಗಳು

- ಆರು ವಿದ್ಯಾರ್ಥಿನಿಯರ ವೈಯಕ್ತಿಕ ಅರ್ಜಿ, ಇತರ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಗಳ ವಜಾ
- ಸಮವಸ್ತ್ರ ಸಂಹಿತೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ 05.02.2022ರಂದು ಹೊರಡಿಸಲಾದ ಸುತ್ತೋಲೆ ಎತ್ತಿಹಿಡಿದ ನ್ಯಾಯಪೀಠ
- ಕುರಾನ್‌ನಲ್ಲಿ ಮಹಿಳೆಯರು ಕುತ್ತಿಗೆಯಿಂದ ಕೆಳಭಾಗವನ್ನು ವಸ್ತ್ರದಿಂದ ಮುಚ್ಚಿಕೊಂಡಿರಬೇಕು ಎಂದಿದೆಯೇ ಹೊರತು ಹಿಜಾಬ್ ಪ್ರಸ್ತಾಪವಿಲ್ಲ
- ಸುಪ್ರೀಂಕೋರ್ಟ್ ತನ್ನ ತೀರ್ಪುಗಳಿಗೆ ಒಪ್ಪಿರುವ ಅಧಿ ಕೃತ ಕುರಾನ್ ವ್ಯಾಖ್ಯಾನದ ಪ್ರತಿಯನ್ನೇ ಈ ಪ್ರಕರಣದಲ್ಲೂ ಅವಲಂಬಿಸಿದ ನ್ಯಾಯಪೀಠ

ಇನ್ನಷ್ಟು ಸುದ್ದಿಗಳು 9, 10

'ಆರ್‌ಟಿಒ: ಕಿರುಕುಳ ತಪ್ಪಿಸಲು ಕ್ರಮ'

ಬೆಂಗಳೂರು: 'ಆರ್‌ಟಿಒ ಕಚೇರಿಗಳಲ್ಲಿ ಮಧ್ಯವರ್ತಿಗಳ ಹಾವಳಿಯಿಂದ ಆಗುತ್ತಿರುವ ಕಿರುಕುಳ ತಪ್ಪಿಸಲು ಸರ್ಕಾರ ಕಠಿಣ ಕ್ರಮ ಕೈಗೊಳ್ಳಲಿದೆ' ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಭರವಸೆ ನೀಡಿದರು.

ವಿಧಾನಪರಿಷತ್‌ನಲ್ಲಿ ಶೂನ್ಯವೇಳೆಯಲ್ಲಿ 'ಪ್ರಜಾವಾಣಿ'ಯ ಫೆ. 14ರ ಸಂಚಿಕೆಯಲ್ಲಿ ಪ್ರಕಟವಾದ 'ಆರ್‌ಟಿಒ ಕೂಟ; ದಲ್ಲಾಳಿಗಳದ್ದೇ ಆಟ' ವಿಶೇಷ ವರದಿ ಉಲ್ಲೇಖಿಸಿದ ಬಿಜೆಪಿಯ ತುಳಸಿ ಮುನಿರಾಜುಗೌಡ, ಆರ್‌ಟಿಒ ಕಚೇರಿಗಳಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಬಗ್ಗೆ ಪ್ರಸ್ತಾಪಿಸಿದರು.

'ಹಣ ಕೊಡದೆ ಯಾವ ಕೆಲಸಗಳೂ ನಡೆಯುತ್ತಿಲ್ಲ. ಮಧ್ಯವರ್ತಿಗಳ ಮೂಲಕವೇ ಹೋಗಬೇಕು. ಇದರಿಂದ ಚಾಲಕರು ಮತ್ತು ಜನಸಾಮಾನ್ಯರು ತೊಂದರೆ ಅನುಭವಿಸುತ್ತಿದ್ದಾರೆ' ಎಂದರು.

ಸಾರಿಗೆ ಸಚಿವ ಶ್ರೀರಾಮುಲು ಪರವಾಗಿ ಉತ್ತರಿಸಿದ ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ, 'ಸರ್ಕಾರ ಭ್ರಷ್ಟಾಚಾರವನ್ನು ಸಹಿಸುವುದಿಲ್ಲ. ಮಧ್ಯವರ್ತಿಗಳ ಹಾವಳಿಗೆ ಕಡಿವಾಣ ಹಾಕಲು ಬದ್ಧವಾಗಿದೆ' ಎಂದರು.

ಜೂನ್ 19ಕ್ಕೆ ಕಾಮೆಡ್–ಕೆ ಪ್ರವೇಶ ಪರೀಕ್ಷೆ

ಬೆಂಗಳೂರು: ಕಾಮೆಡ್–ಕೆ ಯುಜಿಇಟಿ ಮತ್ತು ಯೂನಿ–ಗೇಜ್ ಪ್ರವೇಶ ಪರೀಕ್ಷೆ ಈ ವರ್ಷದ ಜೂನ್ 19ರಂದು ನಡೆಯಲಿದೆ.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಕಾಮೆಡ್–ಕೆ ಕಾರ್ಯ-ನಿರ್ವಾಹಕ ಕಾರ್ಯದರ್ಶಿ ಎಸ್. ಕುಮಾರ್, 'ದೇಶದ 150ಕ್ಕೂ ಹೆಚ್ಚು ನಗರಗಳ 400ಕ್ಕೂ ಅಧಿಕ ಕೇಂದ್ರಗಳಲ್ಲಿ ಆನ್‌ಲೈನ್ ಮೂಲಕ ಪರೀಕ್ಷೆ ನಡೆಯಲಿದ್ದು, ಈ ಬಾರಿ ಒಟ್ಟು 80 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆ ಬರೆಯುವ ನಿರೀಕ್ಷೆ ಇದೆ. ವಿದ್ಯಾರ್ಥಿಗಳು www.comedk.org ಅಥವಾ www.uniguage.com ಮೂಲಕ ಮೇ 2ರವರೆಗೆ ಅರ್ಜಿ ಸಲ್ಲಿಸಬಹುದು' ಎಂದರು.

'ನೂತನ ರಾಷ್ಟ್ರೀಯ ಶಿಕ್ಷಣ ನೀತಿಗೆ (ಎನ್‌ಇಪಿ) ಪೂರಕವಾಗಿ ನಾವು 'ಕಾಮೆಡ್ ಕೇರ್ಸ್' ಹೆಸರಿನಡಿ ಸುಧಾರಿತ ಕೌಶಲ ಕೇಂದ್ರಗಳನ್ನು ಆರಂಭಿಸುತ್ತಿದ್ದೇವೆ. ಕಲಬುರಗಿ, ಧಾರವಾಡ, ಬೆಳಗಾವಿ, ಶಿವಮೊಗ್ಗ, ಹಾಸನ, ಮೈಸೂರು, ಬೆಂಗಳೂರು ಹಾಗೂ ದಕ್ಷಿಣ ಕನ್ನಡದಲ್ಲಿ ಇವು ಕಾರ್ಯನಿರ್ವಹಿಸುತ್ತವೆ.

4ನೇ ಪುಟ ನೋಡಿ

ಒಳ ಪುಟಗಳು

ನಾಳೆಯಿಂದ 'ಜೇಮ್ಸ್' ಹಬ್ಬ ಆರಂಭ 11

ಹೊಸ ಗ್ಲಾನ್ಸಾ ಬಿಡುಗಡೆ 12

ಚಿನಕುರಳಿ

ಪ್ರಕಾಶ್ ಶೆಟ್ಟಿ

ತೈಲ ಬೆಲೆ ನಿಯಂತ್ರಣಕ್ಕೆ ಮಧ್ಯಪ್ರವೇಶ: ಕೇಂದ್ರ

ನವದೆಹಲಿ (ಪಿಟಿಐ): ಜಾಗತಿಕ ಮಟ್ಟದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಸೂಕ್ಷ್ಮವಾಗಿ ಗಮನಿಸಲಾಗುತ್ತಿದ್ದು, ಜನಸಾಮಾನ್ಯರ ಹಿತಾಸಕ್ತಿ ರಕ್ಷಿಸುವ ಉದ್ದೇಶದಿಂದ ಇಂಧನ ಬೆಲೆಯನ್ನು ನಿಯಂತ್ರಣದಲ್ಲಿ ಇರಿಸಲು ಜಾಗರೂಕತೆಯಿಂದ ಮಧ್ಯಪ್ರವೇಶ ಮಾಡಲಾಗುವುದು ಎಂದು ಕೇಂದ್ರ ಸರ್ಕಾರವು ಮಂಗಳವಾರ ಹೇಳಿದೆ.

ಕಚ್ಚಾ ತೈಲದ ಬೆಲೆಯಲ್ಲಿನ ಏರಿಕೆ ಅಥವಾ ಇಳಿಕೆಯು ಸಗಟು ಬೆಲೆ ಸೂಚ್ಯಂಕದ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ, ಇಂಧನ ಮತ್ತು ವಿದ್ಯುತ್ ವಿಭಾಗಗಳ ಮೇಲೆ ನೇರ ಪರಿಣಾಮ ಉಂಟುಮಾಡುತ್ತದೆ ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಅವರು ರಾಜ್ಯಸಭೆಯಲ್ಲಿ ಹೇಳಿದ್ದಾರೆ. ಉಕ್ರೇನ್ ಬಿಕ್ಕಟ್ಟಿನಿಂದ ಉಂಟಾಗಿರುವ ತೈಲ ಬೆಲೆ ಏರಿಕೆಯನ್ನು ನಿಯಂತ್ರಣದಲ್ಲಿ ಇರಿಸಲು ಕೇಂದ್ರ ಸರ್ಕಾರವು ಎಕ್ಸೈಸ್ ಸುಂಕವನ್ನು ತಗ್ಗಿಸಲಿದೆಯೇ ಎಂಬ ಪ್ರಶ್ನೆಗೆ ಸಚಿವರು, 'ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿನ ಬೆಲೆ, ವಿನಿಮಯ ದರ, ತೆರಿಗೆ ಮಟ್ಟ, ಸಾಗಣೆ ವೆಚ್ಚ ಆಧರಿಸಿ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳುತ್ತವೆ' ಎಂದು ಉತ್ತರಿಸಿದ್ದಾರೆ.

'ಕೇಂದ್ರ ಸರ್ಕಾರವು ಈ ಎಲ್ಲ ಅಂಶಗಳ ಬಗ್ಗೆ ಹಾಗೂ ಜಾಗತಿಕ ಮಟ್ಟದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಿದೆ. ಜನಸಾಮಾನ್ಯರ ಹಿತವನ್ನು ಕಾಯಲು, ಅಗತ್ಯ ಎದುರಾದಾಗ ಕೇಂದ್ರವು ಎಚ್ಚರಿಕೆಯಿಂದ ಮಧ್ಯಪ್ರವೇಶ ಮಾಡಲಿದೆ' ಎಂದು ಅವರು ಉತ್ತರದಲ್ಲಿ ಹೇಳಿದ್ದಾರೆ.

ಮಕ್ಕಳಿಗೆ ಬೇಸಿಗೆ ಕ್ರಿಕೆಟ್ ಶಿಬಿರ

ಬೆಂಗಳೂರು: ಇಲ್ಲಿನ ಕಪಿಲ್ ಕ್ರಿಕೆಟ್ ಕ್ಲಬ್ 5ರಿಂದ 19 ವರ್ಷದೊಳಗಿನವರಿಗೆ ಬೇಸಿಗೆ ಕ್ರಿಕೆಟ್ ಶಿಬಿರ ಹಮ್ಮಿಕೊಂಡಿದೆ.

ಏ.1ರಿಂದ ಮೇ.15ರವರೆಗೆ ಗೋವಿಂದರಾಜ ನಗರದ ಕಾರ್ಮೆಲ್ ಶಾಲಾ ಮೈದಾನದಲ್ಲಿ ಶಿಬಿರ ನಡೆಯಲಿದೆ ಎಂದು ಕ್ಲಬ್ ಪ್ರಕಟಣೆಯಲ್ಲಿ ತಿಳಿಸಿದೆ.

ಸಂಪರ್ಕ: 9538676716 ಅಥವಾ 9242997043

CSB BANK LTD
BRANCH YELAHANKA

GOLD LOAN AUCTION NOTICE

The Gold Loan Auction Notice The Gold Articles pledged under the fallowing numbers at banks branch which are not cleared by payment of banks due's even after serving ordinary or registered notice will be **SOLD IN PUBLIC AUCTION at YELAHANKA** branch premises as under or any other convenient date and time without further notice at the risk and responsibility of the pawnees, if they are not released from Yelahanka branch on or before **Date 23-03-2022 before 11 AM**, the gold ornaments will be disposed off by private sale incase the bid amount in the public auction does not fetch the amount required for the closure of the account and if there is further default, legal auction will be initiated against them for the balance amout due to the bank.
Auction At : Yelahanka Branch Premises on **23-03-2022 at 11 AM** Details Of the Gold ornaments pledged under gold loan, Yelahanka branch.

Sl No.	Br Name	Account Number	Account Name
1	Yelahanka	0245-04281826-000001	AMREEN TAHEERA
2	Yelahanka	0245-04278190-000001	ANANDA A
3	Yelahanka	0245-03966828-000005	BASAVARAJU S
4	Yelahanka	0245-00675596-000031	K N SHAMASUNDARA .
5	Yelahanka	0245-04276922-000001	KRISHNA MURTHY M
6	Yelahanka	0245-04292413-000001	MANGALAGOWRI
7	Yelahanka	0245-04274359-000001	MUHAMMAD SIRAJ K T
8	Yelahanka	0245-04293193-000001	NARASAMMA
9	Yelahanka	0245-07326784-000001	PONNAMMA .
10	Yelahanka	0245-04093331-000006	ROOPA .
11	Yelahanka	0245-04023322-000006	SHANTHAKUMAR R
12	Yelahanka	0245-04023322-000007	SHANTHAKUMAR R
13	Yelahanka	0245-04276970-000001	SRINIVAS R
14	Yelahanka	0245-04281818-000001	TABASSUM TAHERA S
15	Yelahanka	0245-04063114-000004	VENKATESH N

Bank Reserves all rights to cancel or postpone of any item or all the items without giving prior intimation. sd/- Br Manager CSB Bank

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್, ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ಅಲ್ಪಾವಧಿ ಟೆಂಡರ್‌ಗಾಗಿ ಮುಂದೂಡಿಕೆ ಆಹ್ವಾನ (ಐ.ಎಫ್.ಟಿ) ಸಂಖ್ಯೆ: 37–1/2021–22 ದಿನಾಂಕ: 09.03.2022

(ಕಟ್ಟಡಗಳ ಕಾಮಗಾರಿಗಾಗಿ–ಸ್ಟ್ಯಾಂಡರ್ಡ್ ಬಿಡ್ಡಿಂಗ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ–1 ಮತ್ತು 2 ರಂತೆ ಏಕ–ಲಕೋಟೆ ಪದ್ಧತಿಯಲ್ಲಿ)

ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ **ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್** ಮೂಲಕ ಏಕ–ಲಕೋಟೆ ಪದ್ಧತಿಯಲ್ಲಿ **8443–ಠೇವಣಿವಂತಿಗೆ** ಲೆಕ್ಕ ಶೀರ್ಷಿಕೆಯ ಕಾಮಗಾರಿಗಳ ಟೆಂಡರ್‌ಗಳನ್ನು ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000ರ ಅನ್ವಯ ಈ ಕೆಳಗೆ ಸಹಿ ಮಾಡಿದವರು ಆಹ್ವಾನಿಸಿರುತ್ತಾರೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವವರು ದಿನಾಂಕ: **14.03.2022** ರಿಂದ **23.03.2022**ರ ಸಂಜೆ **4.00** ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. **(1)** ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕಡೆಯ ದಿನಾಂಕ: **15.03.2022** (ಮಧ್ಯಾಹ್ನ **3.00** ಗಂಟೆಗೆ ಕಛೇರಿ ವೇಳೆಯಲ್ಲಿ). **(2)** ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕಡೆಯ ದಿನಾಂಕ: **23.03.2022** (ಸಂಜೆ **4.00** ಗಂಟೆಯವರೆಗೆ). **(3)** ಆರ್ಥಿಕ ಬಿಡನ್ನು ತೆರೆಯುವ ದಿನಾಂಕ: **25.03.2022** ಬೆಳಿಗ್ಗೆ **11.00** ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ **www.kpwd.gov.in** ವೆಬ್‌ಸೈಟ್‌ನ್ನು ಸಂಪರ್ಕಿಸಬಹುದು ಅಥವಾ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ತಿಮ್ಮರಾಯಪ್ಪ .ಬಿ, ಕಾರ್ಯಪಾಲಕ ಇಂಜಿನಿಯರ್,
ಲೋ.ಇ. ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ411/ಎಂ.ಸಿ.ಎ/2021–22

ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸಾರ್ವಜನಿಕ ಸೂಚನೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ ನಾವು **ಶ್ರೀಮತಿ ನಿರ್ಮಲಾ ಜಾನೆಟ್ ರೊಡ್ರಿಗಸ್** ಅಲಿಯಾಸ್ **ನಿರ್ಮಲಾ ಜಾನೆಟ್ ಲೋಬೋ**, ದಿವಂಗತ ಸಿಲ್ವೆಸ್ಟರ್ ವಲೇರಿಯನ್ ಲೋಬೋ ಅವರ ಪತ್ನಿ ಮತ್ತು **ಡ್ಯಾರೆನ್ ಟೋನಿ ಲೋಬೋ**, ದಿವಂಗತ ಸಿಲ್ವೆಸ್ಟರ್ ವಲೇರಿಯನ್ ಲೋಬೋ ಅವರ ಪುತ್ರ ಇವರ ಆಸ್ತಿಯಾದ 5,400 ಅಡಿ ಅಳತೆಯ ಮನೆಯನ್ನು ಒಳಗೊಂಡ ಸೈಟ್ ನಂ.331 ಅಳತೆಯ ನಿವೇಶನದ ಮಾರುಕಟ್ಟೆ ಹಕ್ಕುಗಳ ಬಗ್ಗೆ ಕುರಿತು ನಾವು ತನಿಖೆ ನಡೆಸುತ್ತಿದ್ದೇವೆ ಎಂದು ಈ ಮೂಲಕ ಸೂಚನೆ ನೀಡಲಾಗಿದೆ. ಸದರಿ ಆಸ್ತಿಯು ಬ್ಲಾಕ್ 1, ಕೋರಮಂಗಲ 1ನೇ ಹಂತ, ಕೋರಮಂಗಲ ಬಡಾವಣೆ, ಬೆಂಗಳೂರು 560034 ಇಲ್ಲಿದ್ದು (ಇಲ್ಲಿನ ಷೆಡ್ಯೂಲ್‌ನಲ್ಲಿ ವಿವರಿಸಲಾಗಿದ್ದು ಮತ್ತು ಇಲ್ಲಿ **ಷೆಡ್ಯೂಲ್ ಆಸ್ತಿ** ಎಂದು ಉಲ್ಲೇಖಿಸಿದ ನಂತರ ಹೆಚ್ಚು ವಿವರವಾಗಿ ವಿವರಿಸಲಾಗಿದೆ).

ಯಾವುದೇ ವ್ಯಕ್ತಿ/ಗಳು, ಸಂಸ್ಥೆಗಳು, ಸಮಾಜಗಳು, ಸಂಸ್ಥೆಗಳು, ಘಟಕಗಳು (ಕಾರ್ಪೊರೇಟ್ ಅಥವಾ ಇತರೆ) ಯಾವುದೇ ಹಕ್ಕು, ಶೀರ್ಷಿಕೆ, ಆಸಕ್ತಿ, ಪ್ರಯೋಜನ, ಹಕ್ಕು ಅಥವಾ ಬೇಡಿಕೆ ಅಥವಾ ಶೆಡ್ಯೂಲ್ ಪ್ರಾಪರ್ಟೀಸ್ ಮತ್ತು/ಅಥವಾ ಅದರ ಯಾವುದೇ ಭಾಗದ ಮೂಲಕ ಮಾರಾಟ, ವಿನಿಮಯ, ಉಡುಗೊರೆ, ಗುತ್ತಿಗೆ, ಹಿಡುವಳಿ, ಪರವಾನಗಿ, ನಿಯೋಜನೆ, ಅಡಮಾನ, ಶುಲ್ಕ, ಹಕ್ಕು, ನಂಬಿಕೆ, ಕುಟುಂಬ ವ್ಯವಸ್ಥೆ / ವಸಾಹತು, ಹೊರೆ, ಉತ್ತರಾಧಿಕಾರ, ಉಯಿಲು, ಸರಾಗತೆ, ಸ್ವಾಧೀನ, ನಿರ್ವಹಣೆ, ಅಭಿವೃದ್ಧಿ ಹಕ್ಕುಗಳು, ಯಾವುದೇ ನ್ಯಾಯಾಲಯದ ಆದೇಶ / ತೀರ್ಪು, ಷೆಡ್ಯೂಲ್ ಆಸ್ತಿಯ ಬಗ್ಗೆ ಇದ್ದಲ್ಲಿ, ಅಂತಹವರು ಮೂಲ ದಾಖಲೆಗಳೊಂದಿಗೆ ಈ ಕೆಳಗಿನ ವಿಳಾಸದಲ್ಲಿನ ಕೆಳ ಸಹಿದಾರರಿಗೆ ತಮ್ಮ ಹಕ್ಕುಗಳು / ಆಕ್ಷೇಪಣೆಗಳುನ್ನು ಈ ಪ್ರಕಟಣೆಯ ದಿನಾಂಕದಿಂದ 14 ದಿನಗಳ ಒಳಗಾಗಿ ಬೆಂಬಲಿಸುವ ಸಾಕ್ಷ್ಯಾಧಾರ ದಾಖಲೆಗಳೊಂದಿಗೆ ಸಲ್ಲಿಸತಕ್ಕದ್ದು. ಮೇಲೆ ಹೇಳಿದ ಕಾಲಮಿತಿಯ ಮುಕ್ತಾಯದ ನಂತರ ಸ್ವೀಕರಿಸಿದ ಯಾವುದೇ ಆಕ್ಷೇಪಣೆಗಳು ಮತ್ತು / ಅಥವಾ ಹಕ್ಕುಗಳು ನನ್ನ ಕಕ್ಷಿದಾರರನ್ನು ಬದ್ಧರನ್ನಾಗಿ ಸುವುದಿಲ್ಲ ಮತ್ತು ಅದನ್ನು ಕೈಬಿಡಲಾಗಿದೆ ಎಂದು ಪರಿಗಣಿಸಿ ಮಾರುಕಟ್ಟೆ ಹಕ್ಕುಗಳ ವರದಿಯನ್ನು ನೀಡಲಾಗುತ್ತದೆ.

: ಷೆಡ್ಯೂಲ್:
(ಷೆಡ್ಯೂಲ್ ಆಸ್ತಿಯ ವಿವರಣೆ)

ಬ್ಲಾಕ್ 1, ಕೋರಮಂಗಲ 1ನೇ ಹಂತ, ಕೋರಮಂಗಲ ಬಡಾವಣೆ ಬೆಂಗಳೂರು - 560034 ಇಲ್ಲಿನ 5400 ಚದರ ಅಡಿಗಳ ನಂ.331 ಹೊಂದಿರುವ ವಾಸಯೋಗ್ಯ ನಿವೇಶನ ಮತ್ತು ಮನೆಯನ್ನು ಒಳಗೊಂಡ ಆಸ್ತಿ ಮತ್ತು ಇದಕ್ಕೆ ಚಕ್ಕುಬಂದಿ:-

ಪೂರ್ವಕ್ಕೆ : ರಸ್ತೆ ಮತ್ತು ಆ ಬದಿಯಲ್ಲಿ 60 ಅಡಿ ಅಳತೆ;
ಪಶ್ಚಿಮಕ್ಕೆ : ನಿವೇಶನ ನಂ.350 ಮತ್ತು ಆ ಬದಿಯಲ್ಲಿ 60 ಅಡಿ ಅಳತೆ;
ಉತ್ತರಕ್ಕೆ : ನಿವೇಶನ ನಂ.330 ಮತ್ತು ಆ ಬದಿಯಲ್ಲಿ 90 ಅಡಿ ಅಳತೆ; ಮತ್ತು
ದಕ್ಷಿಣಕ್ಕೆ : ನಿವೇಶನ ನಂ.332 ಮತ್ತು ಆ ಬದಿಯಲ್ಲಿ 90 ಅಡಿ ಅಳತೆ.

FoxMandal Solicitors & Advocates

ಶ್ರೀ ಎಸ್ ಟಿ ಪ್ರಶಾಂತ ಕುಮಾರ್, ಪಾಲುದಾರರು
ಫಾಕ್ಸ್ ಮಂಡಲ್ ಅಸೋಸಿಯೇಟ್ಸ್,
ಸಾಲಿಸಿಟರ್ಸ್ ಮತ್ತು ಅಡ್ವೋಕೇಟ್ಸ್,
ಎಫ್ ಎಂ ಹೌಸ್, 6/12, ಪ್ರಿಮ್‌ರೋಸ್ ರಸ್ತೆ,
ಬೆಂಗಳೂರು 560025, ಕರ್ನಾಟಕ. ಭಾರತ.
ಫೋನ್ : +91 80 30554100

ದಿನಾಂಕ : 15-03-2022

ರಸ್ತೆಗುಂಡಿಯಿಂದ ಸಾವು ಪ್ರಕರಣ: ಬಿಬಿಎಂಪಿಗೆ ಹೈಕೋರ್ಟ್ ಖಡಕ್ ಎಚ್ಚರಿಕೆ

'ನೆಪ ಹೇಳುವುದನ್ನು ಬಿಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಸ್ತೆ ಗುಂಡಿಗಳ ಅವಘಡದಿಂದ ಜನರು ಸಾವನ್ನಪ್ಪುವ ಕುರಿತ ಸುದ್ದಿಗಳನ್ನು ಮಾಧ್ಯಮಗಳಲ್ಲಿ ಗಮನಿಸುವಾಗ ನಮಗೆ ಪಾಪಪ್ರಜ್ಞೆ ಕಾಡುತ್ತದೆ' ಎಂದು ಹೈಕೋರ್ಟ್ ವ್ಯಥೆಯನ್ನು ಹೊರಹಾಕಿದೆ.

ನಗರದ ರಸ್ತೆ ಗುಂಡಿಗಳನ್ನು ಮುಚ್ಚುವಂತೆ ಸರ್ಕಾರ ಹಾಗೂ ಪಾಲಿಕೆಗೆ ನಿರ್ದೇಶಿಸುವಂತೆ ಕೋರಿ ಬೆಂಗಳೂರಿನ ವಿಜಯನ್ ಮೆನನ್ ಮತ್ತಿತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ಹಾಗೂ ನ್ಯಾಯಮೂರ್ತಿ ಎಸ್.ಆರ್ ಕೃಷ್ಣಕುಮಾರ್ ಅವರಿದ್ದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ಸಂದರ್ಭದಲ್ಲಿ ಖಾಸಗಿ ಸಂಸ್ಥೆಯ ಉದ್ಯೋಗಿ ಅಶ್ವಿನ್ ಎಂಬುವರು ರಸ್ತೆ ಗುಂಡಿಯ ಅವಘಡದಲ್ಲಿ ಗಂಭೀರವಾಗಿ ಗಾಯಗೊಂಡು ಚಿಕಿತ್ಸೆ ಫಲಿಸದೆ ಸಾವನ್ನಪ್ಪಿದ ವಿಷಯವನ್ನು ಪ್ರಸ್ತಾಪಿಸಿದ ನ್ಯಾಯಪೀಠ, 'ಮುಂದಿನ ಹದಿನೈದು ದಿನಗಳಲ್ಲಿ ನಗರದ ಎಲ್ಲ ಪ್ರಮುಖ ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚಬೇಕು. ರಸ್ತೆ ಗುಂಡಿ ಮುಚ್ಚುವ ಕಾರ್ಯ ಸಮರೋಪಾದಿಯಲ್ಲಿ ನಡೆಯಬೇಕು. ಈ ವಿಚಾರದಲ್ಲಿ ಬಿಬಿಎಂಪಿ ನೆಪ ಹೇಳುವುದನ್ನು ಬಿಡಬೇಕು' ಎಂದು ಪಾಲಿಕೆಗೆ ಖಡಕ್ ಎಚ್ಚರಿಕೆ ನೀಡಿ ವಿಚಾರಣೆ ಮುಂದೂಡಿದೆ.

ಪೊಲೀಸರ ದೌರ್ಜನ್ಯ: ಆಯೋಗದ ಮೊರೆ

ಬೆಂಗಳೂರು: 'ರಸ್ತೆ ಗುಂಡಿಯಿಂದಾಗಿ ಬೈಕ್ ಉರುಳಿ ಬಿದ್ದು ಸವಾರ ಅಶ್ವಿನ್ ಜುಗ್ಡೆ (27) ಮೃತಪಟ್ಟಿದ್ದಾರೆ. ಇದನ್ನು ಖಂಡಿಸಿ ಶಾಂತಿಯುತ ಪ್ರತಿಭಟನೆ ನಡೆಸುತ್ತಿದ್ದ ಪಕ್ಷದ ಮುಖಂಡರ ಮೇಲೆ ಪೊಲೀಸರು ದೌರ್ಜನ್ಯ ನಡೆಸಿರುವುದು ಅಕ್ಷಮ್ಯ. ಮಾನವ ಹಕ್ಕುಗಳ ಆಯೋಗದಲ್ಲಿ ಇದನ್ನು ಪ್ರಶ್ನಿಸುತ್ತೇವೆ' ಎಂದು ಆಮ್ ಆದ್ಮಿ ಪಕ್ಷದ ಬೆಂಗಳೂರು ನಗರ ಘಟಕದ ಅಧ್ಯಕ್ಷ ಮೋಹನ್ ದಾಸರಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, 'ಸರ್ಕಾರ ಹಾಗೂ ಬಿಬಿಎಂಪಿ ನಿರ್ಲಕ್ಷ್ಯದಿಂದಾಗಿ ಅಮಾಯಕರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಇದನ್ನು ಪ್ರಶ್ನಿಸಿದ್ದಕ್ಕೆ ನಮ್ಮ ಮುಖಂಡರನ್ನು ಬಂಧಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಯಲಹಂಕ ಕ್ಷೇತ್ರದ ಶಾಸಕ ಎಸ್.ಆರ್.ವಿಶ್ವನಾಥ್ ಅವರ ಕುಮ್ಮಕ್ಕಿನಿಂದಲೇ ಪೊಲೀಸರು ಅಮಾನವೀಯವಾಗಿ ವರ್ತಿಸಿದ್ದಾರೆ. ಇದರ ಬಗ್ಗೆ ತನಿಖೆಯಾಗಬೇಕು' ಎಂದು ಆಗ್ರಹಿಸಿದರು.

'ಸ್ಥಳೀಯ ಶಾಸಕರು, ಬಿಬಿಎಂಪಿ ಮುಖ್ಯ ಆಯುಕ್ತರು ಹಾಗೂ ಜಲಮಂಡಳಿ ಅಧಿಕಾರಿಗಳ ನಿರ್ಲಕ್ಷ್ಯದಿಂದಲೇ ರಸ್ತೆಗಳಲ್ಲಿ ಗುಂಡಿಗಳು ನಿರ್ಮಾಣವಾಗಿವೆ. ಅವರ ವಿರುದ್ಧ ದೂರು ನೀಡಲು ತೀರ್ಮಾನಿಸಿದ್ದೇವೆ. ಪೊಲೀಸರು ಅವರನ್ನೂ ಬಂಧಿಸಲಿ ಕ್ರಮ ಕೈಗೊಳ್ಳಲಿ. ಅಶ್ವಿನ್ ಕುಟುಂಬಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ₹1 ಕೋಟಿ ಪರಿಹಾರ ಘೋಷಿಸಲಿ' ಎಂದು ಒತ್ತಾಯಿಸಿದರು.

ರಾಜ್ಯ ಘಟಕದ ಮಾಧ್ಯಮ ಸಂಚಾಲಕ ಜಗದೀಶ್ ವಿ.ಸದಂ, 'ಗುಂಡಿರಹಿತ ರಸ್ತೆಗಳನ್ನು ನಿರ್ಮಿಸುವುದು ಸರ್ಕಾರದ ಕರ್ತವ್ಯ. ಭ್ರಷ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳಿಂದಾಗಿ ನಗರದ ರಸ್ತೆಗಳು ಯಮಸ್ವರೂಪಿಯಾಗಿವೆ. ಇದರ ಬಗ್ಗೆ ಧ್ವನಿ ಎತ್ತುವವರ ಬಾಯಿ ಮುಚ್ಚಿಸಲು ಪೊಲೀಸರು ಮುಂದಾಗುತ್ತಿರುವುದು ಸರಿಯಲ್ಲ' ಎಂದರು.

ನಗರ ಮಹಿಳಾ ಘಟಕದ ಅಧ್ಯಕ್ಷೆ ಕುಶಲ ಸ್ವಾಮಿ, ಚನ್ನಪ್ಪಗೌಡ ನೆಲ್ಲೂರು, ವಿಜಯ್ ಶಾಸ್ತ್ರಿಮಠ, ಸುಹಾಸಿನಿ ಪಣಿರಾಜ್ ಇದ್ದರು.

ಜಾಲ ಭೇದಿಸಿದ ಪೊಲೀಸರು: ಮಹಿಳೆ ಸೇರಿ ಎಂಟು ಆರೋಪಿಗಳ ಬಂಧನ

ನಕಲಿ ದಾಖಲೆ ಸೃಷ್ಟಿಸಿ ಆಸ್ತಿ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾಳು ಬಿದ್ದ ಹಾಗೂ ಬಳಕೆಯಾಗದ ನಿವೇಶನಗಳ ನಕಲಿ ದಾಖಲೆಗಳನ್ನು ಸೃಷ್ಟಿಸಿ ಮಾರಾಟ ಮಾಡುತ್ತಿದ್ದ ಜಾಲವನ್ನು ಯಲಹಂಕ ನ್ಯೂ ಟೌನ್ ಪೊಲೀಸರು ಭೇದಿಸಿದ್ದು, ಈ ಸಂಬಂಧ ಮಹಿಳೆ ಸೇರಿ ಎಂಟು ಆರೋಪಿಗಳನ್ನು ಬಂಧಿಸಿದ್ದಾರೆ.

ಯಲಹಂಕ ಅಟ್ಟೂರು ಬಡಾವಣೆಯ ಪ್ರದೀಪ್ ಅಲಿಯಾಸ್ ಪಾಯಿಸನ್ (28), ಚಿಕ್ಕಬೊಮ್ಮಸಂದ್ರದ ಎಸ್. ಧರ್ಮಲಿಂಗಂ (48), ಯಲಹಂಕ ನ್ಯೂ ಟೌನ್‌ನ ಕೆ. ಮಂಜುನಾಥ್ (43), ಯಾರಬ್ ಅಲಿಯಾಸ್ ಅಬ್ದುಲ್ (41), ವೈ.ಆರ್. ಮಂಜುನಾಥ್ (51), ಕೊಡಿಗೇಹಳ್ಳಿ ಭದ್ರಪ್ಪ ಬಡಾವಣೆಯ ಅಬ್ದುಲ್ ಘನಿ (67), ಆರ್.ಟಿ.ನಗರ ಶ್ಯಾಂಪುರದ ಶಬಾನಾ ಭಾನು (42) ಹಾಗೂ ಕುಣಿಗಲ್ ತಾಲ್ಲೂಕಿನ ಪಂಪಲಪುರದ ರಾಮಯ್ಯ ಅಲಿಯಾಸ್ ಆಟೊ ರಾಮ ಬಂಧಿತರು.

'ನಗರದ ನಿವಾಸಿ ಡಾ. ಪ್ರಶಾಂತ್ ರೆಡ್ಡಿ ಅವರು ಉದ್ಯೋಗ ನಿಮಿತ್ತ ಸದ್ಯ ಅಮೆರಿಕದಲ್ಲಿ ನೆಲೆಸಿದ್ದಾರೆ. ಅವರು ಕೆಲ ವರ್ಷಗಳ ಹಿಂದೆ ಚಿಕ್ಕಬೊಮ್ಮಸಂದ್ರದಲ್ಲಿ 2,400 ಚದರ ಅಡಿ ವಿಸ್ತೀರ್ಣದ ನಿವೇಶನ ಖರೀದಿಸಿದ್ದರು. ಸದ್ಯ ನಿವೇಶನ ಖಾಲಿ ಇತ್ತು. ಈ ನಿವೇಶನದ ಬಗ್ಗೆ ತಿಳಿದುಕೊಂಡಿದ್ದ ಆರೋಪಿ ಪ್ರದೀಪ್ ಹಾಗೂ ಇತರರು, ನಕಲಿ ದಾಖಲೆಗಳನ್ನು ಸೃಷ್ಟಿಸಿ ಮಾರಾಟ ಮಾಡಲು ಯತ್ನಿಸಿದ್ದರು. ಇದು ಗೊತ್ತಾಗುತ್ತಿದ್ದಂತೆ ಪ್ರದೀಪ್ ಅವರು ತಂದೆ ಜಯಪ್ರತಾಪ್ ರೆಡ್ಡಿ ಮೂಲಕ ದೂರು ದಾಖಲಿಸಿದ್ದರು. ಅದರನ್ವಯ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಈಶಾನ್ಯ ವಿಭಾಗದ ಡಿಸಿಪಿ ಅನೂಪ್ ಶೆಟ್ಟಿ ಹೇಳಿದರು.

ಆರೋಪಿಗಳಿಂದ ಜಪ್ತಿ ಮಾಡಿದ ಉಪ ನೋಂದಣಾಧಿಕಾರಿ ಕಚೇರಿಗಳ ನಕಲಿ ಸೀಲುಗಳು

ಆರೋಪಿಗಳಿಂದ ಜಪ್ತಿ ಮಾಡಿದ ನಕಲಿ ಛಾಪಾ ಕಾಗದಗಳು

ಪ್ರದೀಪ್

'ಆರೋಪಿಗಳಿಂದ 2,130 ನಕಲಿ ಛಾಪಾ ಕಾಗದಗಳು, ಉಪ ನೋಂದಣಾಧಿಕಾರಿ ಕಚೇರಿಗಳ 17 ಸೀಲುಗಳು ಹಾಗೂ ಟೈಪ್ ರೈಟರ್ ಯಂತ್ರ ಜಪ್ತಿ ಮಾಡಲಾಗಿದೆ' ಎಂದೂ ಮಾಹಿತಿ ನೀಡಿದರು.

ಹಲವು ವರ್ಷಗಳಿಂದ ಕೃತ್ಯ: 'ಬಂಧಿತ ಆರೋಪಿಗಳ ಪೈಕಿ ಕೆಲವರು, ರಿಯಲ್ ಎಸ್ಟೇಟ್ ಮಧ್ಯವರ್ತಿಗಳು. ಹಲವರು, ಸರ್ಕಾರಿ ಕಚೇರಿಗಳ ಬಳಿ ಸ್ಟಾಂಪ್ ವೆಂಡರ್ ಹಾಗೂ ದಲ್ಲಾಳಿಗಳಾಗಿ ಕೆಲಸ ಮಾಡುತ್ತಿದ್ದರು. ಎಲ್ಲರೂ ಸಂಘಟಿತರಾಗಿ ಕೃತ್ಯ ಎಸಗುತ್ತಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಆರೋಪಿ ಪ್ರದೀಪ್ ಈ ವಂಚನೆ ಜಾಲದ ರೂವಾರಿ. ಜಾಲದಲ್ಲಿದ್ದ ಮಹಿಳೆ ಶಬಾನಾ ಭಾನು, ನಕಲಿ ದಾಖಲೆಗಳನ್ನು ತನ್ನ ಬಳಿ ಇಟ್ಟುಕೊಂಡಿದ್ದಳು. ಆಸ್ತಿ ಖರೀದಿಸುವ ಗ್ರಾಹಕರನ್ನು ಸಂಪರ್ಕಿಸುತ್ತಿದ್ದರು. ನಕಲಿ ದಾಖಲೆಗಳನ್ನೇ ಅಸಲಿ ಎಂಬುದಾಗಿ ಹೇಳಿ ಆಸ್ತಿ ಖರೀದಿಸಲು ಪ್ರಚೋದಿಸುತ್ತಿದ್ದರು. ಪ್ರದೀಪ್ ಹಾಗೂ ಶಬಾನಾ ಮನೆಗಳ ಮೇಲೆ ದಾಳಿ ಮಾಡಿದಾಗಲೇ ನಕಲಿ ಛಾಪಾ ಕಾಗದ ಹಾಗೂ ಆಸ್ತಿಗೆ ಸಂಬಂಧಪಟ್ಟ ದಾಖಲೆಗಳು ಸಿಕ್ಕಿವೆ' ಎಂದೂ ಮೂಲಗಳು ಹೇಳಿವೆ.

'ಯಲಹಂಕ, ಚಿಕ್ಕಜಾಲ, ಗಾಂಧಿನಗರ ಸೇರಿದಂತೆ ಹಲವು ಉಪ ನೋಂದಣಾಧಿಕಾರಿ ಕಚೇರಿ ಸೀಲುಗಳು ಆರೋಪಿಗಳ ಬಳಿ ಪತ್ತೆಯಾಗಿವೆ. ಇವುಗಳನ್ನು ಬಳಸಿಯೇ ಆರೋಪಿಗಳು ನಕಲಿ ದಾಖಲೆಗಳನ್ನು ಸೃಷ್ಟಿಸುತ್ತಿದ್ದರು' ಎಂದೂ ತಿಳಿಸಿವೆ.

6 ನಿವೇಶನ ಮಾರಾಟ: 'ಕೋಟ್ಯಂತರ ರೂಪಾಯಿ ಮೌಲ್ಯದ 6 ನಿವೇಶನಗಳ ನಕಲಿ ದಾಖಲೆಗಳನ್ನು ಸೃಷ್ಟಿಸಿ ಮಾರಾಟ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ. ಇಂಥ ನಿವೇಶನ ಮಾಲೀಕರಿಂದ ದೂರು ಪಡೆದು, ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'50 ವರ್ಷಗಳ ಹಳೆಯ ಛಾಪಾ ಕಾಗದ, ಉಪ ನೋಂದಣಾಧಿಕಾರಿ ಕಚೇರಿ ಸೀಲುಗಳು, ಬೇರೆಯವರ ಹೆಸರಿನಲ್ಲಿ ಸೃಷ್ಟಿಸಿದ ನಕಲಿ ಒಪ್ಪಂದ ಪತ್ರಗಳೂ ಸಿಕ್ಕಿವೆ. ಇವುಗಳನ್ನು ಬಳಸಿಕೊಂಡೇ ಆರೋಪಿಗಳು, ಆಸ್ತಿಗಳ ನಕಲಿ ದಾಖಲೆ ಸೃಷ್ಟಿಸುತ್ತಿದ್ದರು. ಅವುಗಳನ್ನೇ ಗ್ರಾಹಕರಿಗೆ ತೋರಿಸಿ ಆಸ್ತಿ ಮಾರುತ್ತಿದ್ದರು' ಎಂದೂ ತಿಳಿಸಿವೆ.

ಆರೋಪಿಗೆ ಸಾಲ ಕೊಡುತ್ತಿದ್ದ ರೌಡಿ: 'ಬಂಧಿತ ರಾಮಯ್ಯ ಅಲಿಯಾಸ್ ಆಟೊ ರಾಮ ಹೆಸರು ರೌಡಿ ಪಟ್ಟಿಯಲ್ಲಿದೆ. ಆತ, ಜೂಜು ಅಡ್ಡೆ ನಡೆಸುತ್ತಿದ್ದ. ಜಾಲದ ಪ್ರಮುಖ ಆರೋಪಿ ಪ್ರದೀಪ್, ಜೂಜು ಆಡಲು ಹೋಗುತ್ತಿದ್ದ. ಅದೇ ವೇಳೆ ಅವರಿಬ್ಬರಿಗೂ ಪರಿಚಯವಾಗಿತ್ತು. ಜೂಜು ಆಡಲು ರೌಡಿ ರಾಮು, ಪ್ರದೀಪ್‌ಗೆ ಸಾಲ ಕೊಡುತ್ತಿದ್ದ. ಅದನ್ನು ಬಡ್ಡಿ ಸಮೇತ ವಸೂಲಿ ಮಾಡುತ್ತಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ವಂಚನೆಯಿಂದ ಸಂಪಾದಿಸಿದ್ದ ಬಹುಪಾಲು ಹಣವನ್ನು ಆರೋಪಿ ಪ್ರದೀಪ್, ರೌಡಿ ರಾಮನಿಗೆ ಸಾಲ ಹಾಗೂ ಬಡ್ಡಿ ರೂಪದಲ್ಲಿ ನೀಡಿದ್ದಾನೆ. ಹೀಗಾಗಿ, ರಾಮನನ್ನೂ ಆರೋಪಿಯನ್ನಾಗಿ ಮಾಡಲಾಗಿದೆ' ಎಂದೂ ತಿಳಿಸಿವೆ.

'ಡಿಜಿಟಲ್ ವಹಿವಾಟು: ಅನಗತ್ಯ ಶುಲ್ಕ- ಎಚ್ಚರ'

ಆಹಾರ ನಾಗರಿಕ ಸರಬರಾಜು ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇತ್ತೀಚಿನ ದಿನಗಳಲ್ಲಿ ಡಿಜಿಟಲ್ ವಹಿವಾಟು ಹೆಚ್ಚಳವಾಗುತ್ತಿದೆ. ಆನ್‌ಲೈನ್ ವೇದಿಕೆ ಮೂಲಕ ಹಣ ಪಾವತಿಸುವಾಗ ಕೆಲ ಕಂಪನಿಗಳು ವಿಧಿಸುವ ಅನಗತ್ಯ ಶುಲ್ಕಗಳ ಬಗ್ಗೆ ಎಚ್ಚರ ವಹಿಸಬೇಕು' ಎಂದು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳು ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಕಪಿಲ್ ಮೋಹನ್ ತಿಳಿಸಿದರು.

ರಾಜ್ಯ ಸರ್ಕಾರವು ನಗರದಲ್ಲಿ ಮಂಗಳವಾರ ಹಮ್ಮಿಕೊಂಡ 'ವಿಶ್ವ ಗ್ರಾಹಕ ಹಕ್ಕುಗಳ ದಿನಾಚರಣೆ'ಯಲ್ಲಿ ಅವರು ಮಾತನಾಡಿದರು. 'ಡಿಜಿಟಲ್ ವಹಿವಾಟಿನತ್ತ ಗ್ರಾಹಕರು ಹೆಚ್ಚು ಆಕರ್ಷಿತರಾಗುತ್ತಿದ್ದಾರೆ. ಇದರ ಸಾಧಕ–ಬಾಧಕಗಳ ಬಗ್ಗೆ ಚರ್ಚೆ ನಡೆಸಿ, ಜನರಿಗೆ ಅರಿವು ಮೂಡಿಸಬೇಕು. ಗ್ರಾಹಕರ ಗಮನಕ್ಕೆ ತಾರದೆಯೇ ಕೆಲ ಕಂಪನಿಗಳು ಹೆಚ್ಚುವರಿ ಹಣ ಪಡೆಯುತ್ತವೆ. ಗ್ರಾಹಕರು ಹಾಗೂ ವ್ಯಾಪಾರಿಗಳ ನಡುವಿನ ವಂಚನೆ ತಡೆಗಟ್ಟಲು ಗ್ರಾಹಕ ರಕ್ಷಣಾ ಕಾಯ್ದೆ ಸೇರಿದಂತೆ ವಿವಿಧ ಕಾನೂನುಗಳು ಜಾರಿಯಲ್ಲಿವೆ. ಆದರೆ, ಈ ಕಾನೂನುಗಳ ಬಗ್ಗೆ ಬಹುತೇಕರಿಗೆ ಮಾಹಿತಿಯಿಲ್ಲ' ಎಂದು ಹೇಳಿದರು.

ತೂಕದ ಯಂತ್ರಗಳ ಕುರಿತು ಪ್ರದರ್ಶಕರು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಆಯುಕ್ತರಾದ ಕನಗವಲ್ಲಿ ಎಂ. ಅವರಿಗೆ ವಿವರಿಸಿದರು. ಇಲಾಖೆಯ ಅಧಿಕಾರಿಗಳು ಇದ್ದಾರೆ – ಪ್ರಜಾವಾಣಿ ಚಿತ್ರ

'ಗ್ರಾಹಕರು ಶೋಷಣೆಗೆ ಒಳಗಾಗಿದ್ದಲ್ಲಿ ಅಥವಾ ಖರೀದಿಸಿದ ಸರಕು, ಸೇವೆಗಳಿಂದ ತೃಪ್ತಿ ಹೊಂದಿರದಿದ್ದಲ್ಲಿ ಸಂಬಂಧಿಸಿದ ಗ್ರಾಹಕ ನ್ಯಾಯಾಲಯಕ್ಕೆ ದೂರು ಸಲ್ಲಿಸಬಹುದು. ಖರೀದಿಸಿದ ವಸ್ತು, ಸೇವೆಯಲ್ಲಿ ದೋಷಗಳಿದ್ದರೆ ಅವುಗಳಿಗೆ ಪರಿಹಾರವಾಗಿ ಬದಲಿ ವಸ್ತು ಅಥವಾ ದೋಷರಹಿತ ಸೇವೆ ಪಡೆಯುವ ಮತ್ತು ನಷ್ಟ ಭರಿಸಿಕೊಳ್ಳುವ ಹಕ್ಕನ್ನು ಗ್ರಾಹಕರು ಹೊಂದಿರುತ್ತಾರೆ' ಎಂದರು.

ಕರ್ನಾಟಕ ರಾಜ್ಯ ಆಹಾರ ಆಯೋಗದ ಅಧ್ಯಕ್ಷ ಎಚ್.ವಿ. ಶಿವಶಂಕರ್, 'ಗ್ರಾಹಕರು ತಾವು ಖರೀದಿಸಲು ಇಚ್ಚಿಸುವ ಸರಕುಗಳ ಪ್ರಮಾಣ, ಗುಣಮಟ್ಟ, ಬೆಲೆ, ಉತ್ಪಾದನೆ ಸೇರಿದಂತೆ ವಿವಿಧ ಸಂಗತಿಗಳ ಬಗ್ಗೆ ಎಚ್ಚರ ವಹಿಸಬೇಕು. ವಸ್ತು ಖರೀದಿಸುವ ವೇಳೆ ಗುಣಮಟ್ಟವನ್ನು ಪರೀಕ್ಷಿಸಿಕೊಳ್ಳಬೇಕು. ಪ್ರತಿಯೊಬ್ಬ ಪ್ರಜೆಯು ದೇಶದ ಕಾನೂನು ಹಾಗೂ ಗ್ರಾಹಕರ ಹಕ್ಕುಗಳ ಬಗ್ಗೆ ತಿಳಿದುಕೊಂಡಾಗ ಮಾತ್ರ, ತನಗೆ ಮೋಸ ಆದಾಗ ಅದಕ್ಕೆ ಪರಿಹಾರ ಕಂಡುಕೊಳ್ಳಲು ಸಾಧ್ಯ' ಎಂದರು.

STATE BAK OF INDIA, SMEC. BANASAWADI (21014)
E-AUCTION OF CARS PARKED AT LAKSHMI RECOVERY AGENCY, UDAYA LAYOUT, MANGANAHALLI, BANGALORE-560060. E-AUCTION DATE- 24.03.2022. Contact: Mr. PARAMESH REDDY - 8618048183

S No	AGREEMENT NO.	NAME	MODEL	Reg No.	Mfg. Year	Reserve Price (in Rs.)
1	67393690521,39834723434 (Sector A, Yelahanka-70941)	Suryamon B	MARUTI ERTIGA (VDI SHVS) Silver	KA-50 A-5227	2017	324000.00
2	64143619668 (Gangenahalli-40276)	M/s Castle Rent a Car, Prop- Kuber Naik L.B.	NISSAN SUNNY (XL DCI BS IV) Silver	KA-04 D-8747	2014	177000.00

E- auction of vehicles is being held on **"AS IS WHERE IS BASIS"**, **"AS IS WHAT IS BASIS"** and **"WHATEVER THERE IS BASIS"** and the auction will be conducted **"ONLINE".** The auction will be conducted through the Bank's approved service provider M/s. C1 INDIA, at their web portal is https://www.bankeauctions.com. E-auction tender document containing online-Auction Bid application. Decalration, general terms and conditions of online auction sale are available in **https://www.bankeauctions.com. Contact : Sri Gangadhar Naik Gonkar.(M) +91-9900711744**, the service provider (C1 INDIA).
It shall be the responsbilities of the interested bidders to inspect and satisfy themselves about the vehicles before submission of the bid(s). It shall be deemed that the intending bidders have done their own due diligence before submitting the tender. No conditional bid will be accepted. The intending purchaser/bidders are required to deposit **EMD amount 10%** of the reserve price on or **before 23.03.2022** either through NEFT/RTGS Transfer or online transfer into the account no. 4897932210142 in favour of **'Subsidy Inward Remittance Account'** at **State Bank of India, SMEC Banaswadi, Bengaluru, Branch Code :21014, IFS Code : SBIN0021014.** Copy of the supportive documents like challan/receipt, KYC copies (Adhar-PAN) should be attached to the Bid Application. **E-AUCTION TIMINGS WILL BE BETWEEN 11.30 AM TO 12.30 PM ON 24TH MARCH 2022. BID AMOUNT IS INCLUSIVE WITH GST.** Vehicle should be got released **within 8 days** from the date of E-Auction by making full payment, otherwise EMD amount will be forfeited by the Bank. Bank reserves the right to reject/cancel any bid at any stage without assigning any reason.

Sd/- Assistant General Manager

ಟೆಂಡರ್ ಪ್ರಕ್ರಿಯೆ: ಅಕ್ರಮ ಆರೋಪ

ಬೆಂಗಳೂರು: 'ಲೋಕೋಪಯೋಗಿ ಇಲಾಖೆ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯಲ್ಲಿ ಭಾರಿ ಅಕ್ರಮ ನಡೆಯುತ್ತಿದೆ. ಇದರಿಂದ ಟೆಂಡರ್‌ಗಳ ಮೌಲ್ಯಮಾಪನದಲ್ಲಿ ಪಾರದರ್ಶಕತೆ ಇಲ್ಲವಾಗಿದೆ' ಎಂದು ರಾಜ್ಯ ಎಸ್.ಸಿ–ಎಸ್.ಟಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಎನ್. ಮಹದೇವಸ್ವಾಮಿ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಪಾರದರ್ಶಕತೆ ಕಾಯ್ದೆಯ ನಿಯಮಗಳನ್ನು ಉಲ್ಲಂಘಿಸಿ, ಅಧಿಕಾರ ದುರುಪಯೋಗ ಮಾಡಿಕೊಂಡಿದ್ದಾರೆ. ಇದರಲ್ಲಿ ಅವರ ಸ್ವಹಿತಾಸಕ್ತಿ ಅಡಗಿದೆ. ಈ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಲೋಕಾಯುಕ್ತರಿಗೆ ದೂರು ನೀಡಿದ್ದೇನೆ' ಎಂದರು.

ಸುದ್ದಿ 2 ನಿಮಿಷ

ಬಂದೂಕು ತೋರಿಸಿ ಸುಲಿಗೆಗೆ ಯತ್ನ

ಬೆಂಗಳೂರು: ಯಶವಂತಪುರ ಠಾಣೆ ವ್ಯಾಪ್ತಿಯ ಮನೆಯೊಂದಕ್ಕೆ ನುಗ್ಗಿ ಸುಲಿಗೆಗೆ ಯತ್ನಿಸಿದ್ದ ಆರೋಪಿಯೊಬ್ಬನನ್ನು ಸಾರ್ವಜನಿಕರೇ ಹಿಡಿದು ಥಳಿಸಿ ಪೊಲೀಸರ ವಶಕ್ಕೆ ಒಪ್ಪಿಸಿದ್ದಾರೆ.

'ಬಾಂಬೆ ಡೈಯಿಂಗ್ ರಸ್ತೆಯಲ್ಲಿರುವ ಮನೆಯಲ್ಲಿ ಯುವತಿ ಹಾಗೂ ವೃದ್ಧರಿಬ್ಬರು ಇದ್ದರು. ಸೋಮವಾರ ಬೆಳಿಗ್ಗೆ ಬಂದೂಕು ಹಿಡಿದುಕೊಂಡು ಮನೆಗೆ ನುಗ್ಗಿದ್ದ ಮೂವರು ದುಷ್ಕರ್ಮಿಗಳು, ನಿವಾಸಿಗಳಿಗೆ ಜೀವ ಬೆದರಿಕೆ ಹಾಕಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿಗಳು, ಚಿನ್ನಾಭರಣ ಸುಲಿಗೆ ಮಾಡಿಕೊಂಡು ಮನೆಯಿಂದ ಪರಾರಿಯಾಗುತ್ತಿದ್ದರು. ಮನೆಯವರು ಸಹಾಯಕ್ಕಾಗಿ ಕಿರುಚಾಡಿದ್ದರು. ಅಕ್ಕ–ಪಕ್ಕದ ಮನೆಯವರು ಸಹಾಯಕ್ಕೆ ಬಂದಿದ್ದರು. ಓಡಿ ಹೋಗುತ್ತಿದ್ದ ಮೂವರು ಆರೋಪಿಗಳ ಪೈಕಿ ಒಬ್ಬನನ್ನು ಬೆನ್ನಟ್ಟಿ ಹಿಡಿದು ಥಳಿಸಿದ್ದರು.'

'ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ಸ್ಥಳಕ್ಕೆ ಹೋಗಿ ಆರೋಪಿಯನ್ನು ವಶಕ್ಕೆ ಪಡೆದು ಠಾಣೆಗೆ ಕರೆತಂದಿದ್ದಾರೆ. ತಲೆಮರೆಸಿಕೊಂಡಿರುವ ಇನ್ನಿಬ್ಬರು ಆರೋಪಿಗಳಿಗಾಗಿ ಹುಡುಕುತ್ತಿದ್ದೇವೆ' ಎಂದೂ ತಿಳಿಸಿವೆ.

ತ್ಯಾಗರಾಜರ ಆರಾಧನಾ ಮಹೋತ್ಸವ

ಸಂಗೀತ ವಿದ್ವಾನ್ ಡಾ.ಚಿಂತಲಪಲ್ಲಿ ಕೆ.ರಮೇಶ್ ಅವರನ್ನು ಸನ್ಮಾನಿಸಲಾಯಿತು. ಅಭಯಾನಂದ ಸ್ವಾಮೀಜಿ, ವಿದುಷಿ ಆಶಾ ಜಗದೀಶ್, ರಾಗಸುಧಾ ಟ್ರಸ್ಟ್‌ನ ನಾಗಭೂಷಣ ಮತ್ತು ತ್ರಿಪುರೇಶ್ವರಿ ಇದ್ದರು

ಯಲಹಂಕ: 'ವಿಶ್ವದಲ್ಲಿರುವ ಎಲ್ಲಾ ಸಂಗೀತ ಪ್ರಾಕಾರಗಳಿಗಿಂತ ಭಾರತೀಯ ಸಂಗೀತ ಪರಂಪರೆ ವಿಭಿನ್ನವಾಗಿದ್ದು, ಇದಕ್ಕೆ ಪೂಜನೀಯ ಸ್ಥಾನವಿದೆ' ಎಂದು ಆವಲಹಳ್ಳಿಯ ರಾಮಕೃಷ್ಣ ವಿವೇಕಾನಂದ ವೇದಾಂತ ಆಶ್ರಮದ ಅಭಯಾನಂದ ಸ್ವಾಮೀಜಿ ಅಭಿಪ್ರಾಯಪಟ್ಟರು.

ಯಲಹಂಕ ಉಪನಗರದ ಚೈತನ್ಯ ಸಂಗೀತ ವಿದ್ಯಾಲಯದ ಆಶ್ರಯದಲ್ಲಿ ಆಯೋಜಿಸಿದ್ದ ಪುರಂದರ ಮತ್ತು ತ್ಯಾಗರಾಜರ ಆರಾಧನಾ ಮಹೋತ್ಸವದಲ್ಲಿ ಮಾತನಾಡಿದ ಅವರು, 'ಇಂತಹ ವ್ಯಕ್ತಿಗಳ ಆರಾಧನಾ ಮಹೋತ್ಸವ ಆಧ್ಯಾತ್ಮಿಕ ಶಕ್ತಿಗೆ ನಾಂದಿಯಾಗಿದೆ' ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಸಂಗೀತ ವಿದ್ವಾನ್ ಡಾ.ಚಿಂತಲಪಲ್ಲಿ ಕೆ.ರಮೇಶ್, 'ಯಲಹಂಕದ ಪ್ರತಿಯೊಂದು ಮನೆಯೂ ಸಂಗೀತದ ಕುಟೀರವಾಗಲಿ' ಎಂದು ಹಾರೈಸಿದರು. ಸಂಗೀತ ಶಾಲೆಯ ವಿದ್ಯಾರ್ಥಿಗಳಿಂದ ಹಾಗೂ ಸ್ಥಳೀಯ ಸಂಗೀತಗಾರರಿಂದ ಪುರಂದರದಾಸರ ದೇವರ ನಾಮಗಳು, ತ್ಯಾಗರಾಜರ ಗೀತಗಾಯನ ಹಾಗೂ ಪಂಚರತ್ನ ಕೃತಿಗಳ ಗೋಷ್ಠಿ ಗಾಯನ ನಡೆಯಿತು.

ವಿದುಷಿ ಆಶಾ ಜಗದೀಶ್, ರಾಗಸುಧಾ ಟ್ರಸ್ಟ್‌ನ ನಾಗಭೂಷಣ, ತ್ರಿಪುರೇಶ್ವರಿ ಇದ್ದರು.

ಇಬ್ಬರು ಆರೋಪಿಗಳ ಬಂಧನ

ಬಾರ್‌ನಲ್ಲಿ ಗಲಾಟೆ: ಆಟೊ ಚಾಲಕನ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೀವನ್‌ಭಿಮಾನಗರ ಠಾಣೆ ವ್ಯಾಪ್ತಿಯಲ್ಲಿ ತಲೆ ಮೇಲೆ ಸಿಮೆಂಟ್ ಇಟ್ಟಿಗೆ ಎತ್ತಿ ಹಾಕಿ ಆಟೊ ಚಾಲಕ ಮಂಜುನಾಥ್ (32) ಎಂಬುವರನ್ನು ಕೊಲೆ ಮಾಡಲಾಗಿದ್ದು, ಈ ಸಂಬಂಧ ಇಬ್ಬರ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ರಾಮನಗರ ತಾಲ್ಲೂಕಿನ ಕೈಲಾಂಚ ಗ್ರಾಮದ ಎಸ್. ಮಧುಸೂದನ್ (29) ಹಾಗೂ ಕುಣಿಗಲ್ ತಾಲ್ಲೂಕಿನ ಹುಲಿಯೂರು ದುರ್ಗದ ಯತೀಶ್ ಗೌಡ (25) ಬಂಧಿತರು. ಇಬ್ಬರು ಆರೋಪಿಗಳು ಕೆಲಸ ಹುಡುಕಿಕೊಂಡು ಕೆಲ ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದರು. ಮಂಜುನಾಥ್ ಅವರನ್ನು ಸೋಮವಾರ ರಾತ್ರಿ ಕೊಲೆ ಮಾಡಿ ಪರಾರಿಯಾಗಿದ್ದ ಆರೋಪಿಗಳನ್ನು ಮಂಗಳವಾರ ಮಧ್ಯಾಹ್ನ ಬಂಧಿಸಲಾಗಿದೆ' ಎಂದು ಪೂರ್ವ ವಿಭಾಗದ ಡಿಸಿಪಿ ಭೀಮಾಶಂಕರ್ ಗುಳೇದ್ ತಿಳಿಸಿದರು.

'ಕೊಲೆಯಾದ ಮಂಜುನಾಥ್, ದೂಪನಹಳ್ಳಿ ನಿವಾಸಿ. ಜೆ.ಡಿ. ಬಾರ್ ಆ್ಯಂಡ್ ರೆಸ್ಟೋರೆಂಟ್‌ನಿಂದ ಮರಳುವಾಗ ಅವರ ಕೊಲೆ ನಡೆದಿತ್ತು. ಕ್ಷುಲ್ಲಕ ಕಾರಣಕ್ಕಾಗಿ ಬಾರ್‌ನಲ್ಲಿ ನಡೆದ ಗಲಾಟೆಯೇ ಕೊಲೆಗೆ ಕಾರಣವೆಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ' ಎಂದೂ ಹೇಳಿದರು.

ಅಟ್ಟಾಡಿಸಿ ಕೊಂದರು: 'ಮಂಜುನಾಥ್ ಅವರು ಜೆ.ಡಿ. ಬಾರ್ ಆ್ಯಂಡ್ ರೆಸ್ಟೋರೆಂಟ್‌ಗೆ ಸೋಮವಾರ ರಾತ್ರಿ ಹೋಗಿದ್ದರು. ಬಾರ್‌ನಲ್ಲಿದ್ದ ಆರೋಪಿಗಳು, ಮಂಜುನಾಥ್ ಜೊತೆ ಜಗಳ ತೆಗೆದಿದ್ದರು. ಪರಸ್ಪರ ಮಾತಿನ ಚಕಮಕಿ ನಡೆದಿತ್ತು. ಬಾರ್ ಸಿಬ್ಬಂದಿ ಜಗಳ ಬಿಡಿಸಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬಾರ್‌ನಿಂದ ಹೊರಬಂದಿದ್ದ ಮಂಜುನಾಥ್, ರಸ್ತೆ ಪಕ್ಕದಲ್ಲಿ ನಿಲ್ಲಿಸಿದ್ದ ತಮ್ಮ ಆಟೊದಲ್ಲಿ ಕುಳಿತಿದ್ದರು. ಸ್ಥಳಕ್ಕೆ ಬಂದಿದ್ದ ಆರೋಪಿಗಳು, ಪುನಃ ಜಗಳ ತೆಗೆದು ಹಲ್ಲೆ ನಡೆಸಲು ಮುಂದಾಗಿದ್ದರು. ಆಟೊದಿಂದ ಇಳಿದಿದ್ದ ಮಂಜುನಾಥ್, ತಪ್ಪಿಸಿಕೊಂಡು ಓಡಲಾರಂಭಿಸಿದ್ದರು. ಅವರನ್ನು ಆರೋಪಿಗಳು ಬೆನ್ನಟ್ಟಿದ್ದರು.'

'ಕೋಡಿಹಳ್ಳಿ ಜಂಕ್ಷನ್ ಬಳಿ ಮಂಜುನಾಥ್ ಎಡವಿ ಬಿದ್ದಿದ್ದರು. ಅವರನ್ನು ಸುತ್ತುವರೆದಿದ್ದ ಆರೋಪಿಗಳು ಹಲ್ಲೆ ಮಾಡಿದ್ದರು. ತಲೆ ಮೇಲೆ ಸಿಮೆಂಟ್ ಇಟ್ಟಿಗೆ ಎತ್ತಿ ಹಾಕಿದ್ದರು. ಕಬ್ಬಿಣದ ಪೈಪ್‌ನಿಂದಲೂ ತಲೆಗೆ ಹೊಡೆದಿದ್ದರು. ತೀವ್ರ ರಕ್ತಸ್ರಾವದಿಂದ ಮಂಜುನಾಥ್ ಮೃತಪಟ್ಟಿದ್ದರು. ಕೊಲೆ ಸಂಬಂಧ ತಂದೆ ತಮ್ಮಣ್ಣ ದೂರು ನೀಡಿದ್ದರು' ಎಂದೂ ಮೂಲಗಳು ತಿಳಿಸಿವೆ.

ಎಟಿಎಂ ಒಡೆಯಲು ಯತ್ನ: ಬಂಧನ

ಬೆಂಗಳೂರು: ಜೆ.ಸಿ. ನಗರ ಠಾಣೆ ವ್ಯಾಪ್ತಿಯಲ್ಲಿರುವ ಎಟಿಎಂ ಘಟಕದಲ್ಲಿದ್ದ ಯಂತ್ರವನ್ನು ಒಡೆದು ಹಣ ದೋಚಲು ಯತ್ನಿಸಿದ್ದ ಆರೋಪದಡಿ ಕೊಂಡಯ್ಯ (35) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ಎಂ.ಆರ್.ಎಸ್ ಪಾಳ್ಯದ ಎಚ್‌ಡಿಎಫ್‌ಸಿ ಬ್ಯಾಂಕಿನ ಎಟಿಎಂ ಘಟಕದಲ್ಲಿ ಈ ಘಟನೆ ನಡೆದಿದೆ. ನಗರದ ಕಚೇರಿಯೊಂದರಲ್ಲಿ ಸ್ವಚ್ಛತೆ ಕೆಲಸ ಮಾಡುತ್ತಿದ್ದ ಕೊಂಡಯ್ಯನನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಘಟಕದೊಳಗೆ ನುಗ್ಗಿದ್ದ ಆರೋಪಿ, ಸಿಸಿಟಿವಿ ಕ್ಯಾಮೆರಾ ಒಡೆದು ಹಾಕಿದ್ದ. ನಂತರ, ಎಟಿಎಂ ಯಂತ್ರವನ್ನು ಒಡೆದು ಹಣವನ್ನು ಹೊರಗೆ ತೆಗೆಯಲು ಯತ್ನಿಸಿದ್ದ. ಘಟಕದಲ್ಲಿ ಅಳವಡಿಸಿದ್ದ ಅಲಾರಾಂನಿಂದ ಬ್ಯಾಂಕ್ ಅಧಿಕಾರಿಗಳಿಗೆ ಎಚ್ಚರಿಕೆ ಸಂದೇಶ ಬಂದಿತ್ತು. ಅವರು ಠಾಣೆಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋದ ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ಆರೋಪಿಯನ್ನು ವಶಕ್ಕೆ ಪಡೆದರು. ಆರೋಪಿ ಪಾನಮತ್ತನಾಗಿ ಕೃತ್ಯ ಎಸಗಿದ್ದ' ಎಂದಿವೆ.

ಮಹಡಿಯಿಂದ ಬಿದ್ದು ಕಾರ್ಮಿಕ ಸಾವು

ಬೆಂಗಳೂರು: ತಲಘಟ್ಟಪುರ ಠಾಣೆ ವ್ಯಾಪ್ತಿಯ ಕಟ್ಟಡವೊಂದರ 2ನೇ ಮಹಡಿಯಿಂದ ಬಿದ್ದು ಕಾರ್ಮಿಕ ತಿಮ್ಮೇಗೌಡ (35) ಎಂಬುವರು ಮೃತಪಟ್ಟಿದ್ದಾರೆ.

'ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರ ಪುತ್ರಿ ಶೈಲಜಾ ಅವರಿಗೆ ಸೇರಿದ್ದ ಶಾಲೆ ಕಟ್ಟಡದಲ್ಲಿ ಸೋಮವಾರ ಈ ಅವಘಡ ಸಂಭವಿಸಿದೆ. ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ರಘುವನಹಳ್ಳಿ ಗೇಟ್ ಬಳಿ ನಾಲ್ಕು ಮಹಡಿಯ ಕಟ್ಟಡವಿದೆ. ಇದರ ಸೆಂಟ್ರಿಂಗ್ ಕೆಲಸದ ಜವಾಬ್ದಾರಿಯನ್ನು ಕುಮಾರ್ ಎಂಬುವರಿಗೆ ವಹಿಸಲಾಗಿತ್ತು. ಅವರೇ ತಿಮ್ಮೇಗೌಡ ಅವರನ್ನು ಕಟ್ಟಡಕ್ಕೆ ಕರೆಸಿ ಕೆಲಸ ಮಾಡಿಸುತ್ತಿದ್ದರು. ಕಾಲು ಜಾರಿ ಬಿದ್ದು ತಿಮ್ಮೇಗೌಡ ಮೃತಪಟ್ಟಿದ್ದಾರೆ' ಎಂದೂ ತಿಳಿಸಿದರು.

'ತಿಮ್ಮೇಗೌಡ ಅವರ ಸಾವಿನ ಬಗ್ಗೆ ಕುಟುಂಬಸ್ಥರು ಹಾಗೂ ಪ್ರತ್ಯಕ್ಷದರ್ಶಿಗಳ ಹೇಳಿಕೆ ಪಡೆಯಲಾಗಿದೆ' ಎಂದರು.

ದೇಶದ ಆರ್ಥಿಕತೆಗೆ ಕರ್ನಾಟಕ 1.5 ಟ್ರಿಲಿಯನ್ ಕೊಡುಗೆ

ಆರ್ಥಿಕತೆಯಲ್ಲಿ ರಾಜ್ಯಕ್ಕೆ ಮೊದಲ ಸ್ಥಾನ: ಸಿ.ಎಂ ಬೊಮ್ಮಾಯಿ ವಿಶ್ವಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್ಥಿಕ ಬೆಳಣಿಗೆಯಲ್ಲಿ 2025ರಲ್ಲಿ ಕರ್ನಾಟಕವು ದೇಶದಲ್ಲಿ ಮೊದಲ ಸ್ಥಾನಕ್ಕೆ ಬರಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂಗಳವಾರ ವಿಶ್ವಾಸ ವ್ಯಕ್ತಪಡಿಸಿರು.

'ದೇಶದ ಅರ್ಥವ್ಯವಸ್ಥೆಯ ಗಾತ್ರವು 5 ಟ್ರಿಲಿಯನ್ ಡಾಲರ್ ಆಗಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಗುರಿ ಹೊಂದಿದ್ದಾರೆ. ಅವರ ಗುರಿ ಈಡೇರಿಕೆಗೆ 1.5 ಟ್ರಿಲಿಯನ್ ಡಾಲರ್ ಕೊಡುಗೆ ಕರ್ನಾಟಕದ್ದೇ ಇರಲಿದೆ' ಎಂದು ಬೊಮ್ಮಾಯಿ ಹೇಳಿದರು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ) ಆಯೋಜಿಸಿದ್ದ 'ಕರ್ನಾಟಕ ವಿಷನ್ 2025' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. 'ಈ ಬಾರಿಯ ಬಜೆಟ್‌ನಲ್ಲಿ ಆರ್ಥಿಕ ಬೆಳವಣಿಗೆಗೆ ಮಹತ್ವ ನೀಡಲಾಗಿದೆ. ಬಜೆಟ್ ಗಾತ್ರದಲ್ಲಿ ₹ 19,000 ಕೋಟಿ ಹೆಚ್ಚಳವಾಗಿದೆ. ಇದನ್ನು ತಜ್ಞರೂ ನಿರೀಕ್ಷೆ ಮಾಡಿರಲಿಲ್ಲ. ಚುನಾವಣೆಯನ್ನು ಗಮನದಲ್ಲಿ ಇರಿಸಿಕೊಂಡು ಉಚಿತ ಕೊಡುಗೆಗಳನ್ನು ನೀಡಲಾಗುತ್ತದೆ ಎಂಬ ನಿರೀಕ್ಷೆಗಳು ಹಲವರಲ್ಲಿ ಇದ್ದವು' ಎಂದರು.

'ಅಭಿವೃದ್ಧಿಯಲ್ಲಿ ಸಮಾನತೆ ಇದ್ದಾಗ ಮಾತ್ರ ಆರ್ಥಿಕತೆ ಬೆಳೆಯುತ್ತದೆ. ಬೆಂಗಳೂರಿನ ಬೆಳವಣಿಗೆಗೆ ವಿಶೇಷ ಒತ್ತು ನೀಡಲಾಗಿದೆ. ನಮ್ಮ ಸರ್ಕಾರವು ಭವಿಷ್ಯದ ಆರ್ಥಿಕತೆಗೆ ಬುನಾದಿ ಹಾಕುತ್ತಿದೆ' ಎಂದು ಹೇಳಿದರು. ಸಚಿವ ಡಾ.ಕೆ. ಸುಧಾಕರ್, ಎಫ್‌ಕೆಸಿಸಿಐ ಅಧ್ಯಕ್ಷ ಡಾ.ಐ.ಎಸ್. ಪ್ರಸಾದ್ ಕಾರ್ಯಕ್ರಮದಲ್ಲಿ ಇದ್ದರು.

ಎಫ್‌ಕೆಸಿಸಿಐ ಬೆಂಗಳೂರಿನಲ್ಲಿ ಮಂಗಳವಾರ ಆಯೋಜಿಸಿದ್ದ ಕರ್ನಾಟಕ ವಿಷನ್ – 2025 ಕಾರ್ಯಕ್ರಮದಲ್ಲಿ ಸಚಿವ ಡಾ.ಕೆ. ಸುಧಾಕರ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಎಫ್‌ಕೆಸಿಸಿಐ ಅಧ್ಯಕ್ಷ ಡಾ.ಐ.ಎಸ್. ಪ್ರಸಾದ್, ಸಚಿವ ಬೈರತಿ ಬಸವರಾಜ್ ಪಾಲ್ಗೊಂಡಿದ್ದರು. –ಪ್ರಜಾವಾಣಿ ಚಿತ್ರ

ಪ್ರತಿಭಟನೆ ಅಂತ್ಯಗೊಳಿಸಿದ ದೇವದಾಸಿ ಮಹಿಳೆಯರು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಮಾಸಾಶನ ₹3 ಸಾವಿರ ಹೆಚ್ಚಳಕ್ಕೆ ಆಗ್ರಹ
- ಸಚಿವರಿಂದ ಬೇಡಿಕೆ ಈಡೇರಿಸುವ ಭರವಸೆ

ಬೆಂಗಳೂರು: ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವ ಹಾಲಪ್ಪ ಆಚಾರ್ ಅವರಿಂದ ಬೇಡಿಕೆ ಈಡೇರಿಸುವ ಭರವಸೆ ಸಿಕ್ಕಿದ್ದರಿಂದ ದೇವದಾಸಿ ಮಹಿಳೆಯರು ಅನಿರ್ದಿಷ್ಟಾವಧಿ ಪ್ರತಿಭಟನೆ ಅಂತ್ಯಗೊಳಿಸಿದ್ದಾರೆ.

'ದೇವದಾಸಿ ಮಹಿಳೆಯರ ಮಾಸಾಶನವನ್ನು ₹ 3 ಸಾವಿರಕ್ಕೆ ಹೆಚ್ಚಿಸಬೇಕು. ಅವಲಂಬಿತ ಹೆಣ್ಣು ಮಕ್ಕಳಿಗೂ ಮಾಸಾಶನ ವಿಸ್ತರಿಸಬೇಕು' ಸೇರಿದಂತೆ ಹಲವು ಬೇಡಿಕೆ ಈಡೇರಿಕೆಗಾಗಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ದೇವದಾಸಿ ಮಹಿಳೆಯರು ಸೋಮವಾರ ಪ್ರತಿಭಟನೆ ಆರಂಭಿಸಿದ್ದರು.

ಬೆಳಗಾವಿ, ಬಾಗಲಕೋಟೆ, ಧಾರವಾಡ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳ ದೇವದಾಸಿ ಮಹಿಳೆಯರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಪ್ರತಿಭಟನಾ ಸ್ಥಳಕ್ಕೆ ಸೋಮವಾರ ರಾತ್ರಿ ಬಂದಿದ್ದ ಸಚಿವ ಹಾಲಪ್ಪ ಆಚಾರ್, 'ದೇವದಾಸಿ ಮಹಿಳೆಯರ ಬೇಡಿಕೆ ಈಡೇರಿಸಲು ಕ್ರಮ ಕೈಗೊಳ್ಳಲಾಗುವುದು. ಜೊತೆಗೆ, ಮುಖ್ಯಮಂತ್ರಿ ಅವರೊಂದಿಗೆ ಚರ್ಚಿಸಲಾಗುವುದು. ಸದ್ಯ ಪ್ರತಿಭಟನೆ ಅಂತ್ಯಗೊಳಿಸಿ' ಎಂದಿದ್ದರು. ಅದಕ್ಕೆ ಒಪ್ಪಿದ ಮಹಿಳೆಯರು, ಪ್ರತಿಭಟನೆ ಕೈಬಿಟ್ಟು ತಮ್ಮೂರಿನತ್ತ ಹೊರಟರು.

ಸ್ಥಳಕ್ಕೆ ಬಾರದಿದ್ದಕ್ಕೆ ಆಕ್ರೋಶ: ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಒಕ್ಕೂಟದ ಕೆಲ ಮುಖಂಡರನ್ನು ಕಚೇರಿಗೆ ಕರೆಸಿಕೊಂಡಿದ್ದ ಸಚಿವ ಹಾಲಪ್ಪ, 'ಬೇಡಿಕೆ ಈಡೇರಿಸುತ್ತೇನೆ. ಪ್ರತಿಭಟನೆ ಕೈಬಿಡಿ' ಎಂದಿದ್ದರು. ಸ್ಥಳಕ್ಕೆ ಬರುವಂತೆ ಮುಖಂಡರು ಪಟ್ಟು ಹಿಡಿದಿದ್ದರು. ಅದಕ್ಕೆ ಸಚಿವ ಒಪ್ಪಿರಲಿಲ್ಲ. ಅವರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದ ಮುಖಂಡರು, ಉದ್ಯಾನಕ್ಕೆ ಮರಳಿ ರಾತ್ರಿಯೂ ಪ್ರತಿಭಟನೆ ಮುಂದುವರಿಸಿದ್ದರು. ಇದು ಗೊತ್ತಾಗುತ್ತಿದ್ದಂತೆ ಸಚಿವ ಹಾಲಪ್ಪ ಸ್ಥಳಕ್ಕೆ ಬಂದು ಮಾತುಕತೆ ನಡೆಸಿದರು.

ಕಸಾಪ ಯುಟ್ಯೂಬ್ ಚಾನಲ್ ಪ್ರಾರಂಭ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕ.ಸಾ.ಪ) ಹೊಸದಾಗಿ ಯುಟ್ಯೂಬ್ ಚಾಲನ್ ಪ್ರಾರಂಭಿಸಿದ್ದು, 'ಪರಿಷತ್ತಿನಲ್ಲಿ ನಡೆಯುವ ಸಾಹಿತ್ಯ ಚರ್ಚೆಗಳು, ಶಿಬಿರಗಳು, ಸನ್ಮಾನಗಳು ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಇದರ ಮೂಲಕ ಕನ್ನಡಿಗರು ನೋಡಬಹುದು' ಎಂದು ತಿಳಿಸಿದೆ.

'https://www.youtube.com/c/KannadaParishattu' ಯುಟ್ಯೂಬ್ ಚಾನಲ್‌ನಲ್ಲಿ ಪರಿಷತ್ತಿನ ಕಾರ್ಯಕ್ರಮಗಳನ್ನು ನೋಡಬಹುದು. ಕನ್ನಡಿಗರು ಉಚಿತವಾಗಿ ಚಂದಾದಾರರಾಗುವ ಮೂಲಕ ಕನ್ನಡ ಕೈಂಕರ್ಯದಲ್ಲಿ ಕೈಜೋಡಿಸಬೇಕು' ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದರು.

'2022ರ ಮೇ ತಿಂಗಳಿನಲ್ಲಿ ಹಾವೇರಿಯಲ್ಲಿ ನಡೆಯಲಿರುವ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಪೂರ್ವ ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ' ಎಂದು ಅವರು ಪ್ರಕಟಣೆಯಲ್ಲಿ ಜೋಶಿ ಅವರು ತಿಳಿಸಿದ್ದಾರೆ.

ನಗರದಲ್ಲಿ ಇಂದು

ಉಚಿತ ದಂತ ತಪಾಸಣೆ ಹಾಗೂ ಚಿಕಿತ್ಸಾ ಶಿಬಿರ: ಉದ್ಘಾಟನೆ–ನ್ಯಾಯಮೂರ್ತಿ ಜಿ.ನರೇಂದರ್, ಭಾಗವಹಿಸುವವರು–ಪಿ.ಸದಾಶಿವ, ಆರ್.ರಮೇಶ್, ವಿವೇಕ್ ಸುಬ್ಬಾರೆಡ್ಡಿ–ಆಯೋಜನೆ–ವಕೀಲರ ಸಂಘ, ಸೂರ್ಯಕಿರಣ ಫೌಂಡೇಷನ್, ಸ್ಥಳ–ಹೈಕೋರ್ಟ್‌ನ ಎಬಿ ಸಭಾಂಗಣ–ಬೆಳಿಗ್ಗೆ 10.

ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆ ಅನಾವರಣ: ಮುಖ್ಯ ಅತಿಥಿ–ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಡಾ.ಸಿ.ಎನ್.ಅಶ್ವತ್ಥನಾರಾಯಣ, ಆಯೋಜನೆ–ಮಲ್ಲೇಶ್ವರ ಮಹಿಳಾ ಸಂಘ, ಸ್ಥಳ–ಎಂಎಲ್‌ಎ ಪ್ಲಾಟಿನಂ ಜ್ಯುಬಿಲಿ ಕಟ್ಟಡ–ಬೆಳಿಗ್ಗೆ 10.30.

12 ರಿಂದ 14 ವರ್ಷದೊಳಗಿನ ಮಕ್ಕಳಿಗೆ ಕೋವಿಡ್ ಲಸಿಕೀಕರಣ: ಉದ್ಘಾಟನೆ–ಡಾ.ಕೆ.ಸುಧಾಕರ್, ಸ್ಥಳ–ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಸಂಸ್ಥೆ–ಬೆಳಿಗ್ಗೆ 9.30.

ದಿವ್ಯ ಚೇತನ ಚಾರಿಟಬಲ್ ಟ್ರಸ್ಟ್‌ನ ವಾರ್ಷಿಕೋತ್ಸವದ ಅಂಗವಾಗಿ 'ಸಮಾಜ ಸೇವಾರತ್ನ' ಪ್ರಶಸ್ತಿ ಪ್ರದಾನ ಹಾಗೂ ಟ್ರಸ್ಟ್‌ನ ವಾರ್ಷಿಕ ವಿಶೇಷ ಸಂಚಿಕೆ ಬಿಡುಗಡೆ: ಅಧ್ಯಕ್ಷತೆ–ಜಾಣಗೆರೆ ವೆಂಕಟರಾಮಯ್ಯ, ಭಾಗವಹಿಸುವವರು–ಸತೀಶ್ ಜಾರಕಿಹೊಳಿ, ಎಂ.ಎ.ಪೊನ್ನಪ್ಪ, ಎಂ.ರಾಮಚಂದ್ರ, ಕೆ.ಎಸ್.ಮೃತ್ಯುಂಜಯ– ಸ್ಥಳ: ಕನ್ನಡ ಸಾಹಿತ್ಯ ಪರಿಷತ್, ಚಾಮರಾಜಪೇಟೆ–ಸಂಜೆ 5.45.

ಸರ್ಕಾರ ರಚನೆ: ಬಿಜೆಪಿ ಸಭೆ

ನವದೆಹಲಿ (ಪಿಟಿಐ): ಉತ್ತರ ಪ್ರದೇಶ ಸೇರಿದಂತೆ ನಾಲ್ಕು ರಾಜ್ಯಗಳಲ್ಲಿ ಸರ್ಕಾರ ರಚನೆ ಕುರಿತು ಚರ್ಚಿಸಲು ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಮಂಗಳವಾರ ಸಭೆ ನಡೆಯಿತು. ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ, ಸಚಿವರಾದ ಅಮಿತ್ ಶಾ, ರಾಜನಾಥ್ ಸಿಂಗ್, ಪ್ರಲ್ಹಾದ ಜೋಷಿ ಹಾಗೂ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಮತ್ತಿತರರಿದ್ದರು.

ಸಾಹಿತಿ ಬರಗೂರು ಅಭಿಮತ

'ಅನಕ್ಷರಸ್ಥ ಕನ್ನಡಿಗನಿಗೂ ರಾಜಕೀಯ ವಿವೇಕವಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅನಕ್ಷರಸ್ಥ ಕನ್ನಡಿಗನಿಗೂ ಧಾರ್ಮಿಕ, ಸಾಮಾಜಿಕ ಹಾಗೂ ರಾಜಕೀಯ ವಿವೇಕವಿದೆ. ಕರ್ನಾಟಕವನ್ನು ಕನ್ನಡೀಕರಣಗೊಳಿಸಲು ಕೈಗೊಳ್ಳಬೇಕಾದ ಕ್ರಮಗಳ ಬಗೆಗೆ ಚಿಂತಿಸುವುದೇ ಕನ್ನಡದ ವಿವೇಕ' ಎಂದು ಸಾಹಿತಿ ಪ್ರೊ. ಬರಗೂರು ರಾಮಚಂದ್ರಪ್ಪ ಅಭಿಪ್ರಾಯಪಟ್ಟರು.

ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು 'ಕನ್ನಡ ವಿವೇಕ'ದ ಕುರಿತು ಮಾತನಾಡಿದರು.

'ಕನ್ನಡ ವಿವೇಕಕ್ಕೆ ದೊಡ್ಡ ಪರಂಪರೆ ಇದೆ. ಕನ್ನಡ ಭಾಷಿಕ ವಿವೇಕವು ಸಂವಿಧಾನದ ಆಶಯಗಳಿಗೆ ವಿರೋಧವಾಗದಂತೆ ಒಡಮೂಡಬೇಕು. ಕನ್ನಡಿಗರು ಭಾವೋದ್ರೇಕದ ಬದಲು ವಿವೇಕ ಪ್ರದರ್ಶಿಸಬೇಕು. ಆಳಲು ಬಂದ ಎಲ್ಲರನ್ನೂ ಅರಗಿಸಿಕೊಳ್ಳುವ ಶಕ್ತಿ ಕನ್ನಡಕ್ಕಿದೆ' ಎಂದರು.

'ರಾಜ್ಯದಲ್ಲಿ ನೂರಾರು ಉರ್ದು ಶಾಲೆಗಳಿವೆ. ಅಲ್ಲಿ ಅಗತ್ಯವಿರುವಷ್ಟು ಕನ್ನಡ ಶಿಕ್ಷಕರೇ ಇಲ್ಲ. ಶಿಕ್ಷಕರನ್ನು ನೇಮಿಸದಿದ್ದರೆ ಆ ಮಕ್ಕಳು ಕನ್ನಡ ಕಲಿಯುವುದಾದರೂ ಹೇಗೆ' ಎಂದು ಪ್ರಶ್ನಿಸಿದರು.

ಪ್ರತಿಷ್ಠಾನದ ಅಧ್ಯಕ್ಷ ಬಿ.ಎಂ. ಹನೀಫ್, 'ಶಾಲೆ–ಕಾಲೇಜುಗಳಲ್ಲಿ ವಿಧಿಸಿದ ನಿಯಮಗಳನ್ನು ಎಲ್ಲರೂ ಕಡ್ಡಾಯವಾಗಿ ಪಾಲಿಸಬೇಕು. ಶಿರವಸ್ತ್ರ ಹಾಕಿಕೊಂಡು ಕೂರದಿದ್ದರೆ ಆಕಾಶವೇನೂ ಕಳಚಿ ಬೀಳುವುದಿಲ್ಲ. ಹಿಜಾಬ್ ಸೇರಿದಂತೆ ಇನ್ನಿತರ ವಿಷಯಗಳನ್ನು ರಾಜಕಾರಣಿಗಳು ದಾಳವಾಗಿ ಬಳಸಿಕೊಳ್ಳುತ್ತಿದ್ದಾರೆ. ಇಂತಹ ವಿಷಯಗಳ ಕುರಿತು ಪ್ರತಿಷ್ಠಾನ ಜಾಗೃತಿ ಮೂಡಿಸಲಿದೆ' ಎಂದು ತಿಳಿಸಿದರು.

ಸಾಹಿತಿ ದ್ವಾರನಕುಂಟೆ ಪಾತಣ್ಣ, 'ಪ್ರತಿಷ್ಠಾನದ ವತಿಯಿಂದ ಪ್ರತಿವರ್ಷವೂ ಉತ್ತಮ ಸಾಹಿತ್ಯ ಕೃತಿಯೊಂದನ್ನು ಆಯ್ಕೆ ಮಾಡಿ ₹25 ಸಾವಿರ ಬಹುಮಾನ ನೀಡಲಾಗುತ್ತದೆ. ವರ್ಷದಲ್ಲಿ ನಾಲ್ಕು ಸಾಹಿತ್ಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ' ಎಂದರು.

ಸುಧಾ ವಾರಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ಹಾಗೂ ಪ್ರತಿಷ್ಠಾನದ ಕಾರ್ಯಕಾರಿ ಸಮಿತಿ ಸದಸ್ಯ ರಘುನಾಥ ಚ.ಹ., ಕವಯತ್ರಿ ಡಾ.ಎಚ್.ಎಲ್.ಪುಷ್ಪ, ಪ್ರತಿಷ್ಠಾನದ ಕಾರ್ಯದರ್ಶಿ ಈರೇಗೌಡ ಬಸವರಾಜು ಇದ್ದರು.

ಉದ್ಯೋಗ ವಾಣಿ

WANTED TEACHERS

Kunigal Valley International Residential School, ICSE
curriculum needs trained Graduates And post graduates From KG to 10th.
Food And Accommodation will be provided
Salary negotiable With the right candidates
Draft your Resume with the recent Photograph to
kunigalvalleyschool@gmail.com

CONTACT
8296871211 / 9108601699 / 9448315592

SBI
ಭಾರತೀಯ ಸ್ಟೇಟ್ ಬ್ಯಾಂಕ್
ಕೇಂದ್ರ ನೇಮಕಾತಿ ಮತ್ತು ಪದೋನ್ನತಿ ವಿಭಾಗ ಕಾರ್ಪೊರೇಟ್ ಸೆಂಟರ್, ಮುಂಬೈ
ದೂರವಾಣಿ: 022-22820427; ಫ್ಯಾಕ್ಸ್: 022-22820411

ಗುತ್ತಿಗೆ ಆಧಾರದ ಮೇಲೆ ಸ್ಪೆಷಲಿಸ್ಟ್ ವರ್ಗದ ಅಧಿಕಾರಿಗಳ ನೇಮಕಾತಿ

ಈ ಕೆಳಗಿನ ಹುದ್ದೆಗೆ ಭಾರತೀಯ ನಾಗರಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ:

ಹುದ್ದೆ	ಹೋಲಿಸಬಹುದಾದ ದರ್ಜೆ	ಖಾಲಿ ಹುದ್ದೆ	ಜಾಹೀರಾತು ನಂ.
ಅಡ್ವೈಸರ್ (ಆಪರೇಶನ್ಸ್ ಸಪೋರ್ಟ್ ಸಬ್ಸಿಡಿಯರಿ) (ಗುತ್ತಿಗೆಯ ಮೇಲೆ)	TEGSS-I (i.e. CGM)	01	CRPD/SCO/ 2021-22/29

ಅರ್ಹತೆಯ ಮಾನದಂಡಗಳು (ವಯಸ್ಸು, ಅನುಭವ, ಕೆಲಸದ ವಿವರಣೆ ಇತ್ಯಾದಿ), ಅವಶ್ಯಕ ಶುಲ್ಕಗಳು ಮತ್ತು ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸಲು ಲಿಂಕ್ ನೊಂದಿಗೆ ಇತರ ವಿವರಗಳಿಗಾಗಿ ಹಾಗೂ ಅರ್ಜಿ ಶುಲ್ಕದ ಆನ್‌ಲೈನ್ ಪಾವತಿಗಾಗಿ ಬ್ಯಾಂಕ್‌ನ ವೆಬ್‌ಸೈಟ್‌ಗೆ ಲಾಗ್ ಆನ್ ಮಾಡಿರಿ https://bank.sbi/web/careers. ಅರ್ಜಿ ಸಲ್ಲಿಸುವ ಮತ್ತು ಶುಲ್ಕಗಳನ್ನು ಪಾವತಿಸುವ ಮೊದಲು ಅರ್ಹತೆಯನ್ನು ಖಾತ್ರಿಮಾಡಿಕೊಳ್ಳಲು ಮತ್ತು ಇತರ ವಿವರಗಳಿಗಾಗಿ ವಿವರವಾದ ಜಾಹೀರಾತನ್ನು ನೋಡಿರಿ.

- **ಆನ್‌ಲೈನ್ ಅರ್ಜಿ ಸಲ್ಲಿಸುವ ಮತ್ತು ಶುಲ್ಕಪಾವತಿಸುವ ದಿನಾಂಕ:** 11.03.2022 ರಿಂದ 25.03.2022

ಯಾವುದೇ ವಿಚಾರಣೆಗಳಿದ್ದಲ್ಲಿ ದಯಮಾಡಿ ಈ ಲಿಂಕ್ ಮೂಲಕ ನಮಗೆ ಬರೆಯಿರಿ: "CONTACT US" —> "Post Your Query" ಇದು ಬ್ಯಾಂಕ್‌ನ ವೆಬ್‌ಸೈಟ್‌ನಲ್ಲಿ ಲಭ್ಯವಿದೆ.

ಸ್ಥಳ: ಮುಂಬೈ
ದಿನಾಂಕ: 11.03.2022
ಪ್ರಧಾನ ವ್ಯವಸ್ಥಾಪಕರು

ಗೌರವ ಧನ ಹೆಚ್ಚಳಕ್ಕೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರದ ಯೋಜನೆಗಳನ್ನು ಅಂಗವಿಕಲರ ಮನೆ ಬಾಗಿಲಿಗೆ ತಲುಪಿಸುತ್ತಿರುವ ಗ್ರಾಮೀಣ ಪುನರ್ವಸತಿ (ವಿಆರ್‌ಡಬ್ಲ್ಯು) ಕಾರ್ಯಕರ್ತರ ಗೌರವ ಧನ ಹೆಚ್ಚಿಸಿ, ಸೇವಾ ಭದ್ರತೆ ಒದಗಿಸಬೇಕು' ಎಂದು ಒತ್ತಾಯಿಸಿ ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಯಿತು.

'ರಾಜ್ಯ ವಿಕಲಚೇತನರ ಹಾಗೂ ವಿವಿಧೋದ್ದೇಶ (ಎಂ.ಆರ್.ಡಬ್ಲ್ಯು) ಮತ್ತು ಗ್ರಾಮೀಣ ಪುನರ್ವಸತಿ (ವಿಆರ್‌ಡಬ್ಲ್ಯು) ಕಾರ್ಯಕರ್ತರ ಒಕ್ಕೂಟ' ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೇರಿದ್ದ ಕಾರ್ಯಕರ್ತರು, ಘೋಷಣಾ ಫಲಕಗಳನ್ನು ಪ್ರದರ್ಶಿಸಿದರು. ಹಲವು ವರ್ಷಗಳಿಂದ ಹೋರಾಟ ನಡೆಸುತ್ತಿದ್ದರೂ ತಮ್ಮ ಬೇಡಿಕೆ ಈಡೇರಿಸಿಲ್ಲವೆಂದು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

'176 ತಾಲ್ಲೂಕು ಪಂಚಾಯಿತಿಗಳು, 5,928 ಗ್ರಾಮ ಪಂಚಾಯಿತಿಗಳು ಹಾಗೂ 376 ನಗರಗಳಲ್ಲಿ ಕಾರ್ಯಕರ್ತರು ಕೆಲಸ ಮಾಡುತ್ತಿದ್ದಾರೆ. ಸರ್ಕಾರದ ಎಲ್ಲ ಸೌಲಭ್ಯಗಳನ್ನು ಅಂಗವಿಕಲರಿಗೆ ತಲುಪಿಸುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಎಲ್ಲವೂ ದುಬಾರಿಯಾಗಿದ್ದು, ಕಾರ್ಯಕರ್ತರಿಗೆ ನೀಡುವ ಗೌರವ ಧನ ಯಾವುದಕ್ಕೂ ಸಾಲುತ್ತಿಲ್ಲ. ಹೀಗಾಗಿ, ಗೌರವ ಧನ ಹೆಚ್ಚಿಸಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

'ಎಂಆರ್‌ಡಬ್ಲ್ಯು, ಕಾರ್ಯಕರ್ತರನ್ನು ತಾಲ್ಲೂಕು ಅಂಗವಿಕಲರ ಅಭಿವೃದ್ಧಿ ಅಧಿಕಾರಿಗಳನ್ನಾಗಿ, ವಿಆರ್‌ಡಬ್ಲ್ಯು ಹಾಗೂ ಯುಆರ್‌ಡಬ್ಲ್ಯು ಕಾರ್ಯಕರ್ತರನ್ನು ಅಭಿವೃದ್ಧಿ ಸಹಾಯಕರ ಹುದ್ದೆಗಳನ್ನು ಸೃಷ್ಟಿಸಿ ಕಾಯಂಗೊಳಿಸಬೇಕು. ಎಸಿಡಿಪಿಒ ಅವರನ್ನು ನೋಡಲ್ ಅಧಿಕಾರಿಯನ್ನಾಗಿ ಮಾಡಿರುವ ಆದೇಶ ರದ್ದುಪಡಿಸಬೇಕು. ನಿವೃತ್ತಿಯಾಗುವ ಕಾರ್ಯಕರ್ತರಿಗೆ ₹ 5 ಲಕ್ಷ ಇಡುಗಂಟು ನೀಡಬೇಕು. ಕಾರ್ಯಕರ್ತೆಯರಿಗೆ ಹೆರಿಗೆ ಸಮಯದಲ್ಲಿ ವೇತನಸಹಿತ ರಜೆ ನೀಡಬೇಕು' ಎಂದೂ ಒತ್ತಾಯಿಸಿದರು.

'ರಾಜ್ಯ ವಿಕಲಚೇತನರ ಹಾಗೂ ವಿವಿಧೋದ್ದೇಶ (ಎಂ.ಆರ್‌ಡಬ್ಲ್ಯು) ಮತ್ತು ಗ್ರಾಮೀಣ ಪುನರ್ವಸತಿ (ವಿಆರ್‌ಡಬ್ಲ್ಯು) ಕಾರ್ಯಕರ್ತರ ಒಕ್ಕೂಟ'ದ ನೇತೃತ್ವದಲ್ಲಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಯಿತು – ಪ್ರಜಾವಾಣಿ ಚಿತ್ರ

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಪಿಯು ವಿದ್ಯಾರ್ಥಿಗಳಿಗಾಗಿ
ಆನ್‌ಲೈನ್ ಬೋಧನಾ ಸರಣಿ
ಕೆಮಿಸ್ಟ್ರಿ ಟಿಪ್ಸ್
ಶ್ರೀಮತಿ ಅಶ್ವಿನಿ ಎ
ರಸಾಯನಶಾಸ್ತ್ರ ಉಪನ್ಯಾಸಕರು, ಕಲಬುರಗಿ
ಸಂಜೆ 4 ರಿಂದ 6 ರವರೆಗೆ
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9, ಸಂಪಾದಕೀಯ: ಬೆಳಿಗ್ಗೆ 9.30, ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಜೂನ್ 19ಕ್ಕೆ ಕಾಮೆಡ್–ಕೆ ಪ್ರವೇಶ ಪರೀಕ್ಷೆ

ಒಂದನೇ ಪುಟದಿಂದ...

ಗ್ರಾಮೀಣ ಭಾಗದ ಹಾಗೂ ಮೂಲ ಸೌಕರ್ಯಗಳಿಂದ ವಂಚಿತರಾಗಿರುವ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಆಧುನಿಕ ತಂತ್ರಜ್ಞಾನಗಳ ಬಗೆಗೆ ಅಗತ್ಯ ಜ್ಞಾನ ಒದಗಿಸುವುದು, ಆ ಮೂಲಕ ಅವರನ್ನು ಉದ್ಯೋಗಕ್ಕೆ ಅಣಿಗೊಳಿಸುವುದು ಈ ಕೇಂದ್ರಗಳ ಉದ್ದೇಶ' ಎಂದು ಅವರು ಮಾಹಿತಿ ನೀಡಿದರು.

'ಕಾಮೆಡ್–ಕೆ ಅಧೀನಕ್ಕೊಳಪಡುವ 10 ರಿಂದ 12 ಕಾಲೇಜುಗಳನ್ನು ಕೌಶಲ ಕೇಂದ್ರವೊಂದರ ಜೊತೆ ವಿಲೀನಗೊಳಿಸಲಾಗುತ್ತದೆ. 'ಸ್ಕಿಲ್ ಲ್ಯಾಬ್' ಮೂಲಕ ವಿದ್ಯಾರ್ಥಿಗಳಲ್ಲಿ ಸಂಶೋಧನಾ ಮನೋಭಾವ ಬೆಳೆಸಲಾಗುತ್ತದೆ. ಕೃತಕ ಬುದ್ಧಿಮತ್ತೆ ಬಗ್ಗೆಯೂ ಅರಿವು ಮೂಡಿಸಲಾಗುತ್ತದೆ' ಎಂದು ಹೇಳಿದರು.

ಇ.ಆರ್.ಎ.ಫೌಂಡೇಷನ್‌ನ ಸಿಇಒ ಪಿ.ಮುರಳೀಧರ, 'ವೃತ್ತಿಪರ ಶಿಕ್ಷಣ ಪಡೆಯಲು ಇಚ್ಛಿಸುವವರಿಗಾಗಿ ನಾವು 'ಮಾರ್ಗ' ಕಾರ್ಯಕ್ರಮದ ಮೂಲಕ ವಿಷಯ ಜ್ಞಾನ ಒದಗಿಸುತ್ತಿದ್ದೇವೆ. ಇದಕ್ಕಾಗಿ ವಿದ್ಯಾರ್ಥಿಯು ₹1 ಸಾವಿರ ಶುಲ್ಕ ಕಟ್ಟಬೇಕು. ಸರ್ಕಾರಿ ಕಾಲೇಜುಗಳ ವಿದ್ಯಾರ್ಥಿಗಳಿಗೆ ಇದು ಉಚಿತ' ಎಂದರು.

'ಅಲೆಮಾರಿ ಸಮುದಾಯಕ್ಕೆ ವಿಶೇಷ ಪ್ಯಾಕೇಜ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಲೆಮಾರಿ ಸಮುದಾಯದ ಅಭಿವೃದ್ಧಿಗೆ ಸರ್ಕಾರ ಬದ್ಧವಿದ್ದು, ಮುಂದಿನ ದಿನಗಳಲ್ಲಿ ಈ ಸಮುದಾಯಕ್ಕಾಗಿಯೇ ವಿಶೇಷ ಪ್ಯಾಕೇಜ್ ಘೋಷಿಸಲಾಗುತ್ತದೆ' ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ಕರ್ನಾಟಕ ಹಕ್ಕಿಪಿಕ್ಕಿ ಬುಡಕಟ್ಟು ಯುವ ಸಂಘಟನೆ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಸಮಾವೇಶ ಉದ್ಘಾಟಿಸಿ ಮಂಗಳವಾರ ಮಾತನಾಡಿದರು.

'ಅಲೆಮಾರಿಗಳಿಗೆ ಪ್ರತ್ಯೇಕ ಅಭಿವೃದ್ಧಿ ನಿಗಮ ಸ್ಥಾಪಿಸುವುದು ಕಷ್ಟ. ಜಾತಿಗೊಂದು ನಿಗಮ ಮಾಡುವುದಕ್ಕೆ ಆಗುವುದಿಲ್ಲ. ಅಲೆಮಾರಿಗಳಿಗಾಗಿ ನಿಗಮ ಸ್ಥಾಪಿಸಿದರೂ ಉಳಿದ ನಿಗಮಗಳಂತೆ ಅದಕ್ಕೂ ಅನ್ಯಾಯವಾಗುತ್ತದೆ. ಅದರ ಬದಲು ವಿಶೇಷ ಪ್ಯಾಕೇಜ್ ಘೋಷಿಸಿ ಸಮುದಾಯದ ಅಭಿವೃದ್ಧಿಗೆ ಶ್ರಮಿಸುತ್ತೇವೆ' ಎಂದರು.

'ಅರಣ್ಯ ಕಾಯ್ದೆಯಿಂದಾಗಿ ಅಲೆಮಾರಿ ಹಕ್ಕಿ ಪಿಕ್ಕಿ ಸಮುದಾಯಕ್ಕೆ ತುಂಬಾ ತೊಂದರೆಯಾಗುತ್ತಿದೆ. ಈ ಸಮುದಾಯಕ್ಕೆ ವಾಸಿಸಲು ಯೋಗ್ಯ ಮನೆಗಳೂ ಇಲ್ಲ. ಅವರಿಗೆ ಸೂಕ್ತ ವಸತಿ ಅಥವಾ ನಿವೇಶನ ಒದಗಿಸಬೇಕು. ಅವರು ಕುಲಕಸುಬಿನಲ್ಲಿ ತೊಡಗಿಕೊಳ್ಳಲು ವಿಶೇಷ ಪ್ಯಾಕೇಜ್ ಪ್ರಕಟಿಸಬೇಕು' ಎಂದು ಕರ್ನಾಟಕ ಹಕ್ಕಿಪಿಕ್ಕಿ ಬುಡಕಟ್ಟು ಯುವ ಸಂಘಟನೆ ಅಧ್ಯಕ್ಷ ಪುನೀತ್‌ಕುಮಾರ್ ಒತ್ತಾಯಿಸಿದರು.

ರಕ್ಷಣೆ ಕೋರಿ ಗೃಹ ಸಚಿವರಿಗೆ ನಟ ಚೇತನ್ ಮನವಿ

ಪ್ರಜಾವಾಣಿ ವಾರ್ತೆ

ಚೇತನ್

ಬೆಂಗಳೂರು: ಸಾಮಾಜಿಕ ಜಾಲತಾಣಗಳಲ್ಲಿ ಬೆದರಿಕೆಗಳು ಬರುತ್ತಿರುವ ಕಾರಣ ಸೂಕ್ತ ರಕ್ಷಣೆ ನೀಡಬೇಕು ಎಂದು ಕೋರಿ ನಟ ಚೇತನ್ ಗೃಹ ಸಚಿವ ಆರಗ ಜ್ಞಾನೇಂದ್ರ ಅವರನ್ನು ಮಂಗಳವಾರ ಭೇಟಿಯಾಗಿ ಮನವಿ ಸಲ್ಲಿಸಿದ್ದಾರೆ.

'ಗೌರಿ ಲಂಕೇಶ್ ಅವರ ಹತ್ಯೆಯಾದ ಬಳಿಕ, ಜೀವ ಬೆದರಿಕೆಯಂಥ ವಿಚಾರವನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಳ್ಳುತ್ತದೆ ಎನ್ನುವ ನಂಬಿಕೆ ಇದೆ. ರಾಜಕಾರಣಿಗಳು ಸಮಾಜದ ಪರಿವರ್ತನೆ ಮಾತುಗಳನ್ನು ಆಡದೇ ಇದ್ದರೂ, ಕೇವಲ ಕೋಮುವಾದ ಅಥವಾ ದ್ವೇಷದ ಮಾತುಗಳನ್ನು ಆಡಿದರೂ ಅವರಿಗೆ ರಕ್ಷಣೆ ಸಿಗುತ್ತದೆ. ನಾವು ಸತ್ಯದ ಪರ ಮಾತನಾಡುವಾಗ ಬೆದರಿಕೆ ಬರುತ್ತಿದೆ ಎಂದರೆ ರಕ್ಷಣೆ ನೀಡುವುದು ಸರ್ಕಾರ ಕರ್ತವ್ಯ. ಸಾಮಾಜಿಕ ಜಾಲತಾಣದಲ್ಲಿ ಬೆದರಿಕೆ ಬರುತ್ತಿವೆ. ಒಬ್ಬ ವ್ಯಕ್ತಿಯಿಂದ ಅಥವಾ ಸಂಘಟನೆಯಿಂದ ಎಂದು ಹೇಳಲು ಸಾಧ್ಯವಿಲ್ಲ. ಎಲ್ಲ ದಾಖಲೆಗಳನ್ನೂ ಗೃಹ ಸಚಿವರಿಗೆ ನೀಡಿದ್ದೇನೆ' ಎಂದರು.

'ನನ್ನನ್ನು ಗಡಿಪಾರು ಮಾಡುತ್ತಾರೆ ಎನ್ನುವುದು ಆಧಾರವಿಲ್ಲದ ಅತಿರೇಕದ ಮಾತು. ಇದಕ್ಕೆ ಯಾವ ಸಾಕ್ಷ್ಯವೂ ಇಲ್ಲ. ಇದರಲ್ಲಿ ಯಾವ ಸತ್ಯವೂ ಇಲ್ಲ. ಹೀಗಾಗಿ ತಲೆಕೆಡಿಸಿಕೊಳ್ಳುವುದಿಲ್ಲ' ಎಂದಿದ್ದಾರೆ.

'ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಚೋದನಕಾರಿ ಬರಹ ಪ್ರಕಟಿಸಿದ್ದಾರೆ' ಎಂಬ ಆರೋಪದಡಿ ಬಂಧನಕ್ಕೊಳಗಾಗಿದ್ದ ಚೇತನ್ ಅವರು ಇತ್ತೀಚೆಗಷ್ಟೇ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದರು.

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.

ನಂ:ದಾಮನಪಾ:ಕಾಇ2.ಇ-ಟೆಂಡರ್:42:2021-22 ದಿನಾಂಕ: 10-03-2022

ಟೆಂಡರ್ ಪ್ರಕಟಣೆ

(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2021-22 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ (3ನೇ ಕರೆ) – 02 ಕಾಮಗಾರಿ, 2021-22 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ (2ನೇ ಕರೆ) (2ನೇ ಕರೆ)-01 ಕಾಮಗಾರಿ, 2020-21 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ (2ನೇ ಕರೆ)-01 ಕಾಮಗಾರಿ, 2021-22 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ – 05 ಕಾಮಗಾರಿಗಳು ಒಟ್ಟು 09 ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಿಂಗಲ್/ಡಬಲ್ ಕವರ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು/ಬಿಡ್ಡುದಾರರು/ಸರಬರಾಜುದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್ ಸೈಟ್ www.eproc.karnataka.gov.in ನಲ್ಲಿ ಟೆಂಡರ್‌ಗಳ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಮಹಾನಗರ ಪಾಲಿಕೆಯ ಕಛೇರಿಯ ವೆಬ್ ಸೈಟ್ www.davanagerecity.mrc.gov.in ರಲ್ಲಿ ಹಾಗೂ ಇ-ಪ್ರೊಕ್ಯೂರ್‌ಮೆಂಟ್ ಸಹಾಯಕ ದೂರವಾಣಿ ಸಂಖ್ಯೆ: +91-8046010000 +91-8068948777 ರಿಂದ ಮಾಹಿತಿ ಪಡೆಯಬಹುದು.

(1) ಪ್ರೀ ಬಿಡ್ ಮೀಟಿಂಗ್ ದಿನಾಂಕ & ವೇಳೆ (ರೂ.100.00 ಲಕ್ಷ ಮೇಲ್ಪಟ್ಟ ಕಾಮಗಾರಿಗಳಿಗೆ ಮಾತ್ರ) : 22-03-2022 ಸಮಯ : 16.30 (2) ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ : 28-03-2022 ಸಮಯ : 16.30 (3) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 28-03-2022 ಸಮಯ : 17.00 (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 30-03-2022 ಸಮಯ : 11.00

ವಾಸಾಇ/ದಾವಣಗೆರೆ/862/ಎಂಸಿಎ/2021-22 — ಸಹಿ/- ಆಯುಕ್ತರು, ಮಹಾನಗರ ಪಾಲಿಕೆ, ದಾವಣಗೆರೆ

ಔಷಧ ನಿಯಂತ್ರಣ ಇಲಾಖೆ

ಪ್ರಧಾನ ವೈಜ್ಞಾನಿಕ ಅಧಿಕಾರಿಯವರ ಕಛೇರಿ, ಔಷಧ ಪರೀಕ್ಷಾ ಪ್ರಯೋಗಾಲಯ, ಅರಮನೆ ರಸ್ತೆ, ಬೆಂಗಳೂರು-560 001.
ದೂರವಾಣಿ : 080-22264788, ಫ್ಯಾಕ್ಸ್ : 08-22286492

ಸಂಖ್ಯೆ : ಔನಿಇ/ಔಪಪ್ರ/ಟಿ.ಐ.ಎ./ಇ-ಟೆಂಡರ್/ಸಿಎಫ್‌ಟಿ-07/2021-22 ದಿನಾಂಕ:14.03.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)(ದ್ವಿಲಕೋಟೆ ಪದ್ಧತಿ)

Supply and Installation of Computers with UPS -110 No's, Printers-40 No's and Laptops- 75 No's to Drugs Testing Laboratory, Bengaluru, Regional Drugs Testing Laboratories, Hubballi and Ballari and Drugs Control Department, Bengaluru ಇವುಗಳನ್ನು ಖರೀದಿಸಲು ಅರ್ಹ ಸಂಸ್ಥೆ ಅಥವಾ ಬಿಡ್ಡರ್‌ಗಳಿಂದ ಇ-ಟೆಂಡರನ್ನು ಆಹ್ವಾನಿಸಿರುತ್ತಾರೆ. ಇ-ಟೆಂಡರ್ ಫಾರಂಗಳನ್ನು ವೆಬ್‌ಸೈಟ್ https://eproc.karnataka.gov.in ನಿಂದ **ದಿನಾಂಕ: 15.03.2022** ರಿಂದ ಡೌನ್ ಲೋಡ್ ಮಾಡಿಕೊಳ್ಳಬಹುದಾಗಿದೆ. ಇ-ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 22.03.2022 ಸಂಜೆ 5:30 ಗಂಟೆವರೆಗೆ.** ಪ್ರೀ-ಬಿಡ್ ಮೀಟಿಂಗನ್ನು **ದಿನಾಂಕ: 18.03.2022 ಬೆಳಿಗ್ಗೆ 11:30 ಗಂಟೆಗೆ** ಪ್ರಧಾನ ವೈಜ್ಞಾನಿಕ ಅಧಿಕಾರಿಯವರ ಕಛೇರಿ, ಔಷಧ ಪರೀಕ್ಷಾ ಪ್ರಯೋಗಾಲಯ, ಅರಮನೆ ರಸ್ತೆ, ಬೆಂಗಳೂರು ಇಲ್ಲಿ ನಿಗಧಿಪಡಿಸಲಾಗಿದೆ. ಟೆಕ್ನಿಕಲ್ ಬಿಡ್ ತೆರೆಯುವ **ದಿನಾಂಕ: 24.03.2022 ರಂದು ಬೆಳಿಗ್ಗೆ 10:30 ಗಂಟೆಗೆ** ಮತ್ತು ಫೈನಾನ್ಷಿಯಲ್ ಬಿಡ್ ತೆರೆಯುವ **ದಿನಾಂಕ: 25.03.2022** ಆಗಿರುತ್ತದೆ. ಸದರಿ ಟೆಂಡರ್‌ಗಳ ವಿವರಣಾತ್ಮಕ ಮಾಹಿತಿಯನ್ನು ವೆಬ್‌ಸೈಟ್ https://eproc.karnataka.gov.in ನಿಂದ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳನ್ನು ಪ್ರಧಾನ ವೈಜ್ಞಾನಿಕ ಅಧಿಕಾರಿಯವರ ಕಛೇರಿ, ಔಷಧ ಪರೀಕ್ಷಾ ಪ್ರಯೋಗಾಲಯ, ಅರಮನೆ ರಸ್ತೆ, ಬೆಂಗಳೂರು-560 001 ಇಲ್ಲಿಂದ ಖುದ್ದಾಗಿ ಪಡೆಯಬಹುದಾಗಿದೆ.

ಸಹಿ/- ಸದಸ್ಯ ಕಾರ್ಯದರ್ಶಿ, ಟೆಂಡರ್ ಆಹ್ವಾನಿಸುವ ಪ್ರಾಧಿಕಾರ.
ವಾಸಾಸಂಇ/ಬೆಂ.ನ./ಜಿಎ/3765/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಬೆಳಗಾವಿ
ಪಂಚಾಯತ ರಾಜ ಇಂಜನೀಯರಿಂಗ್ ವಿಭಾಗ ಚಿಕ್ಕೋಡಿ

ಕಚೇರಿ ದೂರವಾಣಿ/ಫ್ಯಾಕ್ಸ್ ಸಂಖ್ಯೆ: 08338-272131, ಇ-ಮೇಲ್: preckdee@gmail.com
ಕ್ರ.ಸಂ. ಪಂರಾಇಂ/ಚಿವಿ/ಡಿ.ಬಿ/ಇ-ಪ್ರೊ/2021-22/4616 ದಿನಾಂಕ: 08-03-2022

(ಅಲ್ಪಾವಧಿ) ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ ಚಿಕ್ಕೋಡಿ ಇವರು KW-1, KW-2, KW-3, (Standard Tender Document) ನಿಬಂಧನೆಗಳೊಪಟ್ಟಂತೆ ಪಂಚಾಯತ ರಾಜ್ ಇಂಜನೀಯರಿಂಗ್ / ಲೋಕೋಪಯೋಗಿ ಇಲಾಖೆಯಲ್ಲಿ ಸಿವ್ಹಿಲ್ ನೊಂದಾಯಿತ ಹಾಗೂ ಇ-ಗುತ್ತಿಗೆ ಕುರಿತು ಇ-ಪ್ರೊಕ್ಯೂರ್‌ಮೆಂಟ್ ಇವರಿಂದ ನೊಂದಾಯಿಸಿದ ಅರ್ಹ ಗುತ್ತಿಗೆದಾರರುಗಳಿಂದ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ ವಿವಿಧ ಯೋಜನೆ ಅಡಿಯಲ್ಲಿಯ ಕಾಮಗಾರಿಗಳಿಗೆ ಐಟಂವಾರು ಟರ್ನ್‌ಕೀ ಆಧಾರದ ಮೇಲೆ ಇ-ಟೆಂಡರ್ ಆಹ್ವಾನಿಸಲಾಗಿದೆ.

1	Last date of request for issue of blank E-bid document through e-Procurement Date: other works	08-03-2022 To 16-03-2022
2	Bid Closing & Submission Date; other works	16-03-2022 AT 4:00 PM
3	Financial Bid Opening Date:	18-03-2022 AT 11:00 AM
4	Pre Bid Meeting Date (KW-2 & 3 only)	15-03-2022 AT 11:00 AM
5	Technical Bid Opening Date (KW-2 & 3 only)	18-03-2022 AT 11:00 AM
6	Financial Bid Opening Date : (KW-2 & 3 only)	19-03-2022 AT 11:00 PM

General Works Indent No's:	89323, 89322, 87993, 89325, 89317, 89320, 89321 87529.
SC Works Indent No's	89030, 89318.
ST Works Indent No's	89319.

ಕಾಮಗಾರಿಗಳ ವಿವರ, ಷರತ್ತು ನಿಬಂಧನೆಗಳಿಗಾಗಿ ಈ ಕಚೇರಿಗೆ ಕಚೇರಿ ವೇಳೆಯಲ್ಲಿ ಸಂಪಕಿಸಿ ಹಾಗೂ ವೆಬ್‌ಸೈಟ್ www.eproc.karnataka.gov.in ಸಂಪರ್ಕಿಸಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರು, ಪಂ.ರಾಜ್.ಇಂ.ವಿಭಾಗ ಚಿಕ್ಕೋಡಿ
DIPO/RO No. 1780/2021-22

ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕಾರ್ಯನಿರ್ವಾಹಕ ನಿರ್ದೇಶಕರರವರ ಕಛೇರಿ,
ಶ್ರೀ ಚಾಮರಾಜೇಂದ್ರ ಮೃಗಾಲಯ, ಮೈಸೂರು.

ಸಂಖ್ಯೆ: ಎಂವೈಜೆಡ್/ಎಸಿಟಿ/ಕಾಮಗಾರಿ(Landscape & Bus Bay)/2021-22 ದಿನಾಂಕ: 15.03.2022

ಟೆಂಡರ್ ಪ್ರಕಟಣೆ (ಇ ಪ್ರಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಮಾತ್ರ)

ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕಾರ್ಯನಿರ್ವಾಹಕ ನಿರ್ದೇಶಕರು, ಶ್ರೀ ಚಾಮರಾಜೇಂದ್ರ ಮೃಗಾಲಯ, ಮೈಸೂರು, ಇವರು ಈ ಕೆಳಕಂಡ ಕಾಮಗಾರಿಗೆ ಎರಡು ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಕಾಯಿದೆ 1999 ಮತ್ತು ನಿಯಮ 2000 ಹಾಗೂ ತತ್ಸಂಬಂಧವಾಗಿ ಹೊರಡಿಸಿರುವ ಸರ್ಕಾರದ ಆದೇಶ, ಸುತ್ತೋಲೆ ಮತ್ತು ಮಾರ್ಗಸೂಚಿ ಅನುಸಾರ ಐಟಂವಾರು ಟೆಂಡರುಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ಮತ್ತು ಇ ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿತ ನಾಲ್ಕನೇ ದರ್ಜೆ (ಸಿವಿಲ್) ಮತ್ತು ಮೇಲ್ಪಟ್ಟ ಹಾಗೂ Standard Tender Documents KW-1 Clause-3ನಲ್ಲಿ ಅರ್ಹರಿರುವ ಗುತ್ತಿಗೆದಾರರಿಂದ ಇ ಪ್ರಕ್ಯೂರ್‌ಮೆಂಟ್ ಅಡಿಯಲ್ಲಿ ಸಲ್ಲಿಸಲು ಆಹ್ವಾನಿಸಲಾಗಿದೆ. (https://eproc.Karnataka.gov.in) (Dept. Selection: Zoo Authority) ಟೆಂಡರಗಳನ್ನುಆಹ್ವಾನಿಸಲಾಗಿದೆ.

ಕ್ರಸಂ.1 ಸರಬರಾಜು ಮಾಡುವ ಹೆಸರು: Construction of proposed Landscape and Bus Bay near Underpass inside Parking of Sri Chamarajendra Zoological Gardens, Mysuru (Est. amount 20.00 lakhs). **ಇ.ಎಂ.ಡಿ. ಮೊಬಲಗು:** 50,000.00 **ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:** 22.3.2022 ರಂದು 15.30 ಘಂಟೆಗೆ. **ಟೆಂಡರ್ ತೆರೆಯುವ ದಿನಾಂಕ:** ತಾಂತ್ರಿಕ ಟೆಂಡರ್ ದಿ.23.03.2022 ರಂದು 16.30 ಘಂಟೆಗೆ ಹಾಗೂ ಆರ್ಥಿಕ ಟೆಂಡರ್ ದಿ.24.03.2022 ರಂದು 17.00 ಘಂಟೆಗೆ ನಂತರ.

ಷರತ್ತುಗಳು: 1) ಇ-ಪ್ರೊಕ್ ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿ: 15.03.2022ರ ನಂತರ. **2)** ಇ-ಪ್ರೊಕ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸುವ ಕೊನೆ ದಿ: 22.03.2022 ರಂದು 16.30 ಘಂಟೆವರೆಗೆ. **3)** ಇ-ಪ್ರೊಕ್ ಪೋರ್ಟಲ್‌ನಲ್ಲಿ ಟೆಂಡರುಗಳನ್ನು ತೆರೆಯುವ ದಿ: 23.03.2022 ಮಧ್ಯಾಹ್ನ 16.30 ಘಂಟೆಗೆ. **4)** ಇ.ಎಂ.ಡಿ. ಇ-ಪೋರ್ಟಲ್‌ನಲ್ಲಿ ತಿಳಿಸಿರುವ ಪ್ರಕಾರ ಸಲ್ಲಿಸತಕ್ಕದ್ದು. **5)** ಈ ಕಚೇರಿಯಲ್ಲಿ ಗುತ್ತಿಗೆದಾರರು ಕಾಮಗಾರಿಯ ನಿರ್ವಹಣೆಯ ನೋಂದಾಣಿಯನ್ನು ಪಡೆದುಕೊಂಡಿರಬೇಕು. ನೋಂದಣಿ ಮಾಡಲು ಕೊನೆಯ ದಿ: 19.03.2022 ಸಂಜೆ 16.00 ಗಂಟೆಯವರೆಗೆ. **6)** ಟೆಂಡರುಗಳನ್ನು ತಿರಸ್ಕರಿಸುವ ಅಥವಾ ಟೆಂಡರ್ ಒಪ್ಪುವ ಅಥವಾ ಸಂದಾನ ಮಾಡುವ ಅಧಿಕಾರ ಹಾಗು ಷರತ್ತುಗಳನ್ನು ಸೇರಿಸುವ, ಕೈಬಿಡುವ ಹಾಗು ಮಾರ್ಪಾಡು ಮಾಡುವ ಅಧಿಕಾರ ಈ ಕೆಳಗೆ ಸಹಿ ಮಾಡಿದವರಿಗೆ ಇರುತ್ತದೆ. **7)** ಹೆಚ್ಚಿನ ವಿವರಗಳನ್ನು ಇ ಪೋರ್ಟಲ್‌ನಲ್ಲಿ ದೊರೆಯುವ ಸವಿವರ ಪ್ರಕಟಣೆಯಿಂದ ಪಡೆಯಬಹುದು.

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕಾರ್ಯನಿರ್ವಾಹಕ ನಿರ್ದೇಶಕರು
DIPR/DDM YS/MCA/1037/2021-22

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ

ಬಳ್ಳಾರಿ-ಬೆಂಗಳೂರು ರಸ್ತೆ, ಬಂಡಿಹಟ್ಟಿ, ಬಳ್ಳಾರಿ-583101 ದೂರವಾಣಿ – 08392 250442 ಫ್ಯಾಕ್ಸ್-08392 250899 ಇ-ಮೇಲ್ apmcballari@gmail.com
ಸಂ. ಕೃಉಮಾಸ(ಬ)/ಅಭಿ.ಕೆ/ 1256 /2021-22 ದಿನಾಂಕ: 15/03/2022

ತಿದ್ದುಪಡಿ ಪ್ರಕಟಣೆ

ಈ ಕಛೇರಿಯ ಸಂಖ್ಯೆ ಇ-ಟೆಂಡರ್ ಪ್ರಕಟಣೆಯ ಸಂಖ್ಯೆ ಕೃಉಮಾಸ/ಬ/ಅಭಿಕೆ/1231/2021-22 ದಿನಾಂಕ 11/03/2022ರ ಮೂಲಕ ಪ್ರಕಟಣೆಯನ್ನು ಪ್ರಜಾವಾಣಿ ದಿನ ಪತ್ರಿಕೆಯಲ್ಲಿ ದಿನಾಂಕ 12/03/2022 ರಂದು ಪ್ರಕಟಿಸಲಾದ ಪ್ರಕಟಣೆಯಲ್ಲಿ ಕ್ರಮ ಸಂಖ್ಯೆ 4ರಲ್ಲಿನ ಇಂಡೆಂಟ್ ಸಂಖ್ಯೆ ಎ.ಪಿ.ಎಂ.ಸಿ/2021-22/OW/WORK INDENT/5121 ಎಂದು ನಮೂದಿಸಿದ್ದು ಸದರಿ ಇಂಡೆಂಟ್ ಸಂಖ್ಯೆಯನ್ನು ಎ.ಪಿ.ಎಂ.ಸಿ/2021-22/OW/WORK INDENT/5122 ಎಂದು ಓದಿಕೊಳ್ಳತಕ್ಕದ್ದು.

ಸಹಿ/- ಕಾರ್ಯದರ್ಶಿ, ಕೃ.ಉ.ಮಾ.ಸ.,ಬಳ್ಳಾರಿ — ಸಹಿ/- ಅಧ್ಯಕ್ಷರು, ಕೃ.ಉ.ಮಾ.ಸ.,ಬಳ್ಳಾರಿ

ಮೈಸೂರು ಮಹಾನಗರ ಪಾಲಿಕೆ

ಟೆಂಡರ್ ಪ್ರಕಟಣೆ ಸಂಖ್ಯೆ : ಮೈನಪಾ./ಸಿ.ಎಸ್.ಕೆ/ಪಿ.ಆರ್-36/ಟಿ.ಎನ್/005/2021-22
ಉಪ ಆಯುಕ್ತರು (ಆಡಳಿತ) ಮೈಸೂರು ಮಹಾನಗರ ಪಾಲಿಕೆ, ಮೈಸೂರು-570024
ದಿನಾಂಕ : 11-03-2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ನಗರ ಪಾಲಿಕೆ ಅನುದಾನದಲ್ಲಿ ಮೈಸೂರು ಮಹಾನಗರ ಪಾಲಿಕೆಯ ಪೌರಕಾರ್ಮಿಕರಿಗೆ ಮತ್ತು ಅಧಿಕಾರಿ / ಸಿಬ್ಬಂದಿಗಳಿಗೆ ಅವಶ್ಯಕವಿರುವ ಔಷಧಿ ಮತ್ತು ಸಾಮಾಗ್ರಿಗಳನ್ನು ಸರಬರಾಜು ಮಾಡುವ ಕಾಮಗಾರಿಗೆ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಟೆಂಡರನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ "E-procurement" Portal ಮುಖಾಂತರ ಸಲ್ಲಿಸಬಹುದಾಗಿರುತ್ತದೆ. ಮುಂದುವರೆದು ಕಾಮಗಾರಿಗಳ ಹೆಸರು, ಟೆಂಡರ್‌ಗಿಟ್ಟ ಮೊತ್ತ ಹಾಗೂ ಇ.ಎಂ.ಡಿ. ಹಾಗೂ ಇನ್ನಿತರೆ ಷರತ್ತುಗಳ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಛೇರಿಯಿಂದ ಪಡೆಯಬಹುದಾಗಿರುತ್ತದೆ ಹಾಗೂ ದಿನಾಂಕ : 16-03-2022ರ ನಂತರ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್‌ನಲ್ಲಿ https://eproc.karnataka.gov.in ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಂಡು ತಮ್ಮ ಬಿಡ್ಡನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ಗಳಿಗೆ ಬಿಡ್ಡನ್ನು ಸಲ್ಲಿಸುವ ಕೊನೆಯ ದಿನಾಂಕ : 23-03-2022 ಹಾಗೂ ಬಿಡ್ಡನ್ನು ತೆರೆಯುವ ದಿನಾಂಕ : 25-03-2022 ಇನ್ನಿತರೆ ಹೆಚ್ಚಿನ ಮಾಹಿತಿಯನ್ನು ಕಛೇರಿ ವ್ಯವಸ್ಥಾಪಕರು ಕೇಂದ್ರ ಉಗ್ರಾಣ ಶಾಖೆಯಿಂದ ದೂರವಾಣಿ ಮುಖೇನ : 9964374716 ಅಥವಾ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/- ಉಪ ಆಯುಕ್ತರು (ಆಡಳಿತ), ಮೈಸೂರು ಮಹಾನಗರ ಪಾಲಿಕೆ, ಮೈಸೂರು

ವಾಣಿಜ್ಯ ತೆರಿಗೆಗಳ ಇಲಾಖೆ

ವಾಣಿಜ್ಯ ತೆರಿಗೆ ಅಧಿಕಾರಿ (ಲೆಕ್ಕ ಪರಿಶೋಧನೆ) 2.5
ವಿ.ಸ ಮತ್ತು ಸೇ.ತೆ.ಕಛೇರಿ-02, ನಂ.642, ಪಯೋನೀರ್ ಪ್ಲಾಜಾ ನೆಲ ಮಹಡಿ, ರಾಜರಾಜೇಶ್ವರಿನಗರ, ಬೆಂಗಳೂರು-560 098. ದೂ: 080-26994429
ಇ-ಮೇಲ್: ctoaudit25.bng@ka.gov.in
ದಿನಾಂಕ:04.02.2022

ಪ್ರಕಟಣೆ

ಶ್ರೀ ಮಹಮ್ಮದ್ ಶಬ್ಬೀರ್ s/o ಲೇಟ್ ಸುಲ್ತಾನ ಇಬ್ರಾಹಿಂ, ಮಾಲೀಕರು, ಮೆ// ರೆಯನ್ ಸ್ಟೀಲ್ಸ್, ಟಿನ್: 29460288237, ನಂ.119, 4ನೇ ಕ್ರಾಸ್, ನಾಯಂಡಹಳ್ಳಿ, ಪೋಸ್ಟ್ ಗಂಗೊಂಡನಹಳ್ಳಿ, ಮೈಸೂರು ರಸ್ತೆ, ಬೆಂಗಳೂರು-560 039. ಇವರು 2005-06ನೇ ಸಾಲಿನ ಕೇಂದ್ರ ಮಾರಾಟ ತೆರಿಗೆ 1956ರ ಅಡಿಯಲ್ಲಿ ಒಟ್ಟು ರೂ. 2,41,87,847/- ಮೊತ್ತದ ಬಾಕಿ ತಗಾದೆಯನ್ನು ಪಾವತಿಸಬೇಕಾಗಿರುತ್ತದೆ. ಇವರು ನಾಪತ್ತೆಯಾಗಿರುವ ಕಾರಣ, ಈ ವ್ಯಕ್ತಿಯ ವಾಸಸ್ಥಳ, ದೂರವಾಣಿ ಸಂಖ್ಯೆ ಅಥವಾ ಇನ್ನಾವುದೇ ಮಾಹಿತಿ ದೊರಕಿದಲ್ಲಿ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳ ಮೇಲ್ಕಂಡ ವಿಳಾಸಕ್ಕೆ ಒದಗಿಸುವಂತೆ ಸಾರ್ವಜನಿಕರಲ್ಲಿ ಕೋರಲಾಗಿದೆ.

ಸಹಿ/- ವಾಣಿಜ್ಯ ತೆರಿಗೆ ಅಧಿಕಾರಿ (ಲೆ.ಪ)2.5, ಡಿ.ಜಿ.ಎಸ್.ಟಿ.ಓ-02, ಬೆಂಗಳೂರು
ವಾಸಾಸಂಇ/ಬೆಂನ/ಜಿಎ/3773/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಧಾರವಾಡ
ಕಾರ್ಯನಿರ್ವಾಹಕ ಇಂಜನೀಯರವರ ಕಚೇರಿ, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ, ಧಾರವಾಡ

ಕ್ರ.ಸಂ./ಗ್ರಾ.ಕು.ನೀ.&.ನೈ./ವಿಧಾ/ಸ.ಇಂ.2/ಇ-ಟೆಂಡರ/2021-22/2961 ದಿನಾಂಕ: 15.03.2022

ಅಲ್ಪಾವಧಿ ಟೆಂಡರ ಪ್ರಕಟಣೆ – 63/2021-22 (ಇ-ಪ್ರೋಕ್ಯೂರಮೆಂಟ ಮುಖಾಂತರ ಮಾತ್ರ)

ವಿಷಯ : ಅಲ್ಪಾವಧಿ ಟೆಂಡರನ 2ನೇ ಕರೆ ಪ್ರಕಟಣೆ ಕುರಿತು.
ಉಲ್ಲೇಖ: 1.ಕ್ರ.ಸಂ./ಗ್ರಾ.ಕು.ನೀ.&.ನೈ./ವಿಧಾ/ಸ.ಇಂ.2/ಇ-ಟೆಂಡರ/2021-22/2214 ದಿನಾಂಕ:03.01.2022

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಡಿ ಕಲಘಟಗಿ ತಾಲೂಕಿನ ಈ ಕೆಳಗಾಣಿಸಿದ ಕಾಮಗಾರಿಯನ್ನು 2ನೇ ಕರೆ ಕರೆಯಲಾಗಿದೆ.

ಕಾಮಗಾರಿಯ ವಿವರ ಈ ಕೆಳಗಿನಂತಿದೆ.

ಕಲಘಟಗಿ ತಾಲೂಕ : ವರ್ಗ : ಸಾಮಾನ್ಯ : Indent No:29932/call-2

ಗುತ್ತಿಗೆ ಕಾರ್ಯಕ್ರಮದ ವಿವರಗಳು ಈ ಕೆಳಗಿನಂತಿವೆ (Calander of Events)

1) ಖಾಲಿ ಟೆಂಡರ ಫಾರ್ಮಗಾಗಿ ಇ-ಪ್ರೋಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್ ಬಿ ಗಳನ್ನು ವೈಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸಲು ಕೊನೆಯ ದಿನಾಂಕ : **30.03.2022 ಸಾಯಂಕಾಲ 4.00 ಘಂಟೆಗೆ**
2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **31.03.2022 ಸಾಯಂಕಾಲ 4.30 ಘಂಟೆಗೆ**
3) ಆರ್ಥಿಕ ಬಿಡ್ ತೆರೆಯುವ ದಿನಾಂಕ : **ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ**

ಸದರಿ ಮೇಲೆ ತಿಳಿಸಿದ ಕಾಮಗಾರಿಯ ಅಂತೀಮ ಹೆಸರು, ಟೆಂಡರಗಿಟ್ಟ ಮೊತ್ತ, ಇ.ಎಂ.ಡಿ ಮೊತ್ತ ಮುಂತಾದ ವಿವರಗಳನ್ನು ವೆಬ್‌ಸೈಟ್ www.eproc.karnataka.gov.in ನಲ್ಲಿ ಪಡೆಯಬಹುದು. ಟೆಂಡರ ಫಾರ್ಮುಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು ವೆಬ್‌ಸೈಟ್ ಮುಖಾಂತರ ಮಾತ್ರ, ಆಸಕ್ತ ಗುತ್ತಿಗೆದಾರರು ವಿವರಗಳನ್ನು ಮತ್ತು ಷರತ್ತುಗಳನ್ನು ವೆಬ್‌ಸೈಟ್ www.eproc.karnataka.gov.in ನಲ್ಲಿ ಲಾಗ್‌ಇನ್ ಮಾಡಿ ನೋಡಬಹುದು. ಸದರಿ ಟೆಂಡರನಲ್ಲಿ ತಿದ್ದುಪಡಿಗಳಿದ್ದಲ್ಲಿ ಇ-ಪ್ರೋಕ್ಯೂರಮೆಂಟ ವೆಬಸೈಟನಲ್ಲಿ ಮಾತ್ರ ಪ್ರಕಟಿಸಲಾಗುವುದು. ಯಾವುದೇ ಕಾರಣ ನೀಡದೆ, ಟೆಂಡರಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದವರು ಹೊಂದಿರುತ್ತಾರೆ.

ಸಹಿ/-ಕಾರ್ಯನಿರ್ವಾಹಕ ಇಂಜನೀಯರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಧಾರವಾಡ
ವಾ.ಸಾ.ಇ./ಧಾ/1141/ದೇಶಪಾಂಡೆಪಬ್ಲಿಸಿಟಿ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

KLE ACADEMY OF HIGHER EDUCATION AND RESEARCH, BELAGAVI, KARNATAKA

KLE EMPOWERING PROFESSIONALS
(Deemed-to-be-University)
Accredited at **A+ Grade** by NAAC (3rd Cycle)) Placed in **Category 'A'** by MHRD (GoI)

WANTED

Applications are Invited for the following posts @
CONSTITUENT UNITS OF KAHER, BELAGAVI

JAWAHARLAL NEHRU MEDICAL COLLEGE, BELAGAVI
&
JAGADGURU GANGADHAR MAHASWAMIGALU MOORSAVIRMATH MEDICAL COLLEGE, HUBBALLI

PROFESSOR
ASSOCIATE PROFESSOR
ASSISTANT PROFESSOR
SENIOR RESIDENT (POST MD/MS)
& TUTORS (M.Sc)
POST- DOCTORAL FELLOWS (Ph.D)

In the Various Departments

Emergency Medicine, OBG, Physical Medicine & Rehabilitation, Surgical Gastroenterology, Medical Oncology, Pediatric Neurology, General Medicine, General Surgery, Endocrinology, Interventional Radiology, Pediatric Surgery, Neonatology, Anesthesia, Orthopedics, Radiology, Pediatrics, Respiratory Medicine, Anatomy, ENT, Ophthalmology, Physiology, Biochemistry, Pathology, Pharmacology, Microbiology, Forensic Medicine, Skin & VD, Psychiatry, Community Medicine, Statistics.

• Last date for submission of applications: 05.04.2022

FOR ONLINE APPLICATIONS & FURTHER DETAILS VISIT OUR WEBSITE
www.kledeemeduniversity.edu.in
0831- 2444 444

Date: 15/03/2022 — Sd/- Registrar

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು

ದೂರವಾಣಿ: 0824-2423169
ಸಂಖ್ಯೆ:ಲೋ.ಇ:ಮಂ.ವಿ:ಟಿ.ಎನ್.ಡಿ(71ಇ)/(68ಇ)/(66ಇ):2021-22:ಜೆಇ-2 ದಿನಾಂಕ: 15.03.2022

ಅಲ್ಪಾವಧಿ ಟೆಂಡರ್ ಪ್ರಕಟಣೆ / 2ನೇ ಕರೆ / (ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಮೂಲಕ)

ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಸಾರ್ವಜನಿಕ ಇ-ಪ್ರೊಕ್ಯುರ್‌ಮೆಂಟ್ ಮೂಲಕ 1. ಇಂಡೆಂಟ್ ನಂ. 150514 ಲೆಕ್ಕಶೀರ್ಷಿಕೆ :- 2059- ವಿವಿಧ ಇಲಾಖಾ ಕಟ್ಟಡಗಳ ದುರಸ್ತಿ ನಿರ್ವಹಣೆ ಈ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದೆ.

2. ಇಂಡೆಂಟ್ ನಂ.149961, 149529 ಲೆಕ್ಕಶೀರ್ಷಿಕೆ :- 3054 ಜಿಲ್ಲಾ ಮುಖ್ಯ ರಸ್ತೆ ನಿರ್ವಹಣಾ ಕಾಮಗಾರಿ (ಮಳೆಹಾನಿ) ಈ ಕಾಮಗಾರಿಗಳಿಗೆ 2ನೇ ಕರೆಯಾಗಿ ಟೆಂಡರ್ ಕರೆಯಲಾಗಿದೆ. ಈ ಕಾಮಗಾರಿಗಳಿಗೆ ಇ-ಪ್ರೊಕ್ಯುರ್‌ಮೆಂಟ್ ಮುಖಾಂತರ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ: 23.03.2022 (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ನಿಗದಿಪಡಿಸಲಾಗಿರುತ್ತದೆ.

(ಈ ಕಾಮಗಾರಿಗಳ ಕನಿಷ್ಠ ಅಂದಾಜು ಮೊತ್ತ ರೂ. 9.00 ಲಕ್ಷ, ಗರಿಷ್ಠ ಅಂದಾಜು ಮೊತ್ತ ರೂ. 50.00 ಲಕ್ಷ) ಆಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ https://eproc.karnataka.gov.in ನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/- ಕಾರ್ಯ ನಿರ್ವಾಹಕ ಇಂಜಿನಿಯರ್
DIPR / MNG / 1157/ MPL / 21-22

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು.

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 43/2021-22 ದಿನಾಂಕ :11.03.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಮೇಲ್ಕಂಡ ಟೆಂಡರ್ ಪ್ರಕಟಣೆಯಲ್ಲಿ ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು, ವಿಭಾಗಕ್ಕೆ ಒಳಪಡುವ ಈ ಕೆಳಗೆ ವಿವರಿಸಿರುವ ಕಾಮಗಾರಿಗಳಿಗೆ ಇ-ಪ್ರೋಕ್ ಹಾಗೂ ಮ್ಯಾನುವಲ್ ಮೂಲಕ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳನ್ನು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ (Standard Tender Document- KW-1,2,3 & 4 ರಂತೆ) ವಿವರಗಳನ್ನು ಲಗತ್ತಿಸತಕ್ಕದ್ದು. ಗುತ್ತಿಗೆದಾರರಿಗೆ ಅಧಿನಿಯಮ 3 ರಲ್ಲಿ ನಮೂದಿಸಿರುವ ಕನಿಷ್ಠ ಅರ್ಹತೆಗಳಿದ್ದರೆ ಮಾತ್ರ ಗುತ್ತಿಗೆಯನ್ನು ವಹಿಸಬಹುದಾಗಿರುತ್ತದೆ. ಕನಿಷ್ಠ ಅಂದಾಜು ಮೊತ್ತ ರೂ.2.25 ಲಕ್ಷಗಳು ಹಾಗೂ ಗರಿಷ್ಠ ಅಂದಾಜು ಮೊತ್ತ ರೂ. 115.00 ಲಕ್ಷಗಳು ಆಗಿರುತ್ತವೆ.

(1) ಕ್ರಮ ಸಂಖ್ಯೆ 1 ರಿಂದ 4ರ ಕಾಮಗಾರಿಗಳು ಮ್ಯಾನುವಲ್ ಆಗಿದ್ದು, ಅರ್ಹ ಗುತ್ತಿಗೆದಾರರು ದಿನಾಂಕ : 21.03.2022 ನಿಗದಿತ ಶುಲ್ಕ ಪಾವತಿಸಿ ಖಾಲಿ ಟೆಂಡರ್ ಫಾರಂ ಕೋರಿ ಅರ್ಜಿ ಸಲ್ಲಿಸಬೇಕು. ದಿನಾಂಕ : 22.03.2022 ರಂದು ಖಾಲಿ ಟೆಂಡರ್ ಫಾರಂ ಪಡೆದು, ದಿನಾಂಕ 23.03.2022 ರಂದು ಸಂಜೆ 4.00 ರವರೆಗೆ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಬೇಕು. ಸದರಿ ಟೆಂಡರ್‌ಗಳನ್ನು ಸಾಧ್ಯವಾದಲ್ಲಿ ದಿನಾಂಕ:24.03.2022 ರಂದು ಬೆಳ್ಳಿಗ್ಗೆ 11.00 ಗಂಟೆಯ ನಂತರ ತೆರೆಯಲಾಗುವುದು.

2) ಕ್ರಮ ಸಂಖ್ಯೆ 25 ರ ಕಾಮಗಾರಿಗೆ ಇ-ಪ್ರೋಕ್ಯೂರ್‌ಮೆಂಟ್ ಮೂಲಕ ದಿನಾಂಕ 21.03.2022 ರಂದು ಸಂಜೆ 4.00 ಗಂಟೆಯೊಳಗೆ ಟೆಂಡರ್ ಸಲ್ಲಿಸಬೇಕು. ಸದರಿ ಟೆಂಡರನ್ನು ದಿನಾಂಕ: 22.03.2022 ರಂದು ಸಂಜೆ 4.15 ಗಂಟೆಯ ನಂತರ ಸಾಧ್ಯವಾದಲ್ಲಿ ತೆರೆಯಲಾಗುವುದು.

(3) ಕ್ರಮ ಸಂಖ್ಯೆ 7,23 ಹಾಗೂ 24 ಕಾಮಗಾರಿಗಳಿಗೆ ಇ-ಪ್ರೋಕ್ಯೂರ್‌ಮೆಂಟ್ ಮೂಲಕ ದಿನಾಂಕ 23.03.2022 ರಂದು ಸಂಜೆ 4.00 ಗಂಟೆಯೊಳಗೆ ಟೆಂಡರ್ ಸಲ್ಲಿಸಬೇಕು. ಸದರಿ ಟೆಂಡರನ್ನು ದಿನಾಂಕ: 24.03.2022 ರಂದು ಸಂಜೆ 4.15 ಗಂಟೆಯ ನಂತರ ಸಾಧ್ಯವಾದಲ್ಲಿ ತೆರೆಯಲಾಗುವುದು.

(4)ಕ್ರಮ ಸಂಖ್ಯೆ 8 ರಿಂದ 11 ಹಾಗೂ 26 ರ ಕಾಮಗಾರಿಗಳಿಗೆ ಇ-ಪ್ರೋಕ್ಯೂರ್‌ಮೆಂಟ್ ಮೂಲಕ ದಿನಾಂಕ 28.03.2022 ರಂದು ಸಂಜೆ 4.00 ಗಂಟೆಯೊಳಗೆ ಟೆಂಡರ್ ಸಲ್ಲಿಸಬೇಕು. ಸದರಿ ಟೆಂಡರನ್ನು ದಿನಾಂಕ: 29.03.2022 ರಂದು ಬೆಳಿಗ್ಗೆ 11.00 ಗಂಟೆಯ ನಂತರ ಸಾಧ್ಯವಾದಲ್ಲಿ ತೆರೆಯಲಾಗುವುದು.

(5)ಕ್ರಮ ಸಂಖ್ಯೆ 5,6 ಹಾಗೂ 12 ರಿಂದ 16 ರ ವರೆಗಿನ ಕಾಮಗಾರಿಗಳಿಗೆ ಇ-ಪ್ರೋಕ್ಯೂರ್‌ಮೆಂಟ್ ಮೂಲಕ ದಿನಾಂಕ 25.03.2022 ರಂದು ಸಂಜೆ 4.00 ಗಂಟೆಯೊಳಗೆ ಟೆಂಡರ್ ಸಲ್ಲಿಸಬೇಕು. ಸದರಿ ಟೆಂಡರನ್ನು ದಿನಾಂಕ: 28.03.2022 ರಂದು ಬೆಳಿಗ್ಗೆ 11.00 ಗಂಟೆಯ ನಂತರ ಸಾಧ್ಯವಾದಲ್ಲಿ ತೆರೆಯಲಾಗುವುದು.

(6)ಕ್ರಮ ಸಂಖ್ಯೆ 17 ರಿಂದ 22 ಹಾಗೂ 27 ರಿಂದ 28ರ ವರೆಗಿನ ಕಾಮಗಾರಿಗಳಿಗೆ ಇ-ಪ್ರೋಕ್ಯೂರ್‌ಮೆಂಟ್ ಮೂಲಕ ದಿನಾಂಕ 22.03.2022 ರಂದು ಸಂಜೆ 4.00 ಗಂಟೆಯೊಳಗೆ ಟೆಂಡರ್ ಸಲ್ಲಿಸಬೇಕು. ಸದರಿ ಟೆಂಡರನ್ನು ದಿನಾಂಕ: 23.03.2022 ರಂದು ಸಂಜೆ 4.15 ಗಂಟೆಯ ನಂತರ ಸಾಧ್ಯವಾದಲ್ಲಿ ತೆರೆಯಲಾಗುವುದು.

ಈ ದಿನಾಂಕಗಳಂದು ಆಕಸ್ಮಿಕ ರಜಾ ದಿನಗಳು ಬಂದಲ್ಲಿ ಮರು ದಿನವನ್ನು ಪರಿಗಣಿಸಲಾಗುವುದು. ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ – ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು

ರಾಯಚೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ ನಿ.,ರಾಯಚೂರು

ಕ್ರ.ಸಂ:ಆರ್‌ಡಿಸಿಸಿ:ಪ್ರ.ಕಾ/ಆ:ಸಿ/2021-22/4976 ದಿನಾಂಕ : 14-03-2022

"ಇ-ಪ್ರೊಕ್ಯೂರ್‌ಮೆಂಟ್‌ಟೆಂಡರ್ ಪ್ರಕಟಣೆ"
Tender No. DOC/2021-22/BD/WORK_INDNT 512/CALL-2

ಟೆಂಡರ ಸಂಖ್ಯೆ : DOC/2021-22/BD/WORK_INDNT 512/CALL-2 ರ ಮೂಲಕ ಮುಖ್ಯ ಕಾರ್ಯನಿರ್ಹಹಣಾಧಿಕಾರಿಗಳು ರಾಯಚೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ (ನಿ) ರಾಯಚೂರು ಇವರು ಈ ಕೆಳಕಂಡ ಕಾಮಗಾರಿಗಾಗಿ ಟೆಂಡರನ್ನು ಆಹ್ವಾನಿಸಲಾಗಿದೆ.

ಟೆಂಡರ್ ಸಂಖ್ಯೆ	ಕಾಮಗಾರಿ ವಿವರ	ಟೆಂಡರ್ ಶೆಡ್ಯೂಲ್
DOC/2021-22/BD/WORK_INDNT 512/CALL-2	Construction of Branch Banking Building for RDCC Bank in Plot No. 01 Of Sy. No. 59 Situated At APMC Yard Kukanur Dist: Koppal	ಇ-ಟೆಂಡರ್ ಸಲ್ಲಿಸಲು ಪ್ರಾರಂಭ ದಿನಾಂಕ : 14-03-2022. ಇ-ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 24-03-2022

ಟೆಂಡರದಾರರು ಆನ್‌ಲೈನ್ ಮುಖಾಂತರ e-Procurement ಪೋರ್ಟಲ್‌ನಲ್ಲಿ ಪ್ರಕಟಿಸಿದ ನಿಗದಿತ ದಿನಾಂಕದೊಳಗೆ ಟೆಂಡರ್‌ನ್ನು ಸಲ್ಲಿಸತಕ್ಕದ್ದು ಮತ್ತು ಹೆಚ್ಚಿನ ವಿವರಗಳಿಗಾಗಿ http://eproc.karnataka.gov.in ರ ಪೋರ್ಟಲ್‌ನಿಂದ ಟೆಂಡರ ಡಾಕ್ಯೂಮೆಂಟನ್ನು ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು.

ಸಹಿ/- (ಐ.ಎಸ್. ಗಿರಡ್ಡಿ), ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಆರ್.ಡಿ.ಸಿ.ಸಿ. ಬ್ಯಾಂಕ್ ನಿ., ರಾಯಚೂರು

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ.
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಬೀದರ.

Phone/Fax: 08482 232080 E-mail : bdr_eemi @yahoo.com eemibidar@gmail.com
ನಂ: ಕಾನೀಇಂ/ಸ.ನೀಮತ್ತುಅಅವಿ/ಬೀದರ/ತಾ.ಶಾ-1,2,3,4&5/ಟೆಂಡರ್/2021-22/309 ದಿನಾಂಕ: 14.03.2022

ಇ-ಪ್ರೋಕ್ಯೂರಮೆಂಟ್ಸ ಟೆಂಡರ್ ಪ್ರಕಟಣೆ

1) ಕಾಮಗಾರಿಗಳ ವಿವರ : e-Portalನಲ್ಲಿ ನಮೂದಿಸಿದಂತೆ, 2) ಕಾಮಗಾರಿಗಳ ಅಂದಾಜು ಮೊತ್ತ: e-Portalನಲ್ಲಿ ನಮೂದಿಸಿದಂತೆ, 3) ಗುತ್ತಿಗೆದಾರರ ಅರ್ಹತೆ ವಿವರ : e-Portalನಲ್ಲಿ ನಮೂದಿಸಿದಂತೆ, 4) ಕಾಮಗಾರಿಗಳ ಟೆಂಡರ ಮೊತ್ತದ ವಿವರ : e-Portalನಲ್ಲಿ ನಮೂದಿಸಿದಂತೆ, 5) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ : e-Portalನಲ್ಲಿ ನಮೂದಿಸಿದಂತೆ, 6) ಟೆಂಡರ್ ಕ್ಲಾರಿಫಿಕೇಶನ ಕೊನೆಯ ದಿನಾಂಕ (KW-1,2 3&4): **18-03-2022 ಸಮಯ 17-00 ಗಂಟೆವರೆಗೆ,** 7) ಟೆಂಡರ ಸಲ್ಲಿಸಲು ಅಂತಿಮ ದಿನಾಂಕ (KW-1 & 2): **25-03-2022 ಸಮಯ 16-00 ಗಂಟೆವರೆಗೆ,** 8) ಟೆಂಡರ ಆರ್ಥಿಕ ಬಿಡ ತೆರೆಯುವ ದಿನಾಂಕ (KW-1 & 2) **: 28-03-2022 ಸಮಯ 11.00 ಗಂಟೆಗೆ ಸಾಧ್ಯವಾದಲ್ಲಿ,** 9) ಟೆಂಡರ್ ಕ್ಲಾರಿಫೀಕೇಶನ ಕೊನೆಯ ದಿನಾಂಕ. KW- 3 & 4 : **18-03-2022 ಸಮಯ 17-00 ಗಂಟೆವರೆಗೆ,** 10) ಟೆಂಡರ ಸಲ್ಲಿಸಲು ಅಂತಿಮ ದಿನಾಂಕ. KW- 3 & 4 **: 28-03-2022 ಸಮಯ 16-00 ಗಂಟೆವರೆಗೆ,** 11) ಟೆಂಡರ ತಾಂತ್ರಿಕ ಬಿಡ ತೆರೆಯುವ ದಿನಾಂಕ. KW- 3 & 4 **: 30-03-2022 ಸಮಯ 11.00 ಗಂಟೆಗೆ ಸಾಧ್ಯವಾದಲ್ಲಿ,** 12) ಟೆಂಡರ ಆರ್ಥಿಕ ಬಿಡ ತೆರೆಯುವ ದಿನಾಂಕ KW- 3 & 4 : **04-04-2022 ಸಮಯ 11-00 ಗಂಟೆಗೆ ಸಾಧ್ಯವಾದಲ್ಲಿ,** 13) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ, ಕಛೇರಿ ವಿಳಾಸ, ದೂರವಾಣಿ ಸಂಖ್ಯೆ : ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ.ವಿಭಾಗ, ಬೀದರ. ದೂರವಾಣಿ ಸಂ: 08482 232080, 14) ಅಂತರ್ಜಾಲ ತಾಣದ ವಿಳಾಸ : e-procurement portal www.eproc.karnataka.gov.in

ಸಹಿ/- ಕಾರ್ಯ ನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಬೀದರ.
ವಾ.ಸಾ.ಸಂ.ಇ/ಬೀದರ/335/ಎಂಸಿ&ಎ/2021-22

ದೇವರಹಿಪ್ಪರಗಿ ತಾಲ್ಲೂಕಿನ ಮುಳಸಾವಳಗಿ ಗ್ರಾಮದಿಂದ ಶ್ರೀಶೈಲ ಕ್ಷೇತ್ರಕ್ಕೆ ತೆರಳುತ್ತಿರುವ ರಥಯಾತ್ರೆ

ಪಂಚಮಸಾಲಿ ಮೀಸಲಾತಿಗೆ ಅಂತಿಮ ಗಡುವು

ಪ್ರಜಾವಾಣಿ ವಾರ್ತೆ

ಬಸವ ಜಯ ಮೃತ್ಯುಂಜಯ ಸ್ವಾಮೀಜಿ,

ಬೆಂಗಳೂರು: 'ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ಕಲ್ಪಿಸುವ ಸಂಬಂಧ ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ಮಾ.31ರೊಳಗೆ ವರದಿ ಪಡೆದು, ಏಪ್ರಿಲ್ 14ರಂದು ಘೋಷಣೆ ಮಾಡಬೇಕು' ಎಂದು ಲಿಂಗಾಯತ ಪಂಚಮಸಾಲಿ ಸಮಾಜವು ಸರ್ಕಾರಕ್ಕೆ ಅಂತಿಮ ಗಡುವು ನೀಡಿದೆ.

ಮುಂದಿನ ಹೋರಾಟದ ಬಗ್ಗೆ ಮಂಗಳವಾರ ದುಂಡು ಮೇಜಿನ ಸಭೆ ನಡೆಸಿದ ಕೂಡಲಸಂಗಮ ಪಂಚಮಸಾಲಿ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ, ಈ ವಿಷಯ ಪ್ರಕಟಿಸಿದರು.

'ಬಿ.ಎಸ್.ಯಡಿಯೂರಪ್ಪ ಅವರು 2021ರ ಮಾ.15ರಂದು ಆರು ತಿಂಗಳ ಸಮಯ ಕೇಳಿದ್ದರು. ಬಳಿಕ ಮುಖ್ಯಮಂತ್ರಿಯಾದ ಬಸವರಾಜ ಬೊಮ್ಮಾಯಿ ಅವರು ಮೂರು ತಿಂಗಳ ಸಮಯವನ್ನು ಎರಡು ಬಾರಿ ಕೇಳಿದರು. ಎರಡೂ ಗಡುವು ಪೂರ್ಣಗೊಂಡು ಒಟ್ಟಾರೆ ಒಂದು ವರ್ಷ ಪೂರೈಸಿದೆ. ಆದರೆ ಘೋಷಣೆ ಮಾಡುವ ಲಕ್ಷಣಗಳು ಕಾಣಿಸುತ್ತಿಲ್ಲ' ಎಂದರು.

'12ನೇ ಶತಮಾನದ ಬಸವಣ್ಣನನ್ನು ಹೇಗೆ ನಂಬಿದ್ದೆವೋ, ಅದೇ ರೀತಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ನಂಬಿದ್ದೇವೆ. ಆದ್ದರಿಂದ ದಿಢೀರ್ ಹೋರಾಟಕ್ಕೆ ಇಳಿಯದೆ ಮಾ.31ರೊಳಗೆ ಆಯೋಗದಿಂದ ವರದಿ ಪಡೆಯಬೇಕು. ಮೀಸಲಾತಿಯ ಹರಿಕಾರ ಅಂಬೇಡ್ಕರ್ ಜಯಂತಿ ದಿನವೇ ಪಂಚಮಸಾಲಿ ಸಮುದಾಯಕ್ಕೆ ಮೀಸಲಾತಿ ಘೋಷಣೆ ಮಾಡಬೇಕು' ಎಂದರು.

ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ, ಶಾಸಕ ಅರವಿಂದ ಬೆಲ್ಲದ್ ಇದ್ದರು

ವಚನಾನಂದ ಸ್ವಾಮೀಜಿ ವಿರುದ್ಧ ಯತ್ನಾಳ್ ವಾಗ್ದಾಳಿ

'ಮಂತ್ರಿ ಮಾಡಿ, ಮುಖ್ಯಮಂತ್ರಿ ಮಾಡಿ ಎಂದು ಯಾರ ಮನೆಗೂ ಹೋಗಿ ಬೇಡುವ ಜಾಯಮಾನ ನನ್ನದಲ್ಲ. ಉಪಮುಖ್ಯಮಂತ್ರಿ ಸ್ಥಾನ ತಪ್ಪಿಸಲು ಸ್ವಾಮೀಜಿಯೊಬ್ಬ ದೆಹಲಿಗೆ ಹೋಗಿ ಕೂತಿದ್ದಾನೆ' ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಹೇಳಿದರು.

'ಸಚಿವ ಸಂಪುಟ ಪುನರ್ ರಚನೆ ಪಟ್ಟಿ ಸಿದ್ಧವಾಗಿದೆ. ಒಳ್ಳೆಯ ಸುದ್ದಿ ಬರಲಿದೆ ಎಂದು ಕೆಲವರು ಹೇಳುತ್ತಿದ್ದಾರೆ. ನನ್ನ ಹಣೆಯಲ್ಲಿ ಉಪಮುಖ್ಯಮಂತ್ರಿ ಅಥವಾ ಮುಖ್ಯಮಂತ್ರಿ ಆಗಬೇಕು ಎಂದು ಬರೆದಿದ್ದರೆ ಆಗೇ ಆಗುತ್ತೇನೆ. ಇಲ್ಲದಿದ್ದರೆ ಇಲ್ಲ. ಆದರೆ, ಸಮುದಾಯಕ್ಕೆ 2ಎ ಮೀಸಲಾತಿ ಸಿಗಬೇಕು ಎಂಬುದಷ್ಟೇ ನಮ್ಮ ಮುಂದಿರುವ ದೊಡ್ಡ ಬೇಡಿಕೆ' ಎಂದರು.

'ಮೀಸಲಾತಿ ವಿಷಯದಲ್ಲಿ ಗಡಿಬಿಡಿಯ ನಿರ್ಧಾರ ಬೇಡ, ಮರಾಠಿಗರಿಗೆ ಆದ ಸ್ಥಿತಿ ಆಗಲಿದೆ ಎಂದು ಅದೇ ಸ್ವಾಮೀಜಿ, ಮುಖ್ಯಮಂತ್ರಿ ಅವರಿಗೆ ಸಲಹೆ ನೀಡಿದ್ದಾನೆ. ಇದೆಲ್ಲವೂ ಹೋರಾಟವನ್ನು ದಿಕ್ಕುತಪ್ಪಿಸುವ ಪ್ರಯತ್ನ. ಇವನ ಹಿಂದೆ ದೊಡ್ಡ ಶಕ್ತಿಯೇ ಕೆಲಸ ಮಾಡುತ್ತಿದೆ' ಎಂದು ವಚನಾನಂದ ಸ್ವಾಮೀಜಿ ಅವರ ಹೆಸರು ಹೇಳದೆ ಯತ್ನಾಳ್ ಪರೋಕ್ಷವಾಗಿ ವಾಗ್ದಾಳಿ ನಡೆಸಿದರು.

'ಅವನ ಮಾತನ್ನು ಬಸವರಾಜ ಬೊಮ್ಮಾಯಿ ಅವರು ಕೇಳಿದರೆ ಇಡೀ ಸಮುದಾಯ ಕೆಂಗಣ್ಣಿಗೆ ಗುರಿಯಾಗುತ್ತದೆ. ಈ ಬಗ್ಗೆ ಅವರಿಗೂ ಮನವರಿಕೆ ಮಾಡಿ ದೂರ ಇಡುವಂತೆಯೂ ತಿಳಿಸಿದ್ದೇನೆ' ಎಂದು ಹೇಳಿದರು.

ಶ್ರೀಶೈಲಕ್ಕೆ ರಥದೊಂದಿಗೆ ಪಾದಯಾತ್ರೆ!

ಪ್ರಜಾವಾಣಿ ವಾರ್ತೆ

ದೇವರಹಿಪ್ಪರಗಿ (ವಿಜಯಪುರ): ತಾಲ್ಲೂಕಿನ ಮುಳಸಾವಳಗಿ ಶ್ರೀಮಲ್ಲಿಕಾರ್ಜುನ ದೇವಸ್ಥಾನಕ್ಕೆಂದು ನೂತನವಾಗಿ ನಿರ್ಮಾಣಗೊಂಡಿರುವ ರಥವನ್ನು 550 ಕಿ.ಮೀ ದೂರದ ಸುಕ್ಷೇತ್ರ ಶ್ರೀಶೈಲ ಕ್ಷೇತ್ರಕ್ಕೆ ರಸ್ತೆ ಮೂಲಕ ಎಳೆಯುತ್ತಾ ಮಲ್ಲಿಕಾರ್ಜುನ-ಭ್ರಮರಾಂಬ ದರ್ಶನಕ್ಕೆ ಗ್ರಾಮದ ಭಕ್ತವೃಂದ ಪಾದಯಾತ್ರೆ ಆರಂಭಿಸಿದೆ.

ಸೋಮವಾರ ರಾತ್ರಿ ರಥಯಾತ್ರೆಗೆ ಚಾಲನೆ ನೀಡಲಾಗಿದೆ. ಗ್ರಾಮದ ಪಾದಯಾತ್ರಿ ಸಂಗನಗೌಡ ಬಿರಾದಾರ ಹಾಗೂ ಜಿ.ಪಿ. ಬಿರಾದಾರ ಮಾತನಾಡಿ, 'ಗ್ರಾಮದ ಮಲ್ಲಿಕಾರ್ಜುನ ದೇವರಿಗೆ ನೂತನವಾಗಿ ನಿರ್ಮಿಸಿರುವ ರಥದೊಂದಿಗೆ ಶ್ರೀಶೈಲಕ್ಕೆ ಪಾದಯಾತ್ರೆ ಹೊರಟಿದ್ದೇವೆ. ಮಲ್ಲಿಕಾರ್ಜುನ ಸ್ವಾಮಿಯನ್ನು ಹೊತ್ತ ಪಲ್ಲಕ್ಕಿಯೊಂದಿಗೆ ನಿತ್ಯ ಭಜನೆ, ಕಂಬಿಹಾಡುಗಳು, ಮಂಗಳಾರತಿ, ಧಾರ್ಮಿಕ ವಿಧಿವಿಧಾನಗಳ ಮೂಲಕ ಸಾಗುತ್ತಿದೆ. ಪಾದಯಾತ್ರೆಯಲ್ಲಿ ಗ್ರಾಮದ ಮಹಿಳೆಯರು ಸೇರಿದಂತೆ ನೂರಾರು ಭಕ್ತರು ಭಾಗವಹಿಸಿದ್ದು ಮಾ.31ರಂದು ಶ್ರೀಶೈಲದಲ್ಲಿ ಸಂಪನ್ನಗೊಳ್ಳಲಿದೆ' ಎಂದರು.

ಅವಿರತ 17 ದಿನಗಳ ಕಾಲ ಸಾಗುವ ಈ ರಥಯಾತ್ರೆಯ ಶ್ರೀಶೈಲ ತಲುಪಲಿದೆ. ದೇವರ ದರ್ಶನ ಪಡೆದ ಬಳಿಕ ರಥಯಾತ್ರೆಯು ಗ್ರಾಮಕ್ಕೆ ಮರಳಲಿದೆ ಎಂದರು.

ಚರ್ಚೆಗೆ ಕಾರಣವಾದ ರವಿ ಹೇಳಿಕೆ

ಬೆಂಗಳೂರು: ಅಸಮರ್ಥ ಸಚಿವರ ಮೇಲೆ ಮುಖ್ಯಮಂತ್ರಿಯವರು ಗಮನ ಇಡಬೇಕು ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನಕಾರ್ಯದರ್ಶಿ ಸಿ.ಟಿ.ರವಿ ನೀಡಿರುವ ಹೇಳಿಕೆ ಪಕ್ಷದಲ್ಲಿ ಚರ್ಚೆಗೆ ಕಾರಣವಾಗಿದೆ.

ಇದು ಸಚಿವ ಸಂಪುಟ ವಿಸ್ತರಣೆ ಅಥವಾ ಪುನಾರಚನೆಗೆ ಸೂಚನೆಯೂ ಇರಬಹುದು. ಇದರಿಂದ ಯಾರಿಗೆಲ್ಲ ಕತ್ತರಿ ಬೀಳಬಹುದು ಎಂಬ ಲೆಕ್ಕಾಚಾರ ಪಕ್ಷದ ವಲಯದಲ್ಲಿ ಆರಂಭವಾಗಿದೆ.

ತಾವು ನಿರ್ವಹಿಸುತ್ತಿರುವ ಖಾತೆಗೂ, ಪಕ್ಷಕ್ಕೂ ನ್ಯಾಯ ನೀಡದೆ ಅನಗತ್ಯ ಹೊರೆ ಆಗಿರುವವರ ಬಗ್ಗೆ ಗಮನಹರಿಸಬೇಕು. ಕೆಲವರು ನಿಷ್ಕ್ರಿಯರಾಗಿದ್ದಾರೆ. ಅವರನ್ನು ಸಚಿವ ಸ್ಥಾನದಲ್ಲಿ ಮುಂದುವರಿಸುವ ಅಗತ್ಯವೇನಿದೆ ಎಂದು ರವಿ ಪ್ರಶ್ನಿಸಿದರು.

ಬಿ.ವೈ.ವಿಜಯೇಂದ್ರ ಅವರಿಗೆ ನೀಡಿರುವ ರಾಜ್ಯ ಬಿಜೆಪಿ ಉಪಾಧ್ಯಕ್ಷ ಹುದ್ದೆ ಸಣ್ಣದಲ್ಲ. ಅದು ಸಣ್ಣ ಹುದ್ದೆ ಎಂದು ಪರಿಗಣಿಸಿದರೆ ಏನು ಹೇಳಬೇಕೋ ಗೊತ್ತಿಲ್ಲ ಎಂದು ಅವರು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಉದ್ಯೋಗ ವಾಣಿ

ಹಳೆ ರಾಜಕಾಲುವೆಗಳಿಗೆ ಕಾಂಕ್ರೀಟ್ ಗೋಡೆ: ಸಚಿವ ಮಾಧುಸ್ವಾಮಿ

ರಾಜಕಾಲುವೆ ಅಭಿವೃದ್ಧಿಗೆ ₹1,500 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಮಹಾನಗರ ಪ್ರದೇಶದ ವ್ಯಾಪ್ತಿಯಲ್ಲಿ ಬೃಹತ್ ಮಳೆ ನೀರುಗಾಲುವೆ, ರಾಜಕಾಲುವೆಗಳ ಅಭಿವೃದ್ಧಿಗಾಗಿ ಅಮೃತ ನಗರೋತ್ಥಾನ ಯೋಜನೆಯಡಿ ₹1,500 ಕೋಟಿ ಮೀಸಲಿಡಲಾಗಿದೆ ಎಂದು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ತಿಳಿಸಿದರು.

ವಿಧಾನಸಭೆಯಲ್ಲಿ ಮಂಗಳವಾರ ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ರಿಜ್ವಾನ್ ಅರ್ಷದ್ ಅವರ ಪ್ರಶ್ನೆಗೆ ಉತ್ತರಿಸಿ, ಬಿಬಿಎಂಪಿ ವತಿಯಿಂದ ಸ್ಥಳೀಯ ಅಗತ್ಯಕ್ಕೆ ತಕ್ಕಂತೆ ಕ್ರಿಯಾ ಯೋಜನೆ ಪಟ್ಟಿ ತಯಾರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಅವರು ಮುಖ್ಯಮಂತ್ರಿಯವರ ಪರವಾಗಿ ಉತ್ತರ ನೀಡಿದರು.

ಕಳೆದ ಮೂರು ವರ್ಷಗಳಲ್ಲಿ ₹1,060.85 ಕೋಟಿ ಅನುದಾನವನ್ನು ಮುಖ್ಯಮಂತ್ರಿಯವರ ನವ ನಗರೋತ್ಥಾನ ಯೋಜನೆಯಡಿ ಒದಗಿಸಲಾಗಿದೆ.

ಈ ಅನುದಾನದಡಿ ಒಟ್ಟು 112.83 ಕಿ.ಮೀ ಉದ್ದದ ಪ್ರಥಮ ಮತ್ತು ದ್ವಿತೀಯ ರಾಜಕಾಲುವೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತದೆ. ನಗರದಲ್ಲಿ ಸುಮಾರು 800 ಕಿ.ಮೀಗಳಷ್ಟು ಉದ್ದದ ಮಳೆ ನೀರುಗಾಲುವೆ ಹಾಳಾಗಿವೆ. ಇವು ಅತ್ಯಂತ ಹಳೆಯದಾಗಿದ್ದು, ಇವುಗಳಿಗೆ ಕಾಂಕ್ರೀಟ್ ಗೋಡೆ ಕಟ್ಟಿ ಸರಿಪಡಿಸಲಾಗುತ್ತಿದೆ. ಇದರಿಂದ ಮಳೆ ನೀರಿನಿಂದ ಆಗುತ್ತಿದ್ದ ಹಾನಿಯನ್ನು ತಡೆಯಬಹುದಾಗಿದೆ. ಅಭಿವೃದ್ಧಿ ಕಾಮಗಾರಿಗಳಲ್ಲಿ ಯಾವುದೇ ತಾರತಮ್ಯ ಮಾಡುತ್ತಿಲ್ಲ ಎಂದರು.

ಬೃಹತ್ ಮಳೆನೀರುಗಾಲುವೆ ವಿಭಾಗದ ವ್ಯಾಪ್ತಿಯಲ್ಲಿ ಒಟ್ಟು 859.90 ಕಿ.ಮೀ ಉದ್ದದ ಪ್ರಥಮ ಮತ್ತು ದ್ವಿತೀಯ ರಾಜ ಕಾಲುವೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಈ ಕಾಲುವೆಗಳ ಅಭಿವೃದ್ಧಿಯನ್ನು ಅನುದಾನದ ಲಭ್ಯತೆಯ ಆಧಾರದ ಮೇರೆಗೆ ಅವಶ್ಯಕತೆಗೆ ಅನುಗುಣವಾಗಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಮಾಧುಸ್ವಾಮಿ ಹೇಳಿದರು.

ಶಿವಾಜಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ರಾಜಕಾಲುವೆ ಸುಸ್ಥಿತಿಗೆ ತರಲು ಕಳೆದ ಮೂರು ವರ್ಷಗಳಲ್ಲಿ ₹6 ಕೋಟಿ ಅನುದಾನ ಮುಖ್ಯಮಂತ್ರಿ ನವ ನಗರೋತ್ಥಾನ ಯೋಜನೆಯಡಿ ಒದಗಿಸಲಾಗಿರುತ್ತದೆ. ಇದರಡಿ 6 ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಶೇ 80 ರಷ್ಟು ಪೂರ್ಣಗೊಂಡಿದೆ ಎಂದು ತಿಳಿಸಿದರು.

90 ದಿನಗಳಲ್ಲಿ ಪಾವತಿಗೆ ಅವಕಾಶ

ಜೆ.ಸಿ. ಮಾಧುಸ್ವಾಮಿ

ನೀರು ಮತ್ತು ಒಳಚರಂಡಿ ಸಂಪರ್ಕಕ್ಕಾಗಿ ಆನ್‌ಲೈನ್ ಮೂಲಕ ಜಲಧಾರೆ ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸಿದವರಿಗೆ ಪ್ರೊರೇಟಾ ಶುಲ್ಕವನ್ನು ಪಾವತಿಸಲು ಬೇಡಿಕೆ ಪತ್ರ ದಿನಾಂಕದಿಂದ 90 ದಿನಗಳ ಅವಧಿಯಲ್ಲಿ ಪಾವತಿಸಲು ಅವಕಾಶ ನೀಡಲಾಗಿದೆ ಎಂದು ಸಚಿವ ಜೆ.ಸಿ. ಮಾಧುಸ್ವಾಮಿ ತಿಳಿಸಿದರು.

ಈ ಅವಧಿಯೊಳಗೆ ಶುಲ್ಕಪಾವತಿಸದೇ ಇರುವ ಅರ್ಜಿದಾರರು ಆನ್‌ಲೈನ್ ಮೂಲಕ ಮರು ಅರ್ಜಿ ಸಲ್ಲಿಸಲು ಜಲಧಾರೆ ತಂತ್ರಾಂಶದಲ್ಲಿ ಅವಕಾಶವಿದೆ ಎಂದೂ ಅವರು ಹೇಳಿದರು.

ವಿಧಾನ ಮಂಡಲದಲ್ಲಿ

ನಾಯಿಗಳ ತಂಟೆಗೆ ಹೋಗಲು 'ಸುಪ್ರೀಂ' ಭಯ!

ಬೆಂಗಳೂರು: 'ಸುಪ್ರೀಂಕೋರ್ಟ್ ನಿರ್ಣಯದಿಂದ ನಾವು ಬೀದಿ ನಾಯಿಗಳ ತಂಟೆಗೆ ಹೋಗುವಂತಿಲ್ಲ. ನಾಯಿಗಳನ್ನು ಹಿಡಿಯುವುದು, ಕೊಲ್ಲುವ ಮಾತು ಸಾಧ್ಯವೇ ಇಲ್ಲ ಬಿಡಿ' ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ಅಸಹಾಯಕತೆ ವ್ಯಕ್ತಪಡಿಸಿದರು.

ವಿಧಾನಸಭೆಯಲ್ಲಿ ಮಂಗಳವಾರ ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಎಲ್.ಎ. ರವಿಸುಬ್ರಹ್ಮಣ್ಯ ಅವರ ಪ್ರಶ್ನೆಗೆ ಉತ್ತರಿಸಿ, ನಾಯಿಗಳ ಸಂಖ್ಯೆಯ ನಿಯಂತ್ರಣಕ್ಕಾಗಿ ಸಂತಾನಹರಣ ಶಸ್ತ್ರಚಿಕಿತ್ಸೆ ಮಾಡಲಾಗುತ್ತಿದೆ ಎಂದು ಹೇಳಿದರು.

'ನಗರ ಹೊರವಲಯದಲ್ಲಿ 10 ಎಕರೆ ಜಾಗದಲ್ಲಿ 'ಗೋಶಾಲೆ' ಮಾದರಿಯಲ್ಲಿ 'ನಾಯಿಶಾಲೆ' ಮಾಡಿ ಎಂದು ಶಾಸಕರೊಬ್ಬರು ಸಲಹೆ ನೀಡಿದ್ದಾರೆ. ಆ ರೀತಿ ಮಾಡಿದರೆ ಸುತ್ತಮುತ್ತಲಿನ ಹಳ್ಳಿಗಳಿಗೆ ನಾಯಿಗಳ ಕಾಟ ಹೆಚ್ಚಾಗಿ, ಅಲ್ಲಿನ ಜನರು ಬಂದು ವಿಧಾನಸಭೆಗೆ ಮುತ್ತಿಗೆ ಹಾಕಿದರೆ ನಾವೇನು ಮಾಡುವುದು ಹೇಳಿ. ಬೆಂಗಳೂರಿನ ಕಸವನ್ನು ಹೊರವಲಯದಲ್ಲಿ ಹಾಕಿ ಆಗುತ್ತಿರುವ ಅವಾಂತರವೇ ಸಾಕು' ಎಂದು ಮಾಧುಸ್ವಾಮಿ ಹೇಳಿದರು.

ಬಿಜೆಪಿ ಶಾಸಕ ಎಸ್. ಸುರೇಶ್‌ಕುಮಾರ್ ಮಾತನಾಡಿ, 'ನಾಯಿಗಳಿಂದ ಸಾರ್ವಜನಿಕರ ವಿಪರೀತ ತೊಂದರೆ ಆಗುತ್ತಿದೆ. ಸುಪ್ರೀಂಕೋರ್ಟ್ ತೀರ್ಮಾನದ ಬಗ್ಗೆ ಮೇಲ್ಮನವಿ ಸಲ್ಲಿಸುವ ಬಗ್ಗೆ ಪರಿಶೀಲನೆ ನಡೆಸಿ. ಈ ಕುರಿತು ಸೌಹಾರ್ದಯುತ ಇತ್ಯರ್ಥಗೊಳಿಸುವ ಬಗ್ಗೆ ಮುಂದಾಗಬೇಕು. ನಾಯಿ ಪ್ರೇಮಿಗಳ ಅಂತಃಕರಣ ಮತ್ತು ಅನುಕಂಪದ ಅರಿವಿದೆ. ಆದರೆ ಬೀದಿ ನಾಯಿಗಳು ಇತ್ತೀಚೆಗೆ ಕಲಿಕಾರ ಮಕ್ಕಳನ್ನು ಕಚ್ಚಿ ಹಾನಿ ಮಾಡಿದ ಘಟನೆ ಆತಂಕ ಹುಟ್ಟಿಸುತ್ತದೆ' ಎಂದರು.

ಸುಪ್ರೀಂಕೋರ್ಟ್‌ನಿಂದ ಪರಿಹಾರ ಕಂಡುಕೊಳ್ಳುವ ಬಗ್ಗೆ ಪರಿಶೀಲನೆ ನಡೆಸಲಾಗುವುದು ಎಂದು ಮಾಧುಸ್ವಾಮಿ ಸುರೇಶ್ ಕುಮಾರ್‌ಗೆ ಭರವಸೆ ನೀಡಿದರು.

ವಿಷಯ ಪ್ರಸ್ತಾಪಿಸಿದ ರವಿಸುಬ್ರಹ್ಮಣ್ಯ, 'ಬೀದಿ ನಾಯಿಗಳು ಮಕ್ಕಳು ಮತ್ತು ದ್ವಿಚಕ್ರ ವಾಹನ ಸವಾರರನ್ನು ಅಟ್ಟಿಸಿಕೊಂಡು ಬರುತ್ತವೆ. ಸಂತಾನಹರಣ ಶಸ್ತ್ರ ಚಿಕಿತ್ಸೆಯಿಂದ ನಾಯಿಗಳ ಸಂಖ್ಯೆ ಬಗ್ಗುತ್ತಿಲ್ಲ. ಏನಾದರೂ ಪರಿಹಾರ ಕಂಡುಕೊಳ್ಳಬೇಕು. ಹಾಗೆಂದು ನಾಯಿಗಳನ್ನು ಕೊಲ್ಲಿ ಎಂದು ಹೇಳುವುದಿಲ್ಲ. ಬೆಂಗಳೂರು ಹೊರ ವಲಯದಲ್ಲಿ ಬೀದಿ ನಾಯಿಗಳಿಗೆ ಇರಿಸಲು ವ್ಯವಸ್ಥೆ ಮಾಡಬೇಕು' ಎಂದು ಸಲಹೆ ನೀಡಿದರು.

'ದಾಸನಪುರ ಮಾರುಕಟ್ಟೆ: 2 ತಿಂಗಳಲ್ಲಿ ಪೂರ್ಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಂದಿನ ಎರಡು ತಿಂಗಳಲ್ಲಿ ದಾಸನಪುರ ಮಾರುಕಟ್ಟೆಯ ಕಟ್ಟಡ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಿ, ಯಶವಂತಪುರ ಮಾರುಕಟ್ಟೆಯ ಎಲ್ಲ ಮಳಿಗೆಗಳನ್ನು ಸ್ಥಳಾಂತರಿಸಲಾಗುವುದು' ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಭರವಸೆ ನೀಡಿದರು.



ಎಸ್.ಟಿ. ಸೋಮಶೇಖರ್

ವಿಧಾನಪರಿಷತ್‌ನಲ್ಲಿ ಕಾಂಗ್ರೆಸ್ಸಿನ ಎಸ್.ರವಿ, 'ಯಶವಂತಪುರ ಮಾರುಕಟ್ಟೆ ಮೇಲಿನ ಒತ್ತಡ ಕಡಿಮೆ ಮಾಡಲು ದಾಸನಪುರ ಕೃಷಿ ಉತ್ಪನ್ನ ಮಾರುಕಟ್ಟೆಯನ್ನು 80 ಎಕರೆ ಜಾಗದಲ್ಲಿ ₹ 400 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಆದರೆ, ಮಾರುಕಟ್ಟೆ ಸಂಪೂರ್ಣ ಸ್ಥಳಾಂತರವಾಗಿಲ್ಲ. 2018ರಲ್ಲಿ ಮತ್ತೆ ಯಶವಂತಪುರ ಮಾರುಕಟ್ಟೆಯಲ್ಲಿ ವ್ಯಾಪಾರ ಆರಂಭಿಸಲು ಅವಕಾಶ ನೀಡಲಾಯಿತು. ಸರ್ಕಾರದ ಮಾತು ನಂಬಿ ದಾಸನಪುರಕ್ಕೆ ಸ್ಥಳಾಂತರಗೊಂಡವರಿಗೆ ವ್ಯಾಪಾರ ಇಲ್ಲದೆ ನಷ್ಟ ಅನುಭವಿಸುತ್ತಿದ್ದಾರೆ. ಈಗ ಅವರಿಗೆ ಬಾಡಿಗೆ ಪಾವತಿಸುವಂತೆ ನೋಟಿಸ್ ನೀಡಲಾಗಿದೆ. ಸರ್ಕಾರ ಬಾಡಿಗೆ ಕಡಿಮೆ ಮಾಡಬೇಕು' ಎಂದು ಆಗ್ರಹಿಸಿದರು.

ಅದಕ್ಕೆ ಉತ್ತರಿಸಿದ ಸಚಿವ, 'ಕಲಾಸಿಪಾಳ್ಯ ಮಾರುಕಟ್ಟೆಯಲ್ಲಿನ ಒತ್ತಡ ಕಡಿಮೆ ಮಾಡಲು ಯಶವಂತಪುರ ಮಾರುಕಟ್ಟೆ ಆರಂಭಿಸಲಾಯಿತು. ಇಲ್ಲಿಗೆ ಪ್ರತಿ ದಿನ 400ರಿಂದ 500 ವಾಹನಗಳು ಬರುತ್ತಿದ್ದವು. ಅದನ್ನು ಕಡಿಮೆ ಮಾಡಲು ದಾಸನಪುರ ಮಾರುಕಟ್ಟೆ ನಿರ್ಮಿಸಲಾಗಿದೆ. ಅಲ್ಲಿ ಎಬಿಸಿಡಿ ಐದು ಅಂಕಗಳಲ್ಲಿ ಮಾರುಕಟ್ಟೆ ನಿರ್ಮಿಸಲಾಗಿದ್ದು, ಆಲೂಗೆಡ್ಡೆ, ಶುಂಠಿ, ಬೆಳ್ಳುಳ್ಳಿ, ಈರುಳ್ಳಿಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. ಏಪ್ರಿಲ್ ವೇಳೆಗೆ ದಾಸನಪುರದಲ್ಲಿ ಬಾಕಿ ಇರುವ ಮಳಿಗೆಗಳ ನಿರ್ಮಾಣ ಕಾರ್ಯ ಪೂರ್ಣಗೊಳ್ಳಲಿದೆ. ನಂತರ ಯಶವಂತಪುರ ಮಾರುಕಟ್ಟೆ ಸ್ಥಳಾಂತರವಾಗಲಿದೆ. ಹೈಕೋರ್ಟ್ ಆದೇಶದಂತೆ 2018ರಲ್ಲಿ ಎರಡು ಕಡೆ ವಹಿವಾಟು ನಡೆಸಲು ಅವಕಾಶ ನೀಡಲಾಗಿದೆ' ಎಂದರು.

'ಸದ್ಯದ ನಿಯಮಗಳಲ್ಲಿ ಬಾಡಿಗೆ ಕಡಿಮೆ ಮಾಡಲು ಅವಕಾಶ ಇಲ್ಲ. ಈ ನಿಯಮಾವಳಿಯಲ್ಲಿ ಬದಲಾವಣೆ ಮಾಡಲು ಈ ಅಧಿವೇಶನದಲ್ಲೇ ಮಸೂದೆ ಮಂಡಿಸಲಾಗುವುದು. ಬಳಿಕ ಬಾಡಿಗೆ ಕಡಿಮೆ ಮಾಡಲು ಸಾಧ್ಯವಾಗಲಿದೆ' ಎಂದರು.

'ಬಡತನ ನಿರ್ಮೂಲನೆಗೆ ನರೇಗಾ ಅಸ್ತ್ರ'

ನರೇಗಾ ಹಬ್ಬ ಉದ್ಘಾಟಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಡತನ ನಿರ್ಮೂಲನೆಯಲ್ಲಿ ನರೇಗಾ ಎಂಬ ಅಸ್ತ್ರದ ಪಾತ್ರ ಮಹತ್ವದ್ದಾಗಿದೆ. ನರೇಗಾದಡಿ ಮತ್ತಷ್ಟು ಯೋಜನೆಗಳನ್ನು ಸೇರ್ಪಡೆಗೊಳಿಸಬೇಕು. ವರ್ಷದ ದುಡಿಮೆಯನ್ನು ಸಂಭ್ರಮಿಸಲು ಆಚರಿಸುವ 'ನರೇಗಾ ಹಬ್ಬ'ವು ರಾಜ್ಯದ ಹಬ್ಬವಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಮ್ಮಿಕೊಂಡಿದ್ದ 'ನರೇಗಾ ಹಬ್ಬ–2022' ಹಾಗೂ ನರೇಗಾ ವಾಣಿ ಬಿಡುಗಡೆ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸೋಮವಾರ ಮಾತನಾಡಿದರು.

'ರಾಜ್ಯದ ಗ್ರಾಮೀಣಾಭಿವೃದ್ಧಿಯ ಆಶಯ ಈಡೇರಿಕೆ ದೃಷ್ಟಿಯಿಂದ ನರೇಗಾ ಯೋಜನೆಯ ವ್ಯಾಪ್ತಿ ವಿಸ್ತರಿಸಬೇಕಿದೆ. ಒಂದು ಸಾವಿರ ಅಂಗನವಾಡಿ ನಿರ್ಮಾಣಕ್ಕೆ ಬಜೆಟ್‌ನಲ್ಲಿ ₹50 ಕೋಟಿ ಅನುದಾನ ನಿಗದಿ ಮಾಡಲಾಗಿದೆ. ಈ ಗುರಿ ಮುಟ್ಟುವುದು ಅವಶ್ಯ. ಅಗತ್ಯಬಿದ್ದರೆ ಈ ಯೋಜನೆಗೆ ಇನ್ನಷ್ಟು ಅನುದಾನ ಒದಗಿಸಲಾಗುತ್ತದೆ' ಎಂದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು (ಎಡದಿಂದ) ನೂರ್ ಅಹ್ಮದ್ ಬಳ್ಳಾರಿ, ಚಿಕ್ಕ ಸಿದ್ದಮ್ಮ ಮದ್ದೂರು, ಶರಣಮ್ಮ ಗಂಗಾವತಿ ಮತ್ತು ಮುತ್ತಕ್ಕ ದೇಸೂರ ಅವರಿಗೆ ನರೇಗಾ ಪ್ರಶಸ್ತಿ ಪ್ರದಾನ ಮಾಡಿದರು. ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಇದ್ದಾರೆ –ಪ್ರಜಾವಾಣಿ ಚಿತ್ರ

'ಶಾಲೆಗಳ ನಿರ್ಮಾಣಕ್ಕೆ ನರೇಗಾ ಅನುದಾನ ಬಳಸಲು ಅನುಮತಿ ನೀಡುವಂತೆ ಸಚಿವ ಕೆ.ಎಸ್.ಈಶ್ವರಪ್ಪ, ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ. ಅನುಮತಿ ಲಭಿಸಿದರೆ ದುಸ್ಥಿತಿಯಲ್ಲಿರುವ ಶಾಲೆ ಕೊಠಡಿಗಳನ್ನು ದುರಸ್ತಿಗೊಳಿಸಬಹುದು' ಎಂದು ತಿಳಿಸಿದರು.

'ನರೇಗಾ ಹಬ್ಬ ಬೆಂಗಳೂರಿಗೆ ಸೀಮಿತವಾಗಬಾರದು. ಪ್ರತಿ ಜಿಲ್ಲೆಯಲ್ಲೂ ಇದನ್ನು ಆಚರಿಸಬೇಕು. ಜಲ ಜೀವನ್ ಮಿಷನ್‌ನಡಿ ಮನೆ ಮನೆಗಳಿಗೆ ನೀರಿನ ಸಂಪರ್ಕ ಕಲ್ಪಿಸಲು ತೀರ್ಮಾನಿಸಲಾಗಿದೆ. ಈ ವರ್ಷ ಹಾಗೂ ಮುಂದಿನ ವರ್ಷ ತಲಾ 25 ಲಕ್ಷ ಮನೆಗಳಿಗೆ ಕೊಳವೆ ಸಂಪರ್ಕ ಕಲ್ಪಿಸಲಾಗುತ್ತದೆ' ಎಂದು ಹೇಳಿದರು.

'ನರೇಗಾ ಬಡವರ ಬದುಕಿನ ಭರವಸೆಯಾಗಿದೆ. ದುಡಿಯುವ ವರ್ಗವನ್ನು ಗಮನದಲ್ಲಿಟ್ಟುಕೊಂಡು ಈ ಬಾರಿಯ ಬಜೆಟ್‌ನಲ್ಲಿ ಹಲವು ಯೋಜನೆಗಳನ್ನು ಪ್ರಕಟಿಸಿದ್ದೇವೆ. ತಲಾ ಆದಾಯ ಹೆಚ್ಚಳಕ್ಕೂ ಆದ್ಯತೆ ನೀಡಿದ್ದೇವೆ. ನರೇಗಾದಡಿ ₹16 ಕೋಟಿ ಗುರಿ ನಿಗದಿ ಮಾಡಿಕೊಂಡಿರುವುದು ಶ್ಲಾಘನೀಯ' ಎಂದರು.

'ಅಧಿಕಾರ ವಿಕೇಂದ್ರೀಕರಣ ಆಗದಿದ್ದರೆ ಆಡಳಿತ ಹೆಪ್ಪುಗಟ್ಟುತ್ತದೆ. ಗ್ರಾಮೀಣಾಭಿವೃದ್ಧಿಯಲ್ಲಿ ಕರ್ನಾಟಕವು ಪ್ರಗತಿಶೀಲ ರಾಜ್ಯವಾಗಿ ಗುರುತಿಸಿಕೊಂಡಿದೆ. ನರೇಗಾದಡಿ ದುಡಿಯುತ್ತಿರುವವರು ಆರ್ಥಿಕತೆಯನ್ನು ಮುನ್ನಡೆಸುತ್ತಿದ್ದಾರೆ' ಎಂದು ತಿಳಿಸಿದರು.

'ಉಕ್ರೇನ್ ಸಂಘರ್ಷ: ಆರ್ಥಿಕತೆ ಮೇಲೆ ಪರಿಣಾಮ ಸಾಧ್ಯತೆ'

ನವದೆಹಲಿ: ರಷ್ಯಾ ಮತ್ತು ಉಕ್ರೇನ್ ಜೊತೆ ಭಾರತವು ಸಾಕಷ್ಟು ವಾಣಿಜ್ಯ ಸಂಬಂಧ ಹೊಂದಿದೆ. ಹೀಗಾಗಿ ಉಭಯ ರಾಷ್ಟ್ರಗಳ ನಡುವಿನ ಯುದ್ಧವು ದೇಶದ ಆರ್ಥಿಕತೆ ಮೇಲೆ ಪರಿಣಾಮ ಬೀರಲಿದೆ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ರಾಜ್ಯಸಭೆಯಲ್ಲಿ ಮಂಗಳವಾರ ಹೇಳಿದರು.

'ಸಂಘರ್ಷದಿಂದ ಭಾರತದ ಮೇಲಾಗುವ ಪರಿಣಾಮಗಳ ಮೌಲ್ಯಮಾಪನ ಕಾರ್ಯ ನಡೆಯುತ್ತಿದೆ' ಎಂದರು.

'ಇಂಧನ ಹಾಗೂ ವಿವಿಧ ಸರಕುಗಳ ದರಗಳ ಮೇಲಿನ ಪರಿಣಾಮವನ್ನು ಕಾಣಬಹುದು. ಸಾಗಣೆ ಕ್ಷೇತ್ರದಲ್ಲಿ ಜಾಗತಿಕವಾಗಿ ಉಂಟಾಗಿರುವ ತೊಂದರೆ ಮತ್ತಷ್ಟೂ ಹೆಚ್ಚುವ ನಿರೀಕ್ಷೆ ಇದೆ' ಎಂದು ಅವರು ಸದನಕ್ಕೆ ವಿವರಿಸಿದರು.

'ಹೈಕೋರ್ಟ್ ತೀರ್ಪಿಗೆ 'ಸುಪ್ರೀಂ' ತಡೆಯಾಜ್ಞೆ ನೀಡಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಿಕ್ಷಣ ಸಂಸ್ಥೆಗಳಲ್ಲಿ ಶಿರವಸ್ತ್ರ ಹಾಗೂ ಸಮವಸ್ತ್ರದ ಹೆಸರಿನಲ್ಲಿ ಎದ್ದಿದ್ದ ವಿವಾದದ ಕುರಿತು ಹೈಕೋರ್ಟ್ ಆದೇಶ ಹೊರಬಿದ್ದಿದೆ. ವಿದ್ಯಾರ್ಥಿನಿಯರ ಶಿಕ್ಷಣದ ಅವಕಾಶ ನಿರಾಕರಿಸುವ ಸಂದರ್ಭ ಸೃಷ್ಟಿಸುವ ಸಾಧ್ಯತೆ ಇರುವುದರಿಂದ ಈ ಆದೇಶಕ್ಕೆ ಸುಪ್ರೀಂಕೋರ್ಟ್ ತಡೆಯಾಜ್ಞೆ ನೀಡಬೇಕು' ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ರಾಜ್ಯ ಸಮಿತಿ ಮನವಿ ಮಾಡಿದೆ.

'ಈ ಆದೇಶಕ್ಕೆ ತಡೆಯಾಜ್ಞೆ ನೀಡುವ ಮೂಲಕ ಹಿಜಾಬ್ ಧರಿಸಿ ಶಿಕ್ಷಣ ಮುಂದುವರೆಸುವ ಮುಸ್ಲಿಂ ಹೆಣ್ಣುಮಕ್ಕಳ ಶಿಕ್ಷಣದ ಹಕ್ಕು ರಕ್ಷಿಸಬೇಕು. ಜನ ಹಿತಕಾಯುವ ಸಾಮಾಜಿಕ ಬದಲಾವಣೆ ನಡೆದಾಗ ಅದಕ್ಕೆ ಪೂರಕವಾಗಿ ಕಾನೂನಿನ ಬಲ ತುಂಬಬೇಕು. ಸಾಮಾಜಿಕ ಬದಲಾವಣೆಯನ್ನು ಕಾನೂನಿನ ವ್ಯಾಖ್ಯಾನದ ಮೂಲಕ ತರಲು ಹೊರಟರೆ ಹಿತಾಸಕ್ತಿಗಳ ಸಂಘರ್ಷ ನಿರ್ಮಾಣವಾಗಬಹುದು' ಎಂದು ತಿಳಿಸಿದೆ.

'ಹೈಕೋರ್ಟ್ ಮಧ್ಯಂತರ ಆದೇಶ ಜಾರಿಗೊಳಿಸುವಾಗಲೂ ಸಾಕಷ್ಟು ಸಮಸ್ಯೆಗಳು ಉದ್ಭವಿಸಿವೆ. ವಿದ್ಯಾರ್ಥಿನಿಯರಷ್ಟೇ ಅಲ್ಲದೆ ಹಿಜಾಬ್ ಧರಿಸಿ ಈವರೆಗೆ ಯಾವುದೇ ತೊಂದರೆಯಿಲ್ಲದೆ ಕೆಲಸ ಮಾಡಿದ ಶಿಕ್ಷಕಿಯರನ್ನೂ ಇದು ಬಾಧಿಸಿದೆ. ಈ ಆದೇಶವು ಮುಂದೆ ಉದ್ಭವಿಸಬಹುದಾದ ಸಮಸ್ಯೆಗಳ ಮುನ್ಸೂಚನೆಯಂತಿದೆ. ಇದು ವಿದ್ಯಾರ್ಥಿನಿಯರ ಶೈಕ್ಷಣಿಕ ಭವಿಷ್ಯವನ್ನು ಕರಾಳ ಕತ್ತಲೆಗೆ ದೂಡಲಿದೆ. ಹೀಗಾಗಿ ಮಹಿಳೆಯರ ಸಂವಿಧಾನದತ್ತ ಶಿಕ್ಷಣದ ಹಕ್ಕಿಗೆ ಚ್ಯುತಿ ಬಾರದಂತೆ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದೆ.

'ತೀರ್ಪು ಸ್ವೀಕಾರಾರ್ಹವಲ್ಲ'

ಬೆಂಗಳೂರು: ಹಿಜಾಬ್ ವಿಚಾರದಲ್ಲಿ ಹೈಕೋರ್ಟ್ ನೀಡಿರುವ ತೀರ್ಪು ಸ್ವೀಕಾರಾರ್ಹವಲ್ಲ. ಈ ತೀರ್ಪನ್ನು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಒಪ್ಪುವುದಿಲ್ಲ ಎಂದು ಪಿಎಫ್‌ಐ ರಾಜ್ಯ ಘಟಕದ ಅಧ್ಯಕ್ಷ ಯಾಸೀರ್ ಹಸನ್ ಹೇಳಿದ್ದಾರೆ.

ತೀರ್ಪು ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಅವರು, 'ಇದು ದುರದೃಷ್ಟಕರ ಮತ್ತು ರಾಜಕೀಯ ಪ್ರೇರಿತವಾಗಿರುವ ಅನ್ಯಾಯದ ತೀರ್ಪು. ಸಂವಿಧಾನವು ಎಲ್ಲರಿಗೂ ಧಾರ್ಮಿಕ ಸ್ವಾತಂತ್ರ್ಯ ನೀಡಿದೆ. ಆಯ್ಕೆಯ ಸ್ವಾತಂತ್ರ್ಯವನ್ನೂ ನೀಡಿದೆ. ಈ ತೀರ್ಪು ಸಂವಿಧಾನದ ಮೌಲ್ಯಗಳ ಮೇಲಿನ ದಾಳಿ' ಎಂದಿದ್ದಾರೆ.

'ಹಿಜಾಬ್ ಇಸ್ಲಾಂನ ಅವಿಭಾಜ್ಯ ಅಂಗ ಅಲ್ಲ ಎಂದು ಹೇಳುವ ಮೂಲಕ ಹೈಕೋರ್ಟ್ ಮುಸ್ಲಿಮರ ವೈಯಕ್ತಿಕ ಕಾನೂನಿನಲ್ಲಿ ಹಸ್ತಕ್ಷೇಪ ಮಾಡಿದೆ. ಯಾವುದು ಧಾರ್ಮಿಕ ಅಗತ್ಯ ಮತ್ತು ಅವಿಭಾಜ್ಯ ಅಂಗ? ಯಾವುದು ಅಲ್ಲ ಎನ್ನುವುದನ್ನು ನ್ಯಾಯಾಲಯ ತೀರ್ಮಾನಿಸಲು ಸಾಧ್ಯವಿಲ್ಲ. ಮುಸ್ಲಿಂ ಮಹಿಳೆಯರು ಅವರ ಆಯ್ಕೆಯ ಉಡುಪು ಧರಿಸುವ ವಿಚಾರದಲ್ಲಿ ಹೈಕೋರ್ಟ್ ನೀಡಿರುವ ತೀರ್ಪು ಸ್ವೀಕಾರಾರ್ಹವಲ್ಲ. ಪಾಪ್ಯುಲರ್ ಫ್ರಂಟ್ ಇದರ ವಿರುದ್ಧ ಕಾನೂನಾತ್ಮಕವಾಗಿ ಮತ್ತು ಪ್ರಜಾಸತ್ತಾತ್ಮಕವಾಗಿ ಹೋರಾಟ ಮುಂದುವರಿಸಲಿದೆ' ಎಂದು ತಿಳಿಸಿದ್ದಾರೆ.

'ಆದೇಶ ಪಾಲನೆ ಎಲ್ಲರ ಕರ್ತವ್ಯ'

ಬೆಂಗಳೂರು: ಮಕ್ಕಳ ಶಿಕ್ಷಣ ಮುಖ್ಯ ಎಂಬುದರಲ್ಲಿ ಅನುಮಾನವೇ ಇಲ್ಲ. ಆದರೆ, ನ್ಯಾಯಾಲಯ ನೀಡಿರುವ ಆದೇಶ ಪಾಲನೆ ಮಾಡಬೇಕಾಗಿರುವುದು ಎಲ್ಲರ ಕರ್ತವ್ಯ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.

ಈ ನಿಟ್ಟಿನಲ್ಲಿ ಸರ್ಕಾರ ಮಕ್ಕಳ ಭವಿಷ್ಯದ ಬಗ್ಗೆ ನಿರ್ಲಕ್ಷ್ಯ ಮಾಡುವುದು ಬೇಡ. ಹಳಿ ತಪ್ಪಿರುವ ಶಿಕ್ಷಣ ವ್ಯವಸ್ಥೆಯನ್ನು ಸರಿ ಮಾಡಿ ಮಕ್ಕಳ ಭವಿಷ್ಯಕ್ಕೆ ಒಳ್ಳೆಯದು ಮಾಡಬೇಕು ಎಂದು ಅವರು ತೀರ್ಪಿನ ಬಗ್ಗೆ ಪ್ರತಿಕ್ರಿಯಿಸಿದರು.

'ಶಾಲಾ– ಕಾಲೇಜುಗಳಲ್ಲಿ ಅಹಿತಕರ ವಾತಾವರಣ ಇತ್ತು. ಸಮವಸ್ತ್ರದ ಕಾರಣಕ್ಕೆ ಸಮಾಜದಲ್ಲಿ ಅಶಾಂತಿ ಉಂಟಾಗಿತ್ತು. ಶಿಕ್ಷಣ ವ್ಯವಸ್ಥೆ ಹಾಳಾಗಿತ್ತು. ಹಿಂಸಾಚಾರ ಮತ್ತು ಗಲಾಟೆಗಳು ಮಕ್ಕಳ ಮೇಲೆ ಕೆಟ್ಟ ಪರಿಣಾಮ ಬೀರಿವೆ. ಆತಂಕದ ಪರಿಸ್ಥಿತಿ ಇದೆ. ಇದೆಲ್ಲವೂ ಸರಿ ಆಗಬೇಕು. ಇದನ್ನು ಸರಿದಾರಿಗೆ ತರುವ ಉದ್ದೇಶದಿಂದ ವಿಧಾನಸಭೆಯಲ್ಲಿ ನಿಲುವಳಿ ಮಂಡಿಸಿದ್ದೇನೆ. ಬುಧವಾರ ಆ ಬಗ್ಗೆ ಚರ್ಚೆ ಮಾಡುತ್ತೇನೆ' ಎಂದರು.

ಕೋವಿಡ್: ಹಲವೆಡೆ ಹೆಚ್ಚಳ

ಸೋಲ್/ಬರ್ಲಿನ್ (ರಾಯಿಟರ್ಸ್/ಎಪಿ): ದಕ್ಷಿಣ ಕೊರಿಯಾ, ಜರ್ಮನಿ, ಜಪಾನ್, ಚೀನಾ ಸೇರಿದಂತೆ ಜಗತ್ತಿನ ಹಲವು ರಾಷ್ಟ್ರಗಳಲ್ಲಿ ಕೋವಿಡ್ ಪ್ರಕರಣಗಳು ಉಲ್ಬಣಗೊಂಡಿವೆ.

ದಕ್ಷಿಣ ಕೊರಿಯಾದಲ್ಲಿ ಕಳೆದ 24 ಗಂಟೆಗಳಲ್ಲಿ 3.62 ಲಕ್ಷ ಹೊಸ ಪ್ರಕರಣ ದಾಖಲಾಗಿದ್ದು, 293 ಮಂದಿ ಸೋಂಕಿತರು ಮೃತಪಟ್ಟಿದ್ದಾರೆ. ಜರ್ಮನಿಯಲ್ಲಿ 1.98 ಲಕ್ಷ ಹೊಸ ಪ್ರಕರಣಗಳು ದಾಖಲಾಗಿದ್ದು, ಕಳೆದ ವಾರಕ್ಕಿಂತ 42 ಸಾವಿರ ಪ್ರಕರಣಗಳು ಅಧಿಕವಾಗಿವೆ. ದೇಶದಲ್ಲಿ ಒಟ್ಟು ಪ್ರಕರಣಗಳ ಸಂಖ್ಯೆ 1.74 ಕೋಟಿಗೆ ಏರಿಕೆಯಾಗಿದೆ.

ಚೀನಾದಲ್ಲಿ ಮಂಗಳವಾರ 5,280 ಹೊಸ ಪ್ರಕರಣಗಳು ದಾಖಲಾಗಿದ್ದು, 2–3 ದಿನಗಳಿಗೆ ಹೋಲಿಸಿದರೆ ಕೋವಿಡ್ ಪ್ರಕರಣಗಳು ದುಪ್ಪಟ್ಟು ಆಗಿದೆ

ಹಾಂಗ್‌ಕಾಂಗ್‌ನಲ್ಲಿ ಕಳೆದ 24 ಗಂಟೆಗಳಲ್ಲಿ 27,765 ಹೊಸ ಪ್ರಕರಣಗಳು ವರದಿಯಾಗಿದ್ದು, 228 ಮಂದಿ ಸೋಂಕಿತರು ಮೃತಪಟ್ಟಿದ್ದಾರೆ.

ಸರ್ಕಾರದ ವಿರುದ್ಧ ವಾಗ್ದಾಳಿಗೆ ಕಾಂಗ್ರೆಸ್ ತೀರ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂದು ಆರೋಪಿಸಿ ಹಾಗೂ ಕಾಮಗಾರಿಗಳಲ್ಲಿ ಶೇ 40ರಷ್ಟು ಲಂಚವೂ ಸೇರಿ ಭ್ರಷ್ಟಾಚಾರದ ವಿಚಾರವನ್ನು ಪ್ರಸ್ತಾಪಿಸಿ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಲು ವಿರೋಧ ಪಕ್ಷ ಕಾಂಗ್ರೆಸ್ಸಿನ ನಾಯಕರು ನಿರ್ಧರಿಸಿದ್ದಾರೆ.

ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಕಚೇರಿಯಲ್ಲಿ ಮಂಗಳವಾರ ನಡೆದ ಪಕ್ಷದ ನಾಯಕರ ಸಭೆಯಲ್ಲಿ ಈ ಕುರಿತು ಚರ್ಚೆ ನಡೆಯಿತು.

ಶಿವಮೊಗ್ಗದಲ್ಲಿ ಬಜರಂಗ ಕಾರ್ಯಕರ್ತ ಹರ್ಷ ಮತ್ತು ಬೆಳ್ತಂಗಡಿಯಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ದಿನೇಶ್ ಎಂಬವರ ಕೊಲೆ ಪ್ರಕರಣವನ್ನು ಪ್ರಸ್ತಾಪಿಸಿ, ಸರ್ಕಾರದ ನಿಲುವು ಪ್ರಶ್ನಿಸಲು ಕಾಂಗ್ರೆಸ್ ನಾಯಕರು ಮುಂದಾಗಿದ್ದಾರೆ. ಆ ಮೂಲಕ, ಕಾನೂನು ಸುವ್ಯವಸ್ಥೆ ನಿಭಾಯಿಸುವಲ್ಲಿ ಸರ್ಕಾರದ ವೈಫಲ್ಯ ಎತ್ತಿ ತೋರಿಸಲು ಕೂಡಾ ತೀರ್ಮಾನಿಸಿದ್ದಾರೆ.

ಸಿದ್ದರಾಮಯ್ಯ

ಶೇ 40ರಷ್ಟು ಲಂಚದ ಬಗ್ಗೆ ಪ್ರಧಾನಿಗೆ ಗುತ್ತಿಗೆದಾರರ ಸಂಘ ನೀಡಿದ್ದ ದೂರು, ಬಿಟ್ ಕಾಯಿನ್ ಹಗರಣ ಮತ್ತು ರೈತ ವಿರೋಧಿ ಕೃಷಿ ಕಾನೂನುಗಳ ಬಗ್ಗೆಯೂ ಸದನದಲ್ಲಿ ಪ್ರಸ್ತಾಪಿಸಲು ನಿರ್ಧರಿಸಲಾಗಿದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ. ಕೆ. ಹರಿಪ್ರಸಾದ್, ಶಾಸಕರಾದ ಜಿ. ಪರಮೇಶ್ವರ, ಎಚ್.ಕೆ. ಪಾಟೀಲ, ಕೆ.ಜೆ. ಜಾರ್ಜ್, ಎಂ.ಬಿ. ಪಾಟೀಲ, ದಿನೇಶ್ ಗುಂಡೂರಾವ್, ಸತೀಶ್ ಜಾರಕಿಹೊಳಿ, ವಿಧಾನ ಪರಿಷತ್ ಸದಸ್ಯ ಸಲೀಂ ಅಹ್ಮದ್ ಸಭೆಯಲ್ಲಿದ್ದರು.

ಅಭಿಮಾನದ ಹೊಳೆ...

ಪುನೀತ್ ರಾಜ್‌ಕುಮಾರ್ ಸಮಾಧಿ ನೋಡಲು ಅಭಿಮಾನಿಗಳು ಅಪಾಯ ಲೆಕ್ಕಿಸದೆ ರಸ್ತೆ ದಾಟುವುದು ಮಾಮೂಲಿಯಾಗಿದೆ. ಈ ವೇಳೆ ಅಪಘಾತ ಸಂಭವಿಸದಂತೆ ತಡೆಯಲು ಪೊಲೀಸರು ರಸ್ತೆ ವಿಭಜಕವನ್ನು ಎತ್ತರಿಸಿದ್ದಾರೆ. ಆದರೂ ಅಭಿಮಾನಿಗಳು ಅದನ್ನೂ ಜಿಗಿದು ಮಕ್ಕಳೊಂದಿಗೆ ರಸ್ತೆ ದಾಟಲು ಪ್ರಯತ್ನಿಸುತ್ತಿರುವ ಪರಿ –ಪ್ರಜಾವಾಣಿ ಚಿತ್ರ/ ರಂಜು ಪಿ.

'ಪ್ರಾಧಿಕಾರ ಸ್ವಾಯತ್ತಗೊಳಿಸಿ; ಇಲ್ಲವೇ ಮುಚ್ಚಿಬಿಡಿ'

ಪ್ರಜಾವಾಣಿ ವಾರ್ತೆ

ಮೈಸೂರು: 'ಅಕಾಡೆಮಿ ಹಾಗೂ ಪ್ರಾಧಿಕಾರಗಳನ್ನು ಸರ್ಕಾರ ಸ್ವಾಯತ್ತಗೊಳಿಸದಿದ್ದರೆ ಮುಚ್ಚುವುದೇ ಒಳ್ಳೆಯದು' ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಎಂ.ಎನ್.ನಂದೀಶ್ ಹಂಚೆ ಆಕ್ರೋಶ ವ್ಯಕ್ತಪಡಿಸಿದರು.

ಪ್ರಾಧಿಕಾರ ಮಂಗಳವಾರ ಇಲ್ಲಿ ಆಯೋಜಿಸಿದ್ದ ಪ್ರಕಾಶಕರ ರಾಜ್ಯಮಟ್ಟದ ದ್ವಿತೀಯ ಸಮ್ಮೇಳನದಲ್ಲಿ ಮಾತನಾಡಿ, 'ನಿವೃತ್ತರಿಗೆ, ಬುದ್ಧಿಜೀವಿಗಳಿಗೆ ಅಕಾಡೆಮಿ –ಪ್ರಾಧಿಕಾರಗಳಲ್ಲಿ ಕಾಯಕಲ್ಪ ಕಲ್ಪಿಸಲಾಗುತ್ತಿದೆ. ಅಧ್ಯಕ್ಷರು, ಸದಸ್ಯರು ಭತ್ಯೆಗಾಗಿ ಬರುತ್ತಾರೆಂಬ ಭಾವನೆ ಐಎಎಸ್ ಅಧಿಕಾರಿಗಳಿಗಿದ್ದಂತಿದೆ. ಕಾರು ಚಾಲಕನನ್ನು ನೇಮಿಸಲು ಆರು ತಿಂಗಳು ಸತಾಯಿಸಿದರು' ಎಂದು ದೂರಿದರು.



ನಂದೀಶ್ ಹಂಚೆ

'ಕವಿರಾಜಮಾರ್ಗದಿಂದ ಮುದ್ದಣ್ಣನವರೆಗೆ ಎಲ್ಲಾ ಸಾಹಿತ್ಯವನ್ನು 'ಇ–ಬುಕ್' ಮಾಡುವ 'ಅಭಿಜಾತ ಕನ್ನಡ ಕಲ್ಯಾಣ' ಯೋಜನೆಗೆ ₹ 1.5 ಕೋಟಿ ಅನುದಾನ ಮಂಜೂರಾಗಿದ್ದರೂ ಅಧಿಕಾರಿಗಳು ಅಡ್ಡಗಾಲು ಹಾಕುತ್ತಾರೆ' ಎಂದು ಬೇಸರ ವ್ಯಕ್ತಪಡಿಸಿದರು.

'ಪುಸ್ತಕ ಖರೀದಿಸಲು ಗ್ರಂಥಾಲಯ ಇಲಾಖೆಗೆ ಬಜೆಟ್‌ನಲ್ಲಿ ಅನುದಾನ ಮೀಸಲಿಟ್ಟು, ಪ್ರಕಾಶಕರನ್ನು ಪ್ರೋತ್ಸಾಹಿಸಬೇಕು' ಎಂದು ಸಮ್ಮೇಳನದ ಅಧ್ಯಕ್ಷ ತಳುಕಿನ ವೆಂಕಣ್ಣಯ್ಯ ಗ್ರಂಥಮಾಲೆಯ ಟಿ.ಎಸ್.ಛಾಯಾಪತಿ ಒತ್ತಾಯಿಸಿದರು.

ಸುರೇಶ್– ಭಾಮ ನಡುವೆ ಮಾತಿನ ಚಕಮಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಸಭೆಯಲ್ಲಿ ಕಾರ್ಯದರ್ಶಿ ಎನ್.ಎಂ. ಸುರೇಶ್ ಮತ್ತು ನಿರ್ಮಾಪಕ ಭಾ.ಮ. ಹರೀಶ್ ಅವರ ನಡುವೆ ಮಂಗಳವಾರ ಮಾತಿನ ಚಕಮಕಿ ನಡೆದಿದೆ.

ವಾಣಿಜ್ಯ ಮಂಡಳಿಗೆ ಕೂಡಲೇ ಚುನಾವಣೆ ನಡೆಸಬೇಕು ಎಂದು ಒತ್ತಾಯಿಸಿ ಸದಸ್ಯರ ಗುಂಪೊಂದು ಹಾಲಿ ಪದಾಧಿಕಾರಿಗಳಿಗೆ ಒತ್ತಾಯಿಸಿತ್ತು. ಈ ಸಂಬಂಧ ಚರ್ಚಿಸಲು ಸಭೆ ಕರೆಯಲಾಗಿತ್ತು.

'ಚುನಾವಣೆ ಸಂಬಂಧಿಸಿ ಮಾತನಾಡಿ ಎಂದರೆ ಎನ್.ಎಂ. ಸುರೇಶ್ ಅವರು ವಿಷಯಾಂತರ ಮಾಡಲು ಮುಂದಾದರು. ಆಗ ವಿಷಯಾಂತರ ಮಾಡಬೇಡಿ. ಚುನಾವಣೆ ನಡೆಸುವ ಬಗ್ಗೆ ಹೇಳಿ ಎಂದು ಕೋರಿದೆ. ಈ ಸಂದರ್ಭ ಸಣ್ಣ ಮಾತಿನ ಚಕಮಕಿ ನಡೆದಿದೆ' ಎಂದು ಭಾ.ಮ. ಹರೀಶ್ ಹೇಳಿದರು.

ಏಪ್ರಿಲ್ 15ರ ಒಳಗೆ ಚುನಾವಣೆ ನಡೆಸುವಂತೆ ಜಿಲ್ಲಾ ಸಹಕಾರ, ಸಂಘ ಸಂಸ್ಥೆಗಳ ನೋಂದಣಾಧಿಕಾರಿಯವರು ಮಂಡಳಿಗೆ ಸೂಚಿಸಿದ್ದರು.

'ಕೋವಿಡ್, ಲಾಕ್‌ಡೌನ್, ಮಂಡಳಿಯ ಲೆಕ್ಕಪತ್ರಗಳ ನಿರ್ವಹಣೆ ಇತ್ಯಾದಿ ಕಾರಣಗಳಿಂದ ಸ್ವಲ್ಪ ವಿಳಂಬವಾಗಿದೆ. ಚುನಾವಣೆ ನಡೆಸುವಂತೆ ಸರ್ಕಾರಕ್ಕೆ ನಾವೇ ಕೋರಿದ್ದೇವೆ. ಏಪ್ರಿಲ್ 15ರ ಒಳಗೆ ಚುನಾವಣಾ ವೇಳಾಪಟ್ಟಿ ಸಿದ್ಧಪಡಿಸಿ ಪ್ರಕಟಿಸುತ್ತೇವೆ. ಸದಸ್ಯರ ನೋಂದಣಿ, ಅವರಿಗೆ ಮತದಾನದ ಅರ್ಹತೆಗೆ ಬೇಕಾದ ಕಾಲಾವಕಾಶ ಸಂಬಂಧಿಸಿ ಕೆಲವು ತಾಂತ್ರಿಕ ಸಮಸ್ಯೆಗಳು ಇವೆ. ಅವುಗಳನ್ನು ನಿವಾರಿಸಿ ಖಂಡಿತವಾಗಿಯೂ ಚುನಾವಣೆ ನಡೆಸುತ್ತೇವೆ' ಎಂದು ಕಳೆದ ವಾರ ಎನ್.ಎಂ. ಸುರೇಶ್ ಅವರು 'ಪ್ರಜಾವಾಣಿ'ಗೆ ತಿಳಿಸಿದ್ದರು.

ಇಂದಿನ ಘಟನೆಯ ಬಗ್ಗೆ ಪ್ರತಿಕ್ರಿಯೆಗೆ ಸುರೇಶ್ ಅವರು ಸಂಪರ್ಕಕ್ಕೆ ಸಿಗಲಿಲ್ಲ.

'ಎರಡು ದಿನಗಳ ಒಳಗೆ ಚುನಾವಣೆ ಸಂಬಂಧಿಸಿದಂತೆ ಸ್ಪಷ್ಟಪಡಿಸಬೇಕು. ಇಲ್ಲವಾದರೆ ಮಾರ್ಚ್ 21ರಿಂದ ಅಹೋರಾತ್ರಿ ಧರಣಿ ನಡೆಸುತ್ತೇವೆ' ಎಂದು ಭಾ.ಮ. ಎಚ್ಚರಿಸಿದರು.

'ಪರಿವರ್ತನೆ ಸಾಹಿತ್ಯದ ಮೂಲದ್ರವ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸುಧಾರಣೆ, ಪರಿವರ್ತನೆ ಮತ್ತು ಬದಲಾವಣೆ ಸಾಹಿತ್ಯದ ಮೂಲ ದ್ರವ್ಯ ಹಾಗೂ ಮೂಲ ಸೆಲೆ' ಎಂದು ಚಿತ್ರದುರ್ಗದ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರು ಅಭಿಪ್ರಾಯಪಟ್ಟರು.

ವನಕಲ್ಲು ಮಲ್ಲೇಶ್ವರ ಮಹಾ ಸಂಸ್ಥಾನ ಮಠ ಹಮ್ಮಿಕೊಂಡಿದ್ದ ರಾಜ್ಯ ಮಟ್ಟದ 10ನೇ ಚುಟುಕು ಸಾಹಿತ್ಯ ಸಮ್ಮೇಳನ ಹಾಗೂ ವನಕಲ್ಲು ಶ್ರೀಗಳ ಪೀಠಾರೋಹಣದ ದಶಮಾನೋತ್ಸವ ಸಮಾರಂಭ ಉದ್ಘಾಟಿಸಿ, ಮಾತನಾಡಿದರು. 'ಸಾಹಿತ್ಯವನ್ನು ವ್ಯಕ್ತಿ ಪ್ರೇರಣೆಗೆ ಬಳಸಿಕೊಂಡಾಗ ಅದ್ಭುತವಾದ ಪರಿವರ್ತನೆ ಕಾಣಲು ಸಾಧ್ಯ' ಎಂದರು.

ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಬಸವಕಲ್ಯಾಣ ಅನುಭವ ಮಂಟಪದ ಅಧ್ಯಕ್ಷ ಭಾಲ್ಕಿ ಪಟ್ಟದೇವರು ಬಸವಲಿಂಗ ಸ್ವಾಮೀಜಿ, 'ಜಾತಿಯ ಸಂಕುಚಿತ ಮನೋಭಾವ ತೊರೆದು, ಏಕತೆಯ ವೇದಿಕೆಯತ್ತ ಸಮಾನ ಮನಸ್ಕರು ಮುನ್ನಡೆವ ಆಂದೋಲನ ನಡೆಯಬೇಕು.' ಎಂದರು.

ಶಿವಮೂರ್ತಿ ಮುರುಘಾ ಶ್ರೀ

ವನಕಲ್ಲುಮಠದ ಬಸವರಮಾನಂದ ಸ್ವಾಮೀಜಿ, 'ಸಮಾಜದಸಂಘರ್ಷಗಳು ಬುದ್ಧ, ಬಸವ, ಅಂಬೇಡ್ಕರ್ ಅವರನ್ನೇ ಬಿಟ್ಟಿಲ್ಲ. ಇಂತಹ ಸಂಘರ್ಷಗಳ ಮಧ್ಯೆ ಸುಂದರ ಸಮಾಜ ನಿರ್ಮಿಸುವುದು ಸ್ವಾಮೀಜಿ ಅವರ ಕರ್ತವ್ಯವಾಗಬೇಕು' ಎಂದರು.

ಲೇಖಕ ಮಣ್ಣೆ ಮೋಹನ್ ಸಂಪಾದಕತ್ವದ 'ಚುಟುಕು ಶ್ರೀ' ಕವನ ಸಂಕಲನ ಹಾಗೂ ಒಂದು ದಶಕದ ಚುಟುಕು ಸಾಹಿತ್ಯ ಸಮ್ಮೇಳನಗಳ ಸಮ್ಮೇಳನಾಧ್ಯಕ್ಷರ ಭಾಷಣಗಳನ್ನು ಒಳಗೊಂಡ 'ಚುಟುಕು ದಶಕ' ಕೃತಿಯನ್ನು ಮುರುಘಾ ಶರಣರು ಬಿಡುಗಡೆ ಮಾಡಿದರು. ಚುಟುಕು ಕವಿಗೋಷ್ಠಿಯಲ್ಲಿ 50ಕ್ಕೂ ಅಧಿಕ ಕವಿಗಳು ಕವಿತೆ ವಾಚಿಸಿದರು.

ಜೀವಂಧರ ಕುಮಾರ ಹೋತಪೇಟಿಗೆ 'ಸಿದ್ಧಾಂತ ಕೀರ್ತಿ' ಪ್ರಶಸ್ತಿ

ರಿಪ್ಪನ್‌ಪೇಟೆ (ಶಿವಮೊಗ್ಗ ಜಿ.): ಇಲ್ಲಿಯ ಹೊಂಬುಜ ಜೈನ ಮಠದಿಂದ ನೀಡಲಾಗುವ 2022ನೇ ಸಾಲಿನ 'ಸಿದ್ಧಾಂತ ಕೀರ್ತಿ' ಪ್ರಶಸ್ತಿಗೆ ಹುಬ್ಬಳ್ಳಿಯ ನಿವೃತ್ತ ಉಪನ್ಯಾಸಕ ಪ್ರೊ.ಜೀವಂಧರ ಕುಮಾರ ಹೋತಪೇಟಿ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಮಠದ ವಕ್ತಾರರು ತಿಳಿಸಿದ್ದಾರೆ.

ಪರಂಪರೆಯಂತೆ 5 ದಶಕಗಳಿಂದ ಹೊಂಬುಜ ಜೈನ ಮಠದಿಂದ ನೀಡುವ 'ಸಿದ್ಧಾಂತ ಕೀರ್ತಿ' ಪ್ರಶಸ್ತಿಯು ₹ 51,000 ನಗದು ಮತ್ತು ಅಂಗವಸ್ತ್ರ ಒಳಗೊಂಡಿರುತ್ತದೆ. ಈ ಪ್ರಶಸ್ತಿಯನ್ನು ವಾರ್ಷಿಕ ಮಹಾರಥಯಾತ್ರಾ ಮಹೋತ್ಸವದ ಹಿಂದಿನ ದಿನವಾದ ಗುರುವಾರ (ಮಾ. 17) ಸಂಜೆ ನಡೆಯುವ ಧಾರ್ಮಿಕ ಸಭೆಯಲ್ಲಿ ವಿತರಿಸಲಾಗುವುದು.



ಪ್ರೊ. ಜೀವಂಧರ ಕುಮಾರ

ಪ್ರೊ.ಜೀವಂಧರ ಕುಮಾರ ಹೋತಪೇಟಿ ಅವರು ಜೈನಾಗಮಗಳ ಅನುವಾದ, ಗ್ರಂಥ ರಚನೆ, ಗ್ರಂಥ ಸಂಪಾದನೆ, ಉಪನ್ಯಾಸ ಸೇರಿದಂತೆ ಹಲವು ವಿಶೇಷ ಕಾರ್ಯಗಳ ಅನುಭವ ಹೊಂದಿದ್ದಾರೆ.

'ಕನ್ನಡ ಪುಸ್ತಕಗಳಿಗೆ ಮಾತ್ರ ಅವಕಾಶ'

ಪ್ರಜಾವಾಣಿ ವಾರ್ತೆ

ಮೈಸೂರು: 'ಹಾವೇರಿಯಲ್ಲಿ ನಡೆಯಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪುಸ್ತಕ ಮಳಿಗೆಗಳಲ್ಲಿ ಕನ್ನಡ ಹೊರತುಪಡಿಸಿ ಬೇರೆ ಯಾವುದೇ ಭಾಷೆಯ ಪುಸ್ತಕಗಳಿಗೆ ಅವಕಾಶ ನೀಡುವುದಿಲ್ಲ' ಎಂದು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ್ ಜೋಶಿ ಹೇಳಿದರು.

ಕನ್ನಡ ಪುಸ್ತಕ ಪ್ರಾಧಿಕಾರ ಮಂಗಳವಾರ ಇಲ್ಲಿ ಆಯೋಜಿಸಿದ್ದ ಪ್ರಕಾಶಕರ ದ್ವಿತೀಯ ಸಮ್ಮೇಳನದಲ್ಲಿ ಮಾತನಾಡಿ, 'ಸಮ್ಮೇಳನಕ್ಕೆ ₹ 20 ಕೋಟಿ ಅನುದಾನ ಲಭಿಸಿದ್ದು, ದುಂದು ವೆಚ್ಚ ಮಾಡುವುದಿಲ್ಲ' ಎಂದರು. 'ಕನ್ನಡ ಪುಸ್ತಕಗಳಲ್ಲಿ ವ್ಯಾಕರಣ ದೋಷ ಹೆಚ್ಚಿದೆ. ಕರಡು ತಿದ್ದುವವರಿಗೆ, ಲೇಖಕರಿಗೆ ಪುಸ್ತಕ ಪ್ರಾಧಿಕಾರ ಕಾರ್ಯಾಗಾರವನ್ನು ನಡೆಸಬೇಕು. 1977ರ ಬಳಿಕ ರಾಷ್ಟ್ರೀಯ ಪುಸ್ತಕ ಮೇಳ ರಾಜ್ಯದಲ್ಲಿ ನಡೆಯದೇ ಇರುವುದರಿಂದ, ಮೇಳ ನಡೆಸಲು ಪ್ರಾಧಿಕಾರ ಪ್ರಯತ್ನಿಸಿದರೆ ಸಹಕಾರ ನೀಡಲಾಗುವುದು. ಹಾವೇರಿ ಸಮ್ಮೇಳನದ ಬಳಿಕ ಕನ್ನಡ ಪುಸ್ತಕ ಪ್ರಕಾಶಕರ ಹಾಗೂ ಮಾರಾಟಗಾರರ ರಾಜ್ಯಮಟ್ಟದ ಸಮ್ಮೇಳನವನ್ನು ನಡೆಸಲಾಗುವುದು' ಎಂದು ಅವರು ಹೇಳಿದರು

ಸಂಕ್ಷಿಪ್ತ ಸುದ್ದಿ

ಕಾಡು ಹಂದಿಗೆ ಕಾರು ಡಿಕ್ಕಿ: ಮೂವರ ಸಾವು

ಹಿರಿಯೂರು: ತಾಲ್ಲೂಕಿನ ಐಮಂಗಲ ಸಮೀಪದ ಪುಣೆ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಮಂಗಳವಾರ ರಾತ್ರಿ ಏಕಾಏಕಿ ಅಡ್ಡಬಂದ ಕಾಡುಹಂದಿಗೆ ಡಿಕ್ಕಿ ಹೊಡೆದ ಕಾರು, ಚಾಲಕನ ನಿಯಂತ್ರಣ ಕಳೆದುಕೊಂಡು ಪಲ್ಟಿಯಾದ ಪರಿಣಾಮ ಮೂವರು ಮೃತಪಟ್ಟಿದ್ದಾರೆ.

ಮೃತರನ್ನು ವಿಜಯಕುಮಾರ್ (38) ಮತ್ತು ರವಿಕುಮಾರ್ (35) ಎಂದು ಗುರುತಿಸಲಾಗಿದೆ. ಮತ್ತೊಬ್ಬ ಮಹಿಳೆಯ ಗುರುತು ಪತ್ತೆಯಾಗಿಲ್ಲ. ಇತರ ಮೂವರು ಗಾಯಗೊಂಡಿದ್ದು, ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಡಿಕ್ಕಿ ಹೊಡೆದ ರಭಸಕ್ಕೆ ಕಾಡು ಹಂದಿ ಸ್ಥಳದಲ್ಲೇ ಮೃತಪಟ್ಟಿದೆ.

ವಿಜಯಕುಮಾರ್ ಮತ್ತು ರವಿಕುಮಾರ್ ಕುಟುಂಬ ಸಮೇತರಾಗಿ ಬೆಂಗಳೂರಿನಿಂದ ದಾವಣಗೆರೆಗೆ ಸಾಗುತ್ತಿದ್ದರು. ಹೆದ್ದಾರಿಯಲ್ಲಿ ಅಡ್ಡಬಂದ ಕಾಡುಹಂದಿಗೆ ಡಿಕ್ಕಿ ಹೊಡೆದ ಕಾರು ರಸ್ತೆ ವಿಭಜಕಕ್ಕೆ ಅಪ್ಪಳಿಸಿದೆ. ಚಾಲಕನ ನಿಯಂತ್ರಣ ಕಳೆದುಕೊಂಡು ಪಲ್ಟಿಯಾಗಿದೆ. ಇಬ್ಬರೂ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮತ್ತೊಬ್ಬರು ಆಸ್ಪತ್ರೆಗೆ ಸಾಗಿಸುವ ದಾರಿ ಮಧ್ಯದಲ್ಲಿ ಮೃತಪಟ್ಟಿದ್ದಾರೆ. ಸಮೀಪದ ಹೋಟೆಲ್‌ನಲ್ಲಿ ಊಟ ಮಾಡುತ್ತಿದ್ದವರು ನೆರವಿಗೆ ಧಾವಿಸಿ ಕಾರಿನಿಂದ ಎಲ್ಲರನ್ನೂ ಹೊರಗೆ ಎಳೆದಿದ್ದಾರೆ ಎಂದು ಐಮಂಗಲ ಠಾಣೆ ಪೊಲೀಸರು ಮಾಹಿತಿ ನೀಡಿದ್ದಾರೆ.

ಕಾರಿನಲ್ಲಿದ್ದವರು ಒಂದೇ ಕುಟುಂಬದವರು ಎಂದು ತಿಳಿದು ಬಂದಿದೆ. ಸ್ಥಳಕ್ಕೆ ಐಮಂಗಲ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು.

ದಿ ಕಾಶ್ಮೀರ್ ಫೈಲ್ಸ್: ಬಜರಂಗಸೇನೆ ವಿರುದ್ಧ ದೂರು

ಮಂಡ್ಯ: 'ದಿ ಕಾಶ್ಮೀರ್ ಫೈಲ್ಸ್ ಚಿತ್ರ ನೋಡುವಂತೆ ಬಜರಂಗಸೇನೆ ಕಾರ್ಯಕರ್ತರು ನಗರದ ನಂದಾ ಚಿತ್ರಮಂದಿರದ ಮುಂದೆ ಹಾಕಿರುವ ಫ್ಲೆಕ್ಸ್ ಪ್ರಚೋದನಕಾರಿಯಾಗಿದೆ' ಎಂದು ಆರೋಪಿಸಿ ಅಸ್ಗರ್ ಅಹಮದ್ ಎಂಬುವರು ಪೂರ್ವ ಪೊಲೀಸ್ ಠಾಣೆಗೆ ಮಂಗಳವಾರ ದೂರು ನೀಡಿದ್ದಾರೆ.

'ಸಿನಿಮಾದ ಚಿತ್ರಕತೆಯು ಕಾಲ್ಪನಿಕವಾಗಿದ್ದರೂ, ಕಾರ್ಯಕರ್ತರು ಹಿಂದೂಗಳನ್ನು ಕೆರಳಿಸಿ ಮುಸ್ಲಿಮರ ಮೇಲೆ ದಾಳಿ ನಡೆಸುವಂತಹ ಪ್ರಚೋದನಾತ್ಮಕ ಬರಹದೊಂದಿಗೆ ಪೋಸ್ಟರ್ ಹಾಕಿದ್ದಾರೆ. ಕೂಡಲೇ ಪೋಸ್ಟರ್ ತೆರವುಗೊಳಿಸಿ, ಕಾರ್ಯಕರ್ತರನ್ನು ಬಂಧಿಸಬೇಕು' ಎಂದಿದ್ದಾರೆ.

'ಹಿಂದೂಗಳೆಂಬ ಕಾರಣಕ್ಕೆ ಕೊಲ್ಲಲ್ಪಟ್ಟು ನಿರಾಶ್ರಿತರಾದ ಕಾಶ್ಮೀರಿ ಪಂಡಿತರ ನೋವಿನ ಅನಾವರಣ, ಹಿಂದೂಗಳನ್ನು ಸದೆಬಡಿಯಲಾಗಿದೆ ಎಂದು ಪೋಸ್ಟರ್ ಹಾಕಲಾಗಿದೆ' ಎಂದು ದೂರಿದ್ದಾರೆ.

ನಿಂದನೆ; ಶ್ರೀರಾಮ ಸೇನೆ ಅಧ್ಯಕ್ಷ ವಿರುದ್ಧ ಎಫ್‌ಐಆರ್

ಕಲಬುರಗಿ: ಕೆಎಸ್‌ಆರ್‌ಪಿ ಎಡಿಜಿಪಿ ಅಲೋಕ್‌ಕುಮಾರ್ ಅವರಿಗೆ ಅವಾಚ್ಯ ಪದಗಳಿಂದ ನಿಂದಿಸಿದ ಬಗ್ಗೆ ಜಾಲತಾಣದಲ್ಲಿ ಪ್ರಕಟವಾದ ವಿಡಿಯೊ ಆಧರಿಸಿ ಶ್ರೀರಾಮಸೇನೆ ಅಧ್ಯಕ್ಷರೂ ಆದ ಆಂದೋಲಾ ಕರುಣೇಶ್ವರ ಮಠದ ಸಿದ್ಧಲಿಂಗ ಸ್ವಾಮೀಜಿ ವಿರುದ್ಧ ಜೇವರ್ಗಿ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

‘ಆಸ್ತಿ ತೆರಿಗೆ ವಂಚನೆ: ಕಠಿಣ ಕ್ರಮ’

ಬೆಂಗಳೂರು: ‘ಆಸ್ತಿ ತೆರಿಗೆ ವಂಚನೆ ಪ್ರಕರಣಗಳಲ್ಲಿ ಲೋಪ ಎಸಗಿದ ಸ್ಥಳೀಯ ಸಂಸ್ಥೆಗಳ ವಿರುದ್ಧ ಕಠಿಣ ಕ್ರಮ ತೆಗೆದು-ಕೊಳ್ಳಲಾಗುವುದು’ ಎಂದು ಪೌರಾಡಳಿತ ಸಚಿವ ಎಂ.ಟಿ.ಬಿ. ನಾಗರಾಜ್ ಹೇಳಿದರು.

ವಿಧಾನಪರಿಷತ್‌ನಲ್ಲಿ ಕಾಂಗ್ರೆಸ್ಸಿನ ಕೆ. ಗೋವಿಂದರಾಜ್ ಪ್ರಶ್ನೆಗೆ ಉತ್ತರಿಸಿದ ಅವರು, ‘ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಂದ 2018-19ರಲ್ಲಿ ₹ 711.18 ಕೋಟಿ, 2019-20ರಲ್ಲಿ ₹ 736.77 ಕೋಟಿ, 2020-21ರಲ್ಲಿ ₹ 841.72 ಕೋಟಿ ತೆರಿಗೆ ಸಂಗ್ರಹವಾಗಿದೆ. ಸ್ವಯಂ ಆಸ್ತಿ ತೆರಿಗೆ ಪದ್ಧತಿ ಪ್ರಕಾರವೇ ಆಸ್ತಿ ತೆರಿಗೆ ನಿಗದಿ ಮಾಡಲಾಗುತ್ತಿದೆ’ ಎಂದರು.

‘ಸ್ಥಿರಾಸ್ತಿ ಗುರುತಿನ ಸಂಖ್ಯೆ (ಪಿಐಡಿ) ನಂಬರ್ ಆಧಾರದಲ್ಲಿ ಸ್ವಯಂ ಘೋಷಿತ ಆಸ್ತಿ ತೆರಿಗೆ ನಿಗದಿಪಡಿಸ-ಲಾಗುತ್ತಿದೆ. ಇ-ತಂತ್ರಾಂಶದ ಮೂಲಕ ಆನ್‌ಲೈನ್‌ನಲ್ಲಿ ತೆರಿಗೆ ಪಾವತಿಸಲು ಅವಕಾಶ ನೀಡ ಲಾಗಿದೆ’ ಎಂದು ಹೇಳಿದರು.

ಕೆರೆಗಳನ್ನು ಸುಸ್ಥಿತಿಗೆ ತರಲು ಅಗತ್ಯ ಕ್ರಮ: ಸಣ್ಣ ನೀರಾವರಿ ಸಚಿವ ಮಾಧುಸ್ವಾಮಿ

‘ರಾಜ್ಯದಲ್ಲಿ 3 ಸಾವಿರ ಕೆರೆಗಳ ಒತ್ತುವರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 3,000 ಕೆರೆಗಳು ಒತ್ತುವರಿಯಾಗಿದ್ದು, ಇವುಗಳಲ್ಲಿ ಹೂಳು ತುಂಬಿಕೊಂಡು ಬಳ್ಳಾರಿ ಜಾಲಿ ಬೆಳೆದಿವೆ. ಒತ್ತುವರಿ ತೆರವುಗೊಳಿಸಿ ಕೆರೆಗಳನ್ನು ಸುಸ್ಥಿತಿಗೆ ತರಲಾಗುವುದು ಎಂದು ಸಣ್ಣನೀರಾವರಿ ಸಚಿವ ಜೆ.ಸಿ.ಮಾಧುಸ್ವಾಮಿ ತಿಳಿಸಿದರು.

ಜೆ.ಸಿ. ಮಾಧುಸ್ವಾಮಿ

ವಿಧಾನಸಭೆಯಲ್ಲಿ ಮಂಗಳವಾರ ಪ್ರಶ್ನೋತ್ತರ ಅವಧಿಯಲ್ಲಿ ಜೆಡಿಎಸ್‌ನ ಎಂ.ವಿ.ವೀರಭದ್ರಯ್ಯ ಅವರ ಪ್ರಶ್ನೆಗೆ ಉತ್ತರಿಸಿ, ಸರ್ವೆಯರ್‌ಗಳ ಕೊರತೆಯಿಂದ ಒತ್ತುವರಿಯಾ-ಗಿರುವ ಕೆರೆಗಳ ಸರ್ವೆ ಕಾರ್ಯ ನಡೆಯುತ್ತಿಲ್ಲ. ಕೆರೆಗಳ ಪುನಶ್ಚೇತನ ಕಾರ್ಯಕ್ಕಾಗಿ ಸುಮಾರು ₹300 ಕೋಟಿ ಮೀಸಲಿಡಲಾಗಿದೆ ಎಂದು ಹೇಳಿದರು.

ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕಿನಲ್ಲಿ ಒಟ್ಟು 56 ಕೆರೆಗಳಿದ್ದು ಅವುಗಳು ಒತ್ತುವರಿ ಆಗಿವೆ. ಈ ಪೈಕಿ ಒಂದು ಕೆರೆಯ ಸರ್ವೆ ಆಗಿದೆ. ಉಳಿದ 55 ಕೆರೆಗಳ ಸರ್ವೆ ಕಾರ್ಯ ಆಗಬೇಕಾಗಿದೆ. ಕಂದಾಯ ಇಲಾಖೆ ನೆರವಿನೊಂದಿಗೆ ಕೆರೆಗಳ ಸರ್ವೆ ಕಾರ್ಯ ಕೈಗೊಂಡು ಗಡಿ ಗುರುತಿಸಿ, ಒತ್ತುವರಿ ಇದ್ದರೆ ತೆರವು ಮಾಡಿ, ಗಡಿಕಲ್ಲುಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಮಾಧುಸ್ವಾಮಿ ತಿಳಿಸಿದರು.

ಸಾವಿಗೆ ಕಾರಣ ಪತ್ತೆ ಮಾಡಿ: ಚಿತ್ರದುರ್ಗ ಜಿಲ್ಲೆಯ ಉಪವಿಭಾಗಾಧಿಕಾರಿ ಜಿ.ವಿ.ಪ್ರಸನ್ನ ಅವರು ವಾಕಿಂಗ್ ಮಾಡುತ್ತಿದ್ದಾಗ ದ್ವಿಚಕ್ರವಾಹನದಲ್ಲಿ ಬಂದ ಇಬ್ಬರು ಗುದ್ದಿಸಿದ ಪರಿಣಾಮ ಸಾವನ್ನಪ್ಪಿದ್ದಾರೆ. ಇದು ಉದ್ದೇಶಪೂರ್ವಕ ಎಂಬ ಸಂಶಯವಿದೆ. ಆದಷ್ಟು ಬೇಗನೆ ಆರೋಪಿಗಳನ್ನು ಪತ್ತೆ ಮಾಡಿ ಕಾರಣವನ್ನು ಬಯಲಿಗೆ ತರಬೇಕು ಎಂದು ಕಾಂಗ್ರೆಸ್‌ನ ಟಿ. ರಘುಮೂರ್ತಿ ಒತ್ತಾಯಿಸಿದರು.

2021ರ ಮೇ ತಿಂಗಳಲ್ಲಿ ಈ ಘಟನೆ ನಡೆದಿದ್ದರೂ ಈವರೆಗೆ ಆರೋಪಿಗಳನ್ನು ಪತ್ತೆ ಮಾಡಲಾಗಿಲ್ಲ. ಆರೋಪಿಗಳನ್ನು ಪತ್ತೆ ಮಾಡಿದರೆ ಇದರ ಹಿಂದಿನ ಉದ್ದೇಶ ಗೊತ್ತಾಗುತ್ತದೆ ಎಂದು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಗೃಹ ಸಚಿವ ಆರಗ ಜ್ಞಾನೇಂದ್ರ, ಆರೋಪಿಗಳನ್ನು ಪತ್ತೆ ಮಾಡಲು ಡಿವೈಎಸ್‌ಪಿ ನೇತೃತ್ವದಲ್ಲಿ ವಿಶೇಷ ತಂಡ ರಚಿಸಲಾಗಿದೆ. ಅಲ್ಲಿ 2000 ದ್ವಿಚಕ್ರ ವಾಹನಗಳನ್ನು ತಪಾಸಣೆಗೆ ಒಳಪಡಿಸಲಾಗಿದೆ. ಸಿಸಿಟಿವಿ ದೃಶ್ಯಾವಳಿಗಳನ್ನೂ ನೋಡಲಾಗಿದೆ. ಈವರೆಗೂ ಆರೋಪಿಗಳ ಸಣ್ಣ ಸುಳಿವೂ ಸಿಕ್ಕಿಲ್ಲ ಎಂದು ಹೇಳಿದರು.

ಜೈಲುಗಳಿಗೆ ಕೈಗಾರಿಕಾ ಭದ್ರತಾ ಸಿಬ್ಬಂದಿ

ಬೆಂಗಳೂರು, ಮಂಗಳೂರು, ಬಳ್ಳಾರಿ, ವಿಜಯಪುರ ಮತ್ತು ಬೆಳಗಾವಿಯ ಹಿಂಡಲಗಾ ಕಾರಾಗೃಹಗಳಿಗೆ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾಪಡೆಗಳಿಂದ ಭದ್ರತೆ ಒದಗಿಸಲಾಗುತ್ತಿದೆ. ಇದರಿಂದಾಗಿ ಕೈದಿಗಳಿಗೆ ಪೂರೈಕೆ ಆಗುತ್ತಿದ್ದ ಮೊಬೈಲ್, ಮಾದಕ ವಸ್ತುಗಳ ಮೇಲೆ ಕಡಿವಾಣ ಬಿದ್ದಿದೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ಆರಗ ಜ್ಞಾನೇಂದ್ರ

ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ ಪ್ರಶ್ನೆಗೆ ಉತ್ತರಿಸಿದ ಸಚಿವರು, ಮೊದಲು ಕಾರಾಗೃಹ ಸಿಬ್ಬಂದಿಯೇ ತಪಾಸಣೆ ನಡೆಸುತ್ತಿದ್ದರು. ಇದೇ ಫೆಬ್ರುವರಿ 28 ರಿಂದ ಕೈಗಾರಿಕಾ ಭದ್ರತಾ ಸಿಬ್ಬಂದಿ ತಪಾಸಣೆ ನಡೆ-ಸುತ್ತಿದ್ದಾರೆ ಎಂದರು.

ಯುಕೆಪಿ ಎಂಡಿ ಕಚೇರಿ ಸ್ಥಳಾಂತರ

ಬಾಗಲಕೋಟೆ ಜಿಲ್ಲೆಯ ಆಲಮಟ್ಟಿಗೆ ಕೃಷ್ಣಾ ಭಾಗ್ಯ ಜಲನಿಗಮದ ಕಚೇರಿ ಸ್ಥಳಾಂತರಿ-ಸಿದ್ದು, ಆದಷ್ಟು ಬೇಗ ವ್ಯವಸ್ಥಾಪಕ ನಿರ್ದೇಶಕರ ಕಾರ್ಯಾಲಯವನ್ನೂ ಸ್ಥಳಾಂತರಿಸಲಾಗುವುದು ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ತಿಳಿಸಿದರು.

ಗೋವಿಂದ ಕಾರಜೋಳ

ಕೃಷ್ಣಾ ಭಾಗ್ಯ ಜಲನಿಗಮದ ಕಚೇರಿಯನ್ನು ಈಗಾಗಲೇ ಸ್ಥಳಾಂತರಿಸಲಾಗಿದೆ. ಆದರೆ, ದೈನಂದಿನ ಅತಿ ಮುಖ್ಯ ಕಾರ್ಯಗಳನ್ನು ನಿರ್ವಹಿಸಲು ಸಂಪರ್ಕ ಕಚೇರಿಯನ್ನು ಮುಂದುವರಿಸಲು ಕೃಷ್ಣಾ ಭಾಗ್ಯ ಜಲ ನಿಗಮದ ಕಚೇರಿಯನ್ನು ಮುಂದುವರಿಸಲು ಕೋರಿಕೆ ಸಲ್ಲಿಸಿದ್ದರು. ಆದರೆ, ವ್ಯವಸ್ಥಾಪಕ ನಿರ್ದೇಶಕರ ಕಚೇರಿಯನ್ನು ಸ್ಥಳಾಂತರಿಸುವುದು ಖಚಿತ ಎಂದರು.

ಸುದ್ದಿ 2 ನಿಮಿಷ

‘ಸಿಬ್ಬಂದಿ ವರ್ಗಾವಣೆ: ಆರು ತಿಂಗಳಲ್ಲಿ ನಿಯಮ ಬದಲು’

ಬೆಂಗಳೂರು: ‘ನಗರಾಭಿವೃದ್ಧಿ ಪ್ರಾಧಿಕಾರಗಳ ಸಿಬ್ಬಂದಿಯನ್ನು ಬೇರೆಡೆಗೆ ವರ್ಗಾವಣೆ ಮಾಡಲು ಅವಕಾಶವಾಗುವಂತೆ ‘ವೃಂದ ಮತ್ತು ನೇಮಕಾತಿ ನಿಯಮ’ ಬದಲಿಸಲು ಸಮಿತಿ ರಚಿಸಲಾಗುವುದು. ಆರು ತಿಂಗಳಲ್ಲಿ ನಿಯಮ ಬದಲಾವಣೆ ಮಾಡಲಾಗುವುದು’ ಎಂದು ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ್ ಭರವಸೆ ನೀಡಿದರು.

ವಿಧಾನಪರಿಷತ್‌ನಲ್ಲಿ ಬಿಜೆಪಿಯ ಆಯನೂರು ಮಂಜುನಾಥ್ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ‘ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಅಧಿಕಾರಿ ಮತ್ತು ಸಿಬ್ಬಂದಿ ಸ್ಥಳೀಯ ಪ್ರಾಧಿಕಾರದ ಸೇವೆಗೆ ನೇಮಕಾತಿ ಆಗಿರುತ್ತಾರೆ. ಹೀಗಾಗಿ, ಅವರನ್ನು ವರ್ಗಾವಣೆ ಮಾಡಲು ಸದ್ಯ ಇರುವ ನಿಯಮದಲ್ಲಿ ಅವಕಾಶವಿಲ್ಲ’ ಎಂದರು.

‘ಬಿಬಿಎಂಪಿ ಹೊರತುಪಡಿಸಿ ರಾಜ್ಯದ 10 ಪಾಲಿಕೆಗಳಲ್ಲಿ 2011ರಲ್ಲಿ ಏಕರೂಪ ವೃಂದ ಮತ್ತು ನೇಮಕಾತಿ ನಿಯಮ ರೂಪಿಸಲಾಗಿದೆ. ಪ್ರಾಧಿಕಾರ ಮತ್ತು ಪಾಲಿಕೆಗಳ ನಡುವೆ ಅಂತರ್ ವರ್ಗಾವಣೆಗೆ ಅವಕಾಶ ಇಲ್ಲ. ಮುಂದೆ ನಿಯಮಗಳನ್ನು ಬದಲಿಸಲಾಗುವುದು’ ಎಂದರು.

ಕಲ್ಯಾಣ ಕರ್ನಾಟಕ: 40 ಸಾವಿರ ಹುದ್ದೆಗಳು ಖಾಲಿ

ಬೆಂಗಳೂರು: ಕಲ್ಯಾಣ ಕರ್ನಾಟಕ ಭಾಗದಲ್ಲಿ 40 ಸಾವಿರ ಹುದ್ದೆಗಳು ಖಾಲಿ ಇದ್ದು ಅವುಗಳನ್ನು ಭರ್ತಿ ಮಾಡಬೇಕು ಎಂದು ಕಾಂಗ್ರೆಸ್‌ನ ಈಶ್ವರ ಖಂಡ್ರೆ ಒತ್ತಾಯಿಸಿದರು.

ವಿಧಾನಸಭೆಯಲ್ಲಿ ಬುಧವಾರ ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕೋವಿಡ್ ಹೆಸರಿನಲ್ಲಿ ನೇಮಕಾತಿ ನಿಲ್ಲಿಸಲಾಗಿತ್ತು. ನೇಮಕಾತಿಗೆ ಇದ್ದ ತಡೆಯನ್ನು ಇತ್ತೀಚೆಗೆ ತೆರವುಗೊಳಿಸಲಾಗಿದೆ. ಆದಷ್ಟು ಬೇಗ ನೇಮಕಾತಿ ಪ್ರಕ್ರಿಯೆಗೆ ಚಾಲನೆ ನೀಡಬೇಕು ಎಂದರು.

ಪ್ರಾಥಮಿಕ ಶಾಲೆಗಳಲ್ಲಿ 14,042, ಪ್ರೌಢಶಾಲೆಗಳಲ್ಲಿ 1,980 ಇವೆರಡೂ ಸೇರಿದರೆ ಒಟ್ಟು 16,022 ಶಿಕ್ಷಕರ ಹುದ್ದೆಗಳು ಖಾಲಿ ಉಳಿದಿವೆ. 15 ಸಾವಿರ ಭರ್ತಿ ಮಾಡಿದರೂ ಇನ್ನೂ 11 ಸಾವಿರ ಹುದ್ದೆಗಳು ಖಾಲಿ ಉಳಿಯುತ್ತವೆ. ಕಲಬುರಗಿ ವಿಶ್ವವಿದ್ಯಾಲಯದಲ್ಲಿ 969 ಹುದ್ದೆಗಳ ಪೈಕಿ ಕೇವಲ 273 ಮಾತ್ರ ಭರ್ತಿ ಮಾಡಿದ್ದು, ಶೇ 72 ರಷ್ಟು ಹುದ್ದೆಗಳು ಖಾಲಿ ಉಳಿದಿವೆ ಎಂದು ಖಂಡ್ರೆ ಹೇಳಿದರು.

ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ ರಚಿಸಲಾಯಿತು. ಮಂಡಳಿಯನ್ನು ದುರ್ಬಲಗೊಳಿಸಲು ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡುವ ಕಾಯ್ದೆಯನ್ನು ತರಲಾಯಿತು. ಈ ಮಂಡಳಿ ಈವರೆಗೆ ಒಂದೂ ಸಭೆಯನ್ನು ನಡೆಸಿಲ್ಲ. ಮಂಡಳಿಯನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ ಎಂದು ದೂರಿದರು.

ಕಾಮಗಾರಿಗಳನ್ನು ಸಮಯ ಬದ್ಧವಾಗಿ ಪೂರ್ಣಗೊಳಿಸಲು ತಿಂಗಳಿಗೆ ಒಮ್ಮೆಯಾದರೂ ಪರಿಶೀಲನಾ ಸಭೆಯನ್ನು ನಡೆಸಬೇಕು ಎಂದು ಖಂಡ್ರೆ ಸಲಹೆ ನೀಡಿದರು.

ನೀರಾವರಿ: ಸರ್ಕಾರದ ವಿರುದ್ಧ ಎಂ.ಬಿ.ಪಾಟೀಲ ವಾಗ್ದಾಳಿ

ಹೇಳಿದ್ದು ₹1.5 ಲಕ್ಷ ಕೋಟಿ, ಕೊಟ್ಟಿದ್ದು ₹60 ಸಾವಿರ ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಐದು ವರ್ಷಗಳಲ್ಲಿ ನೀರಾವರಿ ಯೋಜನೆಗಳಿಗೆ ₹1.5 ಲಕ್ಷ ಕೋಟಿ ಕೊಡುವುದಾಗಿ ಬಿಜೆಪಿ ಪ್ರಕಟಿಸಿತ್ತು. ಆದರೆ, ಕೊಟ್ಟಿರುವುದು ₹60 ಸಾವಿರ ಕೋಟಿ ಮಾತ್ರ. ಇದು ರಾಜ್ಯದ ಜನರಿಗೆ ಮಾಡುತ್ತಿರುವ ವಂಚನೆ’ ಎಂದು ಕಾಂಗ್ರೆಸ್‌ನ ಎಂ.ಬಿ. ಪಾಟೀಲ ವಾಗ್ದಾಳಿ ನಡೆಸಿದರು.

ಎಂ.ಬಿ. ಪಾಟೀಲ

ವಿಧಾನಸಭೆಯಲ್ಲಿ ಮಂಗಳವಾರ ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ‘ನೀರಾವರಿ ಯೋಜನೆಗಳ ಅನುಷ್ಠಾನಕ್ಕೆ ₹1.5 ಲಕ್ಷ ಕೋಟಿ ನೀಡಲಾಗುವುದು ಎಂದು ಬಿಜೆಪಿ ಪ್ರಣಾಳಿಕೆಯಲ್ಲಿ ಹೇಳಲಾಗಿದೆ. ಆಡಳಿತಕ್ಕೆ ಬಂದರೆ ₹1 ಲಕ್ಷ ಕೋಟಿ ಮೀಸಲಿಡುವುದಾಗಿ ಬಿ.ಎಸ್. ಯಡಿಯೂರಪ್ಪ ಹೇಳಿದ್ದರು. ಆದರೆ, ಈಗ ತಮ್ಮ ವೈಫಲ್ಯ ಮುಚ್ಚಿಕೊಳ್ಳಲು ಕಾಂಗ್ರೆಸ್ ಮೇಲೆ ಜಲಸಂಪನ್ಮೂಲ ಸಚಿವರು ಆರೋಪ ಮಾಡುತ್ತಿದ್ದಾರೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ನೀರಾವರಿ ಯೋಜನೆಗಳ ಅನುಷ್ಠಾನಕ್ಕೆ ₹65 ಸಾವಿರ ಕೋಟಿ ವೆಚ್ಚ ಮಾಡಲಾಗಿತ್ತು’ ಎಂದು ಹೇಳಿದರು. ಆಗ, ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ಆಕ್ಷೇಪ ವ್ಯಕ್ತಪ-ಡಿಸಿದರು.

> **ತಮ್ಮ ಸರ್ಕಾರದ ಸಾಧನೆ ಬಗ್ಗೆ ಸಿದ್ದರಾಮಯ್ಯ ಹೇಳಿಕೊಂಡಿದ್ದರು. ಎಲ್ಲರೂ ಹೀಗೆ ಮಾಡಿದರೆ ಸರಿಯಲ್ಲ. ಈಗಿನ ಬಜೆಟ್ ಬಗ್ಗೆ ಚರ್ಚಿಸಿ. ಗತಕಾಲದ ವೈಭವ ಇಲ್ಲಿ ಕೇಳಲು ಕೂತಿಲ್ಲ**
> **ಜೆ.ಸಿ. ಮಾಧುಸ್ವಾಮಿ**
> ಸಂಸದೀಯ ವ್ಯವಹಾರಗಳ ಸಚಿವ

ಕಾಂಗ್ರೆಸ್‌ನ ಕೆ.ಆರ್.ರಮೇಶ್ ಕುಮಾರ್, ‘ಬಜೆಟ್ ಮೇಲಿನ ಚರ್ಚೆಯಲ್ಲಿ ಇದೇ ವಿಷಯ ಮಾತನಾಡಬೇಕು ಎಂಬುದೇನೂ ಇಲ್ಲ. ಹಿಂದಿನ ಸರ್ಕಾರ ಹಾಗೂ ಈಗಿನ ಸರ್ಕಾರದ ಸಾಧನೆಗಳ ಹೋಲಿಕೆ ಮಾಡುತ್ತಿದ್ದಾರೆ’ ಎಂದು ಹೇಳಿದರು. ‘ಇಲಾಖಾವಾರು ಚರ್ಚೆ ವೇಳೆ ಅವರು ಈ ವಿಚಾರ ಮಾತನಾಡಲಿ’ ಎಂದು ಮಾಧುಸ್ವಾಮಿ ಸಲಹೆ ನೀಡಿದರು.

ರಮೇಶ್ ಕುಮಾರ್, ‘ಕುಮಾರಸ್ವಾಮಿ ಅವರು ಬಜೆಟ್‌ಗೆ ಸಂಬಂಧ ಇಲ್ಲದ ವಿಷಯದ ಬಗ್ಗೆ ಗಂಟೆ ಗಟ್ಟಲೆ ಮಾತನಾಡಿದರು. ಆಗ ಬಿಜೆಪಿ ಸದಸ್ಯರು ಆಕ್ಷೇಪ ಎತ್ತಲಿಲ್ಲ. ಈಗೇಕೆ ಭಾಷಣಕ್ಕೆ ಅಡ್ಡಿಪಡಿಸುತ್ತಿರುವುದು’ ಎಂದು ಪ್ರಶ್ನಿಸಿದರು.

ಬಳಿಕ ಮಾತು ಮುಂದುವರಿಸಿದ ಎಂ.ಬಿ.ಪಾಟೀಲ, ‘ಬ್ರಿಟಿಷರಿಗಿಂತ ಕಾಂಗ್ರೆಸ್‌ನವರು ಹೆಚ್ಚು ಮೋಸ ಮಾಡಿದ್ದಾರೆ ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಹೇಳಿದ್ದಾರೆ. ಬಿಜೆಪಿಯವರು ಮಾಡಿದ ಮೋಸಗಳನ್ನು ನಾನು ಬಿಚ್ಚಿಡುತ್ತಿದ್ದೇನೆ’ ಎಂದರು.

ಗೋವಿಂದ ಕಾರಜೋಳ ಆಕ್ಷೇಪ ವ್ಯಕ್ತಪಡಿಸಿ, ‘ಕಾಂಗ್ರೆಸ್ ನಡಿಗೆ ಕೃಷ್ಣೆ ಕಡೆಗೆ ಹೆಸರಿನಲ್ಲಿ ಕಾಂಗ್ರೆಸ್‌ನವರು ಪಾದಯಾತ್ರೆ ನಡೆಸಿದರು. ಕೃಷ್ಣಾ ಮೇಲ್ದಂಡೆ ಯೋಜನೆಗೆ ₹50 ಸಾವಿರ ಕೋಟಿ ಮೀಸಲಿಡುವುದಾಗಿ ಪ್ರಣಾ-ಳಿಕೆಯಲ್ಲಿ ಹೇಳಿದ್ದರು’ ಎಂದು ಪತ್ರಿಕಾ ತುಣುಕುಗಳನ್ನು ಪ್ರದರ್ಶಿಸಿದರು.

ಆಗ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ‘ನಾವು ನೀರಾವರಿ ಯೋಜನೆಗೆ ₹50 ಸಾವಿರ ಕೋಟಿ ಕೊಡುತ್ತೇವೆ ಎಂದು ಪ್ರಣಾಳಿಕೆಯಲ್ಲಿ ಹೇಳಿದ್ದೆವು. ನುಡಿದಂತೆ ನಡೆದಿದ್ದೇವೆ’ ಎಂದರು. ಕಾಂಗ್ರೆಸ್ ಸದಸ್ಯ ಜಿ.ಪರ-ಮೇಶ್ವರ ಧ್ವನಿಗೂಡಿಸಿದರು. ‘ನೀವು ಸುಳ್ಳು ಹೇಳಿದ್ದಕ್ಕೆ ಇಲ್ಲಿದೆ ಸಾಕ್ಷಿ’ ಎಂದು ಕಾರಜೋಳ ಪತ್ರಿಕಾ ತುಣುಕುಗಳನ್ನು ಮತ್ತೆ ಪ್ರದರ್ಶಿಸಿದರು. ‘ಅದು ನಮ್ಮ ಪ್ರಣಾಳಿಕೆಯಲ್ಲ. ಅದು ಪತ್ರಿಕಾ ತುಣುಕು’ ಎಂದು ಸಿದ್ದರಾಮಯ್ಯ ಹೇಳಿದರು. ‘ನೀವು ಹೇಳಿದ್ದನ್ನೇ ಅವರು ಬರೆದಿದ್ದಾರೆ’ ಎಂದು ಕಾರಜೋಳ ಸಮರ್ಥಿಸಿಕೊಂಡರು.

ನಷ್ಟದಲ್ಲಿ 21 ನಿಗಮ-ಮಂಡಳಿ, 1,003 ಪತ್ತಿನ ಸಂಘ : ಸಚಿವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಒಟ್ಟು 60 ನಿಗಮ-ಮಂಡಳಿಗಳಿದ್ದು, ಈ ಪೈಕಿ 34 ಲಾಭದಲ್ಲಿವೆ, 21 ನಷ್ಟದಲ್ಲಿವೆ’ ಎಂದು ಸಣ್ಣ ಕೈಗಾರಿಕೆ, ಸಾರ್ವಜನಿಕ ಉದ್ದಿಮೆಗಳ ಸಚಿವ ಎಂ.ಟಿ.ಬಿ. ನಾಗರಾಜ್ ತಿಳಿಸಿದರು.

ಕಾಂಗ್ರೆಸ್ಸಿನ ಕೆ. ಹರೀಶ್‌ಕುಮಾರ್ ಪ್ರಶ್ನೆಗೆ ಉತ್ತರಿಸಿದ ಅವರು, ‘ನಷ್ಟದ-ಲ್ಲಿರುವ ನಿಗಮಗಳ ಪೈಕಿ ಕರ್ನಾಟಕ ರಾಜ್ಯ ಜವಳಿ ಮೂಲಸೌಲಭ್ಯ ಅಭಿವೃದ್ಧಿ ನಿಗಮ, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ, ಕಾವೇರಿ ಹ್ಯಾಂಡ್ ಲೂಮ್ಸ್‌ಗಳನ್ನು ವಿಲೀನಗೊಳಿಸು-ವಂತೆ ಸಾರ್ವಜನಿಕ ಉದ್ಯಮಗಳ ಸಮಿತಿ ಶಿಫಾರಸು ನೀಡಿದೆ. ಈ ಕುರಿತಂತೆ ಜವಳಿ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯ-ಲ್ಲಿ ಇದೇ ಜ. 7ರಂದು ಸಮಿತಿ ರಚಿಸಲಾಗಿದೆ. ಸಾಧಕ ಬಾಧಕಗಳನ್ನು ಪರಿಶೀಲಿಸಿ ನಿರ್ಧಾರ ತೆಗೆದುಕೊಳ್ಳ-ಲಾಗುವುದು’ ಎಂದರು.

ಎಂ.ಟಿ.ಬಿ. ನಾಗರಾಜ್

ನಷ್ಟದಲ್ಲಿವೆ 1003 ಪತ್ತಿನ ಸಹಕಾರಿ ಸಂಘಗಳು: ‘ರಾಜ್ಯದಲ್ಲಿರುವ 5,783 ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳ ಪೈಕಿ 1,003 ನಷ್ಟದಲ್ಲಿವೆ ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಅವರು ಹೇಳಿದರು.

ಬಿಜೆಪಿಯ ಹಣಮಂತ ನಿರಾಣಿ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಪ್ರತಿ ಗ್ರಾಮ ಪಂಚಾಯಿತಿಗೆ ಒಂದರಂತೆ ಪ್ರಾಥಮಿಕ ಸಂಘ ಇರಬೇಕು ಎಂಬ ನಿಯಮವಿದೆ. ಹೊಸದಾಗಿ ನಿಯಮ ಬದಲಾವಣೆ ಮಾಡಿ, ಸಂಘ ಸ್ಥಾಪನೆಗೆ ಪ್ರತಿ ಐದು ಕಿಲೋ ಮೀಟರ್ ವ್ಯಾಪ್ತಿ ಹೊಂದಿರಬೇಕು, 600 ರೈತ ಕುಟುಂಬಗಳು ಇರಬೇಕು, 4 ಸಾವಿರ ಎಕರೆ ಸಾಗುವಳಿ ಭೂಮಿ ಹೊಂದಿರಬೇಕು ಎಂದು ತಿದ್ದುಪಡಿ ಮಾಡಲಾಗಿದೆ. ರಾಜ್ಯದಲ್ಲಿ 4,780 ಸಂಘಗಳು ಲಾಭದಲ್ಲಿವೆ’ ಎಂದು ವಿವರಿಸಿದರು.

ಸಿನಿಮಾ ವೀಕ್ಷಣೆಗೆ ಸದಸ್ಯರನ್ನು ಆಹ್ವಾನಿಸಿದ ಸಭಾಪತಿ

ಪರಿಷತ್‌ನಲ್ಲಿ ‘ದಿ ಕಾಶ್ಮೀರ್ ಫೈಲ್ಸ್’ ಸದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್ ಕಲಾಪ ಮಂಗಳವಾರ ಬೆಳಿಗ್ಗೆ ಆರಂಭವಾಗುತ್ತಿ-ದ್ದಂತೆ, ‘ದಿ ಕಾಶ್ಮೀರ್ ಫೈಲ್ಸ್’ ಸಿನಿಮಾ ವೀಕ್ಷಣೆಗೆ ಸದಸ್ಯರನ್ನು ಆಹ್ವಾನಿಸಿ ಸಭಾಪತಿ ಬಸವರಾಜ ಹೊರಟ್ಟಿ ಹೊರಡಿಸಿದ ಪ್ರಕಟಣೆ ಗದ್ದಲಕ್ಕೆ ಕಾರಣವಾಯಿತು.

ಸದನದಲ್ಲಿ ಮಾಡಿದ ಘೋಷಣೆ ವಾಪಸು ಪಡೆಯಬೇಕು ಎಂದು ಪಟ್ಟುಹಿಡಿದ ಕಾಂಗ್ರೆಸ್ ಸದಸ್ಯರು, ಸಭಾಪತಿ ಪೀಠದ ಎದುರು ಧರಣಿಗೆ ಮುಂದಾದರು.

‘ಕೆಲವರು ಸದನದಲ್ಲಿ ನೀಲಿಚಿತ್ರ ನೋಡಿದ್ದಾರೆ. ಹಾಗಾದರೆ, ನಾವೂ ನೀಲಿಚಿತ್ರ ನೋಡಬೇಕೇ? ಪೀಠದಿಂದ ಯಾಕೆ ಇದನ್ನು ಹೇಳಿಸ್ತೀರಾ? ಎಂದು ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ವಾಗ್ದಾಳಿ ನಡೆಸಿದರು.

ಕಾಂಗ್ರೆಸ್ ನಾಯಕ ಬಿ.ಕೆ ಹರಿಪ್ರಸಾದ್ ಮತ್ತು ಇತರೆ ಸದಸ್ಯರು ‘ದಿ ಕಾಶ್ಮೀರ್ ಫೈಲ್ಸ್’ ಸಿನಿಮಾವನ್ನು ವಿರೋಧಿಸಿ ಪರಿಷತ್ತಿನಲ್ಲಿ ಮಂಗಳವಾರ ಪ್ರತಿಭಟಿಸಿದರು —ಪ್ರಜಾವಾಣಿ ಚಿತ್ರ

ಆಗ ಸಭಾಪತಿ, ‘ಸರ್ಕಾರ ಕಳುಹಿಸಿದ ಪ್ರಕಟಣೆಯನ್ನು ನಾನು ಓದಿದ್ದೇನೆ. ಇಷ್ಟ ಇದ್ದವರು ಹೋಗಿ ಇಲ್ಲದವರು ಬಿಡಿ’ ಎಂದರು.

ಹರಿಪ್ರಸಾದ್ ಮಾತನಾಡಿ, ‘ಸಭಾಪತಿ ನಿಷ್ಪಕ್ಷಪಾತ ಆಗಿರಬೇಕು. ಈ ಪ್ರಕಟಣೆ ನೀವು ಯಾಕೆ ಹೊರಡಿಸುತ್ತೀರಿ’ ಎಂದಾಗ, ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ, ‘ಹರಿಪ್ರಸಾದ್ ತಾಳ್ಮೆ ಕಳೆದುಕೊಳ್ಳಬೇಡಿ’ ಎಂದರು. ಗದ್ದಲ ಕಡಿಮೆಯಾಗದ ಕಾರಣ ಕಲಾಪವನ್ನು ಸಭಾಪತಿ 10 ನಿಮಿಷ ಮುಂದೂಡಲಾಯಿತು.

ಕಲಾಪ ಮತ್ತೆ ಆರಂಭವಾದಾಗ ಕೋಟ ಶ್ರೀನಿವಾಸ ಪೂಜಾರಿ, ‘ಕಾಶ್ಮೀರಿ ಪಂಡಿತರ ಕುರಿತ ಸಿನಿಮಾ ಇದು. ಇಷ್ಟ ಇದ್ದವರು ನೋಡಬಹುದು. ಇಲ್ಲದವರು ಸುಮ್ಮನಿರಬಹುದು’ ಎಂದು ಅವರು ಹೇಳಿದರು.

ಹರಿಪ್ರಸಾದ್ ಮಾತನಾಡಿ, ‘ಆ ಸಿನಿಮಾದಲ್ಲಿ ಬರೀ ಸುಳ್ಳಿದೆ. ಅಲ್ಲಿ 89 ಜನ ಮಾತ್ರ ಸತ್ತಿರುವುದು. ಆದರೆ, ಸಿನಿಮಾದಲ್ಲಿ ಸಾವಿರಾರು ಮಂದಿ ಸತ್ತಂತೆ ತೋರಿಸಿದ್ದಾರೆ’ ಎಂದರು.

ಮಧ್ಯಪ್ರವೇಶಿಸಿದ ಸಭಾಪತಿ ಪರಿಸ್ಥಿತಿ ತಿಳಿಗೊಳಿಸಿದರು.

‘ಜೈ ಭೀಮ್’ ಪ್ರದರ್ಶನಕ್ಕೂ ವ್ಯವಸ್ಥೆ ಮಾಡಿ

ಬೆಂಗಳೂರು: ‘ಜೈ ಭೀಮ್’ ಚಿತ್ರದ ಉಚಿತ ಪ್ರದರ್ಶನಕ್ಕೂ ವಿಧಾನಸಭಾಧ್ಯಕ್ಷರು ವ್ಯವಸ್ಥೆ ಮಾಡಬೇಕು ಎಂದು ಕಾಂಗ್ರೆಸ್ ಸದಸ್ಯರು ಒತ್ತಾಯಿಸಿದರು.

ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ವಿಧಾನಸಭಾ ಕಲಾಪವನ್ನು ಮುಂದೂಡಿದ ಬಳಿಕ ‘ದಿ ಕಾಶ್ಮೀರ್ ಫೈಲ್ಸ್’ ಚಿತ್ರ ವೀಕ್ಷಣೆಗೆ ಬರುವಂತೆ ಕಾಂಗ್ರೆಸ್ ಸದಸ್ಯರನ್ನು ವಿನಂತಿಸಿದರು.

ಆಗ ಕಾಂಗ್ರೆಸ್‌ನ ಕೆಲವು ಸದಸ್ಯರು, ‘ನಾವು ಬರುವುದಿಲ್ಲ’ ಎಂದರು.

‘ಜೈ ಭೀಮ್’ ಚಿತ್ರ ವೀಕ್ಷಣೆಗೆ ವ್ಯವಸ್ಥೆ ಮಾಡಿಸಿ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕಾಂಗ್ರೆಸ್ ಸದಸ್ಯ ಜಿ.ಪರಮೇಶ್ವರ ಒತ್ತಾಯಿಸಿದರು. ಅದಕ್ಕೆ ಸಭಾಧ್ಯಕ್ಷರು ಪ್ರತಿಕ್ರಿಯಿಸಲಿಲ್ಲ.

‘ಮಾಹಿತಿ ನೀಡಿದರೆ ಕ್ರಮ’

ಬೆಂಗಳೂರು: ‘ವಾಣಿಜ್ಯ ಕಟ್ಟಡಗಳ ಮಾಲೀಕರು ತೆರಿಗೆ ಪಾವತಿ ಮಾಡದೆ ವಂಚನೆ ಮಾಡಿರುವ ಬಗ್ಗೆ ಮಾಹಿತಿ ನೀಡಿದರೆ ಕ್ರಮ ತೆಗೆದುಕೊಳ್ಳುವು-ದಾಗಿ ಪೌರಾಡಳಿ ಸಚಿವ ಎಂ.ಟಿ.ಬಿ. ನಾಗರಾಜ್ ಅವರು ಬಿಜೆಪಿ ಸದಸ್ಯ ತುಳಸಿ ಮುನಿರಾಜುಗೌಡಗೆ ತಿಳಿಸಿದರು.

ರಥೋತ್ಸವ ಬಳ್ಳಾರಿಯಲ್ಲಿ ಮಂಗಳವಾರ ಕನಕದುರ್ಗಮ್ಮ ಸಿಡಿಬಂಡಿ ರಥೋತ್ಸವ ಅದ್ದೂರಿಯಾಗಿ ನಡೆಯಿತು. ಸಾವಿರಾರು ಭಕ್ತರು ದೇವಿಗೆ ಭಕ್ತಿ, ಗೌರವ ಸಮರ್ಪಿಸಿದರು

‘ಪ್ರಭಾರಿಗಳ ದರ್ಬಾರು ನಿಯಂತ್ರಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆರೋಗ್ಯ ಇಲಾಖೆಯಲ್ಲಿ ಪ್ರಭಾರಿಗಳ ದರ್ಬಾರು ನಡೆಯುತ್ತಿದೆ. ಸರ್ಕಾರಿ ವೈದ್ಯಕೀಯ ಕಾಲೇಜುಗಳು, ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕರ ಹುದ್ದೆಗಳಿಗೆ ಸೇವಾ ಹಿರಿತನ, ಅರ್ಹತೆಯ ಆಧಾರದಲ್ಲಿ ನೇಮಕ ನಡೆಯುತ್ತಿಲ್ಲ’ ಎಂದು ವಿಧಾನ ಪರಿಷತ್‌ನಲ್ಲಿ ಜೆಡಿಎಸ್ ಸದಸ್ಯ ಮರಿತಿಬ್ಬೇಗೌಡ ಆರೋಪಿಸಿದರು.

ಮಂಗಳವಾರ ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ‘14 ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಮೂರು ವರ್ಷಗಳಿಂದ ಪ್ರಭಾರಿ ನಿರ್ದೇಶಕರೇ ಇದ್ದಾರೆ. ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಕೂಡ ಇದೇ ಸ್ಥಿತಿ ಇದೆ. ಆರು ತಿಂಗಳಿಗೊಮ್ಮೆ ಇಸ್ಕೊಂಡು, ಇಸ್ಕೊಂಡು ನೇಮಕಾತಿ ನವೀಕರಣ ಮಾಡುತ್ತಿದ್ದಾರೆ’ ಎಂದರು.

‘ಸರ್ಕಾರಿ ವೈದ್ಯಕೀಯ ಕಾಲೇಜುಗಳ ಬೋಧಕರ ಹುದ್ದೆಗೆ 2021ರ ಮಾರ್ಚ್‌ನಲ್ಲಿ ವಾಕ್ ಇನ್ ಸಂದರ್ಶನ ನಡೆಸಲಾಗಿತ್ತು. ಈವರೆಗೂ ನೇಮಕಾತಿ ಆದೇಶ ನೀಡಿಲ್ಲ. ವಾಕ್ ಇನ್ ಸಂದರ್ಶನದ ಅರ್ಥವೇನು? ಆಯ್ಕೆಯಾದವರು ಮಂತ್ರಿಗಳನ್ನು ಬಂದು ವೈಯಕ್ತಿಕವಾಗಿ ನೋಡಬೇಕಿತ್ತೆ’ ಎಂದು ಪ್ರಶ್ನಿಸಿದರು.

> **ಮನೆ ಬಾಗಿಲಿಗೆ ಕಂದಾಯ ದಾಖಲೆ ಯೋಜನೆ ಹೆಸರಿನಲ್ಲಿ ಪಹಣಿ ಪತ್ರವನ್ನು ಲಕೋಟೆಯಲ್ಲಿ ಹಾಕಿ ಅದರ ಮೇಲೆ ಪ್ರಧಾನಿ, ಮುಖ್ಯಮಂತ್ರಿ ಭಾವಚಿತ್ರ ಹಾಕಿ ಪುಕ್ಕಟೆ ಪ್ರಚಾರ ಪಡೆಯಲಾಗುತ್ತಿದೆ.**
> **ಮರಿತಿಬ್ಬೇಗೌಡ**
> ವಿಧಾನ ಪರಿಷತ್‌ನ ಜೆಡಿಎಸ್ ಸದಸ್ಯ

ಮೈಸೂರು ವೈದ್ಯಕೀಯ ಕಾಲೇಜಿನ ಶತಮಾನೋತ್ಸವ ಆಚರಣೆ ನಡೆಯುತ್ತಿದೆ. ಕಟ್ಟಡಗಳಿಗೆ ಸುಣ್ಣ ಬಣ್ಣ ಬಳಿಯಲು ₹ 89 ಕೋಟಿ ಒದಗಿಸಲಾಗಿದೆ. 100 ವರ್ಷಗಳ ಇತಿಹಾಸವಿರುವ ವೈದ್ಯಕೀಯ ಕಾಲೇಜಿನಲ್ಲಿ ಸೀಟುಗಳ ಸಂಖ್ಯೆ 150ರಲ್ಲೇ ಇದೆ. ಅದನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಕುಲಪತಿಗಳ ನೇಮಕಕ್ಕೆ ಸೀಮಿತ: ‘ಈ ಬಜೆಟ್‌ನಲ್ಲಿ ಏಳು ಹೊಸ ವಿಶ್ವವಿದ್ಯಾಲಯಗಳನ್ನು ಆರಂಭ ಮಾಡುವ ಘೋಷಣೆ ಇದೆ. ವಾರ್ಷಿಕ ತಲಾ ₹ 2 ಕೋಟಿ ಅನುದಾನದ ಭರವಸೆ ನೀಡಲಾಗಿದೆ. ಈ ವಿಶ್ವವಿದ್ಯಾಲಯಗಳು ಏಳು ಮಂದಿ ಕುಲಪತಿಗಳು, ಕುಲ ಸಚಿವರ ನೇಮಕಕ್ಕೆ ಸೀಮಿತವಾಗಲಿವೆ’ ಎಂದು ಮರಿತಿಬ್ಬೇಗೌಡ ಹೇಳಿದರು.

ಉನ್ನತ ಶಿಕ್ಷಣ ಇಲಾಖೆಯಲ್ಲಿ 20,000 ಹುದ್ದೆಗಳು ಖಾಲಿ ಇವೆ. ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ 35,000 ಹುದ್ದೆಗಳು ಖಾಲಿ ಇವೆ. 7,000 ಅತಿಥಿ ಉಪನ್ಯಾಸಕರು ಬೀದಿಗೆ ಬಿದ್ದಿದ್ದಾರೆ. ಈ ಸಮಸ್ಯೆಗಳ ಪರಿಹಾರಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

‘ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಎಲ್ಲ ಅಧಿಕಾರವನ್ನೂ ಅಧಿಕಾರಿಗಳ ಕೈಗೆ ಕೊಟ್ಟು ಓಡಾಡುತ್ತಿದ್ದಾರೆ. ಅವರಿಂದ ಯಾವ ಕೆಲಸವೂ ಆಗುವುದಿಲ್ಲ’ ಎಂದು ಟೀಕಿಸಿದರು.

ಕೊಡಗು ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ವಿಶೇಷ ಪ್ಯಾಕೇಜ್ ನೀಡುವಂತೆ ಕಾಂಗ್ರೆಸ್‌ನ ವೀಣಾ ಅಚ್ಚಯ್ಯ ಆಗ್ರಹಿಸಿದರು.

‘ಈ ಬಜೆಟ್ ಪ್ರಾದೇಶಿಕ, ಸಾಮಾಜಿಕ ಮತ್ತು ಕ್ಷೇತ್ರವಾರು ಸಮತೋಲನದಿಂದ ಕೂಡಿದೆ’ ಎಂದು ಬಿಜೆಪಿಯ ಡಿ.ಎಸ್. ಅರುಣ್ ಹೇಳಿದರು.

ಜನಾಂದೋಲನ ಮಹಾಮೈತ್ರಿಯ ಜನಜಾಗೃತಿ ಜಾಥಾ

ಭೂಮಿ ರೈತರ ಅಸ್ಮಿತೆ ಪ್ರಶ್ನೆ: ನ್ಯಾ.ನಾಗಮೋಹನದಾಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ಕಾಯ್ದೆ ವಾಪಸ್ ಪಡೆದು ಕೃಷಿ ಉತ್ಪನ್ನಗಳಿಗೆ ಶಾಸನಬದ್ಧ ಕನಿಷ್ಠ ಬೆಂಬಲ ಬೆಲೆ ನಿಗದಿಗೆ ಒತ್ತಾಯಿಸಿ ಜನಾಂದೋಲನ ಮಹಾಮೈತ್ರಿ (ಜೆಎಂಎಂ) ಹಮ್ಮಿಕೊಂಡಿದ್ದ ಜನಜಾಗೃತಿ ಜಾಥಾಗಳು ರಾಜಧಾನಿ ತಲುಪಿದವು.

ಬೀದರ್ ಜಿಲ್ಲೆಯ ಬಸವ ಕಲ್ಯಾಣ, ಶಿವಮೊಗ್ಗ ಜಿಲ್ಲೆಯ ಕಾಗೋಡು ಮತ್ತು ಚಾಮರಾಜನಗರ ಜಿಲ್ಲೆಯ ಮಹದೇ-ಶ್ವರಬೆಟ್ಟದಿಂದ ಹೊರಟಿದ್ದ ಜಾಥಾಗಳು ಮಂಗಳವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಸಮಾವೇಶಗೊಂಡವು.

ಸಮಾವೇಶ ಉದ್ಘಾಟಿಸಿದ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್, ‘ಸರ್ಕಾರದ ನೀತಿಗಳಿಂದಾಗಿ ರೈತರು ಆರ್ಥಿಕವಾಗಿ ದಿವಾಳಿ ಆಗುವ ಸ್ಥಿತಿ ಬಂದಿದೆ. ಮಕ್ಕಳನ್ನು ಓದಿಸಲು ಸಾಧ್ಯವಾಗುತ್ತಿಲ್ಲ. ಓದಿದವರಿಗೆ ಉದ್ಯೋಗ ಸಿಗದೆ ಮೀಸಲಾತಿ ಕಡೆ ನೋಡುವಂತಾಗಿದೆ. ಮೀಸಲಾತಿ ನೀಡಬಾರದು ಎಂಬುದು ನನ್ನ ಮಾತಿನ ಅರ್ಥವಲ್ಲ, ಮೀಸಲಾತಿ ಕೃಷಿ ಬಿಕ್ಕಟ್ಟಿಗೆ ಪರಿಹಾರವಲ್ಲ. ರೈತರಿಗೆ ತಮ್ಮ ಕೃಷಿ ಭೂಮಿ ಉಳಿಯಬೇಕು. ಅವರು ಬೆಳೆದ ಬೆಳೆಗೆ ನ್ಯಾಯಯುತ ಬೆಲೆ ಸಿಗಬೇಕು’ ಎಂದರು.

ಜನಜಾಗೃತಿ ಜಾಥಾಗಳ ಸಮಾವೇಶವನ್ನು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ತಮಟೆ ಬಾರಿಸುವ ಮೂಲಕ ಉದ್ಘಾಟಿಸಿದರು. ಡಾ. ಸುನೀಲಂ, ಎಸ್.ಆರ್.ಹಿರೇಮಠ, ಸ್ವರ್ಣ ಭಟ್, ಕರ್ನಾಟಕ ರಾಜ್ಯ ರೈತ ಸಂಘ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ಕರ್ನಾಟಕ ಪ್ರಾಂತ ರೈತ ಸಂಘ ಅಧ್ಯಕ್ಷ ಜಿ.ಸಿ. ಬಯ್ಯಾರೆಡ್ಡಿ ಇದ್ದರು —ಪ್ರಜಾವಾಣಿ ಚಿತ್ರ

‘ಕಾಫಿ ಬೆಳೆಗಾರರ ಈಗಿನ ಸ್ಥಿತಿ ನೋಡಿದರೆ ಎಪಿಎಂಸಿ ಕಾಯ್ದೆ ತಿದ್ದುಪಡಿಯಿಂದ ಮುಂದೆ ಆಗಲಿರುವ ಅನಾಹುತವನ್ನು ಊಹಿಸಬಹುದು. ಕಾಫಿ ಬೀಜ ಮಾರಾಟವು ಕಾಫಿ ಮಂಡಳಿಯ ನಿಯಂತ್ರಣದಿಂದ ಹೊರಗುಳಿದ ಬಳಿಕ ಬೆಲೆ ಏರಿಕೆಯ ಬದಲು ಇಳಿಕೆಯಾಗುತ್ತಿದೆ. ಎಪಿಎಂಸಿಯನ್ನೇ ತೆಗೆದು ಹಾಕಿದರೆ ಬೇರೆ ಕೃಷಿ ಉತ್ಪನ್ನಗಳ ಬೆಲೆಯೂ ಇದೇ ರೀತಿ ಆಗಲಿದೆ. ರೈತರು ಬೀದಿಗೆ ಬೀಳಲಿದ್ದಾರೆ’ ಎಂದು ಹೇಳಿದರು.

‘ಭೂಸುಧಾರಣಾ ಕಾಯ್ದೆಗೆ ರಾಜ್ಯ ಸರ್ಕಾರ ತಿದ್ದುಪಡಿ ತಂದಿದೆ. ಆ ಮೂಲಕ ಕೃಷಿ ಭೂಮಿಯನ್ನು ದೊಡ್ಡ ದೊಡ್ಡ ಕಂಪನಿಗಳು ಖರೀದಿ ಮಾಡಲು ಅನುವು ಮಾಡಿದಂತಾಗಿದೆ. ಮುಂದೊಂದು ದಿನ ಕೃಷಿ ಭೂಮಿಯೂ ಇರುವುದಿಲ್ಲ, ರೈತರು ಇರುವುದಿಲ್ಲ, ರೈತರ ಹೋರಾಟಗಳು ಇರುವುದಿಲ್ಲ. ಆ ಸ್ಥಿತಿಗೆ ದೇಶವನ್ನು ಕೊಂಡೊಯ್ಯುವ ಪ್ರಯತ್ನವೇ ಈ ತಿದ್ದುಪಡಿ ಕಾಯ್ದೆಗಳು’ ಎಂದು ವಿಶ್ಲೇಷಿಸಿದರು.

‘ಭೂಮಿ ಎಂಬುದು ಈ ದೇಶದಲ್ಲಿ ಕೇವಲ ಆರ್ಥಿಕ ಪ್ರಶ್ನೆಯಲ್ಲ. ಸಾಮಾಜಿಕ, ಸಾಂಸ್ಕೃತಿಕ ಮತ್ತು ರೈತರ ಅಸ್ಮಿತೆಯ ಪ್ರಶ್ನೆ. ಕೃಷಿ ಜಮೀನು ಇಲ್ಲದಿದ್ದರೆ ಆ ಮನೆಗೆ ಹೆಣ್ಣು ಕೊಡಲು ಹಿಂಜರಿಯುತ್ತಾರೆ. ಕೃಷಿ ಭೂಮಿಗೂ ಮದುವೆಗೂ ಸಂಬಂಧ ಇದೆ. ಕೋರ್ಟ್‌ನಲ್ಲಿ ಜಾಮೀನು ಪಡೆಯಲು ಕೃಷಿ ಭೂಮಿ ಬೇಕು. ಬ್ಯಾಂಕ್‌ನಲ್ಲಿ ಸಾಲ ಪಡೆಯಲು ಭೂಮಿ ಇರಲೇಬೇಕು. ಇದೆಲ್ಲವೂ ಸರ್ಕಾರಕ್ಕೆ ಅರ್ಥವೇ ಆಗಿಲ್ಲ’ ಎಂದರು.

ಮಧ್ಯ ಪ್ರದೇಶದ ಕಿಸಾನ್ ಸಂಘರ್ಷ ಸಮಿತಿ ಅಧ್ಯಕ್ಷ ಡಾ.ಸುನೀಲಂ, ‘ಜಾನುವಾರು ಹತ್ಯೆ ನಿಷೇಧ ಕಾಯ್ದೆ ನಮ್ಮ ರಾಜ್ಯದಲ್ಲಿ ಜಾರಿಗೆ ಬಂದು ಹಲವು ವರ್ಷಗಳೇ ಆಗಿವೆ. ಅಲ್ಲಿನ ಬಿಡಾಡಿ ದನಗಳಿಂದ ಫಸಲು ರಕ್ಷಣೆ ಮಾಡಿಕೊಳ್ಳುವುದೇ ರೈತರಿಗೆ ದೊಡ್ಡ ಕೆಲಸವಾಗಿದೆ. ಆ ಸ್ಥಿತಿ ಕರ್ನಾಟಕಕ್ಕೂ ಬರಲಿದೆ’ ಎಂದು ಆತಂಕ ವ್ಯಕ್ತಪಡಿ-ಸಿದರು.

ಕನಿಷ್ಠ ಬೆಂಬಲ ಬೆಲೆ ಕಾನೂನುಬ-ದ್ಧಗೊಳಿಸಲು ಒತ್ತಾಯಿಸಿ ಏ.11ರಿಂದ 17ರವರೆಗೆ ದೇಶದಾದ್ಯಂತ ಹೋರಾಟ ರೂಪಿಸಲಾಗಿದೆ. ರಾಜ್ಯದಲ್ಲೂ ಹೋರಾಟಗಳನ್ನು ಮುನ್ನಡೆಸಬೇಕು ಎಂದು ತಿಳಿಸಿದರು. ಜನಾಂದೋಲನಗಳ ಮಹಾಮೈತ್ರಿ ಸಂಚಾಲಕ ಎಸ್.ಆರ್. ಹಿರೇಮಠ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ವಿಧಾನಸಭೆಯಲ್ಲಿ ಬಿಜೆಪಿಯ ರಾಜುಗೌಡ ವ್ಯಂಗ್ಯ

ಖಾಲಿ ಕುರ್ಚಿಯಲ್ಲಿ ಕುಳಿತವನೇ ಸಚಿವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಧಾನಸಭೆಯಲ್ಲಿ ಹಲವು ಸಚಿವರ ಕುರ್ಚಿಗಳು ಖಾಲಿ ಇರುತ್ತವೆ. ಸಚಿವರು ಸದನಕ್ಕೆ ಬರುವುದಿಲ್ಲ ಎಂದು ಆಗಾಗ ಆಕ್ಷೇಪ ವ್ಯಕ್ತವಾಗು-ತ್ತಿದೆ. ಈ ಸಮಸ್ಯೆ ಬಗೆಹರಿಸಲು ಖಾಲಿ ಕುರ್ಚಿಯಲ್ಲಿ ಕುಳಿತವರೇ ಸಚಿವರು ಎಂದು ನಿಯಮಕ್ಕೆ ತಿದ್ದುಪಡಿ ತರಬೇಕು’ ಎಂದು ಬಿಜೆಪಿಯ ರಾಜು ಗೌಡ ವ್ಯಂಗ್ಯವಾಗಿ ಸಲಹೆ ನೀಡಿದರು.

ವಿಧಾನಸಭೆಯಲ್ಲಿ ಮಂಗಳವಾರ ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ‘ಹಲವು ಸದಸ್ಯರಿಗೆ ಸಚಿವರಾಗಬೇಕು ಎಂಬ ಆಕಾಂಕ್ಷೆ ಇದೆ. ಇನ್ನೊಂದೆಡೆ, ಕುರ್ಚಿಯೂ ಖಾಲಿ ಇರುತ್ತದೆ. ನಿಯಮಕ್ಕೆ ತಿದ್ದುಪಡಿ ತಂದರೆ ಸದಸ್ಯರ ಆಕಾಂಕ್ಷೆಯೂ ಈಡೇರುತ್ತದೆ. ಸಚಿವರ ಸಾಲು ಖಾಲಿ ಇರುವುದಿಲ್ಲ’ ಎಂದರು.

‘ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಆಗ್ರಹಿಸಿ ಕಾಂಗ್ರೆಸ್‌ನವರು ಪಾದಯಾತ್ರೆ ನಡೆಸಿದರು. ಈ ಯೋಜನೆ ಅನುಷ್ಠಾನಕ್ಕೆ ಮುಖ್ಯಮಂತ್ರಿಯವರು ₹1 ಸಾವಿರ ಕೋಟಿ ನೀಡುವುದಾಗಿ ಹೇಳಿದ್ದಾರೆ. ಹೀಗಾಗಿ, ಕಾಂಗ್ರೆಸ್‌ನವರು ಬೆಂಗಳೂರಿನಿಂದ ವಾಪಸ್ ಪಾದಯಾತ್ರೆ ನಡೆಸಬೇಕಿದೆ’ ಎಂದು ವ್ಯಂಗ್ಯವಾಗಿ ಹೇಳಿದರು.

ಆಗ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ‘ಕೇಂದ್ರ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಏನು ಹೇಳಿದ್ದಾರೆ ಎಂಬುದು ಗೊತ್ತಾ’ ಎಂದು ಪ್ರಶ್ನಿಸಿದರು.

ಆಗ ರಾಜು ಗೌಡ ‘ಗೊತ್ತಿಲ್ಲ’ ಎಂದು ತಲೆಯಾಡಿಸಿದರು. ‘ರಾಜು ಗೌಡರಿಗೆ ಶೇಖಾವತ್ ಯಾರೆಂದೇ ಗೊತ್ತಿಲ್ಲ’ ಎಂದು ಕಾಂಗ್ರೆಸ್ ಸದಸ್ಯರು ಕಾಲೆಳೆದರು. ‘ಮಾತುಕತೆಯ ಮೂಲಕವೇ ಮೇಕೆದಾಟು ವಿವಾದ ಇತ್ಯರ್ಥ ಮಾಡಿಕೊಳ್ಳಬೇಕು ಎಂದು ಸಚಿವರು ಸಲಹೆ ನೀಡಿದ್ದಾರೆ. ಇದರ ಅರ್ಥ ಪರಿಸರ ಅನುಮತಿ ನೀಡುವುದಿಲ್ಲ ಎಂದು. ಇಂತಹ ಪರಿಸ್ಥಿತಿಯಲ್ಲಿ ಯೋಜನೆಯನ್ನು ಯಾವ ರೀತಿಯಲ್ಲಿ ಅನುಷ್ಠಾನ ಮಾಡುತ್ತೀರಿ’ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ಮುಖ್ಯಮಂತ್ರಿಯವರು ಯೋಜನೆ ಅನುಷ್ಠಾನ ಮಾಡುತ್ತಾರೆ ಎಂದು ರಾಜು ಗೌಡ ಹೇಳಿದರು.



EXAM DH ಪ್ರಜಾವಾಣಿ MASTERMIND™

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹599 ₹399ಕ್ಕೆ ಮಾತ್ರ

ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ

ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ

www.exammastermind.comಗೆ ಭೇಟಿ ಕೊಡಿ

ತೈಲೋತ್ಪಾದನೆಗೆ ದೇಸಿ ರಿಗ್

ಹೈದರಾಬಾದ್‌ನ ಎಂಇಐಎಲ್ ಕಂಪನಿ ತೈಲ ಬಾವಿ ಕೊರೆಯುವ ಅತ್ಯಾಧುನಿಕ ಯಂತ್ರ (ರಿಗ್) ಅಭಿವೃದ್ಧಿ ಪಡಿಸಿದೆ. ಇಟಲಿಯ 'ಡ್ರಿಲ್ ಮೆಕ್' ತಂತ್ರಜ್ಞಾನದ ಸಹಯೋಗದೊಂದಿಗೆ ಅಭಿವೃದ್ಧಿಪಡಿಸಿರುವ ಈ ಯಂತ್ರವನ್ನು ಒಎನ್‌ಜಿಸಿ ಸಂಸ್ಥೆಗೆ ಹಸ್ತಾಂತರಿಸಲು ಸಿದ್ಧತೆ ನಡೆಸಿದೆ.

ಗಾಣಧಾಳು ಶ್ರೀಕಂಠ

ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಉತ್ಪಾದನಾ ಕ್ಷೇತ್ರದ ಬೆಳವಣಿಗೆಗಳು, ಅದರ ಪರಿಣಾಮಗಳು ಗೊತ್ತೇ ಇವೆಯಲ್ಲ? ಈ ಸಂದರ್ಭದಲ್ಲಿ ದೇಶದ ತೈಲ ಬಾವಿಗಳ ತೋಡುವಿಕೆ ತಂತ್ರಜ್ಞಾನದಲ್ಲೂ ಸ್ವಾವಲಂಬನೆ ಸಾಧಿಸುವ ಮಹತ್ತರ ಪ್ರಯತ್ನವೊಂದು ನಡೆದು ಯಶಸ್ವಿಯಾಗಿದೆ. ಇದರಿಂದ ತೈಲ ನಿಕ್ಷೇಪಗಳಲ್ಲಿ ಬಾವಿ ತೋಡುವಿಕೆಯ ವೇಗವರ್ಧನೆ, ಉತ್ಪಾದನಾ ಕ್ಷಮತೆಯಲ್ಲಿ ಸುಧಾರಣೆಯಾಗಲಿದೆ.

ಈ ಪ್ರಯತ್ನ ಮಾಡಿದ್ದು, ಹೈದರಾಬಾದ್‌ನ ಮೆಘಾ ಎಂಜಿನಿಯರಿಂಗ್ ಆ್ಯಂಡ್ ಇನ್‌ಫ್ರಾಸ್ಟ್ರಕ್ಚರ್ ಕಂಪನಿ (ಎಂಇಐಎಲ್). ಸರಳವಾಗಿ ಹೇಳಬೇಕೆಂದರೆ ಇವರು ತಯಾರಿಸಿದ್ದು ತೈಲಬಾವಿ ತೋಡುವ ಯಂತ್ರ. ತಾಂತ್ರಿಕವಾಗಿ ಇದನ್ನು 'ರಿಗ್' ಎಂದು ಕರೆಯುತ್ತಾರೆ.

ಹೈಟೆಕ್ ತಂತ್ರಜ್ಞಾನ

ಈ ರಿಗ್‌ಗೆ 6 ಸಾವಿರ ಮೀಟರ್(6 ಕಿ.ಮೀ.) ಭೂಮಿಯ ಆಳದವರೆಗೂ ಕೊರೆಯುವ ಸಾಮರ್ಥ್ಯವಿದೆ. 2000 ಎಚ್.ಪಿ. ಸಾಮರ್ಥ್ಯದ ಅತ್ಯಾಧುನಿಕ ತಂತ್ರಜ್ಞಾನದ ಈ ರಿಗ್, ಪ್ರಸ್ತುತ ಇಂಧನ ಕ್ಷೇತ್ರದಲ್ಲಿ ಬಳಕೆಯಲ್ಲಿರುವ ಸಾಂಪ್ರದಾಯಿಕ ವಿನ್ಯಾಸದ 3000 ಎಚ್.ಪಿ. ರಿಗ್‌ಗೆ ಸಮನಾಗಿದೆ.

ಹೈಡ್ರಾಲಿಕ್, ರೊಬೊಟಿಕ್‌ನಂತಹ ಹೈಟೆಕ್ ತಂತ್ರಜ್ಞಾನಗಳೊಂದಿಗೆ ಯಂತ್ರ ನಿರ್ಮಿಸಲಾಗಿದ್ದು, ಸ್ವಯಂ ಚಾಲಿತವಾಗಿ ಈ ಯಂತ್ರ ಕಾರ್ಯನಿರ್ವಹಿಸುತ್ತದೆ. ಎಲ್ಲ ಚಟುವಟಿಕೆಗಳನ್ನೂ ದೂರದಿಂದಲೇ ನಿಯಂತ್ರಿಸಬಹುದಾಗಿದೆ. ಯಂತ್ರದ ನಿರ್ವಹಣೆಗೆ ಒಬ್ಬ ವ್ಯಕ್ತಿ ಸಾಕು. ಅಮೆರಿಕನ್ ಪೆಟ್ರೋಲಿಯಂ ಇನ್‌ಸ್ಟಿಟ್ಯೂಟ್‌ನ ಮಾನದಂಡಗಳಿಗೆ ಅನುಸಾರವಾಗಿ ಈ ಯಂತ್ರವನ್ನು ಅಭಿವೃದ್ಧಿಪಡಿಸಲಾಗಿದೆ. ಒಂದೆಡೆಯಿಂದ ಇನ್ನೊಂದೆಡೆಗೆ ಸ್ಥಳಾಂತರವೂ ಸುಲಭ. ಇದು ಭೂಮಿಯ ಆಳದಲ್ಲಿ ಸೃಷ್ಟಿಯಾಗುವ ಒತ್ತಡ ಮತ್ತು ಉಷ್ಣತೆಯ ವಾತಾವರಣದಲ್ಲಿ ಸುರಕ್ಷತೆಯ ಆದ್ಯತೆಯೊಂದಿಗೆ ಕಾರ್ಯನಿರ್ವಹಿಸುವ ಕ್ಷಮತೆ ಹೊಂದಿದೆ.

ತೆಲಂಗಾಣದ ರಾಜಮಂಡ್ರಿ ಸಮೀಪದ ಭೀಮಾವರಂನ ಒಎನ್‌ಜಿಸಿ ಪ್ರದೇಶದಲ್ಲಿ ಅನುಷ್ಠಾನಗೊಂಡಿರುವ ಎಂಇಐಎಲ್ ನಿರ್ಮಿತ ರಿಗ್

ಚಾಲನಾ ಶಕ್ತಿ

ರಿಗ್ ಚಾಲನೆಗೆ ನಾಲ್ಕು ಜನರೇಟರ್‌ಗಳಿವೆ. ತುರ್ತು ಸಂದರ್ಭದಲ್ಲೂ ಘಟಕವನ್ನು ಚಾಲನೆಯಲ್ಲಿಡಲು ಹೆಚ್ಚುವರಿಯಾಗಿ ಒಂದು ಜನರೇಟರ್ ಇದೆ. ಈ ಎಲ್ಲ ಜನರೇಟರ್‌ಗಳನ್ನು ಎಲ್‌ಪಿಜಿ ಮತ್ತು ಡೀಸೆಲ್ ಎರಡರಿಂದಲೂ ನಡೆಸಲಾಗುತ್ತದೆ. ಈ ಮೂಲಕ ಶೇ 30ರಷ್ಟು ಇಂಧನ ಉಳಿತಾಯವಾಗಲಿದೆ.

ರಿಗ್ ತಯಾರಿಕೆಯಲ್ಲಿ ಮುಂಚೂಣಿಯಲ್ಲಿರುವ ಇಟಲಿಯ ಡ್ರಿಲ್ ಮೆಕ್ ಕಂಪನಿಯನ್ನು ತೆಕ್ಕೆಗೆ ತೆಗೆದುಕೊಂಡಿರುವ ಎಂಇಐಎಲ್, ಆ ಕಂಪನಿಯ ತಂತ್ರಜ್ಞಾನ ಬಳಸಿಕೊಂಡು ಹೈದರಾಬಾದ್‌ನ ತಮ್ಮ ಘಟಕದಲ್ಲೇ ಈ ಅತ್ಯಾಧುನಿಕ ರಿಗ್ ಅಭಿವೃದ್ಧಿಪಡಿಸಿದೆ. ಡ್ರಿಲ್ ಮೆಕ್ ತಂತ್ರಜ್ಞಾನ ಮತ್ತು ಎಂಇಐಎಲ್‌ನ ಸಹಯೋಗದೊಂದಿಗೆ ದೇಶೀಯವಾಗಿ ಈ ಅತ್ಯಾಧುನಿಕ ರಿಗ್ ಸಿದ್ಧಗೊಂಡಿದೆ.

'ಮೇಕ್ ಇನ್ ಇಂಡಿಯಾ' ಭಾಗವಾಗಿ ಅಭಿವೃದ್ಧಿಪಡಿಸಿರುವ ಈ ರಿಗ್ ಅನ್ನು ಸರ್ಕಾರಿ ಸ್ವಾಮ್ಯದ ತೈಲ ಮತ್ತು ನೈಸರ್ಗಿಕ ಅನಿಲ ನಿಗಮಕ್ಕೆ (ಒಎನ್‌ಜಿಸಿ) ಹಸ್ತಾಂತರಿಸಲು ಎಂಇಐಎಲ್ ಸಿದ್ಧತೆ ನಡೆಸಿದೆ. ತೆಲಂಗಾಣದ ರಾಜಮಂಡ್ರಿ ವ್ಯಾಪ್ತಿಯ ಭೀಮಾವರಂನಲ್ಲಿರುವ ಒಎನ್‌ಜಿಸಿ ಪ್ರದೇಶದಲ್ಲಿ ಈ ಯಂತ್ರವನ್ನು ಅಳವಡಿಸಲಾಗಿದೆ.

ಎಂಇಐಎಲ್ ಕಂಪನಿ ಒಎನ್‌ಜಿಸಿಗಾಗಿ ಈಗಾಗಲೇ ಇಂಥ 10 ರಿಗ್‌ಗಳನ್ನು ತಯಾರಿಸಿದೆ. ಮೂರು ರಿಗ್‌ಗಳು ಕಾರ್ಯನಿರ್ವಹಿಸುತ್ತಿವೆ. ನಾಲ್ಕೈದು ವಾರಗಳಲ್ಲಿ ಒಎನ್‌ಜಿಸಿಯ ಇತರ ಪ್ರದೇಶಗಳಲ್ಲೂ ಉಳಿದ ರಿಗ್‌ಗಳು ಕಾರ್ಯಾರಂಭ ಮಾಡಲಿವೆ ಎಂದು ಎಂಇಐಎಲ್ ಮುಖ್ಯ ಎಂಜಿನಿಯರ್ ಸತ್ಯನಾರಾಯಣ ಕೋಟಪಲ್ಲಿ ತಿಳಿಸಿದರು.

ಇತ್ತೀಚೆಗೆ ತೆಲಂಗಾಣದ ರಾಜಮಂಡ್ರಿ ಸಮೀಪದ ಭೀಮಾವರಂನ ಒಎನ್‌ಜಿಸಿ ಕ್ಷೇತ್ರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಮೊದಲ ಹಂತದಲ್ಲಿ ಪೂರೈಸಿರುವ ರಿಗ್‌ಗಳನ್ನು ಮೆಹಸಾನಾ, ಅಹಮದಾಬಾದ್, ಅಂಕ್ಲೇಶ್ವರ್, ಅಗರ್ತಲಾ ಮತ್ತು ಶಿವ್‌ಸಾಗರ್‌ನ ಒಎನ್‌ಜಿಸಿ ಪ್ರದೇಶಗಳಲ್ಲಿ (ತೈಲನಿಕ್ಷೇಪ ಸ್ಥಳಗಳು) ಅಳವಡಿಸಲಾಗಿದೆ. ಎರಡನೇ ಹಂತದ ರಿಗ್‌ಗಳ ತಯಾರಿಕೆಯೂ ಕೊನೆ ಹಂತದಲ್ಲಿದೆ' ಎಂದರು.

ರಿಗ್ ತೈಲಬಾವಿ ಕೊರೆಯುವ ಸ್ಥಳ

> **“ ಈ ಯಂತ್ರಗಳ ಕಾರ್ಯಕ್ಷಮತೆ ದೇಶದ ಇಂಧನ ಕ್ಷೇತ್ರದ ಮೇಲೆ ಪೂರಕ ಪರಿಣಾಮ ಬೀರಲಿದೆ. ಈ ಮೂಲಕ 'ಆತ್ಮನಿರ್ಭರ' ಭಾರತ ಮತ್ತು 'ಮೇಕ್ ಇನ್ ಇಂಡಿಯಾ' ಆಶಯಗಳಿಗೆ ಅನುಗುಣವಾಗಿ ದೇಶೀಯ ಇಂಧನ ರಿಗ್‌ಗಳನ್ನು ತಯಾರಿಸುವ ಏಕೈಕ ಸಂಸ್ಥೆಯಾಗಿ ಎಂಇಐಎಲ್ ಹೊರಹೊಮ್ಮುತ್ತಿದೆ. ”**
>
> **ಸತ್ಯನಾರಾಯಣ ಕೋಟಪಲ್ಲಿ**
>
> ಮುಖ್ಯ ಎಂಜಿನಿಯರ್, ಎಂಇಐಎಲ್, ಹೈದರಾಬಾದ್

ಜಾಗತಿಕ ಮಾರುಕಟ್ಟೆಗೆ ಹೆಜ್ಜೆ

ಸದ್ಯ ಅತ್ಯಾಧುನಿಕ ರಿಗ್‌ಗಳನ್ನು ಒಎನ್‌ಜಿಸಿಗೆ ಪೂರೈಸುತ್ತಿರುವ ಎಂಇಐಎಲ್ ಕಂಪನಿ, ಮುಂದೆ ಜಾಗತಿಕ ಮಾರುಕಟ್ಟೆಗೆ ಹೆಜ್ಜೆ ಇಡಲಿದೆ. ಶೀಘ್ರದಲ್ಲೇ ಹೈದರಾಬಾದ್‌ನಲ್ಲಿ ಕಂಪನಿಯ ಹೈಟೆಕ್ ರಿಗ್ ಉತ್ಪಾದನಾ ಬೃಹತ್ ಘಟಕ ತಲೆ ಎತ್ತಲಿದೆ. ಹೀಗೆ ಎಂಇಐಎಲ್ ಚೀನಾ-ಯೂರೋಪ್ ಜತೆ ಸ್ಪರ್ಧೆಗಿಳಿಯಲಿದೆ. ಅತಿ ವೇಗ ಹಾಗೂ ಸಮಯದ ಕಾರ್ಯಕ್ಷಮತೆಯೊಂದಿಗೆ ಕಾರ್ಯನಿರ್ವಹಿಸುವ ಈ ರಿಗ್‌ಗಳು ಭವಿಷ್ಯದಲ್ಲಿ ದೇಶದ ಇಂಧನ ಕ್ಷೇತ್ರದಲ್ಲಿ ಮಹತ್ವದ ಪಾತ್ರವಹಿಸಲಿವೆ.

(ಕಂಪನಿ ಆಹ್ವಾನದ ಮೇರೆಗೆ ಲೇಖಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು)

ಆನ್‌ಲೈನ್ ಜೇಬುಗಳು

ವಾಲೆಟ್ ಯುಪಿಐಗಳು

ಅವಿನಾಶ್ ಬಿ.

ಕೋವಿಡ್-19 ಕಾಡಿದಾಗಿನಿಂದ ಆನ್‌ಲೈನ್ ಹಣ ಪಾವತಿಯ ವ್ಯವಸ್ಥೆಗೆ ಜನರು ಹೆಚ್ಚು ಹೆಚ್ಚು ಒಗ್ಗಿಕೊಳ್ಳಲಾರಂಭಿಸಿದ್ದಾರೆ. ಡಿಜಿಟಲ್ ಪಾವತಿ (ಪೇಮೆಂಟ್) ವ್ಯವಸ್ಥೆಗೆ ಭಾರತೀಯ ರಿಸರ್ವ್ ಬ್ಯಾಂಕ್ ಉತ್ತೇಜನ ನೀಡಿದ ಬಳಿಕ ಈ ಸಂಖ್ಯೆಯೂ ಹೆಚ್ಚಾಗತೊಡಗಿದೆ. ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರೇ ಇತ್ತೀಚೆಗೆ ಹೇಳಿರುವಂತೆ, ಭಾರತದಲ್ಲಿ 2022ರ ಫೆಬ್ರುವರಿ ತಿಂಗಳೊಂದರಲ್ಲೇ ₹ 8.26 ಟ್ರಿಲಿಯನ್ (8.25 ಲಕ್ಷ ಕೋಟಿ) ಹಣ ಡಿಜಿಟಲ್ ರೂಪದಲ್ಲಿ ವಿನಿಮಯವಾಗಿದೆ. ಇದು ಒಂದು ವರ್ಷ ಹಿಂದಿನ ಪ್ರಮಾಣಕ್ಕೆ ಹೋಲಿಸಿದರೆ ದುಪ್ಪಟ್ಟು. ಕಳೆದ ವಾರ, ಫೀಚರ್ (ಬೇಸಿಕ್) ಫೋನ್‌ಗಳಲ್ಲಿಯೂ ಡಿಜಿಟಲ್ ಪಾವತಿಗೆ ಅನುಕೂಲವಾಗುವಂತೆ ಭಾರತೀಯ ರಿಸರ್ವ್ ಬ್ಯಾಂಕ್ ಅವಕಾಶ ನೀಡಿದ್ದು, ಹಣಕಾಸು ವಹಿವಾಟು ಮತ್ತಷ್ಟು ಹೆಚ್ಚಲಿದೆ.

ಜನರು ಹೆಚ್ಚು ಹೆಚ್ಚು ಆ್ಯಪ್ ಆಧಾರಿತ ಡಿಜಿಟಲ್ ಬ್ಯಾಂಕಿಂಗ್ ವ್ಯವಸ್ಥೆಯನ್ನು ಬಳಸುತ್ತಿರುವ ಈ ಸಂದರ್ಭದಲ್ಲಿ ಯುಪಿಐ, ಡಿಜಿಟಲ್ ವಾಲೆಟ್, ಫೋನ್ ಪೇ, ಗೂಗಲ್ ಪೇ, ಪೇಟಿಎಂ - ಈ ಹೆಸರುಗಳು ಬಹುತೇಕರಿಗೆ ಗೊಂದಲ ಮೂಡಿಸಿವೆ. ಯಾವುದು ಉತ್ತಮ, ಯಾವುದು ಹೇಗೆ ಕೆಲಸ ನಿರ್ವಹಿಸುತ್ತದೆ, ಸುರಕ್ಷಿತವೇ ಎಂಬ ಆತಂಕ ಕೆಲವರಿಗೆ. ಹಾಗಿದ್ದರೆ ವಾಲೆಟ್ ಹಾಗೂ ಯುಪಿಐ - ಏನು ವ್ಯತ್ಯಾಸ? ತಿಳಿದುಕೊಳ್ಳೋಣ.

ಯುಪಿಐ, ವಾಲೆಟ್‌ಗಿರುವ ವ್ಯತ್ಯಾಸ

ಯುಪಿಐ ಎಂದರೆ 'ಯೂನಿಫೈಡ್ ಪೇಮೆಂಟ್ ಇಂಟರ್‌ಫೇಸ್' (ಏಕೀಕೃತ ಪಾವತಿ ವ್ಯವಸ್ಥೆ). ಇದು ಬ್ಯಾಂಕ್ ಖಾತೆ ಹೊಂದಿರುವ ಯಾರೇ ಆದರೂ ಒಂದು ಐಡಿ ರಚಿಸುವ ಮೂಲಕ ದೊರೆಯುವ ವ್ಯವಸ್ಥೆ. ಒಂದು ರೀತಿಯಲ್ಲಿ ನಮ್ಮ ಇಮೇಲ್ ವಿಳಾಸ ಇದ್ದಂತೆ, ಉದಾಹರಣೆಗೆ, ಹೆಸರಿನ ಮುಂದೆ @okaxis, @sbi, @okhdfc ಹೀಗೆ ಸೇರಿಸಿ, ಯುಪಿಐ ಐಡಿ ರಚಿಸಿಕೊಳ್ಳಬಹುದು. ಯುಪಿಐ ಐಡಿಗಳ ಮೂಲಕ ನೇರವಾಗಿ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಮಾಡಬಹುದು. ಆದರೆ ಡಿಜಿಟಲ್ ವಾಲೆಟ್ ಎಂಬುದು ಬ್ಯಾಂಕ್ ಖಾತೆಗಳ ನಡುವೆ ಮಧ್ಯವರ್ತಿಯಾಗಿ ಕೆಲಸ ಮಾಡುತ್ತದೆ. ಯುಪಿಐ ಎಂಬುದು ವರ್ಚುವಲ್ (ಕಾಲ್ಪನಿಕ) ಪಾವತಿ ವಿಳಾಸವನ್ನು ಬಳಸಿದರೆ, ಡಿಜಿಟಲ್ ವಾಲೆಟ್ ನಮ್ಮ ಮೊಬೈಲ್ ಸಂಖ್ಯೆಯ ಆಧಾರದಲ್ಲಿ ಕೆಲಸ ಮಾಡುತ್ತದೆ. ಯುಪಿಐ ವಹಿವಾಟು ಎರಡು ಬ್ಯಾಂಕ್ ಖಾತೆಗಳ ನಡುವೆ ನಡೆದರೆ, ವಾಲೆಟ್ ವಹಿವಾಟು ಒಂದೇ ರೀತಿಯ ಡಿಜಿಟಲ್ ವಾಲೆಟ್‌ಗಳ ನಡುವೆ ನಡೆಯುತ್ತದೆ. ಉದಾಹರಣೆಗೆ, ಪೇಟಿಎಂ ಖಾತೆಗಳ ನಡುವೆ, ಎರಡು ಗೂಗಲ್ ಪೇ ಖಾತೆಗಳ ನಡುವೆ... ಹೀಗೆ. ಎಲ್ಲವೂ ಒಂದು ಮೊಬೈಲ್ ಫೋನ್‌ನ ಮೂಲಕವೇ ಆಗುತ್ತದೆ.

ಪೇಟಿಎಂ, ಫೋನ್ ಪೇ, ಗೂಗಲ್ ಪೇ ಆ್ಯಪ್‌ಗಳು

ದೇಶದಲ್ಲಿ ಹೆಚ್ಚು ಚಾಲ್ತಿಯಲ್ಲಿರುವುದು ಪೇಟಿಎಂ, ಫೋನ್ ಪೇ ಹಾಗೂ ಗೂಗಲ್ ಪೇ ಡಿಜಿಟಲ್ ಪಾವತಿ ಆ್ಯಪ್‌ಗಳು. ಇದರಲ್ಲಿ ಪೇಟಿಎಂ ಮತ್ತು ಫೋನ್ ಪೇ ಆ್ಯಪ್‌ಗಳಲ್ಲಿ ನಿರ್ದಿಷ್ಟ ಹಣವನ್ನು ಆನ್‌ಲೈನ್ ವಾಲೆಟ್ (ಸರಳವಾಗಿ ಹೇಳುವುದಾದರೆ ಅಂತರಜಾಲದ ಪರ್ಸ್) ಮೂಲಕ ಎಷ್ಟು ಬೇಕೋ ಅಷ್ಟು ಹಣ ಸಂಗ್ರಹಿಸಿಡಬಹುದು ಮತ್ತು ಅಲ್ಲಿಂದಲೇ ಪಾವತಿ ಮಾಡಬಹುದು. ಆದರೆ, ಗೂಗಲ್ ಪೇಯಲ್ಲಿ ಹಾಗಿಲ್ಲ; ಅದರಲ್ಲಿ ಲಿಂಕ್ ಆಗಿರುವ ಬ್ಯಾಂಕ್ ಖಾತೆಯಿಂದಲೇ ನೇರವಾಗಿ ಹಣ ಸಂದಾಯವಾಗುತ್ತದೆ. ಈ ಮೂರೂ ಆ್ಯಪ್‌ಗಳು ಕೆಲವೊಂದು ಸ್ಥಳೀಯ ಸೇವಾದಾರರಿಗೆ ಬಿಲ್ ಪಾವತಿಗೆ, ಮೊಬೈಲ್/ಟಿವಿ ರಿಚಾರ್ಜ್, ಬಸ್ಸು, ವಿಮಾನ, ರೈಲು ಬುಕಿಂಗ್ ಮುಂತಾದವುಗಳಿಗೆ ನೇರವಾಗಿ ಅನುಕೂಲ ಮಾಡಿಕೊಡುತ್ತವೆ. ಉದಾ. ಬಿಎಸ್ಸೆನ್ನೆಲ್, ನೀರಿನ ಬಿಲ್, ಕರೆಂಟ್ ಬಿಲ್, ಗ್ಯಾಸ್ ಬಿಲ್ ಇತ್ಯಾದಿ. (ಇವುಗಳನ್ನು ನೋಂದಾಯಿಸಿಕೊಳ್ಳಬೇಕಾಗುತ್ತದೆ). ಇತ್ತೀಚೆಗೆ ವಿಮಾ ಪ್ರೀಮಿಯಂ, ಮ್ಯೂಚುವಲ್ ಫಂಡ್ ಹೂಡಿಕೆಗೂ ಇವು ಅವಕಾಶ ಮಾಡಿಕೊಡುತ್ತಿವೆ. ಅಲ್ಲದೆ, ಈಗೀಗ ಮಳಿಗೆಗಳಲ್ಲಿರುವ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ ಪಾವತಿ ಮಾಡುವ ಆಯ್ಕೆ ಜನಪ್ರಿಯವಾಗುತ್ತಿದೆ.

ಪೇಟಿಎಂ ಅಥವಾ ಫೋನ್‌ಪೇಯಲ್ಲಿರುವಂತೆ ಪ್ರಿಪೇಯ್ಡ್ ಹಣವನ್ನು ಸಂಗ್ರಹಿಸಿಟ್ಟುಕೊಳ್ಳುವ ಒಂದು ಅನುಕೂಲವೆಂದರೆ, ಯಾವುದೇ ಪಾವತಿಗಾಗಿ ನಾವು ಬೇರೆಯವರಿಗೆ ನಮ್ಮ ಬ್ಯಾಂಕ್ ಖಾತೆಯ ವಿವರಗಳನ್ನು ನೀಡಬೇಕಾಗಿಲ್ಲ, ಈ ವಾಲೆಟ್‌ಗೆ ಮಾತ್ರ ವಿವರ ನೀಡಿದರೆ ಸಾಕು. ಮತ್ತು ಈ ವಾಲೆಟ್‌ಗೆ ಎಷ್ಟು ಬೇಕೋ ಅಷ್ಟು ಮೊತ್ತ ಮಾತ್ರ ಸೇರಿಸಿಕೊಂಡರೆ ಸುರಕ್ಷತೆ ಹೆಚ್ಚು.

ಯುಪಿಐನಲ್ಲಿ ಒಮ್ಮೆಗೆ ಒಂದು ಲಕ್ಷ ರೂ.ವರೆಗೆ ವಹಿವಾಟು ನಡೆಸಬಹುದಾಗಿದ್ದರೆ, ವಾಲೆಟ್‌ಗಳಲ್ಲಿ, ಕೆವೈಸಿ (ನಮ್ಮ ಹೆಸರು-ಗುರುತಿನ ದಾಖಲೆ) ಪೂರೈಸದಿರುವ ಗ್ರಾಹಕರಿಗೆ ತಿಂಗಳಿಗೆ ₹10 ಸಾವಿರ ಮಾತ್ರವೇ ವ್ಯವಹಾರ ನಡೆಸಬಹುದಾಗಿದೆ ಎಂಬುದು ನೆನಪಿನಲ್ಲಿರಲಿ.

ಒಟ್ಟಿನಲ್ಲಿ, ಸಣ್ಣಪುಟ್ಟ ಆನ್‌ಲೈನ್ ಪಾವತಿಗಳಿಗೆ ಪ್ರಿಪೇಯ್ಡ್ ವಾಲೆಟ್ ಬಳಸುವುದು ಸೂಕ್ತ. ದೊಡ್ಡ ಮೊತ್ತವಾದರೆ ಮತ್ತು ವಿಶ್ವಾಸಾರ್ಹ ತಾಣಗಳಲ್ಲಿ ವಹಿವಾಟು ನಡೆಸುವುದಿದ್ದರೆ ಪಾವತಿಗೆ ಇಂಟರ್ನೆಟ್ ಬ್ಯಾಂಕಿಂಗ್ ವ್ಯವಸ್ಥೆ ಅಥವಾ ಕ್ರೆಡಿಟ್/ಡೆಬಿಟ್ ಕಾರ್ಡ್ ಬಳಸಬಹುದು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಅಧ್ಯಾಯ: 15

ಮೇಲ್ಮೈ ವಿಸ್ತೀರ್ಣಗಳು ಮತ್ತು ಘನಫಲಗಳು

ಗಣಿತಶಾಸ್ತ್ರ | **ಎಸ್ಸೆಸ್ಸೆಲ್ಸಿ**

ಪ್ರಮುಖಾಂಶಗಳು

- ಘನದ ಮೇಲ್ಮೈ ವಿಸ್ತೀರ್ಣ $= 6a^2$
- ಆಯತ ಘನದ ಮೇಲ್ಮೈ ವಿಸ್ತೀರ್ಣ $= 2(lb + bh + hl)$
- ಸಿಲಿಂಡರ್‌ನ ಪಾರ್ಶ್ವ ಮೇಲ್ಮೈ ವಿಸ್ತೀರ್ಣ $= 2\pi rh$
- ಸಿಲಿಂಡರ್‌ನ ಪೂರ್ಣ ಮೇಲ್ಮೈ ವಿಸ್ತೀರ್ಣ $= 2\pi r(r+h)$
- ಶಂಕುವಿನ ವಕ್ರ ಮೇಲ್ಮೈ ವಿಸ್ತೀರ್ಣ $= \pi rl$
- ಶಂಕುವಿನ ಪೂರ್ಣ ಮೇಲ್ಮೈ ವಿಸ್ತೀರ್ಣ $= \pi r(l+r)$
- ಗೋಳದ ಮೇಲ್ಮೈ ವಿಸ್ತೀರ್ಣ $= 4\pi r^2$
- ಅರ್ಧ ಗೋಳದ ವಕ್ರ ಮೇಲ್ಮೈ ವಿಸ್ತೀರ್ಣ $= 2\pi r^2$
- ಅರ್ಧ ಗೋಳದ ಪೂರ್ಣ ಮೇಲ್ಮೈ ವಿಸ್ತೀರ್ಣ $= 3\pi r^2$
- ಘನದ ಘನಫಲ $= a^3$
- ಆಯತ ಘನದ ಘನಫಲ $= l \times b \times h$
- ಸಿಲಿಂಡರ್‌ನ ಘನಫಲ $= \pi r^2 h$
- ಶಂಕುವಿನ ಘನಫಲ $= \frac{1}{3}\pi r^2 h$
- ಗೋಳದ ಘನಫಲ $= \frac{4}{3}\pi r^3$
- ಅರ್ಧ ಗೋಳದ ಘನಫಲ $= \frac{2}{3}\pi r^3$
- ಒಂದು ವಸ್ತುವನ್ನು ಕರಗಿಸಿ ಅದರ ಆಕಾರವನ್ನು ಬದಲಾಯಿಸಿದಾಗ ಅದರ ಘನಫಲದಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ.
- ಕೊಟ್ಟಿರುವ ನೇರ ವೃತ್ತ ಪಾದ ಶಂಕುವಿನ ಪಾದಕ್ಕೆ ಸಮಾಂತರವಾಗಿ ಒಂದು ಸಮತಲದಿಂದ ಛೇದಿಸಿ ಉಂಟಾದ ಚಿಕ್ಕ ಶಂಕುವಿನಾಕಾರವನ್ನು ತೆಗೆದಾಗ ಉಳಿದ ಘನಾಕೃತಿಯನ್ನು ನೇರ ವೃತ್ತಪಾದ ಶಂಕುವಿನ ಭಿನ್ನಕ ಎಂದು ಕರೆಯುತ್ತಾರೆ.
- ಶಂಕುವಿನ ಭಿನ್ನಕದ ಘನಫಲ $= \frac{1}{3}\pi rh(r_1^2 + r_2^2 + r_1 r_2)$
- ಶಂಕುವಿನ ಭಿನ್ನಕದ ಪಾರ್ಶ್ವ ಮೇಲ್ಮೈ ವಿಸ್ತೀರ್ಣ $= \pi l(r_1 + r_2)$ ಇಲ್ಲಿ $l = \sqrt{h^2 + (r_1 - r_2)^2}$
- ಶಂಕುವಿನ ಭಿನ್ನಕದ ಪೂರ್ಣ ಮೇಲ್ಮೈ ವಿಸ್ತೀರ್ಣ $= \pi l(r_1 + r_2) + \pi(r_1^2 + r_2^2)$

ಪ್ರಶ್ನೋತ್ತರಗಳು

1. ಒಂದು ಘನವಸ್ತುವನ್ನು ಒಂದು ಆಕಾರದಿಂದ ಮತ್ತೊಂದು ಆಕಾರಕ್ಕೆ ಬದಲಾಯಿಸಿದರೆ, ಹೊಸ ಆಕಾರದ ಗಾತ್ರವು

ಎ. ದ್ವಿಗುಣಗೊಳ್ಳುತ್ತದೆ ಬಿ ಹೆಚ್ಚಾಗುತ್ತದೆ

ಸಿ. ಕಡಿಮೆಯಾಗುತ್ತದೆ ಡಿ. ಬದಲಾಗದು

ಉತ್ತರ: ಡಿ. ಬದಲಾಗದು

2. ಶಂಕುವಿನ ಭಿನ್ನಕ ರೂಪದ ಕಸದ ಬುಟ್ಟಿಯ ವೃತ್ತಾಕಾರದ ಎರಡು ಬದಿಯ ತ್ರಿಜ್ಯಗಳು ಕ್ರಮವಾಗಿ 15ಸೆಂ.ಮೀ. ಮತ್ತು 8ಸೆಂ.ಮೀ ಆಗಿದೆ. ಇದರ ಆಳವು 63ಸೆಂ.ಮೀ. ನಷ್ಟಿದ್ದರೆ, ಕಸದ ಬುಟ್ಟಿಯ ಘನಫಲವನ್ನು ಕಂಡುಹಿಡಿಯಿರಿ.

ಪರಿಹಾರ: $r_1 = 15cm$, $r_2 = 8cm$, $h = 63cm$

ಕಸದ ಬುಟ್ಟಿಯ ಘನಫಲ $= \frac{1}{3}\pi rh(r_1^2 + r_2^2 + r_1 r_2)$

$$= \frac{1}{3} \times \frac{22}{7} \times 63(15^2 + 8^2 + 15 \times 8)$$

$$= 66(225 + 64 + 120)$$

$$= 66 \times 409$$

ಕಸದ ಬುಟ್ಟಿಯ ಘನಫಲ $= 26994cm^3$

3. 10 ಸೆಂ.ಮೀ. ಎತ್ತರವಿರುವ ಒಂದು ಸಿಲಿಂಡರ್‌ನ ಮೇಲೆ ಪಾದವು ಸಂಪೂರ್ಣವಾಗಿ ಆವರಿಸುವಂತೆ ಒಂದು ಅರ್ಧಗೋಳವನ್ನು ಜೋಡಿಸಿದ ಒಂದು ಆಟಿಕೆಯನ್ನು ಚಿತ್ರದಲ್ಲಿ ತೋರಿಸಲಾಗಿದೆ. ಸಿಲಿಂಡರ್‌ನ ಪಾದದ ತ್ರಿಜ್ಯವು 3.5ಸೆಂ.ಮೀ. ಆದರೆ ಆಟಿಕೆಯ ಘನಫಲವನ್ನು ಕಂಡುಹಿಡಿಯಿರಿ.



ಪರಿಹಾರ: $h = 10cm$, $r = 3.5cm$

ಆಟಿಕೆಯ ಘನಫಲ = ಸಿಲಿಂಡರ್‌ನ ಘನಫಲ + ಅರ್ಧಗೋಳದ ಘನಫಲ

$$= \pi r^2 h + \tfrac{2}{3}\pi r^3$$

$$= \pi r^2 (h + \tfrac{2}{3} r)$$

$$= \frac{22}{7} \times (3.5)^2 (10 + \frac{2}{3} \times 3.5)$$

$$= 11 \times 3.5 \left(10 + \frac{7}{3}\right)$$

$$= 38.5(12.33)$$

ಆಟಿಕೆಯ ಘನಫಲ $= 474.70cm^3$

4. 10ಸೆಂ.ಮೀ. ತ್ರಿಜ್ಯವುಳ್ಳ ಒಂದು ಲೋಹದ ಘನಗೋಳವನ್ನು ಕರಗಿಸಿ 10ಸೆಂ.ಮೀ ಎತ್ತರ ಹಾಗೂ 5ಸೆಂ.ಮೀ. ಪಾದದ ತ್ರಿಜ್ಯವುಳ್ಳ ಚಿಕ್ಕ ಶಂಕುಗಳಾಗಿ ಪರಿವರ್ತಿಸಲಾಗಿದೆ. ಒಟ್ಟು ಚಿಕ್ಕ ಶಂಕುಗಳ ಸಂಖ್ಯೆಯನ್ನು ಕಂಡುಹಿಡಿಯಿರಿ.

ಪರಿಹಾರ: ಗೋಳದ ತ್ರಿಜ್ಯ $r_1 = 10cm$

ಶಂಕುವಿನ ಎತ್ತರ $h = 10cm$

ಶಂಕುವಿನ ತ್ರಿಜ್ಯ $r_2 = 5cm$

ಉಂಟಾದ ಚಿಕ್ಕ ಶಂಕುಗಳ ಸಂಖ್ಯೆ $= \dfrac{\text{ಗೋಳದ ಘನಫಲ}}{\text{ಉಂಟಾದ ಪ್ರತಿ ಶಂಕುವಿನ ಘನಫಲ}}$

$$= \frac{\frac{4}{3}\pi r_1^3}{\frac{1}{3}\pi r_2^2 h}$$

$$= \frac{4 \times 10 \times 10 \times 10}{5 \times 5 \times 10}$$

$$= 16$$

ಉಂಟಾದ ಚಿಕ್ಕ ಶಂಕುಗಳ ಸಂಖ್ಯೆ = 16

ಶ್ರೀನಿವಾಸ ಡಿ. ಶೆಟ್ಟಿ, ಶಿಕ್ಷಣ ಸಂಯೋಜಕರು, ಬಿಇಓ ಕಚೇರಿ, ಅರಕಲಗೂಡು

ಪ್ರಜಾವಾಣಿ ನೋಡಿಯೊ

ಹತ್ತನೇ ತರಗತಿ ಗಣಿತಶಾಸ್ತ್ರದ 'ಸರ್ಫೇಸ್ ಏರಿಯಾಸ್ ಅಂಡ್ ವ್ಯಾಲ್ಯೂ' ಅಧ್ಯಾಯಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾದರಿ ಪ್ರಶ್ನೋತ್ತರ

ಬಿಂದು ಮತ್ತು ವಕ್ರರೇಖೆ

ಗಣಿತಶಾಸ್ತ್ರ | **ಪಿಯುಸಿ**

22) (1, 2) ಬಿಂದುವಿನ ಮೂಲಕ ಹಾದು ಹೋಗುವ, $x^2 = 4y$ ವಕ್ರರೇಖೆಯ ಲಂಬದ ಸಮೀಕರಣವನ್ನು ಕಂಡುಹಿಡಿಯಿರಿ.

ಪರಿಹಾರ: $x^2 = 4y$ ಅನ್ನು x ಗೆ ಅನುಗುಣವಾಗಿ ನಿಷ್ಪನ್ನ ಮಾಡಿದರೆ $\frac{dy^2}{dx} = \frac{x}{2}$

$x^2 = 4y$ ವಕ್ರರೇಖೆಯ ಲಂಬದ ಸ್ಪರ್ಶಕ ಬಿಂದುವು (h, k) ಆಗಿರಲಿ. ಆದ್ದರಿಂದ (h, k) ಬಿಂದುವಿನಲ್ಲಿ ಸ್ಪರ್ಶಕದ ಓಟವು (slope)

$$\left.\frac{dy}{dx}\right]_{(hk)} = \frac{h}{2}$$

ಆದ್ದರಿಂದ (h, k) ಬಿಂದುವಿನಲ್ಲಿ ಲಂಬದ ಓಟವು $\frac{-2}{h}$

∴ (h, k) ಬಿಂದುವಿನಲ್ಲಿ ಲಂಬದ ಸಮೀಕರಣವು

$y - k = \frac{-2}{h}(x - h)$..................(1) ಇದು (1, 2) ಬಿಂದುವಿನ ಮೂಲಕ ಹಾದು ಹೋಗುತ್ತದೆ

∴ $2 - k = \frac{-2}{h}(1 - h)$ ಅಥವಾ $k = 2 + \frac{2}{h}(1 - h)$ ....(2)

(h, k) ಬಿಂದುವು $x^2 = 4y$ ಮೇಲಿರುವುದರಿಂದ,

$h^2 = 4k$ ... (3)

(2) ಮತ್ತು (3) ರಿಂದ $h = 2, k = 1$

∴ h, k, ಬೆಲೆಗಳನ್ನು (1)ಅಲ್ಲಿ ಅಳವಡಿಸಿದಾಗ, ಲಂಬದ ಸಮೀಕರಣವು,

$y - 1 = \frac{-2}{2}(x - 2)$ ಅಥವಾ $x + y = 3$

23) 3ಮೀ ಮತ್ತು 8ಮೀ. ಅಳತೆ ಹೊಂದಿರುವ ಒಂದು ಅಲ್ಯೂಮಿನಿಯಮ್ ಶೀಟಿನ ಮೂಲೆಗಳಿಂದ ಚೌಕಗಳನ್ನು ಕತ್ತರಿಸಿ, ಮತ್ತು ಬಾಹುಗಳನ್ನು ಮಡಿಸಿ, ತೆರೆದ ಮೇಲ್ಭಾಗವಿರುವ ಒಂದು ಪೆಟ್ಟಿಗೆಯನ್ನು ಮಾಡಬೇಕು. ಅಂತಹ ಪೆಟ್ಟಿಗೆಯ ಗರಿಷ್ಠ ಘನ ಅಳತೆ ಎಷ್ಟು.?

ಪರಿಹಾರ: ಕತ್ತರಿಸಿದ ಚೌಕಗಳ ಬಾಹುಗಳು x ಇರಲಿ. ಆದ್ದರಿಂದ ಪೆಟ್ಟಿಗೆಯ ಎತ್ತರ x, ಉದ್ದ $8 - 2x$, ಮತ್ತು ಅಗಲ $3 - 2x$ ಆಗಿರುತ್ತದೆ (ಚಿತ್ರ). ಪೆಟ್ಟಿಗೆಯ ಘನ ಅಳತೆ $V(x)$ ಆದರೆ,



$V(x) = x(3 - 2x)(8 - 2x) = 4x^3 - 22x^2 + 24x$

ಆದ್ದರಿಂದ $\begin{cases} V'(x) = 12x^2 - 44x + 24 = 4(x-3)(3x-2) \\ V''(x) = 24x - 44 \end{cases}$

ಈಗ $v(x) = 0$ ಆದಾಗ $x = 3,$. ಆದರೆ $x \neq 3$

ಆದ್ದರಿಂದ

$x = \frac{2}{3}$ ∴ $V''\left(\frac{2}{3}\right) = 24\left(\frac{2}{3}\right) - 44 = -28 < 0$

∴ x=2/3 ಬಿಂದುವು, ಗರಿಷ್ಠ ಬೆಲೆಯ ಬಿಂದು. ಅಂದರೆ ಪ್ರತಿಯೊಂದು ಮೂಲೆಯಿಂದ 2/3 ಮೀ.ನಷ್ಟು ಬಾಹುವಿರುವ ಚೌಕವನ್ನು ಕತ್ತರಿಸಿ, ಉಳಿದಿರುವ ಶೀಟಿನಿಂದ ಪೆಟ್ಟಿಗೆಯನ್ನು ಮಾಡಿದರೆ, ಆಗ ಪೆಟ್ಟಿಗೆಯ ಘನಫಲ ಗರಿಷ್ಠವಾಗುತ್ತದೆ, ಮತ್ತು

$$V\left(\frac{2}{3}\right) = 4\left(\frac{2}{3}\right)^3 - 22\left(\frac{2}{3}\right)^2 + 24\left(\frac{2}{3}\right) = \frac{200}{27} \text{ ಮೀ}^3$$

23) $x^2 + y^2 = a^2$ ವೃತ್ತದಿಂದ ಆವೃತವಾದ ಕ್ಷೇತ್ರಫಲವನ್ನು ಕಂಡುಹಿಡಿಯಿರಿ.

ಪರಿಹಾರ :-



ಚಿತ್ರದಲ್ಲಿ ತೋರಿಸಿರುವಂತೆ, $x^2 + y^2 = a^2$ ವೃತ್ತದಿಂದ ಆವೃತವಾಗಿರುವ ಕ್ಷೇತ್ರಫಲ = 4 (AOBA ಪ್ರದೇಶದ ಕ್ಷೇತ್ರಫಲ) = 4[ವೃತ್ತವನ್ನು ಸೂಚಿಸುವ ವಕ್ರರೇಖೆ, x-ಅಕ್ಷ, $x = 0$ ಮತ್ತು $x = a$ ಗಳಲ್ಲಿ ಎಳೆದಿರುವ ಲಂಬಗಳಿಂದಾವೃತವಾಗಿರುವ ಪ್ರದೇಶದ ಕ್ಷೇತ್ರಫಲ] [ವೃತ್ತವು x-ಮತ್ತು y-ಅಕ್ಷಗಳಿಗೆರಡಕ್ಕೂ ಸಮ್ಮಿತೀಯವಾಗಿರುವುದರಿಂದ].

$$= 4\int_0^a y\,dx$$

[ಉದ್ದದ ಪಟ್ಟಿಗಳನ್ನು ತೆಗೆದುಕೊಂಡಾಗ]

$$= 4\int_0^a \sqrt{a^2 - x^2}\,dx \quad \left[\because x^2 + y^2 = a^2 \Rightarrow y = \pm\sqrt{a^2 - x^2}\right]$$

AOBA ಪ್ರದೇಶವು ಮೊದಲ ಚತುರ್ಥಾಂಕದಲ್ಲಿರುವುದರಿಂದ, yಅನ್ನು ಧನ ಚಿಹ್ನೆಯೊಂದಿಗೆ ತೆಗೆದುಕೊಳ್ಳುತ್ತೇವೆ. ಅನುಕಲಿಸಿದಾಗ ನಮಗೆ ಇಡೀ ವೃತ್ತದ

ಕ್ಷೇತ್ರಫಲ $= 4\left[\frac{x}{2}\sqrt{a^2 - x^2} + \frac{a^2}{2} \cdot \sin^{-1}\frac{x}{a}\right]_0^a$

$$= 4\left[\left(\frac{a}{2} \times 0 + \frac{a^2}{2} . \sin^{-1} 1\right) - 0\right] = 4\left(\frac{a^2}{2}\right)\left(\frac{\pi}{2}\right) = \pi a^2 \text{ ಎಂದಾಗುತ್ತದೆ.}$$

24) $y = x^2$ ವಕ್ರರೇಖೆ ಮತ್ತು $y = 4$ ಸರಳರೇಖೆಗಳ ಪ್ರದೇಶದ ಕ್ಷೇತ್ರಫಲವನ್ನು ಕಂಡುಹಿಡಿಯಿರಿ.

ಪರಿಹಾರ: $y = x_2$ ವಕ್ರ ರೇಖೆಯು y – ಅಕ್ಷದಲ್ಲಿ, ಮಾತ್ರ ಸಮ್ಮೀತಿಯವಾಗಿರುವುದರಿಂದ, ಚಿತ್ರ 8.9ರಲ್ಲಿ ತೋರಿಸಿರುವಂತೆ, ಬೇಕಾದ ಕ್ಷೇತ್ರಫಲ = AOBA ಪ್ರದೇಶದ ಕ್ಷೇತ್ರಫಲ



$$= 2 \cdot \int_0^4 x\,dy$$

= 2[ವಕ್ರರೇಖೆ $x^2 = y$, y–ಅಕ್ಷ $y = 0$ ಮತ್ತು $y = 4$ ರೇಖೆಗಳ ನಡುವಣ BONB ಪ್ರದೇಶದ ಕ್ಷೇತ್ರಫಲ]

$$= 2\int_0^4 \sqrt{y}\,dy = 2 \times \frac{2}{3}\left[y^{3/2}\right]_0^4 = \frac{4}{3} \times 8 = \frac{32}{3}$$

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಗಣಿತಶಾಸ್ತ್ರದ ಆಂಗ್ಲಭಾಷೆಯ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ಎಂತಹ ಕಟು ಪ್ರಸಂಗ ಬಂದರೂ ಎದೆಗುಂದಬಾರದು. ಅದೇ ಸುಖಿಯಾಗಿ ಇರುವುದರ ರಹಸ್ಯ.

-ದ.ರಾ.ಬೇಂದ್ರೆ

ಹೊನಲು-ಬೆಳಕಿನ ಕ್ರಿಕೆಟ್: ಭರವಸೆ ಮೂಡಿಸಿದ ಬೆಂಗಳೂರು ಟೆಸ್ಟ್

ಶ್ರೀಮಂತ ಕ್ರಿಕೆಟ್ ಪರಂಪರೆ ಇರುವ ಕರ್ನಾಟಕಕ್ಕೆ ಮೊದಲ ಬಾರಿ ಹೊನಲು-ಬೆಳಕಿನ ಟೆಸ್ಟ್ ಪಂದ್ಯ ಆಯೋಜಿಸುವ ಅವಕಾಶ ದೊರೆಯುವ ಮೂಲಕ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಕ್ರಿಕೆಟ್ ಇತಿಹಾಸದ ಪುಸ್ತಕಕ್ಕೆ ಹೊಸ ಅಧ್ಯಾಯ ಸೇರ್ಪಡೆಯಾಯಿತು. ಶ್ರೀಲಂಕಾ ಎದುರಿನ ಸರಣಿಯ ಎರಡನೇ ಮತ್ತು ಕೊನೆಯ ಪಂದ್ಯವು ಕ್ರಿಕೆಟ್ ಪ್ರೇಮಿಗಳನ್ನು ಕ್ರೀಡಾಂಗಣದತ್ತ ಆಕರ್ಷಿಸುವಲ್ಲಿ ಯಶಸ್ವಿಯಾಯಿತು. ಮೂರು ದಿನಗಳಲ್ಲಿ ಮುಕ್ತಾಯವಾದ ಈ ಹಣಾಹಣಿಯನ್ನು 57 ಸಾವಿರಕ್ಕೂ ಹೆಚ್ಚು ಜನರು ವೀಕ್ಷಿಸಿದರು. ತವರು ನೆಲದಲ್ಲಿ ಸತತ 15ನೇ ಸರಣಿ ಗೆಲ್ಲುವಲ್ಲಿ ಆತಿಥೇಯ ತಂಡ ಯಶಸ್ವಿಯಾಯಿತು. ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಎರಡನೇ ಆವೃತ್ತಿಯ ಅಂಕಪಟ್ಟಿಯಲ್ಲಿ ನಾಲ್ಕನೇ ಸ್ಥಾನಕ್ಕೇರಿತು. ರೋಹಿತ್ ಶರ್ಮಾ ನಾಯಕತ್ವ ವಹಿಸಿದ ಮೊದಲ ಸರಣಿಯೂ ಇದಾಗಿತ್ತು. ಕೆಲವು ಹೊಸ ದಾಖಲೆಗಳು ಸೃಷ್ಟಿಯಾದವು. ವಿಶ್ವ ಕ್ರಿಕೆಟ್‌ನಲ್ಲಿ ಈಗ ದುರ್ಬಲ ತಂಡಗಳಲ್ಲಿ ಒಂದಾಗಿರುವ ಶ್ರೀಲಂಕಾ ವಿರುದ್ಧ ಗೆಲುವು ಸಾಧಿಸುವುದು ಭಾರತಕ್ಕೆ ಕಠಿಣವೇನೂ ಆಗಿರಲಿಲ್ಲ. ಭಾರತ ತಂಡದ ಜಯ ನಿರೀಕ್ಷಿತವೇ ಆಗಿತ್ತು. ಆದರೂ ಈ ಸರಣಿಯಲ್ಲಿ ಆತಿಥೇಯ ತಂಡದ ಅಗ್ರಕ್ರಮಾಂಕದ ಬ್ಯಾಟರ್‌ಗಳ ವೈಫಲ್ಯ ಎದ್ದುಕಂಡಿತು. ಅನುಭವಿಗಳಾದ ರೋಹಿತ್, ವಿರಾಟ್ ಕೊಹ್ಲಿ, ಮಯಂಕ್ ಅಗರವಾಲ್ ಅವರಿಂದ ನಿರೀಕ್ಷಿತ ಆಟ ಮೂಡಿಬರಲಿಲ್ಲ. ಬ್ಯಾಟಿಂಗ್‌ನಲ್ಲಿ ಸತತ ವೈಫಲ್ಯ ಅನುಭವಿಸುತ್ತಿರುವ ವಿರಾಟ್ ರನ್ ಸರಾಸರಿಯು ಈ ಬಾರಿ ಕುಸಿಯಿತು. ಮೂರೂ ಮಾದರಿಗಳಲ್ಲಿ 50ಕ್ಕಿಂತ ಹೆಚ್ಚಿನ ರನ್ ಗಳಿಕೆ ಸರಾಸರಿ ಹೊಂದಿರುವ ಬ್ಯಾಟರ್ ಅವರಾಗಿದ್ದರು. ಇದೀಗ ಆ ಪಟ್ಟದಿಂದ ಕೆಳಗೆ ಜಾರಿದ್ದಾರೆ. ಆದರೆ ರಿಷಭ್ ಪಂತ್, ಶ್ರೇಯಸ್ ಅಯ್ಯರ್ ಮತ್ತು ಜಸ್‌ಪ್ರೀತ್ ಬೂಮ್ರಾ ಅವರ ಆಟ ಗಮನ ಸೆಳೆಯಿತು. ಕಪಿಲ್ ದೇವ್ ಮತ್ತು ದಕ್ಷಿಣ ಆಫ್ರಿಕಾದ ಡೇಲ್ ಸ್ಟೇನ್ ಅವರ ವಿಕೆಟ್ ಗಳಿಕೆಯ ದಾಖಲೆಯನ್ನು ಅಶ್ವಿನ್ ಮುರಿದರು. ಲಂಕಾ ತಂಡಕ್ಕೆ ಒಂದು ಪಂದ್ಯದಲ್ಲಿಯೂ ಗೆಲುವು ಲಭಿಸಲಿಲ್ಲ. ಆದರೆ, ಬಲಿಷ್ಠ ತಂಡದ ಎದುರು ಆಡುವ ಅನುಭವ ದೊರೆಯಿತು. ತಂಡದ ನಾಯಕ ದಿಮುತ್ ಕರುಣರತ್ನೆ ಅವರು ಬೆಂಗಳೂರಿನಲ್ಲಿ ಹೊಡೆದ ಶತಕ ಗಮನ ಸೆಳೆಯಿತು. ಪುನರುತ್ಥಾನದ ಹಾದಿಯಲ್ಲಿರುವ ಈ ತಂಡಕ್ಕೆ ಇದು ಸ್ಫೂರ್ತಿಯಾಗಬಲ್ಲದು. ಇದೇ ಸಂದರ್ಭದಲ್ಲಿ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ ಸುರಂಗಾ ಲಕ್ಮಲ್ ಅವರಿಗೆ ಭಾರತದ ಆಟಗಾರರು ನೀಡಿದ ಬೆಚ್ಚನೆಯ ಬೀಳ್ಕೊಡುಗೆ ಕ್ರೀಡಾಸ್ಫೂರ್ತಿಯ ಪ್ರತೀಕವಾಗಿ ದಾಖಲಾಯಿತು.

ಚುಟುಕು ಕ್ರಿಕೆಟ್ ಭರಾಟೆಯಲ್ಲಿ ಮಿಂದೇಳುವ ಇಂದಿನ ಯುವಸಮೂಹವನ್ನು ಟೆಸ್ಟ್‌ನತ್ತ ಸೆಳೆಯಬೇಕಾದರೆ ಬ್ಯಾಟರ್ ಮತ್ತು ಬೌಲರ್‌ಗಳ ಸಾಮರ್ಥ್ಯ ಪ್ರದರ್ಶನಕ್ಕೆ ಸಮಾನ ಅವಕಾಶ ಕಲ್ಪಿಸಬೇಕು

ಇವೆಲ್ಲದರಾಚೆ ಇನ್ನೂ ಕೆಲವು ಚರ್ಚೆಗಳಿಗೂ ಈ ಸರಣಿ ಗ್ರಾಸವಾಯಿತು. ಟೆಸ್ಟ್ ಪಂದ್ಯವೊಂದು ಮೂರೇ ದಿನಗಳಲ್ಲಿ ಮುಕ್ತಾಯವಾಗುವುದರ ಬಗ್ಗೆ ಅಸಮಾಧಾನ ವ್ಯಕ್ತವಾಗಿದೆ. ಪಿಚ್ ಸಿದ್ಧಗೊಳಿಸುತ್ತಿರುವ ಬಗೆಯೇ ಇದಕ್ಕೆ ಕಾರಣ ಎಂಬ ಟೀಕೆಗಳು ಕೇಳಿಬಂದಿವೆ. ಪಿಂಕ್ ಬಾಲ್ ಟೆಸ್ಟ್‌ಗಳು ಭಾರತದಲ್ಲಿ ಈವರೆಗೆ ಮೂರು ನಡೆದಿವೆ. ಈ ಮೂರೂ ಟೆಸ್ಟ್‌ಗಳು ಮೂರೇ ದಿನಗಳಲ್ಲಿ ಮುಕ್ತಾಯಗೊಂಡಿವೆ. ವಿಶ್ವದ ಯಾವುದೇ ಪಿಚ್‌ನಲ್ಲಿಯೂ ವಿಕೆಟ್ ಗಳಿಸುವ ಸಮರ್ಥ ಬೌಲಿಂಗ್ ಪಡೆ ಭಾರತ ತಂಡದಲ್ಲಿದೆ. ಅದರಲ್ಲೂ ಬೂಮ್ರಾ ಅವರಂತಹ ಬೌಲರ್ ಇರುವುದು ತಂಡದ ಸಾಮರ್ಥ್ಯ ಹೆಚ್ಚಿಸಿದೆ. ಆದರೆ, ಬ್ಯಾಟರ್‌ಗಳು ರನ್ ಹೊಳೆ ಹರಿಸದಿದ್ದರೆ ಕ್ರಿಕೆಟ್ ಅಭಿಮಾನಿಗಳಿಗೆ ಮನರಂಜನೆ ಸಿಗುವುದಿಲ್ಲ. ಅದರಲ್ಲೂ ಟಿ20 ಕ್ರಿಕೆಟ್ ಭರಾಟೆಯಲ್ಲಿ ಮಿಂದೇಳುವ ಇಂದಿನ ಯುವಸಮೂಹವನ್ನು ಟೆಸ್ಟ್‌ನತ್ತ ಸೆಳೆಯಬೇಕಾದರೆ ಬ್ಯಾಟರ್ ಮತ್ತು ಬೌಲರ್‌ಗಳ ಸಾಮರ್ಥ್ಯ ಪ್ರದರ್ಶನಕ್ಕೆ ಸಮಾನ ಅವಕಾಶ ಕಲ್ಪಿಸಬೇಕು. ಬೆಂಗಳೂರು ಪಂದ್ಯದಲ್ಲಿ ಮೊದಲ ದಿನವೇ ಪಿಚ್‌ನಲ್ಲಿ ದೂಳು ಹಾರಿತು ಮತ್ತು ಒಂದೇ ದಿನ 16 ವಿಕೆಟ್‌ಗಳು ಪತನವಾದವು. ಈ ಪಂದ್ಯದ ಎರಡನೇ ದಿನದಾಟದಲ್ಲಿ ನಾಲ್ವರು ಅಭಿಮಾನಿಗಳು ಮೈದಾನದೊಳಕ್ಕೆ ನುಗ್ಗಿದ್ದು ದೊಡ್ಡ ಸುದ್ದಿಯಾಯಿತು. ಇದು ಭದ್ರತಾ ಲೋಪ ಎಂಬುದರಲ್ಲಿ ಎರಡು ಮಾತಿಲ್ಲ. ಮೈದಾನದೊಳಕ್ಕೆ ನುಗ್ಗಿದ್ದವರಲ್ಲಿ ಒಬ್ಬ ವ್ಯಕ್ತಿ ವಿರಾಟ್ ಕೊಹ್ಲಿ ಅವರೊಂದಿಗೆ ಪಿಚ್ ಸಮೀಪವೇ ನಿಂತು ಸೆಲ್ಫಿ ತೆಗೆದುಕೊಂಡ ನಂತರವಷ್ಟೇ ಆತನನ್ನು ಭದ್ರತಾ ಸಿಬ್ಬಂದಿ ವಶಕ್ಕೆ ಪಡೆಯಿತು. ಕ್ರಿಕೆಟ್ ಆಟವನ್ನು ಧರ್ಮದಂತೆ ಆರಾಧಿಸುವ ಇಲ್ಲಿಯ ಅಭಿಮಾನಿಗಳಿಂದ ಹಿಂದೆಯೂ ಇಂತಹ ಅತಿರೇಕಗಳು ಆಗಿದ್ದವು. ಆದರೆ ಈ ಬಾರಿಯ ಪಂದ್ಯವು ಬಯೊಬಬಲ್ ವ್ಯವಸ್ಥೆಯಲ್ಲಿ ನಡೆದಿದ್ದರಿಂದ ಇದನ್ನು ಗಂಭೀರವಾಗಿ ಪರಿಗಣಿಸಬೇಕಾದ ಅವಶ್ಯಕತೆ ಇದೆ. ಆಟಗಾರರು ಮತ್ತು ಸಿಬ್ಬಂದಿಯ ಸುರಕ್ಷತೆಗಾಗಿ ಹಲವಾರು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗಿದೆ. ಈ ಲೋಪಕ್ಕೆ ಭದ್ರತಾ ವೈಫಲ್ಯವೇ ಕಾರಣ. ಆಟಗಾರರ ಸುರಕ್ಷತೆಯ ವಿಷಯದಲ್ಲಿ ರಾಜಿ ಸಲ್ಲದು. ಮುಂದೆ ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರ ವಹಿಸಬೇಕು.

ದಿನದ ಟ್ವೀಟ್

ನಾಚಿಕೆಗೇಡಿನ ಸಂಗತಿ

ಬೆಂಗಳೂರಿನ ರಸ್ತೆಗಳ ನಿರ್ವಹಣೆಯನ್ನು ನ್ಯಾಯಾಲಯಗಳು ವಹಿಸಿಕೊಳ್ಳಬೇಕಾದ ಸಮಯ ಈಗ ಬಂದಿದೆ. ಸಂಸ್ಥೆಗಳ ನಡುವೆ ಸಮನ್ವಯ ಸಾಧಿಸಿ ರಸ್ತೆಗುಂಡಿಗಳನ್ನು ಮುಚ್ಚುವ ಮೂಲಕ ಅಮೂಲ್ಯ ಜೀವಗಳನ್ನು ಉಳಿಸುವ ಸಾಮರ್ಥ್ಯ ನಮ್ಮ ರಾಜಕಾರಣಿಗಳಿಗೆ ಇಲ್ಲ. ಸ್ವಾತಂತ್ರ್ಯದ 75ನೇ ವರ್ಷವನ್ನು ಪೂರ್ಣಗೊಳಿಸುವ ಸಂದರ್ಭದಲ್ಲಿ ನಾವಿದ್ದೇವೆ. ನಾಚಿಕೆಗೇಡು.

ಬಿ.ವಿ.ಸುಭಾಷ್, ನಾಗರಿಕ

ಕಿಡಿನುಡಿ

ಆನ್‌ಲೈನ್ ಶಾಪಿಂಗ್ ವಿಶೇಷವಾಗಿ ಪಟ್ಟಣ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗುವುದರೊಂದಿಗೆ, ವಂಚನೆ ಮತ್ತು ಕಳಪೆ ದರ್ಜೆಯ ಉತ್ಪನ್ನಗಳನ್ನು ವಿತರಿಸುವ ಪ್ರಕರಣಗಳ ಸಂಖ್ಯೆಯೂ ಹೆಚ್ಚುತ್ತಿದೆ. ಇಂತಹ ವ್ಯಕ್ತಿ ಅಥವಾ ಕಂಪನಿಗಳನ್ನು ಭಾರತ ಸರ್ಕಾರವು ತ್ವರಿತವಾಗಿ ಶಿಕ್ಷೆಗೆ ಒಳಪಡಿಸಬೇಕು. #WorldConsumerRightsDay

ಶಿಶಿರ್ ಗಮಾಂಗ್, ಬಿಜೆಪಿ ಮುಖಂಡ, ಒಡಿಶಾ

25 ವರ್ಷಗಳ ಹಿಂದೆ

ಭಾನುವಾರ, 16-3-1997

• ರೂ. 268 ಕೋಟಿ ಯೋಜನೆ ಜಾರಿಯಲ್ಲಿ ರಾಜ್ಯದ ವಿಳಂಬ

ನವದೆಹಲಿ, ಮಾ. 15- ಕರ್ನಾಟಕದ 29 ಪಟ್ಟಣಗಳಿಗೆ ಮುಖ್ಯವಾಗಿ ಕುಡಿಯುವ ನೀರು ಪೂರೈಕೆ ಮತ್ತು ಇತರ ನಾಗರಿಕ ಸೌಲಭ್ಯ ಒದಗಿಸಲು ಒಟ್ಟು ರೂ. 268.76 ಕೋಟಿ ಯೋಜನೆಯನ್ನು ಮಂಜೂರು ಮಾಡಲಾಗಿದೆ. ಆದರೆ ರಾಜ್ಯ ಸರ್ಕಾರ ಮತ್ತು ಸಂಬಂಧಿಸಿದ ಸಂಸ್ಥೆಗಳು ಅವಶ್ಯ ಮಾಹಿತಿಯನ್ನು ಪೂರೈಸುವ ಜತೆಗೆ ಗ್ಯಾರಂಟಿ ನೀಡಿ ಈ ಯೋಜನೆಯ ಲಾಭವನ್ನು ಪಡೆಯಲು ರಾಜ್ಯದಿಂದ ಇನ್ನೂ ಸಾಧ್ಯವಾಗಿಲ್ಲ.

ನಗರ ವ್ಯವಹಾರಗಳ ರಾಜ್ಯ ಸಚಿವ ಡಾ. ಯು.ವೆಂಕಟೇಶ್ವರಲು ಅವರು ರಾಜ್ಯಸಭೆಯಲ್ಲಿ ಕಾಂಗ್ರೆಸ್‌ನ ಎಚ್. ಹನುಮಂತಪ್ಪ ಅವರಿಗೆ ನೀಡಿದ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಇದರ ಜತೆಗೆ ವಸತಿ ಯೋಜನೆ, ಬೆಂಗಳೂರು ಮಹಾನಗರ ಯೋಜನೆ ಹಾಗೂ ಇತರ ನಗರ ಪ್ರದೇಶಗಳ ಅಭಿವೃದ್ಧಿಗಾಗಿ ರೂ. 436.85 ಕೋಟಿಯನ್ನು ಮಂಜೂರು ಮಾಡುವ ಯೋಜನೆಗೂ ಒಪ್ಪಿಗೆ ಕೊಡಲಾಗಿದೆ ಎಂದು ಅವರು ತಿಳಿಸಿದ್ದಾರೆ.

• ಬಿಜೆಪಿಯ 116 ಮುಖಂಡರ ಬಂಧನ, ಬಿಡುಗಡೆ

ಬೆಂಗಳೂರು, ಮಾ. 15- ಬಸ್ ಪ್ರಯಾಣದರ ಏರಿಕೆಯ ವಿರುದ್ಧ ರಾಜ್ಯವ್ಯಾಪಿ ಪ್ರತಿಭಟನೆ ಅಂಗವಾಗಿ ಇಂದು ಇಲ್ಲಿ ಸುಭಾಷ್‌ನಗರದ ಕೆಎಸ್‌ಆರ್‌ಟಿಸಿ ಮತ್ತು ಬಿಟಿಎಸ್ ನಿಲ್ದಾಣಗಳಲ್ಲಿ ಬಸ್‌ಗಳನ್ನು ತಡೆದ ಬಿಜೆಪಿ ಮುಖಂಡರಾದ ಬಿ.ಎಸ್.ಯಡಿಯೂರಪ್ಪ, ವೈ. ರಾಮಕೃಷ್ಣ ಸೇರಿದಂತೆ ಪಕ್ಷದ 116 ಕಾರ್ಯಕರ್ತರನ್ನು ಪೊಲೀಸರು ಬಂಧಿಸಿ, ಬಿಡುಗಡೆ ಮಾಡಿದರು.

ಪ್ರತಿಭಟನಕಾರರು ಸುಮಾರು ಅರ್ಧ ತಾಸು ರಸ್ತೆ ಮೇಲೆ ಅಡ್ಡಲಾಗಿ ಕುಳಿತಿದ್ದರಿಂದ ಈ ಎರಡು ನಿಲ್ದಾಣಗಳಲ್ಲಿ ಸಂಚಾರ ವ್ಯವಸ್ಥೆ ಅಸ್ತವ್ಯಸ್ತಗೊಂಡಿತು. ಆದರೆ ಇಡೀ ಚಳವಳಿ ಯಾವುದೇ ಅಹಿತಕರ ಘಟನೆಗಳಿಲ್ಲದೆ ಶಾಂತರೀತಿಯಲ್ಲಿ ಕೊನೆಗೊಂಡಿತು.

50 ವರ್ಷಗಳ ಹಿಂದೆ

ಗುರುವಾರ, 16-3-1972

• ಕಾಂಗ್ರೆಸ್ ಶಾಸಕ ಪಕ್ಷದ ನಾಯಕರಾಗಿ ಅರಸು ಅವರ ಆಯ್ಕೆ ಖಚಿತ

ಬೆಂಗಳೂರು, ಮಾ. 15- ಮಾರ್ಚ್ 18 ರಂದು ನಡೆಯುವ ಕಾಂಗ್ರೆಸ್ ಪಕ್ಷದ ಶಾಸಕಾಂಗ ಸಭೆಯು ಶ್ರೀ ಡಿ.ದೇವರಾಜ ಅರಸು ಅವರನ್ನು ತನ್ನ ನಾಯಕನನ್ನಾಗಿ ಆರಿಸುವುದು ಖಚಿತವಾದಂತಾಗಿದೆ.

ಸಭೆಯಲ್ಲಿ ಸದಸ್ಯರ ಅಭಿಪ್ರಾಯ ಸಂಗ್ರಹಣೆ ನಡೆದ ನಂತರ ಅವರು ಸರ್ವಾನುಮತದಿಂದ ಚುನಾಯಿತರಾಗುವರೋ ಅಥವಾ ಪಕ್ಷ ನೇರವಾಗಿ ಚುನಾಯಿಸುವುದೋ ಎಂಬುದು ಮಾತ್ರ ಉಳಿದಿರುವ ಪ್ರಶ್ನೆ. ಪಕ್ಷದ ನಾಯಕ ಸ್ಥಾನದ ಮತ್ತೊಬ್ಬ ಆಕಾಂಕ್ಷಿ, ವಿಸರ್ಜಿತ ಸಭೆಯಲ್ಲಿ ಪಕ್ಷದ ನಾಯಕರಾಗಿದ್ದ ಶ್ರೀ ಎಚ್.ಸಿದ್ದವೀರಪ್ಪ ಅವರು ದೆಹಲಿಯಲ್ಲಿದ್ದಾರೆ. ಪ್ರಧಾನಿ ಮತ್ತಿತರರನ್ನು ಭೇಟಿ ಮಾಡಿ ನಗರಕ್ಕೆ ಹಿಂದಿರುಗಿದ ನಂತರ ಅವರು ಸ್ಪರ್ಧಿಯಾಗುವರೋ ಇಲ್ಲವೋ ಎಂಬುದು ಖಚಿತವಾಗಿ ತಿಳಿಯುತ್ತದೆ.

ಹಬ್ಬಕ್ಕೆ ತಂದ ಹರಕೆಯ ಕುರಿ ತೋರಣಕ್ಕೆ ತಂದ ತಳಿರ ಮೇಯಿತ್ತು... ಕೊಂದವರುಳಿವರೆ?

ಕೋಮು ಪ್ರತಾಪ: ತಟ್ಟದಿರಲಿ ತಾಪ

ಗತಿಬಿಂಬ

ವೈ.ಗ. ಜಗದೀಶ್

ಅಧಿಕಾರ ಹಿಡಿಯುವುದೇ ಅಸಾಧ್ಯವೆಂಬ ಪ್ರತಿಕೂಲ ಸನ್ನಿವೇಶವಿದ್ದ ಉತ್ತರಪ್ರದೇಶದಲ್ಲಿ ಬಿಜೆಪಿ ಮತ್ತೆ ಗದ್ದುಗೆಗೇರುವ ಅವಕಾಶ ಸೃಷ್ಟಿಸಿಕೊಂಡಿದೆ. ಉತ್ತರಾಖಂಡ, ಗೋವಾದಲ್ಲೂ ಅಧಿಕಾರ ಹಿಡಿಯುವ ಛಾತಿ ತೋರಿಸಿದೆ. ನಾಲ್ಕು ರಾಜ್ಯಗಳಲ್ಲಿನ ಗೆಲುವು-ಕೇಸರಿಪಡೆಯ ಉತ್ಸಾಹವನ್ನು ಇಮ್ಮಡಿಗೊಳಿಸಿದೆ. ಬಿಜೆಪಿಯ ಮರ್ಮಾಘಾತದಿಂದ ಕಾಂಗ್ರೆಸ್ ಬೆನ್ನುಮೂಳೆಯೇ ಮುರುಟಿ ಹೋದಂತೆ ಒದ್ದಾಡುತ್ತಿದೆ.

ನೂರು ವರ್ಷದ ಹಿಂದೆ ಆರ್‌ಎಸ್‌ಎಸ್ ಬಿತ್ತಿದ ಕೋಮು ಬೀಜ, ಇವತ್ತು ಹೆಮ್ಮರವಾಗಿ ಬೆಳೆದು ಫಲ ಕೊಡುತ್ತಿರುವುದಕ್ಕೆ ನಾಲ್ಕು ರಾಜ್ಯಗಳ ಫಲಿತಾಂಶ ಸಾಕ್ಷಿ. ಉತ್ತರಪ್ರದೇಶವನ್ನು 'ಹಿಂದುತ್ವದ ಪ್ರಯೋಗಶಾಲೆ'ಯಾಗಿಸಿದ ಪರಿಣಾಮವೇ ಈ ಚುನಾವಣೆಯ ವಿಜಯಕ್ಕೆ ಕಾರಣ ಎಂಬುದು ಸುಡು ವಾಸ್ತವ. ಹಿಂದುತ್ವದ ಬೇರು ತಳವೂರಿದ್ದರಿಂದಲೇ ಐದು ರಾಜ್ಯಗಳಲ್ಲಿ ನಾಲ್ಕನ್ನು ತೆಕ್ಕೆಗೆ ತೆಗೆದುಕೊಳ್ಳಲು ಸಾಧ್ಯವಾಯಿತು.

ದೇಶದೆಲ್ಲೆಡೆ ಕೇಸರಿ ಬಾವುಟ ಹಾರಿಸುವ ಕನಸು ನಿನ್ನೆ ಮೊನ್ನೆಯದಲ್ಲ. ಆರ್‌ಎಸ್‌ಎಸ್‌ನ ಎರಡನೇ ಸರಸಂಘಚಾಲಕರಾದ ಎಂ.ಎಸ್. ಗೋಳ್ವಾಲ್ಕರ್ ಹಚ್ಚಿದ ಆಲೋಚನೆ ದೇಶದ ಬಹುಭಾಗದಲ್ಲಿ ವಿಸ್ತಾರವಾಗಿ ಹರಡಿದೆ. ಆರ್‌ಎಸ್‌ಎಸ್-ಬಿಜೆಪಿಯವರಿಗೆ 'ಆದಿಗ್ರಂಥ' ಭಗವದ್ಗೀತೆಯಲ್ಲ; ಗೋಳ್ವಾಲ್ಕರರ 'ಚಿಂತನಗಂಗಾ'. 1939ರ ಸುಮಾರಿಗೆ ಮರಾಠಿಯಲ್ಲಿ ಪ್ರಕಟವಾದ 'ರಾಷ್ಟ್ರೀಯ ಮೀಮಾಂಸಾ' ಶೀರ್ಷಿಕೆಯ ಇಂಗ್ಲಿಷ್ ಅವತರಣಿಕೆ 'ವಿ ಆರ್(or) ಅವರ್ ನೇಷನ್‌ವುಡ್ ಡಿಫೈನ್ಡ್' ಲೇಖನವೂ ಚಿಂತನಗಂಗಾದ ಆದ್ಯಭಾಗ. 'ಅಖಂಡಭಾರತಸಿದ್ಧಾಂತ'ಪ್ರತಿಪಾದಿಸಿದ ಗೋಳ್ವಾಲ್ಕರ್, ಅದಕ್ಕೊಂದು 'ಆದರ್ಶಮಯ'ವಾದ, ಅದೇ ಹೊತ್ತಿಗೆ ಇಂಡಿಯಾದ ಬಹುಸಂಖ್ಯಾತರಿಗೆ ಕ್ರೂರವೆನಿಸುವ ವ್ಯಾಖ್ಯಾನಗಳನ್ನು ಮಂಡಿಸುತ್ತಾರೆ. 'ಭಾರತವು ಸಾಂಸ್ಕೃತಿಕ ರಾಷ್ಟ್ರವಾಗಿ ರೂಪುಗೊಳ್ಳಬೇಕು; ಅದು ಹಿಂದೂ ರಾಷ್ಟ್ರವಾಗಿರಬೇಕು. ಹಿಂದೂ ಸಂಸ್ಕೃತಿಯನ್ನು ಒಪ್ಪುವವರಷ್ಟೇ ಹಿಂದೂಗಳು. ಒಪ್ಪದವರನ್ನು ವಿದೇಶಿಯರೆಂದು ಪರಿಗಣಿಸಬೇಕು. ಭಾರತೀಯ ಪೌರತ್ವವೂ ಸೇರಿದಂತೆ ಬೇರೆ ಯಾವುದೇ ಸೌಲಭ್ಯವನ್ನು ಪಡೆಯಲು ಅವರು ಅರ್ಹರಾಗದಂತೆ ನೋಡಿಕೊಳ್ಳಬೇಕು' ಎಂಬ ಕಟು ಮತೀಯ ನಿಲುವನ್ನು ಅವರು ಪ್ರತಿಪಾದಿಸುತ್ತಾರೆ.

ಯೋಗಿ ಆದಿತ್ಯನಾಥ ಸಂಸದರಾಗಿದ್ದಾಗ ಇಂಡಿಯಾ ಹೆಸರನ್ನು ಭಾರತ ಎಂದು ಬದಲಿಸಬೇಕೆಂಬ ಪ್ರಸ್ತಾವ ಮುಂದಿಟ್ಟಿದ್ದರು. ಮುಂದೊಂದು ದಿನ ಕೆಂಪುಕೋಟೆಯ ಮೇಲೆ ಕೇಸರಿ ಧ್ವಜ ಹಾರಿಸುವ ಕಾಲ ಬರುತ್ತದೆ ಎಂಬ ಮಾತುಗಳನ್ನು ಸಚಿವ ಕೆ.ಎಸ್. ಈಶ್ವರಪ್ಪ ಆಡಿದ್ದರು. ನರೇಂದ್ರ ಮೋದಿ ಪ್ರಧಾನಿಯಾದ ಲಾಗಾಯ್ತಿನಿಂದ ಈವರೆಗಿನ ದೇಶದ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಗೋಳ್ವಾಲ್ಕರ್ ಆಶಯಗಳನ್ನು ಅನುಷ್ಠಾನ ಮಾಡುವ ಅಂಬೆಗಾಲಿನ ಯತ್ನವು ಈಗ ಎದ್ದು ನಿಂತು ನಡೆಯುವ ಮಟ್ಟಕ್ಕೆ ಬೆಳೆದಿರುವುದು ಕಣ್ಣಿಗೆ ರಾಚುತ್ತದೆ. ಸಂವಿಧಾನದ ಆಶಯಗಳನ್ನು ಕಣ್ಣಿಗೊತ್ತಿಕೊಂಡು ಜಾರಿ ಮಾಡಬೇಕಾದ ಸರ್ಕಾರದ ನೇತಾರರು, ಅದರ ಜಾಗೆಯಲ್ಲಿ ಬೇರೆ 'ಆಶಯ'ಗಳನ್ನು ಕಡೆದುಕೊಡುತ್ತಿದ್ದಾರೆ. ರಾಮಮಂದಿರಕ್ಕೆ ಶಂಕುಸ್ಥಾಪನೆ, ಗಂಗಾರತಿಗೆ ಚಾಲನೆ, ಸರ್ದಾರ್ ಪಟೇಲ್ ಪ್ರತಿಮೆ ನಿರ್ಮಾಣವು ಹಿಂದೂ ಸಂಸ್ಕೃತಿಯ ಪುನರುಜ್ಜೀವನದ ಸೂಚಕಗಳಾಗಿವೆ. ಯೋಗಿ ಮುಖ್ಯಮಂತ್ರಿಯಾದ ಮೇಲೆ ಉತ್ತರಪ್ರದೇಶದಲ್ಲಿ ಜಾರಿಗೆ ತಂದ ಕಾನೂನುಗಳು 'ಪ್ರಯೋಗಶಾಲೆ'ಯ ಯಶಸ್ವಿ ಕಥನಗಳಿಗೆ ಸಾಕ್ಷ್ಯಗಳಾಗುತ್ತವೆ.

ಇನ್ನು ಒಂದು ವರ್ಷದಲ್ಲಿ ಚುನಾವಣೆ ಎದುರಿಸಲಿರುವ ಕರ್ನಾಟಕದ ಬಿಜೆಪಿ ನಾಯಕರಿಗೆ 'ಉತ್ತರ ಪ್ರದೇಶ'ದ ಮಾದರಿ ಹೆಚ್ಚು ಆಪ್ಯಾಯಮಾನವಾದಂತಿದೆ. ಹಾಗೆ ನೋಡಿದರೆ, ಕರ್ನಾಟಕದಲ್ಲಿ ಈ ಪ್ರಯೋಗ ಹೊಸದೇನಲ್ಲ. ಈದ್ಗಾ ಮೈದಾನ ಹಾಗೂ ಬಾಬಾಬುಡನ್ ಗಿರಿ ವಿವಾದ, ಕೋಮುಗಲಭೆಗಳು, ಚರ್ಚ್ ಮೇಲಿನ ದಾಳಿಗಳ ನೆರವಿನಲ್ಲಿ ಅಧಿಕಾರ ಹಿಡಿಯುವ ಮಟ್ಟಕ್ಕೆ ಬಿಜೆಪಿ ಬೆಳೆಯಿತು. ಎಸ್. ಬಂಗಾರಪ್ಪ ಬಿಜೆಪಿ ಸೇರಿದ್ದು, ಎಚ್.ಡಿ. ಕುಮಾರಸ್ವಾಮಿ ಬಿಜೆಪಿ ಜತೆ ಕೂಡಿಕೆ ಮಾಡಿಕೊಂಡು ಅಧಿಕಾರ ನಡೆಸಿದ್ದು ಪೂರಕ ಕಾರಣಗಳು. ಇದಾದ ಬಳಿಕ, ಗೋಸಾಗಣೆ, ಗೋಹತ್ಯೆ ವಿರೋಧಿಸಿ ಬಿಜೆಪಿ-ಪರಿವಾರ ನಡೆಸಿದ ಹೋರಾಟಗಳ ಪರಿಣಾಮ ಅನ್ಯಮತ-ದ್ವೇಷ ಹಾಗೂ ಹಿಂದೂಮತಗಳ ಕ್ರೋಡೀಕರಣ ವಿಶಾಲ ನೆಲೆಗೆ ಹರಡಿಕೊಂಡಿದ್ದು ಬಿಜೆಪಿಗೆ ವರವಾಯಿತು.

ಹಿಜಾಬ್ ಅನ್ನು ರಾಜ್ಯವ್ಯಾಪಿ ವಿವಾದವಾಗಿಸಿದ ಬಗೆಯನ್ನೂ ಈ ನೆಲೆಯಲ್ಲೇ ನೋಡಬೇಕು. ಒಂದು ಕಾಲೇಜಿಗೆ ಸೀಮಿತವಾಗಿದ್ದ ಹಿಜಾಬ್ ವಿವಾದ ಇಡೀ ರಾಜ್ಯದ ಮೂಲೆಮೂಲೆಗೂ ವಾರದೊಪ್ಪತ್ತಿನಲ್ಲಿ ಹರಡಿತು. ತಮ್ಮ ನಿತ್ಯದ ಸಮಸ್ಯೆಗಳ ಬಗ್ಗೆ ತಲೆಯನ್ನೇ ಕೆಡಿಸಿಕೊಳ್ಳದ ಯುವ ಸಮೂಹ ತಮ್ಮದೇ ಸಹಪಾಠಿಗಳು ಹಿಜಾಬ್ ಧರಿಸಿ ಬರುವುದನ್ನು ವಿರೋಧಿಸಿ ಕೇಸರಿ ಶಾಲು ಹೊದ್ದು ಧಿಕ್ಕಾರ ಕೂಗಿತು. ಡ್ರಗ್ ಅಮಲಾದರೂ ಕೆಲಹೊತ್ತಿನಲ್ಲಿ ಇಳಿದುಹೋಗುತ್ತದೆ. ಆದರೆ, ಮತೀಯ ಅಮಲು ತಲೆಮಾರುಗಳನ್ನು ಸುಡುತ್ತದೆ. ಇದೇ ಕೇಸರಿಪಡೆ ಅಸ್ತ್ರ. 'ಹಿಜಾಬ್ ಧರಿಸಲೇಬೇಕು ಎಂದಿದ್ದರೆ ಪಾಕಿಸ್ತಾನಕ್ಕೆ ಹೋಗಿ' ಎಂದು ಬಿಜೆಪಿ ಸಂಸದರೇ ಹೇಳಿದ್ದುಂಟು. ಅಂದರೆ, ಕರ್ನಾಟಕದಲ್ಲಿ ಕೂಡ ಮತೀಯ ದ್ವೇಷವು ಮತ್ತಷ್ಟು ತೀವ್ರಗೊಳ್ಳುತ್ತಿರುವ ಆಘಾತಕಾರಿ ಲಕ್ಷಣ ಇದು.



ಬಿಜೆಪಿ ಅಧಿಕಾರ ಹಿಡಿದ ಬಳಿಕ ನಡೆದುಕೊಳ್ಳುತ್ತಿರುವ ರೀತಿಯೂ ಇದಕ್ಕೆ ಬಲವಾದ ನಿದರ್ಶನಗಳನ್ನು ನೀಡುತ್ತದೆ. ಮತಾಂತರ- ಗೋಹತ್ಯೆ ನಿಷೇಧ, ಪಠ್ಯ ಕೇಸರೀಕರಣ, ದೇವಸ್ಥಾನಗಳಿಗೆ ನೆರವು, ಮತೀಯ ಗೂಂಡಾಗಿರಿ ಸಮರ್ಥನೆ, ಮುಜರಾಯಿ ದೇವಸ್ಥಾನಗಳಿಗೆ ಮುಕ್ತ ಸ್ವಾತಂತ್ರ್ಯ, 'ದಿ ಕಾಶ್ಮೀರ್ ಫೈಲ್ಸ್' ಸಿನಿಮಾಕ್ಕೆ ತೆರಿಗೆ ವಿನಾಯಿತಿ... ಹೀಗೆ ಸಾಲು ಸಾಲು ತೀರ್ಮಾನಗಳು ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರವು ಯೋಗಿ ಹಾದಿಯಲ್ಲಿ ಸಾಗುತ್ತಿರುವ ಲಕ್ಷಣಗಳಂತಿವೆ.

ಶಿವಮೊಗ್ಗದಲ್ಲಿ ಬಜರಂಗದಳದ ಹುಡುಗ ಹರ್ಷ ಕೊಲೆಗೀಡಾದ. ಈ ಕೃತ್ಯದಲ್ಲಿ ಕೆಲವು ಮುಸ್ಲಿಂ ಹುಡುಗರ ಬಂಧನವಾಗಿದೆ. ಕೊಲೆಯಾದ ಕೂಡಲೇ ಆರೋಪಿಗಳನ್ನು ವಶಕ್ಕೆ ಪಡೆದ ಪೊಲೀಸರು, ಒಂದು ತಿಂಗಳಾದರೂ ಕೊಲೆಗೆ ಕಾರಣ ಏನು ಎಂಬುದನ್ನು ಬಹಿರಂಗಪಡಿಸಲೇ ಇಲ್ಲ. ಹರ್ಷನ ಕೊಲೆಯಾಗುತ್ತಿದ್ದಂತೆ ಆತನ ಕುಟುಂಬ ತಬ್ಬಲಿಯಾಯಿತು ಎಂದು ಬಿಜೆಪಿ ನಾಯಕರು ಹೇಳಿಕೊಂಡರು. 'ಮೊದಲೆಲ್ಲ ಸಂಘದವರು ಕೊಲೆಯಾದರೆ ನಾವಷ್ಟೇ ಅಲ್ಪ ನೆರವು ಕೊಡುತ್ತಿದ್ದೆವು. ಯಾರೂ ಹೇಳದೇ ಇದ್ದರೂ ನಾಡಿನ ಮೂಲೆ ಮೂಲೆಯಿಂದ ಹರ್ಷನ ಕುಟುಂಬಕ್ಕೆ ₹2 ಕೋಟಿಯಷ್ಟು ನೆರವು ಹರಿದುಬಂತು. ಇದು ಒಳ್ಳೆಯ ಬೆಳವಣಿಗೆಯಲ್ಲ. ಆದರೆ, ಹಿಂದೂಗಳು ರಾಜ್ಯದಾದ್ಯಂತ ಜಾಗೃತರಾಗಿರುವುದರ ಸಂಕೇತ' ಎಂದು ಬಿಜೆಪಿ ರಾಷ್ಟ್ರೀಯ ನಾಯಕರೊಬ್ಬರು ಪ್ರಾಸಂಗಿಕವಾಗಿ ಹೇಳಿದ್ದುಂಟು. ಅದೇ ಹೊತ್ತಿಗೆ ರಾಜ್ಯ ಸರ್ಕಾರ ಯಾವ ವಿವೇಚನೆಯೂ ಇಲ್ಲದಂತೆ ಹರ್ಷ ಕುಟುಂಬಕ್ಕೆ ₹25 ಲಕ್ಷ ನೀಡಿತು. ಕೋಮು ಹಿಂಸೆಗೆ ಬಲಿಯಾಗಬೇಡಿ ಎಂಬ ಸಂದೇಶ ಕೊಡಬೇಕಾದ ಪ್ರಜಾತಾಂತ್ರಿಕ ಸರ್ಕಾರ, 'ಹೀಗೆ 'ಹುತಾತ್ಮ'ರಾದರೆ ನಿಮ್ಮ ನೆರವಿಗೆ ನಾವಿದ್ದೇವೆ' ಎಂಬ ಅಭಯ ನೀಡಿದ್ದು ಅಧಿಕಾರದ ದುರ್ಬಳಕೆಯಷ್ಟೇ. ಇದು ಮತ್ತಷ್ಟು ಹಿಂಸೆಗೆ, ಕೋಮು ಪ್ರಚೋದನೆಗೆ ದಾರಿ ಮಾಡಿಕೊಡುವಂತಹ ನಡೆ.

ಆದರೆ, ಇಂತಹ ಕೋಮುಗಲಭೆಗಳಲ್ಲಿ ಬಲಿಯಾಗುವವರ ಪೈಕಿ ಶೇ 98ರಷ್ಟು ಜನ ತಳ ಸಮುದಾಯದ ಅತ್ಯಂತ ಕಡುಬಡವರೇ. ಧರ್ಮದ ಅಮಲನ್ನು ಮೆತ್ತುವವರು ಅಧಿಕಾರ ಸುಖದ ಸುಪ್ಪತ್ತಿಗೆಗೆ ಈ 'ಕೊಲೆ'ಗಳನ್ನು ಮೆಟ್ಟಿಲು ಮಾಡಿಕೊಳ್ಳುತ್ತಾರೆ.

ಇದನ್ನು ಹೇಳುವಾಗ; ಬಸವಣ್ಣನವರ 'ಹಬ್ಬಕ್ಕೆ ತಂದ ಹರಕೆಯ ಕುರಿ/ತೋರಣಕ್ಕೆ ತಂದ ತಳಿರ ಮೇಯಿತ್ತು!/ ಕೊಂದಹರೆಂಬುದನರಿಯದೆ/ ಬೆಂದೊಡಲ ಹೊರೆವುತ್ತಲಿದೆ?/ಅದಂದೆ ಹುಟ್ಟಿತ್ತು ಅದಂದೇ ಹೊಂದಿತ್ತು!!-ಕೊಂದವರುಳಿವರೆ ಕೂಡಲ ಸಂಗಮದೇವ' ಎಂಬ ವಚನ ನೆನಪಾಗುತ್ತದೆ. ಹರಕೆಯ ಕುರಿಯಾಗುತ್ತೇವೆಂಬುದು ಗೊತ್ತಿಲ್ಲದೇ ತಳಿರು ಮೇಯಲು ಹೋಗಬೇಡಿ ಎಂದು ಯಾರಿಗೆ ಹೇಳುವುದು? ಹೇಗೆ ಹೇಳುವುದು? ವರ್ಷದೊಪ್ಪತ್ತಿನಲ್ಲಿ ಚುನಾವಣೆ ನಡೆಯಬೇಕಿದ್ದು, ಗೆಲ್ಲಲೇಬೇಕಿರುವ ಬಿಜೆಪಿ ಹುರಿಯಾಳುಗಳು ತಂದೊಡ್ಡಬಹುದಾದ ಅನಾಹುತಗಳ ತಾಪ ನಾಡಿಗೆ ತಟ್ಟದಿರಲಿ...

ಚುರುಮುರಿ



ಮುಕ್ತ ಮುಕ್ತ...

• ಮಣ್ಣೆರಾಜು

'ಬುದ್ಧ, ಮಹಾವೀರರೇ ಮತ್ತೆ ಹುಟ್ಟಿ ಬಂದು ಶಾಂತಿ ಬೋಧಿಸಿ ಸೌಹಾರ್ದದ ಬುದ್ಧಿ ಹೇಳಿದರೂ ಯುದ್ಧಬದ್ಧರು ಬುದ್ಧಿ ಕಲಿಯಲಾರರು...' ಟಿ.ವಿ. ನ್ಯೂಸ್ ಆಫ್ ಮಾಡಿ ಶಂಕ್ರಿ ನಿಟ್ಟುಸಿರುಬಿಟ್ಟ.

'ಯಾರೇ ಬುದ್ಧಿ ಹೇಳಿದರೂ ಅವರು ಯುದ್ಧಬುದ್ಧಿ ಬಿಡುವುದಿಲ್ಲ' ಸುಮಿಗೂ ಬೇಸರ.

'ನಮ್ಮ ರಾಜಕೀಯ ನಾಯಕರೂ ಎಲೆಕ್ಷನ್ ಯುದ್ಧಕ್ಕೆ ಶಸ್ತ್ರ, ವಸ್ತ್ರ ಸಿದ್ಧ ಮಾಡಿಕೊಳ್ಳುತ್ತಿದ್ದಾರೆ. ಆ ಪಕ್ಷವನ್ನು ಮುಕ್ತ ಮಾಡುತ್ತೇವೆ, ಈ ಪಕ್ಷಕ್ಕೆ ಮುಕ್ತಿ ನೀಡುತ್ತೇವೆ ಎಂದು ಶಂಖ ಊದುತ್ತಾ ತಾಲಿಮು ಶುರು ಮಾಡಿದ್ದಾರೆ'.

'ಬೆಲೆ ಏರಿಕೆ, ತೆರಿಗೆ ಹೇರಿಕೆಯ ಸಂಕಷ್ಟದಿಂದ ಜನರನ್ನು ಮುಕ್ತ ಮಾಡ್ತೀವಿ, ಲಂಚ ಮುಕ್ತ, ಭ್ರಷ್ಟಾಚಾರ ಮುಕ್ತ ಆಡಳಿತ ಕೊಡುತ್ತೇವೆ ಎಂದು ಯಾರಾದರೂ ಹೇಳಿದ್ದಾರಾ?'

'ಇಲ್ಲ, ಆದರೆ ರಾಜಕಾರಣಿಗಳು ಹಣ ತಿನ್ನುವುದನ್ನು ಬಿಟ್ಟರೆ ಜನರು ಸಮಸ್ಯೆ, ಸಂಕಟದಿಂದ ಮುಕ್ತರಾಗುತ್ತಾರೆ ಎಂದೊಬ್ಬರು ಹೇಳಿದ್ದಾರೆ'.

'ಹಣ ತಿನ್ನೋದು ಆರೋಗ್ಯಕ್ಕೆ ಹಾನಿಕರ ಅಲ್ವಾ? ಮಿತಿಮೀರಿ ತಿಂದರೆ ನಮಗೆ ಅನ್ನವೇ ಅರಗುವುದಿಲ್ಲ'.

'ನಮಗೆ ಅನ್ನ ಭಾಗ್ಯವೇ ಸೌಭಾಗ್ಯ, ಹಣ ತಿನ್ನೋ ಭಾಗ್ಯವಿಲ್ಲ. ನಮ್ಮದಿರಲಿ, ಭೂಮಿ, ಬಂಡೆ, ಮರಳು, ಕಾಡನ್ನೂ ಬಿಡದೆ ತಿನ್ನುವ ತಿನ್ನಿಂಗಿಲಗಳೂ ಇದ್ದಾರಂತೆ'.

'ಇವನ್ನೆಲ್ಲಾ ತಿಂದು ಜೀರ್ಣಿಸಿಕೊಳ್ಳುತ್ತಾರೆಂದರೆ ಅವರು ಮಹಾನ್ ಜೀರ್ಣೋದ್ಧಾರಕರು!...'

'ಹೌದು, ನಮ್ಮ ಉದ್ಧಾರ, ಅಭಿವೃದ್ಧಿ ಆಗಬೇಕಾದರೆ ಬೆಟ್ಟಗುಡ್ಡ ಒಡೆದು ರೋಡ್ ಮಾಡಬೇಕು, ಕಾಡು ಕಡಿದು ಕಟ್ಟಡ ಕಟ್ಟಬೇಕು. ಹಳ್ಳದ ಮರಳು ತೆಗೆದು ಬರಡು ಮಾಡಬೇಕು'.

'ಅಭಿವೃದ್ಧಿ ಅಂತ ಬೆಟ್ಟಗುಡ್ಡ, ನೆಲಜಲ, ಕಾಡುಮೇಡು ಎಲ್ಲವನ್ನೂ ಮುಕ್ಕುತ್ತಾ ಹೋದರೆ ಮುಂದೊಂದು ದಿನ ಗಾಳಿ, ನೀರು, ಬದುಕು ಇಲ್ಲದೆ ನಮ್ಮೊಂದಿಗೆ ಸಕಲ ಜೀವಸಂಕುಲವೂ ಈ ಭೂಮಿಯಿಂದ ಮುಕ್ತ ಆಗಿಬಿಡುತ್ತದೆ!...' ಸುಮಿ ಆತಂಕಗೊಂಡಳು.

ಸಂಗತ

ಅಣೆಕಟ್ಟಿನಿಂದ ನದಿ ರಕ್ಷಿಸಬೇಕಿದೆ!

ನದಿಗಳ ಆರೋಗ್ಯ ಕಾಪಾಡುವ ದಿಸೆಯಲ್ಲಿ ಒಡಂಬಡಿಕೆಗಳಾಗಿವೆ, ಪ್ರಯತ್ನಗಳಾಗಿವೆ. ಆದರೆ ಅಂದುಕೊಂಡ ಗುರಿ ತಲುಪಲು ಸಾಧ್ಯವಾಗಿಲ್ಲ

• ಗುರುರಾಜ್ ಎಸ್. ದಾವಣಗೆರೆ

ಭೂಮಿಯ ಮೇಲೆ ವಾಸವಿರುವ ನಾವೆಲ್ಲ ಪ್ರತಿದಿನ ನಮ್ಮೆಲ್ಲರ ಒಟ್ಟು ತೂಕದಷ್ಟು ತ್ಯಾಜ್ಯವನ್ನು ನದಿ, ಸರೋವರ, ಸಾಗರಗಳಿಗೆ ಸೇರಿಸುತ್ತಿದ್ದೇವೆ! ಬದುಕು, ಕೃಷಿ, ನಾಗರಿಕತೆ ಕಲಿಸಿದ ನದಿಗಳು ಮಾಲಿನ್ಯದ ಮಡುಗಳಾಗಿವೆ. ವಿದ್ಯುತ್, ನೀರಾವರಿ, ಮೀನುಗಾರಿಕೆ, ವ್ಯವಸಾಯಗಳಿಗಾಗಿ ಡ್ಯಾಮು ಕಟ್ಟಿ, ನಾಲೆ ಕೊರೆದು ನದಿಗಳ ಕತ್ತು ಹಿಸುಕಲಾಗುತ್ತಿದೆ. ನದಿಗಳಿಗೆ ಅಡ್ಡಲಾಗಿ ಬೃಹತ್ ಅಣೆಕಟ್ಟು ನಿರ್ಮಾಣದ ವಿರುದ್ಧ ಜಾಗೃತಿ ಮೂಡಿಸುವ 'ಇಂಟರ್‌ನ್ಯಾಷನಲ್ ಡೇ ಫಾರ್ ಆ್ಯಕ್ಷನ್ ಆನ್ ರಿವರ್ಸ್' ಇತ್ತೀಚೆಗಷ್ಟೇ ಬಂದುಹೋಗಿದೆ.

ನದಿ ಎಂದರೆ ಕೇವಲ ನೀರ ಹರಿವಿನ ತಾಣವಲ್ಲ. ಅದು ಜೀವನದಿ. ಆರೋಗ್ಯವಂತ ನದಿಗಳಿಲ್ಲದ ಭೂಮಿಯನ್ನು ಊಹಿಸಿಕೊಳ್ಳಲು ಅಸಾಧ್ಯ.

ಈಗ್ಗೆ ಇಪ್ಪತ್ತೈದು ವರ್ಷಗಳ ಹಿಂದೆ ಬ್ರೆಜಿಲ್‌ನ ಕುರಿಟಿಬಾದಲ್ಲಿ ಸಭೆ ಸೇರಿದ್ದ ವಿಶ್ವದ 20 ದೇಶಗಳು, ಅಣೆಕಟ್ಟುಗಳಿಂದ ಅನುಕೂಲಕ್ಕಿಂತ ಅನನುಕೂಲವೇ ಜಾಸ್ತಿ ಎಂದು ವಾದಿಸಿ, ವಿಶ್ವದಾದ್ಯಂತ ಅಣೆಕಟ್ಟುಗಳಿಂದ ನದಿಗಳನ್ನು ರಕ್ಷಿಸಬೇಕು ಎಂದು ಒತ್ತಾಯದ ನಿಲುವು ತಳೆದವು. ಅಷ್ಟೊತ್ತಿಗಾಗಲೇ ಅಭಿವೃದ್ಧಿಯ ದಾರಿ ತುಳಿದಿದ್ದ ಬಹುತೇಕ ದೇಶಗಳು, ಏರುತ್ತಿದ್ದ ಜನಸಂಖ್ಯೆಯ ಹಸಿವು ನೀಗಿಸಲು ಬೃಹತ್ ಕೃಷಿ ಯೋಜನೆಗಳನ್ನು ಹಮ್ಮಿಕೊಂಡು, ಜಮೀನುಗಳಿಗೆ ನೀರುಣಿಸಲು ಅಣೆಕಟ್ಟು ನಿರ್ಮಿಸಿ ಜಲ ವಿದ್ಯುತ್ ಉತ್ಪಾದನೆಗೂ ಕೈ ಹಾಕಿದ್ದವು. ಅಣೆಕಟ್ಟುಗಳ ನೀರಿನಲ್ಲಿ ಕೋಟ್ಯಂತರ ಹೆಕ್ಟೇರ್ ಅರಣ್ಯ ಮುಳುಗಡೆಯಾಯಿತು. ಲಕ್ಷಾಂತರ ಜನ ನಿರಾಶ್ರಿತರಾದರು. ಪುನರ್ವಸತಿ ಯೋಜನೆಗಳು ಜನರ ಜೀವನವನ್ನು ಮತ್ತಷ್ಟು ಅತಂತ್ರಗೊಳಿಸಿದವು. ಜನ ಗ್ರಾಮ ತೊರೆದು ನಗರಗಳೆಡೆ ವಲಸೆ ಹೊರಟರು. ಸ್ಥಳ, ನೀರು, ಶುದ್ಧ ಗಾಳಿಗೆ ಪರದಾಡುತ್ತಿದ್ದ ಬೃಹತ್ ನಗರಗಳು ಮತ್ತಷ್ಟು ಕಂಗಾಲಾದವು.

ಬೃಹತ್ ಅಣೆಕಟ್ಟುಗಳು ಪರಿಸರಕ್ಕೆ ಪೂರಕವಲ್ಲ ಎಂದು ಬಲವಾಗಿ ಗೊತ್ತಿದ್ದರೂ ಹೊಸ ಯೋಜನೆಗಳು ತಲೆ ಎತ್ತುತ್ತಲೇ ಇವೆ. ಮಣಿಪುರ ರಾಜ್ಯದ ಬರಾಕ್ ನದಿಗೆ ನಿರ್ಮಿಸಲು ಉದ್ದೇಶಿಸಲಾಗಿರುವ ಮೂರು ಬೃಹತ್ ಅಣೆಕಟ್ಟುಗಳಿಗೆ ಸ್ಥಳೀಯರಿಂದ ಭಾರಿ ವಿರೋಧ ವ್ಯಕ್ತವಾಗಿದೆ. 193 ಮೆ.ವಾ. ವಿದ್ಯುತ್‌ಗಾಗಿ ಪಬ್ರಮ್, 67 ಮೆ.ವಾ.ಗಾಗಿ ಖೋನ್‌ಜೆಮ್ ಮತ್ತು 1500 ಮೆ.ವಾ. ವಿದ್ಯುತ್‌ಗಾಗಿ ಟಿಪಾಯ್‌ಮುಖ್ ಡ್ಯಾಂಗಳ ನಿರ್ಮಾಣ ಪ್ರಗತಿಯಲ್ಲಿದೆ. ಸಿಡಿಮದ್ದಿನ ಬಳಕೆ, ಮರಳು ತೆಗೆಯುವುದು, ಬಂಡೆಗಳನ್ನು ಸಿಡಿಸುವುದು ಮತ್ತು ಅರಣ್ಯ ಮುಳುಗಡೆಯಿಂದಾಗಿ ಪ್ರಮುಖ ನದಿಗಳ ಜಲಾನಯನ ಪ್ರದೇಶಗಳು ಒತ್ತಡಕ್ಕೆ ಸಿಲುಕಿದ್ದರಿಂದ ನದಿಗಳ ಸ್ವಾಭಾವಿಕ ಹರಿವಿಗೆ ಅಡ್ಡಿಯಾಗಿದೆ.

ನದಿಯ ಆರೋಗ್ಯ ಕಾಪಾಡಬೇಕೆಂಬ ದಿಸೆಯಲ್ಲಿ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟಗಳಲ್ಲಿ ಹಲವು ಒಡಂಬಡಿಕೆಗಳಾಗಿವೆ. ನದಿಗಳ ಶುದ್ಧೀಕರಣ, ನದಿ ಜೋಡಣೆ, ಅಣೆಕಟ್ಟು ನಿರ್ಮಾಣದಂಥ ಯೋಜನೆಗಳಿಗೆ ಲಕ್ಷಾಂತರ ಕೋಟಿ ರೂಪಾಯಿ ಖರ್ಚು ಮಾಡುತ್ತಿರುವ ಸರ್ಕಾರಗಳು ಅಂದುಕೊಂಡ ಗುರಿ ತಲುಪಲಾಗದೆ ಒದ್ದಾಡುತ್ತಿವೆ. ಸುಧಾರಣೆ ಬಯಸುವ ದೇಶಗಳ ಶೇ 80ರಷ್ಟು ತ್ಯಾಜ್ಯ ಯಾವ ಸಂಸ್ಕರಣೆಗೂ ಒಳಗಾಗದೆ ನೇರವಾಗಿ ನದಿಗಳನ್ನೇ ಸೇರುತ್ತದೆ.

ಭಾರತದ ನಾಲ್ಕು ಸಾವಿರ ನದಿಗಳಲ್ಲಿ ಅರ್ಧದಷ್ಟು ಸುಸ್ಥಿತಿಯಲ್ಲಿಲ್ಲ. ಪ್ರಮುಖ ನದಿಗಳ ದಡದ ಮೇಲೆ ಬೃಹತ್ ನಗರಗಳು ತಲೆಯೆತ್ತಿವೆ. ಅಲ್ಲಿನ ಉದ್ಯಮ, ಮನೆ, ಮತ್ತಿತರ ರಚನೆಗಳಿಂದ ಹರಿಯುವ ತ್ಯಾಜ್ಯ ನೀರ ನದಿಗೇ ಸೇರಿ, ಶುದ್ಧ ಕುಡಿಯುವ ನೀರು, ಬಳಕೆಯ ನೀರಿನ ಅಭಾವ ತಲೆದೋರಿದೆ. ಕೆಲವು ನದಿಗಳ ನೀರಿನ ಬಿಒಡಿ (biological oxygen demand- ನೀರು ಕುಡಿಯಲು, ಬಳಸಲು ಯೋಗ್ಯವೋ ಅಲ್ಲವೋ ಎಂದು ನಿರ್ಧರಿಸುವ ಗುಣಾಂಕ) ಐದನ್ನು ದಾಟಿದೆ. ಕರ್ನಾಟಕದ ಪ್ರಮುಖ ನದಿಗಳ ಅತ್ಯಂತ ಕಲುಷಿತವಾದ 17 ತಾಣಗಳನ್ನು ಗುರುತಿಸಿರುವ ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿ, ಹೀಗೇ ಮುಂದುವರಿದರೆ ನದಿಗಳನ್ನೇ ಕಳೆದುಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದೆ.

ಇಂಟರ್‌ನ್ಯಾಷನಲ್ ರಿವರ್ಸ್ ನೆಟ್‌ವರ್ಕ್, ನರ್ಮದಾ ಬಚಾವೋ ಆಂದೋಲನ, ಯುರೋಪಿಯನ್ ರಿವರ್ಸ್ ನೆಟ್‌ವರ್ಕ್, ಚಿಲಿಯ ಬಯೊಬಯೊ ಆ್ಯಕ್ಷನ್ ಗ್ರೂಪ್‌ಗಳು 25 ವರ್ಷಗಳಿಂದ ವಿಶ್ವದ ಎಲ್ಲ ನದಿಗಳ ಆರೋಗ್ಯದ ಕುರಿತು ಕಾಳಜಿ ವಹಿಸುತ್ತಿವೆ. ಕಳೆದ ವರ್ಷ 'ನದಿಗಳ ಹಕ್ಕು' ಎಂಬ ಧ್ಯೇಯದೊಂದಿಗೆ, ನದಿಗಳಿಗಾಗಿ ದುಡಿಯುವ ಅಂತರರಾಷ್ಟ್ರೀಯ ದಿನವನ್ನು ಆಚರಿಸಿ, ನದಿಗಳನ್ನು ರಾಷ್ಟ್ರೀಯ ಸಂಪತ್ತು ಎಂದು ಘೋಷಿಸಬೇಕು ಎಂದು ಒತ್ತಾಯಿಸಲಾಗಿತ್ತು. ನಾಗರಿಕರಿಗೆ ಹಕ್ಕುಗಳು ಇರುವಂತೆ ನದಿಗಳಿಗೂ ತಮ್ಮನ್ನು ತ್ಯಾಜ್ಯ ಮತ್ತು ಮಾಲಿನ್ಯಗಳಿಂದ ರಕ್ಷಿಸಿಕೊಳ್ಳುವ ಹಕ್ಕಿದೆ ಎಂಬುದು ನದಿ ತಜ್ಞರ ವಾದ. ವಿಚಾರ ಸಂಕಿರಣ, ಸಭೆ, ಕಾಲ್ನಡಿಗೆ ಜಾಥಾದ ಮೂಲಕ ಅರಿವು ಮೂಡಿಸುವ ಪ್ರಯತ್ನಗಳು ಅಲ್ಲಲ್ಲಿ ನಡೆದವಾದರೂ ಕೋವಿಡ್ ಉಪಟಳದಿಂದಾಗಿ ಪೂರ್ಣ ಪ್ರಮಾಣದ ಚಟುವಟಿಕೆಗಳು ನಡೆಯಲಿಲ್ಲ. ಮಾನವನ ಅಟ್ಟಹಾಸ ಎಷ್ಟಿದೆಯೆಂದರೆ, ಅಮೆರಿಕದ ಮೊಂಟಾನಾ ರಾಜ್ಯದ 201 ಅಡಿ ಉದ್ದದ ಅತ್ಯಂತ ಸಣ್ಣ ನದಿ ರೋ ಕೂಡಾ ಕಲುಷಿತಗೊಂಡಿದೆ. ಕಳೆದ ವರ್ಷ ಸಮೀಪದ ಕಾರ್ಖಾನೆಯ ವಿಷದಿಂದಾಗಿ ನದಿಯ ತುಂಬ ಸಾಲ್ಮನ್ ಮೀನುಗಳು ಸತ್ತು ಬಿದ್ದಿದ್ದವು.

ವಾಚಕರ ವಾಣಿ

ಮಾನವೀಯತೆ ಮರೆತವರಿಗೆ ಕ್ಷಮೆಯಿಲ್ಲ

ರಷ್ಯಾವು ಮಾನವೀಯತೆ, ಕರುಣೆ, ದಯೆ, ಧರ್ಮ ಎಲ್ಲವನ್ನೂ ಬದಿಗೊತ್ತಿ ಉಕ್ರೇನ್ ಮೇಲೆ ಕೆಂಡದ ಮಳೆಯನ್ನೇ ಸುರಿಸುತ್ತಿದೆ. 'ಅತ್ಯಂತ ನ್ಯಾಯಯುತವಾದ ಯುದ್ಧಕ್ಕಿಂತ, ಅತ್ಯಂತ ಅನ್ಯಾಯದಿಂದ ಕೂಡಿದ ಶಾಂತಿ ಮೇಲು' ಎಂಬ ಚಿಂತಕ ಸಿಸಿರೋ ಮಾತು ಎಷ್ಟು ಅರ್ಥಪೂರ್ಣ ಮತ್ತು ಎಷ್ಟು ಪ್ರಸ್ತುತ! ಉಕ್ರೇನಿನ ಆಸ್ಪತ್ರೆಯೊಂದರ ಮೇಲೆ ದಾಳಿ ನಡೆಸಿದ ರಷ್ಯಾ, ಆಗಷ್ಟೇ ಪ್ರಪಂಚಕ್ಕೆ ಕಣ್ಣುಬಿಟ್ಟ ಹಸುಗೂಸುಗಳು, ಬಾಣಂತಿಯರು, ಗರ್ಭಿಣಿಯರು ಇನ್ನಿಲ್ಲದಂತೆ ಮಾಡಿದ್ದನ್ನು ಯಾರೂ ಮನ್ನಿಸಲಾರರು. ಇಷ್ಟೆಲ್ಲಾ ನಡೆಯುತ್ತಿರುವಾಗ ಬಲಿಷ್ಠ ರಾಷ್ಟ್ರಗಳು ಸುಮ್ಮನೇ ಕುಳಿತಿರುವುದು ಅಕ್ಷಮ್ಯ. ಅವು ಯಾವ ದೇಶವನ್ನೂ ಬೆಂಬಲಿಸುವುದು ಬೇಡ. ಬದಲಾಗಿ, ಯುದ್ಧ ನಿಲ್ಲಿಸಿ ಶಾಂತಿ ಮಾತುಕತೆಗೆ ಮುಂದಾಗುವಂತೆ ಒತ್ತಡ ಹೇರಿದರೂ ಸಾಕು ಯುದ್ಧ ನಿಲ್ಲಬಹುದೇನೊ.

ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ

ಸ್ಥಾನ ಗುತ್ತಿಗೆ ತಪ್ಪಿಸಬೇಕಿದೆ!

ಹಿಂದೂ ದೇವಾಲಯಗಳ ಅರ್ಚಕರ ವಂಶಪಾರಂಪರ್ಯ ಹಕ್ಕುಗಳನ್ನು ತಮಿಳುನಾಡು ಸರ್ಕಾರ ರದ್ದುಪಡಿಸಿದ್ದುದನ್ನು ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠ ಎತ್ತಿ ಹಿಡಿದಿದ್ದು ಪ್ರಕಟವಾಗಿದೆ (ಪ್ರ.ವಾ., 50 ವರ್ಷಗಳ ಹಿಂದೆ, ಮಾರ್ಚ್ 15). ಇದನ್ನು ಓದಿದಾಗ ನಮ್ಮ ರಾಜಕಾರಣ ಹಿಡಿದಿರುವ ಹಾದಿ ನೆನಪಾಯಿತು. ವಂಶಪಾರಂಪರ್ಯ ಆಡಳಿತ ನಮ್ಮಲ್ಲಿ ಹಾಸುಹೊಕ್ಕಾಗಿ ಹೋಗಿದೆ. ಕೆಲವು ವಿಧಾನಸಭಾ ಕ್ಷೇತ್ರಗಳು ದಶಕಗಳಿಂದ ಒಂದೇ ಕುಟುಂಬದ ಹಿಡಿತಕ್ಕೆ ಒಳಪಟ್ಟಿವೆ. ಇಂತಹ ಉಪದ್ರವ ತಪ್ಪಿಸಲು ಕೂಡ ಒಂದು ಗಟ್ಟಿ ಕಾನೂನು ದೇಶದಲ್ಲಿ ಬರಬೇಕಿರುವುದು ಅತೀ ಅವಶ್ಯಕ. ಈ ಕುರಿತು ಕಾನೂನು ಪಂಡಿತರು ಗಮನಹರಿಸಬೇಕಿದೆ.

ಪ್ರಕಾಶ್ ಮಲ್ಕಿಒಡೆಯರ್, ಹೂವಿನಹಡಗಲಿ

ಅಡುಗೆ ಎಣ್ಣೆ ದಂಧೆ: ಬೀಳಲಿ ಕಡಿವಾಣ

ರಷ್ಯಾ ಹಾಗೂ ಉಕ್ರೇನ್ ನಡುವಣ ಯುದ್ಧದ ಪರಿಣಾಮವಾಗಿ ಅಡುಗೆ ಎಣ್ಣೆ ದರ ವಿಪರೀತ ಏರಿದೆ. ಮುಂದೆ ಸಿಗುತ್ತೋ ಇಲ್ಲವೋ ಎಂಬ ಆತಂಕದಿಂದ ಬೇಡಿಕೆಯೂ ದಿಢೀರನೆ ಹೆಚ್ಚಿದೆ. ಇದನ್ನೇ ಬಂಡವಾಳ ಮಾಡಿಕೊಂಡಿರುವ ತಾಲ್ಲೂಕು ಹಾಗೂ ಹೋಬಳಿ ಮಟ್ಟದ ವ್ಯಾಪಾರಿಗಳು ಅಡುಗೆ ಎಣ್ಣೆ ಮತ್ತಿತರ ವಸ್ತುಗಳ ಬೆಲೆಯನ್ನು ತಮಗಿಷ್ಟ ಬಂದಂತೆ ವಸೂಲಿ ಮಾಡುತ್ತಿದ್ದಾರೆ. ಅಡುಗೆ ಎಣ್ಣೆಯ ಪ್ಯಾಕೆಟ್ ಮೇಲೆ ನಿಗದಿತ ದರ ಇರುವುದನ್ನು ಗ್ರಾಹಕರು ಗಮನಕ್ಕೆ ತಂದರೆ, 'ಅದು ಮೊದಲೇ ಪ್ರಿಂಟಾಗಿತ್ತು. ಅದನ್ನು ಬದಲಿಸಲು ಸಾಧ್ಯವಾಗದು. ನಾವು ಹೆಚ್ಚಿನ ಹಣ ಕೊಟ್ಟು ತರುತ್ತೇವೆ. ಇಷ್ಟವಿದ್ದರೆ ಕೊಂಡುಕೊಳ್ಳಿ, ಬೇಡವಾದರೆ ಬಿಡಿ' ಎಂದು ಹೇಳುತ್ತಿದ್ದಾರೆ. ತಾಲ್ಲೂಕು ಆಹಾರ ನಿರೀಕ್ಷಕರು ಅಡುಗೆ ಎಣ್ಣೆಯ ದಂಧೆ ನಡೆಯುತ್ತಿರುವ ಅಂಗಡಿಗಳ ಮೇಲೆ ದಾಳಿ ಮಾಡಿ, ಅಂಗಡಿಗಳ ಪರವಾನಗಿ ರದ್ದುಪಡಿಸಿ ಸೂಕ್ತ ದಂಡ ವಿಧಿಸಿದರೆ ಉಳಿದವರು ಎಚ್ಚೆತ್ತುಕೊಳ್ಳುತ್ತಾರೆ.

ಭೂಮಿಕಾ ರಂಗಪ್ಪ ದಾಸರಡ್ಡಿ, ಬಿದರಿ

ಅನಗತ್ಯ ವಿಚಾರಕ್ಕೆ ಆಸ್ಪದ ಬೇಡ

ಕೋವಿಡ್‌ನಿಂದ ಈಗಾಗಲೇ ಪಠ್ಯ, ಪ್ರಾಯೋಗಿಕ ತರಗತಿಗಳು ಹಿಂದೆ ಉಳಿದಿದ್ದು, ಪರೀಕ್ಷೆ ಇನ್ನೇನು ಸನಿಹ ಬಂದಿದೆ. ಇದರ ಮಧ್ಯೆ ಹಿಜಾಬ್‌ಗೆ ಸಂಬಂಧಿಸಿದಂತೆ ಹೈಕೋರ್ಟ್ ತೀರ್ಪು ಬಂದಿದೆ. ಕ್ಲಾಸ್‌ರೂಮಿನಲ್ಲಿ ಟೆನಿಸ್ ತಾರೆ ಸಾನಿಯಾ ಮಿರ್ಜಾ, ಸುಪ್ರೀಂ ಕೋರ್ಟ್‌ಗೆ ನೇಮಕಗೊಂಡ ದೇಶದ ಮೊದಲ ಮಹಿಳಾ ನ್ಯಾಯಮೂರ್ತಿ ಫಾತಿಮಾ ಬೀಬಿ, ಸ್ವಾತಂತ್ರ್ಯ ಹೋರಾಟಗಾರ್ತಿ ಅರುಣಾ ಅಸಫ್ ಅಲಿ, ಬಾಂಗ್ಲಾ ಪ್ರಧಾನಿ ಶೇಖ್ ಹಸೀನಾ ಅವರಂತಹ ಅದೆಷ್ಟು ಉತ್ಕೃಷ್ಟ ವ್ಯಕ್ತಿಗಳಿದ್ದಾರೋ ಯಾರಿಗೆ ಗೊತ್ತು?

ಇಲ್ಲಿಯತನಕ ಆಗಿದ್ದು ಆಗಿಹೋಯಿತು. ಇದೀಗ ತೀರ್ಪು ಬಂದಾಯಿತು. ಇನ್ನಾದರೂ ಮುಸ್ಲಿಂ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಯಾವುದೇ ತೊಂದರೆಯಾಗದಂತೆ ತರಗತಿಗಳು ನಡೆಯಲಿ. ವಿದ್ಯಾರ್ಥಿಗಳು ಇನ್ನಾದರೂ ಅನಗತ್ಯ ವಿಚಾರಗಳಿಗೆ ತಲೆಕೆಡಿಸಿಕೊಳ್ಳದೆ, ಪರಸ್ಪರ ಸಹೋದರ, ಸಹೋದರಿಯರಂತೆ ಇದ್ದು, ಶಾಲೆಗೆ ಹೋಗಿ ವಿದ್ಯಾಭ್ಯಾಸ ಮಾಡುವಂತೆ ಆಗಲಿ.

ಬಸನಗೌಡ ಪಾಟೀಲ, ಯರಗುಪ್ಪಿ

ಸಚಿವರು ಮಾರುವೇಷದಲ್ಲಿ ಸುಳಿದಾಡಲಿ

ರಾಜ್ಯ ಸಾರಿಗೆ ಸಚಿವ ಶ್ರೀರಾಮುಲು ಅವರು 'ನಮ್ಮ ಇಲಾಖೆಯಲ್ಲಿ ಭ್ರಷ್ಟಾಚಾರಕ್ಕೆ ಅವಕಾಶವೇ ಇಲ್ಲ. ಈಗ ಅದಕ್ಕೆ ಸಂಪೂರ್ಣವಾಗಿ ಕಡಿವಾಣ ಹಾಕಲಾಗಿದೆ' ಎಂದು ಹೇಳಿದ್ದಾರೆ (ಪ್ರ.ವಾ., ಮಾರ್ಚ್ 14). ಇದು ನೂರಕ್ಕೆ ಸಾವಿರದಷ್ಟು ಪಾಲು ಸುಳ್ಳು. ಸಚಿವರು ತಮ್ಮ ಇಲಾಖೆಯ ಯಾರೋ ಅಧಿಕಾರಿ ನೀಡಿದ ಮಾಹಿತಿಯೇ ನಿಜವೆಂದು ನಂಬಿ ಪ್ರತಿಕ್ರಿಯಿಸಿದ್ದಾರೆ. ಆರ್‌ಟಿಒ ಕಚೇರಿಯ ಬಗೆಗಿನ ವಿಶೇಷ ವರದಿಯು (ಪ್ರ.ವಾ., ಮಾರ್ಚ್ 14) ಸಂಪೂರ್ಣ ವಾಸ್ತವ ಹಾಗೂ ವಸ್ತುನಿಷ್ಠವಾಗಿದೆ. ಆರ್‌ಟಿಒ ಕಚೇರಿಯಲ್ಲಿ ದಲ್ಲಾಳಿಗಳಿಲ್ಲದೆ ಯಾವುದೇ ಕೆಲಸವಾದರೆ ಅದನ್ನು ಪವಾಡವೆನ್ನಬಹುದು. ಇಲ್ಲಿನ ಬ್ರೋಕರ್‌ಗಳು ಎಷ್ಟು ಪ್ರಭಾವಶಾಲಿ ಆಗಿರುತ್ತಾರೆಂದರೆ, ಕಾನೂನಿಗೆ ಅನುಗುಣವಾಗಿ ಅಲ್ಪಸ್ವಲ್ಪ ಕೆಲಸ ಮಾಡಲೆತ್ನಿಸುವ ಆರ್‌ಟಿಒಗಳನ್ನು ಅಲ್ಲಿಂದ ಎತ್ತಂಗಡಿ ಮಾಡಿಸಿ ತಮಗೆ ಬೇಕಾದವರನ್ನು ಆ ಜಾಗಕ್ಕೆ ತರುತ್ತಾರೆ. ಈ ಕಚೇರಿಯ ಮೇಲೆ ಯಾವಾಗಲೂ ಯಾವುದೇ ದಾಳಿಗಳು ನಡೆಯುವುದೇ ಇಲ್ಲ. ಏಕೆಂದರೆ ಇವರ 'ಸಮಪಾಲು' ಸಿದ್ಧಾಂತ ಕರಾರುವಾಕ್ಕಾಗಿರುತ್ತದೆ. ಪಾಲುದಾರಿಕೆಯಲ್ಲಿ ಯಾವುದೇ ತಾರತಮ್ಯವೂ ಆಗುವುದಿಲ್ಲ.

ಹಾಗೆಯೇ ಈ ಕಚೇರಿಗಳ ಅಧಿಕಾರಿಗಳು ಮತ್ತು ನೌಕರರು ಜನರ ಹಣವನ್ನು ನೇರವಾಗಿ ಮುಟ್ಟುವುದೇ ಇಲ್ಲ. ಅದೇನಿದ್ದರೂ ದಲ್ಲಾಳಿಗಳ ಮೂಲಕ ಸಂದಾಯವಾಗುತ್ತದೆ. ಕಚೇರಿಯ ಅವಧಿ ಮುಗಿದ ನಂತರ ಅವರವರ ಯೋಗ್ಯತಾನುಸಾರ ಲಂಚದ ಹಣ ನಿರ್ವಂಚನೆಯಿಂದ ಬಟವಾಡೆಯಾಗುತ್ತದೆ. ಇದೆಲ್ಲವನ್ನೂ ಕಣ್ಣಾರೆ ಕಾಣಲು ಶ್ರೀರಾಮುಲು ಅವರು ಒಮ್ಮೆಯಾದರೂ ಹಿರಿಯ ಅಧಿಕಾರಿಗಳಿಗೆ ಗೊತ್ತಿಲ್ಲದಂತೆ ಮಾರುವೇಷದಲ್ಲಿ ನಾಲ್ಕಾರು ಆರ್‌ಟಿಒ ಕಚೇರಿಗಳ ಸುತ್ತಮುತ್ತ ಸುಳಿದಾಡಬೇಕು. ಆಗ ಅವರ 'ಪ್ರಾಮಾಣಿಕ ಇಲಾಖೆ'ಯ ವಿರಾಟ್ ಸ್ವರೂಪದ ದರ್ಶನವಾಗುತ್ತದೆ. ಅಲ್ಲದೆ ಸರ್ಕಾರ ಜಾರಿಗೆ ತಂದಿರುವ ಮತ್ತು ತರಲಿರುವ ಆನ್‌ಲೈನ್ ನಿಯಮಗಳು ಹೇಗೆ ನೌಕರರು ಮತ್ತು ದಲ್ಲಾಳಿಗಳ ಕಾಲಡಿಯಲ್ಲಿ ಉಸಿರುಕಟ್ಟುತ್ತಿವೆ ಎಂಬುದು ಸ್ವಯಂವೇದ್ಯವಾಗುತ್ತದೆ.

ಮೋದೂರು ಮಹೇಶಾರಾಧ್ಯ, ಹುಣಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ಹಿಜಾಬ್ ಅತ್ಯವಶ್ಯಕ ಧಾರ್ಮಿಕ ಆಚರಣೆಯಲ್ಲ’

ಹಿಜಾಬ್ ವಿವಾದ ಕುರಿತಂತೆ ಮಂಗಳವಾರ ಬೆಳಿಗ್ಗೆ ಅಂತಿಮ ತೀರ್ಪು ಪ್ರಕಟಿಸಿದ ವೇಳೆ ಹಿಜಾಬ್ ಧರಿಸಿದ ಯುವತಿಯರು ಬೆಂಗಳೂರಿನ ಹೈಕೋರ್ಟ್ ಮುಂದೆ ಹೆಜ್ಜೆ ಹಾಕಿದ್ದು ಮಂಗಳವಾರ ಕಂಡುಬಂತು. ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್.ಜಿ.

ಹಿಜಾಬ್ ಧರಿಸಲು ಅವಕಾಶ ಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದ ಉಡುಪಿ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿಯರು ಮಂಗಳವಾರ ತೀರ್ಪಿನ ಬಳಿಕ ಉಡುಪಿಯ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು–ಪ್ರಜಾವಾಣಿ ಚಿತ್ರ/ಇರ್ಷಾದ್ ಮಹಮ್ಮದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೆರಿಕದ ಖ್ಯಾತ ಸಂಶೋಧಕಿ ಮತ್ತು ಇತಿಹಾಸ ತಜ್ಞೆ ಸಾರಾ ಸ್ಲಿನಿಗರ್, ಹಿಜಾಬ್ ಕುರಿತಂತೆ ಹೇಳುವ ಮಾತೆಂದರೆ; ‘ಹಿಜಾಬ್ ನೋಡಲಿಕ್ಕೆ ಎಷ್ಟು ಸರಳವಾಗಿ ಕಾಣುತ್ತದೆಯೋ ಅದಕ್ಕೆ ವ್ಯತಿರಿಕ್ತವಾಗಿ ಅದೊಂದು ಅಪಾರ ಸಂಕೀರ್ಣತೆಯ ಅಡಗುತಾಣ!’.

ಈ ವಾಕ್ಯದೊಂದಿಗೆ ಆರಂಭವಾಗುವ ಹಿಜಾಬ್ ಕುರಿತಾದ ತೀರ್ಪಿನುದ್ದಕ್ಕೂ ಅಲ್ಲಲ್ಲಿ ದಾರ್ಶನಿಕರ ಉಲ್ಲೇಖಗಳಿವೆ. ಅವುಗಳ ಸಾಲಿನಲ್ಲಿ ರವೀಂದ್ರನಾಥ್ ಟ್ಯಾಗೋರ್, ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿದ್ದ ಸುಧಿ ರಂಜನ್ ದಾಸ್, ಪ್ರಖ್ಯಾತ ವಕೀಲರಾದ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್, ಪ್ರಖ್ಯಾತ ಶಿಕ್ಷಣ ತಜ್ಞ ಬರ್ಟ್ರಂಡ್ ರಸಲ್, ಆಸ್ಕರ್ ವೈಲ್ಡ್ ಅಂತಹವರಿದ್ದಾರೆ.

ಇವರೆಲ್ಲರ ಉದ್ಧೃತ ಪದಪುಂಜಗಳನ್ನು ಒಳಗೊಂಡಿರುವ 129 ಪುಟಗಳ ಈ ತೀರ್ಪಿನಲ್ಲಿ ಒಟ್ಟಾರೆ ಹೇಳಿರುವುದೇನೆಂದರೆ, ‘ಮುಸ್ಲಿಂ ಮಹಿಳೆಯರು ಹಿಜಾಬ್ ಧರಿಸುವುದು ಕಡ್ಡಾಯ, ಅವರ ಧಾರ್ಮಿಕ ಹಕ್ಕು ಎಂಬುದು ಆಧಾರರಹಿತ ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ಆಯಾ ಶಾಲಾ–ಕಾಲೇಜು ಅಭಿವೃದ್ಧಿ ಮಂಡಳಿಗಳು ಸೂಚಿಸುವ ಸಮವಸ್ತ್ರದ ಸಂಹಿತೆಯನ್ನು ಎಲ್ಲರೂ ಪಾಲಿಸಬೇಕು’ ಎಂಬುದಾಗಿದೆ.

ಅರ್ಜಿದಾರರು ಮತ್ತು ಪ್ರತಿವಾದಿಗಳ ವಾದ–ಪ್ರತಿವಾದ ಆಲಿಸಿದ ಬಳಿಕ ನ್ಯಾಯಪೀಠ ತೀರ್ಪಿಗೆ ಪೂರಕವಾಗಿ ನಾಲ್ಕು ಪ್ರಶ್ನೆಗಳನ್ನು ಕಣ್ಣ ಮುಂದಿರಿಸಿಕೊಂಡಿತ್ತು. ಅವುಗಳೆಂದರೆ;

ಪ್ರಶ್ನೆ: ಹಿಜಾಬ್ ಧರಿಸುವುದು ಇಸ್ಲಾಂ ಧರ್ಮದ ಅತ್ಯವಶ್ಯಕ ಆಚರಣೆಯೇ? ಹಿಜಾಬ್ ಧರಿಸುವುದನ್ನು ಸಂವಿಧಾನದ 25ನೇ ವಿಧಿಯ ಅಡಿಯಲ್ಲಿ ರಕ್ಷಿಸಬಹುದೇ?

● ಮುಸ್ಲಿಂ ಹೆಣ್ಣುಮಕ್ಕಳು ಹಿಜಾಬ್ ಧರಿಸುವುದು ಇಸ್ಲಾಂ ಧರ್ಮದ ಅತ್ಯಾವಶ್ಯಕ ಧಾರ್ಮಿಕ ಆಚರಣೆಯಲ್ಲ. ಒಂದು ಧರ್ಮದ ಆಚರಣೆಯು ಅಗತ್ಯ ಎಂದೆನ್ನಿಸಿಕೊಳ್ಳಬೇಕಾದರೆ; ಒಂದು ವೇಳೆ ಆ ಆಚರಣೆಯನ್ನು ಆಚರಿಸದೇ ಹೋದಲ್ಲಿ ಧರ್ಮ ಅಥವಾ ಮತ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತದೆ ಎಂದಾಗ ಮಾತ್ರವೇ ಅದು ಅತ್ಯಾವಶ್ಯಕ ಎನ್ನಿಸಿಕೊಳ್ಳುತ್ತದೆ. ಹೀಗಾಗಿ, ಹಿಜಾಬ್ ಅತ್ಯಾವಶ್ಯಕ ಧಾರ್ಮಿಕ ಆಚರಣೆಯಲ್ಲ.

ಋತುರಾಜ್ ಅವಸ್ಥಿ | ಕೃಷ್ಣ ಎಸ್. ದೀಕ್ಷಿತ್ | ಜೈಬುನ್ನೀಸಾ ಖಾಜಿ

ಪ್ರಶ್ನೆ: ಶಾಲೆಯಲ್ಲಿ ಹಿಜಾಬ್ ನಿಷೇಧವು ಸಂವಿಧಾನದ 19 (1) (ಎ) ವಿಧಿಯ ಅಡಿಯಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ಉಲ್ಲಂಘನೆಯಾಗುತ್ತದೆಯೇ?

● ಶಾಲಾ ಸಮವಸ್ತ್ರ ಧರಿಸುವಂತೆ ಸೂಚಿಸುವುದನ್ನು ವಿರೋಧಿಸುವುದು, ಸಂವಿಧಾನಕ್ಕೇ ವಿರುದ್ಧವಾದುದು. ಸಮವಸ್ತ್ರವನ್ನು ಬ್ರಿಟಿಷರಾಗಲೀ ಅಥವಾ ಮೊಘಲರಾಗಲೀ ಭಾರತಕ್ಕೆ ತಂದಿದ್ದಲ್ಲ. ಇದು ವೇದಗಳಲ್ಲೇ ಅಡಗಿದೆ. ಇದನ್ನು ಪಾಂಡುರಂಗ ವಾಮನ ಕಾಣೆಯವರು ತಮ್ಮ ‘ಹಿಸ್ಟರಿ ಆಫ್ ಧರ್ಮಶಾಸ್ತ್ರ’ದಲ್ಲಿಯೇ ಉಲ್ಲೇಖಿಸಿದ್ದಾರೆ. ವಿದ್ಯಾರ್ಥಿಗಳು, ರೈತರು, ಹೆಣ್ಣುಮಕ್ಕಳು, ಧಾರ್ಮಿಕ ಕ್ರಿಯಾವಿಧಿಗಳನ್ನು ನಡೆಸುವಂತಹವು ಯಾವ ಸಂದರ್ಭದಲ್ಲಿ ಏನನ್ನು ಮತ್ತು ನಿತ್ಯಜೀವನದಲ್ಲಿ ಯಾವ ರೀತಿಯ ವಸ್ತ್ರಗಳನ್ನು ತೊಡಬೇಕು ಎಂಬುದನ್ನೆಲ್ಲಾ ಇಲ್ಲಿ ವಿಶದಪಡಿಸಿದ್ದಾರೆ. ನಾಗರಿಕ ಸಮಾಜದ ದೇಶಗಳಲ್ಲಿ ಇದನ್ನು ಚಾಚೂ ತಪ್ಪದೆ ಪಾಲಿಸಿಕೊಂಡು ಬರಲಾಗುತ್ತಿದೆ. ಹಾಗಾಗಿ, ಶಾಲಾ ಕಾಲೇಜುಗಳಲ್ಲಿ ಸಮವಸ್ತ್ರ ಸಂಹಿತೆ ಸೂಚಿಸಿದರೆ ಅದನ್ನು ವಿರೋಧಿಸುವಂತಿಲ್ಲ.

ಪ್ರಶ್ನೆ: ಸಂವಿಧಾನದ 21ನೇ ವಿಧಿಯ ಅಡಿಯಲ್ಲಿ ಸಮವಸ್ತ್ರ ಧರಿಸುವಂತೆ ಸೂಚಿಸುವುದಕ್ಕೆ ಕಾನೂನಾತ್ಮಕ ಅನುಮತಿ ಸಾಧ್ಯವೇ?

● ಸಮವಸ್ತ್ರ ಸಂಹಿತೆ ರೂಪಿಸಲು ಕಾಲೇಜು ಅಭಿವೃದ್ಧಿ ಸಮಿತಿಗಳಿಗೆ (CDC) ಅಧಿಕಾರ ನೀಡಿ ರಾಜ್ಯ ಸರ್ಕಾರ 2022ರ ಫೆಬ್ರುವರಿ 5ರಂದು ಹೊರಡಿಸಿದ್ದ ಆದೇಶವು ಶಿಕ್ಷಣ ಕಾಯ್ದೆ–1983ಗೆ ಅನುಗುಣವಾಗಿಯೇ ಇದೆ. ಅಧಿಕಾರಿಗಳು ಪ್ರಯೋಗಿಸುವ ಆದೇಶಗಳಲ್ಲಿ ಕೆಲವೊಮ್ಮೆ ಒಂದು ಶಬ್ದವು ಮತ್ತೊಂದು ಶಬ್ದಕ್ಕೆ ಧ್ವನಿಸುವ ಅರ್ಥವನ್ನು ಅರಿತು ವಿಮರ್ಶಿಸಬೇಕಾಗುತ್ತದೆ. ಹೀಗಾಗಿ ಅರ್ಜಿದಾರರು ಆದೇಶದಲ್ಲಿನ ಪದಗಳ ಕುರಿತಂತೆ ಎತ್ತಿದ ಆಕ್ಷೇಪಣೆಗಳು ಮತ್ತು ಸರ್ಕಾರದ ಆದೇಶವನ್ನು ಅಸಿಂಧು ಎಂದು ಘೋಷಿಸಲು ಯಾವುದೇ ಅಧಿಕಾರವಿಲ್ಲ.

ಪ್ರಶ್ನೆ: ಪ್ರತಿವಾದಿಯಾದ ಉಡುಪಿಯ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರ ವಿರುದ್ಧ ಶಿಸ್ತು ಕ್ರಮಕ್ಕೆ ಕೋರಿದ, ಇದೇ ಕಾಲೇಜಿನ ಶಿಕ್ಷಕಿಯೊಬ್ಬರನ್ನು ಮತ್ತು ಶಾಸಕ ರಘುಪತಿ ಭಟ್ ಅವರನ್ನು ಅವರ ಸ್ಥಾನಗಳಿಂದ (ಕಾಲೇಜು ಅಭಿವೃದ್ಧಿ ಮಂಡಳಿ) ವಜಾಗೊಳಿಸಲು ನಿರ್ದೇಶನ ನೀಡಬೇಕೆಂಬ ಕೊ–ವಾರಂಟ್ ಅರ್ಜಿಗಳ ಬಗ್ಗೆ

● ಶಾಲೆಗಳು ‘ಅರ್ಹತೆ ಹೊಂದಿರುವ ಸಾರ್ವಜನಿಕ ಸ್ಥಳ’ ಎಂದು ಪರಿಗಣಿಸಲ್ಪಟ್ಟಿವೆ. ಇಂತಹ ಸ್ಥಳಗಳಲ್ಲಿ ವಿದ್ಯಾರ್ಥಿಗಳು ತಮ್ಮ ವೈಯಕ್ತಿಕ ಹಕ್ಕುಗಳ ಪ್ರತಿಪಾದನೆಗೆ ಆಸ್ಪದವಿರುವುದಿಲ್ಲ. ಸಂವಿಧಾನದ 14 ಮತ್ತು 15ನೇ ವಿಧಿಯಲ್ಲಿ ಹೇಳಿರುವ ಹಾಗೆ; ಎಲ್ಲಾ ವಿದ್ಯಾರ್ಥಿಗಳಿಗೂ ಸಮವಸ್ತ್ರ ಎಂಬುದು ಜಾತಿ, ಧರ್ಮ, ಭಾಷೆ, ಲಿಂಗ ಇವೆಲ್ಲವುಗಳನ್ನು ಹೊರತುಪಡಿಸಿ ಸಮಾನವಾಗಿ ಅನ್ವಯವಾಗುತ್ತದೆಯೇ ಹೊರತು ಪಂಥೀಯ ಆಧಾರದಲ್ಲಿ ನಿರ್ಧರಿತವಾಗಿರುವ ಯಾವ ಪ್ರಕರಣವೂ ನಮಗೆ ಕಾಣ ಸಿಗುವುದಿಲ್ಲ.

● ಪ್ರತಿವಾದಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂಬ ವಿಚಾರಕ್ಕೆ ಸಂಬಂಧಿಸಿದಂತೆ ಕೋರಿರುವ ರಿಟ್ ಅರ್ಜಿಗೆ ಯಾವುದೇ ಆಧಾರವಿಲ್ಲ. ಹೀಗಾಗಿ ಈ ಅರ್ಜಿಯನ್ನೂ ವಜಾಗೊಳಿಸಲಾಗುತ್ತಿದೆ.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 69

ವಿವಿಧ ರುದ್ರಾಕ್ಷಗಳ ವಿವಿಧ ಫಲಗಳು

ರುದ್ರಾಕ್ಷವನ್ನು ಧರಿಸಿದವರು, ಜ್ಞಾನ ಮತ್ತು ಧ್ಯಾನಗಳನ್ನು ತಿಳಿಯದವರಾದರೂ, ಅವರ ಸಕಲ ಪಾಪಗಳು ನಾಶವಾಗಿ ಪರಮಗತಿಯನ್ನು ಪಡೆಯುವರು ಎಂದು ಶಿವನು ಪಾರ್ವತಿಗೆ ತಿಳಿಸಿದ್ದನ್ನು ಸೂತಮುನಿಯು ಋಷಿಗಳಿಗೆ ಹೇಳುತ್ತಾನೆ.

ರುದ್ರಾಕ್ಷಿಯಿಂದ ಶಿವಪಂಚಾಕ್ಷರ ಮಂತ್ರವನ್ನು ಜಪಿಸಿದರೆ ಕೋಟಿಯಷ್ಟು ಹೆಚ್ಚು ಫಲ ಲಭಿಸುತ್ತದೆ. ರುದ್ರಾಕ್ಷವನ್ನು ಧರಿಸಿ ಜಪಿಸಿದರೆ ಹತ್ತುಕೋಟಿ ಪುಣ್ಯ ಬರುತ್ತದೆ. ರುದ್ರಾಕ್ಷವನ್ನು ಶರೀರದಲ್ಲಿ ಧರಿಸುವವರಿಗೆ ಅಪಮೃತ್ಯುವಾಗಲೀ ಅಲ್ಪಮೃತ್ಯುವಾಗಲೀ ಬರುವುದೇ ಇಲ್ಲ. ಭಸ್ಮತ್ರಿಪುಂಡ್ರವನ್ನೂ ರುದ್ರಾಕ್ಷವನ್ನೂ ಧರಿಸಿ ಮೃತ್ಯುಂಜಯಮಂತ್ರವನ್ನು ಜಪಿಸುವವನನ್ನು ದರ್ಶನಮಾಡಿದರೆ ರುದ್ರನನ್ನು ದರ್ಶನ ಮಾಡಿದಷ್ಟೇ ಪುಣ್ಯಫಲ ಲಭಿಸುತ್ತದೆ. ಭಸ್ಮ-ರುದ್ರಾಕ್ಷಧಾರಿಯಾದ ಶಿವಭಕ್ತನು ಈಶ್ವರನ ಅಘೋರಾದಿ ಪಂಚಬ್ರಹ್ಮದೇವತೆಗಳೂ ಸೇರಿದಂತೆ, ಎಲ್ಲಾ ದೇವತೆಗಳಿಗೂ ಪ್ರಿಯನಾಗುವನು. ಅಲ್ಲದೆ ಮಿಕ್ಕ ಎಲ್ಲಾ ಮಂತ್ರಗಳನ್ನೂ ರುದ್ರಾಕ್ಷಮಾಲೆಯಿಂದಲೇ ಜಪಿಸಬೇಕು.

ವಿಷ್ಣು ಮುಂತಾದ ಮಿಕ್ಕ ದೇವಭಕ್ತರೂ ರುದ್ರಾಕ್ಷಿಗಳನ್ನು ಧರಿಸಬೇಕು. ವಿಶೇಷವಾಗಿ ಶಿವಭಕ್ತನು ರುದ್ರಾಕ್ಷಗಳನ್ನು ಸದಾ ಧರಿಸಬೇಕು. ಭೋಗಮೋಕ್ಷಗಳನ್ನು ಉಂಟುಮಾಡುವ ರುದ್ರಾಕ್ಷಗಳು ಅನೇಕ ವಿಧವಾಗಿವೆ. ಅವುಗಳನ್ನು ಹೇಳುವೆನು ಕೇಳು – ಎಂದ ಶಿವನು ಪಾರ್ವತಿಗೆ ತಿಳಿಸುತ್ತಾನೆ.

ಒಂದು ಮುಖವುಳ್ಳ ರುದ್ರಾಕ್ಷವು ಸಾಕ್ಷಾತ್ ಶಿವಸ್ವರೂಪವಾದುದು; ಭೋಗ ಮತ್ತು ಮುಕ್ತಿಗಳನ್ನು ಕೊಡುವಂಥದ್ದು. ಅಂತಹ ರುದ್ರಾಕ್ಷಧಾರಿಯನ್ನು ದರ್ಶನಮಾಡಿದರೆ ಬ್ರಹ್ಮಹತ್ಯಾಪಾಪವು ಹೋಗುವುದು. ಏಕಮುಖ ರುದ್ರಾಕ್ಷವನ್ನು ಪೂಜಿಸುವ ಸ್ಥಳದಲ್ಲಿ ಲಕ್ಷ್ಮಿಯು ನೆಲೆಸುತ್ತಾಳೆ. ಸಕಲ ಉಪದ್ರವಗಳೂ ನಾಶವಾಗುತ್ತದೆ. ಇಷ್ಟಾರ್ಥಗಳೆಲ್ಲವೂ ಸಿದ್ಧಿಸುತ್ತವೆ. ಎರಡು ಮುಖವುಳ್ಳ ರುದ್ರಾಕ್ಷವು ದೇವದೇವನಾದ ಈಶ್ವರನ ಸ್ವರೂಪವಾದುದು. ಸಕಲ ಇಷ್ಟಾರ್ಥಗಳನ್ನು ಉಂಟುಮಾಡುತ್ತದೆ. ವಿಶೇಷವಾಗಿ ಎರಡು ಮುಖವುಳ್ಳ ಅದರ ಮಹಿಮೆಯಿಂದ ಸಕಲ ವಿದ್ಯೆಗಳೂ ಲಭಿಸುವುದು. ಮೂರು ಮುಖವುಳ್ಳ ರುದ್ರಾಕ್ಷವು ಸಾಕ್ಷಾತ್ ಮುಕ್ತಿಸಾಧನವನ್ನುಂ ಉಂಮಾಡುವುದು. ಅದರ ಮಹಿಮೆಯಿಂದ ಸಕಲ ವಿದ್ಯೆಗಳೂ ಲಭಿಸುವುವು.

ನಾಲ್ಕು ಮುಖವುಳ್ಳ ರುದ್ರಾಕ್ಷವು ಚತುರ್ಮುಖ ಬ್ರಹ್ಮಸ್ವರೂಪವಾದುದು. ಅದು ನರಹತ್ಯೆಯನ್ನು ಹೋಗಲಾಡಿಸುತ್ತದೆ. ಅಂತಹ ರುದ್ರಾಕ್ಷವನ್ನು ದರ್ಶನ ಮಾಡಿದರೆ ಮತ್ತು ಸ್ಪರ್ಶಿಸಿದರೆ ಚತುರ್ವಿಧ ಪುರುಷಾರ್ಥಗಳೂ ಲಭಿಸುತ್ತವೆ. ಐದು ಮುಖವುಳ್ಳ ರುದ್ರಾಕ್ಷವು ‘ಕಾಲಾಗ್ನಿ’ ಎಂಬ ಹೆಸರುಳ್ಳ ರುದ್ರನ ಸ್ವರೂಪವಾದುದು. ಅದು ಸಕಲ ಮುಕ್ತಿಗಳನ್ನೂ ಸಕಲ ಇಷ್ಟಾರ್ಥಗಳನ್ನೂ ಉಂಟುಮಾಡುತ್ತದೆ. ನಿಷಿದ್ಧ ಆಹಾರಗಳನ್ನು ಸೇವಿಸುವುದು ಸೇರಿದಂತೆ ಅನೇಕ ಪಾಪಗಳನ್ನು ಐದು ಮುಖಗಳುಳ್ಳ ರುದ್ರಾಕ್ಷವು ನಾಶಮಾಡುವುದು. ಆರು ಮುಖವುಳ್ಳ ರುದ್ರಾಕ್ಷವು ಷಣ್ಮುಖ ಸ್ವರೂಪವಾದುದು. ಅದನ್ನು ಬಲಭುಜದಲ್ಲಿ ಧರಿಸಿದರೆ ಬ್ರಹ್ಮಹತ್ಯೆ ಮೊದಲಾದ ಪಾಪಗಳು ನಾಶವಾಗುವುದು. ಏಳು ಮುಖವುಳ್ಳ ರುದ್ರಾಕ್ಷವು ಅನಂಗವೆಂದು ಹೆಸರುಳ್ಳದ್ದು. ಅದನ್ನು ಧರಿಸಿದವನು ಶ್ರೀಮಂತರಾಗುವರು. ಎಂಟು ಮುಖಗಳುಳ್ಳ ರುದ್ರಾಕ್ಷವು ವಸುಸ್ವರೂಪವೂ ಭೈರವ ಸ್ವರೂಪವೂ ಆದುದು. ಅದನ್ನು ಧರಿಸಿದವನು ದೀರ್ಘಕಾಲ ಜೀವಿಸಿದ್ದು, ಮರಣಾನಂತರ ಶಿವಸ್ವರೂಪವನ್ನು ಪಡೆಯುವನು.

ಭೈರವ ಮತ್ತು ಮಹಾಮುನಿಯಾದ ಕಪಿಲ, ಅಥವಾ ಮಹೇಶ್ವರಿಯಾದ ನವದುರ್ಗಾದೇವಿಯು ನವಮುಖ ರುದ್ರಾಕ್ಷದ ಅಧಿದೇವತೆಗಳು. ಇಂತಹ ರುದ್ರಾಕ್ಷವನ್ನು ಎಡಗೈನಲ್ಲಿ ಭಕ್ತಿಯಿಂದ ಧರಿಸಿದರೆ ಅವನು ಶಿವನಂತೆ ಸರ್ವೇಶ್ವರನಾಗುವನು, ಇದರಲ್ಲಿ ಯಾವುದೇ ಸಂಶಯವಿಲ್ಲ. ಹತ್ತು ಮುಖವುಳ್ಳ ರುದ್ರಾಕ್ಷವು ವಿಷ್ಣುಸ್ವರೂಪವಾದುದು. ಅದನ್ನು ಧರಿಸಿದರೆ ಸಕಲ ಇಷ್ಟಗಳೂ ಲಭಿಸುವುದು. ಹನ್ನೊಂದು ಮುಖವುಳ್ಳ ರುದ್ರಾಕ್ಷವು ಏಕಾದಶ ರುದ್ರಸ್ವರೂಪವಾದುದು. ಅದನ್ನು ಧರಿಸಿದರೆ ಎಲ್ಲೆಡೆಯಲ್ಲಿಯೂ ವಿಜಯವು ಲಭಿಸುವುದು. ಹನ್ನೆರಡು ಮುಖವುಳ್ಳ ರುದ್ರಾಕ್ಷವು ದ್ವಾದಶಾದಿತ್ಯ ಸ್ವರೂಪವಾದುದು. ಅದನ್ನು ಶಿಖೆಯಲ್ಲಿ ಧರಿಸಬೇಕು. ಹದಿಮೂರು ಮುಖವುಳ್ಳ ರುದ್ರಾಕ್ಷವು ವಿಶ್ವೇದೇವಸ್ವರೂಪವಾದುದು. ಅದನ್ನು ಧರಿಸಿದ ನರನು ಸಕಲ ಇಷ್ಟಾರ್ಥಗಳನ್ನೂ ಸೌಭಾಗ್ಯ–ಮಂಗಳಗಳನ್ನೂ ಪಡೆಯುವನು. ಹದಿನಾಲ್ಕು ಮುಖವುಳ್ಳ ರುದ್ರಾಕ್ಷವು ಪರಮಶಿವಸ್ವರೂಪವಾದುದು. ಅದನ್ನು ಶಿರಸ್ಸಿನಲ್ಲಿ ಧರಿಸಿದರೆ ಸಕಲ ಪಾಪಗಳೂ ನಾಶವಾಗುವುದು.

ಈ ರೀತಿಯಾಗಿ ವಿವಿಧ ಮುಖಭೇದದ ರುದ್ರಾಕ್ಷಿಗಳಿಂದ ಸಿಗುವ ಫಲವನ್ನು ಹೇಳಿದ ಪರಮಶಿವ, ನಂತರ ರುದ್ರಾಕ್ಷಗಳನ್ನು ಧರಿಸುವಾಗ, ಯಾವಯಾವ ರುದ್ರಾಕ್ಷಗಳಿಗೆ ಯಾವಯಾವ ಮಂತ್ರಗಳನ್ನು ಹೇಳಬೇಕೆಂಬುದನ್ನು ಸೂತಮುನಿಯು ಹೇಳತೊಡಗುತ್ತಾನೆ. ●

ತೀರ್ಪು ಸ್ವಾಗತಿಸಿದ ಕೇಂದ್ರ ಸಚಿವರು

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರದ ಸಚಿವರು ಹಾಗೂ ಮಾಜಿ ಸಚಿವರು ಹೈಕೋರ್ಟ್ ತೀರ್ಪನ್ನು ಸ್ವಾಗತಿಸಿದ್ದು, ಪ್ರತಿಯೊಬ್ಬರೂ ತೀರ್ಪನ್ನು ಸ್ವಾಗತಿಸುವ ಮೂಲಕ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಒತ್ತು ನೀಡಬೇಕಿದೆ. ವಿದ್ಯಾರ್ಥಿಗಳೂ ಶಿಕ್ಷಣಕ್ಕೆ ಆದ್ಯತೆ ನೀಡಲು ಗಮನಹರಿಸಬೇಕಿದೆ ಎಂದು ಸಲಹೆ ನೀಡಿದ್ದಾರೆ.

ಹಿಜಾಬ್ ಧರಿಸುವಂತೆ ಬಡ ಮುಸ್ಲಿಂ ಮಹಿಳೆಯರನ್ನೇ ಪ್ರೇರೇಪಿಸಿ, ಶೋಷಿಸಲಾಗುತ್ತಿದೆ ಎಂದು ಕೇಂದ್ರದ ಕೃಷಿ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ದೂರಿದ್ದಾರೆ.

ಹಿಜಾಬ್ ಪ್ರಕರಣ ಕುರಿತು ಹೈಕೋರ್ಟ್ ನೀಡಿರುವ ತೀರ್ಪನ್ನು ಪ್ರತಿಯೊಬ್ಬರೂ ಸ್ವಾಗತಿಸಬೇಕು. ಶ್ರೀಮಂತ ಮುಸ್ಲಿಮರು ತಮ್ಮ ಮನೆಯ ಮಹಿಳೆಯರನ್ನು ಯಾವುದೇ ರೀತಿಯ ಕಟ್ಟುಪಾಡುಗಳಿಗೆ ಒಳಪಡಿಸದೇ, ಬಡವರನ್ನು ಪ್ರಚೋದಿಸುತ್ತಿದ್ದಾರೆ. ಇದರಿಂದ ಬಡ ಮಹಿಳೆಯರು ಹಿಂದುಳಿಯುವಂತಾಗಿದೆ ಎಂದಿದ್ದಾರೆ.

ಎಲ್.ಕೆ.ಜಿ, ಯು.ಕೆ.ಜಿ ಹಂತದ ಚಿಕ್ಕ ಹೆಣ್ಣು ಮಕ್ಕಳನ್ನೂ ಬಿಡದೇ, ಧರ್ಮದ ಹೆಸರಲ್ಲಿ ಅವರ ಸ್ವಾತಂತ್ರ್ಯಕ್ಕೆ ಅಡ್ಡಿಪಡಿಸಲಾಗುತ್ತಿದೆ. ಪಟ್ಟಭದ್ರ ಹಿತಾಸಕ್ತಿಗಳು ಬಿತ್ತಿದ ದ್ವೇಷಕ್ಕೆ ಶಿವಮೊಗ್ಗದಲ್ಲಿ ಹರ್ಷ ಎಂಬ ಯುವಕನ ಕೊಲೆ ನಡೆದಿದೆ. ಈ ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ)ಗೆ ವಹಿಸಿ ಅವರ ಕುಟುಂಬಕ್ಕೆ ನ್ಯಾಯ ಒದಗಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಹೈಕೋರ್ಟ್ ತೀರ್ಪನ್ನು ಸ್ವಾಗತಿಸಿರುವ ಕೇಂದ್ರದ ಸಂಸದೀಯ ವ್ಯವಹಾರಗಳ ಖಾತೆ ಸಚಿವ ಪ್ರಲ್ಹಾದ ಜೋಶಿ, ಜನತೆ ಶಾಂತಿ ಕಾಪಾಡುವ ಮೂಲಕ ಸೌಹಾರ್ದದಿಂದ ಇರುವಂತೆ ಮನವಿ ಮಾಡಿದ್ದಾರೆ.

ಹಿಜಾಬ್ ನಿಷೇಧಿಸಿದ್ದ ರಾಜ್ಯ ಸರ್ಕಾರದ ಆದೇಶವನ್ನು ಪ್ರಶ್ನಿಸಿ ಆರು ಜನ ವಿದ್ಯಾರ್ಥಿನಿಯರು ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ತಿರಸ್ಕರಿಸಿದ್ದು, ಎಲ್ಲರೂ ತೀರ್ಪನ್ನು ಗೌರವಿಸಬೇಕು ಎಂದು ಕೇಂದ್ರ ಸಚಿವ ಎ.ನಾರಾಯಣ ಸ್ವಾಮಿ ಕೋರಿದ್ದಾರೆ.

ಧಾರ್ಮಿಕ ವಿಷಯಗಳ ಕುರಿತ ಗೊಂದಲವನ್ನು ಎಸ್‌ಡಿಪಿಐ ಹಾಗೂ ಪಿಎಫ್‌ಐ ಸಂಘಟನೆಗಳು ದುರುಪಯೋಗ ಪಡಿಸಿಕೊಂಡಿವೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಹೈಕೋರ್ಟ್ ಶ್ಲಾಘನೀಯ ತೀರ್ಪನ್ನು ನೀಡಿದ್ದಾಗಿ ಹೇಳಿರುವ ಬಿಜೆಪಿ ಮುಖಂಡ, ಕೇಂದ್ರದ ಕಾನೂನು ಖಾತೆಯ ಮಾಜಿ ಸಚಿವ ರವಿಶಂಕರ ಪ್ರಸಾದ್, ಹಿಜಾಬ್ ಧರಿಸುವುದು ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಮೂಲಭೂತ ಹಕ್ಕು ಎಂಬ ವಾದಕ್ಕೆ ಸೋಲಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಹಿಜಾಬ್–ಪ್ರತಿಕ್ರಿಯೆಗಳು

ಅರ್ಜಿದಾರರ ಎಲ್ಲ ಮನವಿಗಳನ್ನೂ ನ್ಯಾಯಪೀಠ ತಿರಸ್ಕರಿಸಿದೆ. ನಾಲ್ಕು ಅಂಶಗಳ ಮೇಲೆ ತೀರ್ಪು ನೀಡಿದೆ. ಸಂವಿಧಾನದ 25ನೇ ವಿಧಿಯ ವಿಶ್ಲೇಷಣೆಗೆ ಈ ತೀರ್ಪು ಗಮನಾರ್ಹವಾಗಿದೆ.

ಪ್ರಭುಲಿಂಗ ಕೆ.ನಾವದಗಿ
ಅಡ್ವೊಕೇಟ್ ಜನರಲ್, ಕರ್ನಾಟಕ ಹೈಕೋರ್ಟ್

ತೀರ್ಪನ್ನು ಬಹಳ ಸರಿಯಾಗಿ, ಯೋಚನೆ ಮಾಡಿ ಬರೆದಿದ್ದಾರೆ. ಮೂವರು ನ್ಯಾಯಮೂರ್ತಿಗಳೂ ಒಮ್ಮತದಿಂದ ತೀರ್ಮಾನಕ್ಕೆ ಬಂದು ವಿಮರ್ಶಿಸಿ, ತೀರ್ಪು ಬರೆದಿರುವುದು ಸಂತೋಷದ ಸಂಗತಿ. ಅರ್ಜಿದಾರರು ತಮ್ಮ ವೈಯಕ್ತಿಕ ಹಕ್ಕು ಉಲ್ಲಂಘನೆ ಆಗಿದೆ ಎಂದಿದ್ದರು. ಉಲ್ಲಂಘನೆ ಆಗಿಲ್ಲ ಎಂದು ಕೋರ್ಟ್ ಹೇಳಿದೆ. ಈ ವಿಷಯದಲ್ಲಿ ರಾಜಕೀಯ ಸಲ್ಲದು.

ಎಸ್.ಎಸ್.ನಾಗಾನಂದ
ಹಿರಿಯ ವಕೀಲರು, ಪ್ರತಿವಾದಿ ಶಿಕ್ಷಣ ಸಂಸ್ಥೆ ಪರ ವಾದ ಮಂಡಿಸಿದವರು

ನ್ಯಾಯಪೀಠವು ಕುರಾನ್‌ನಲ್ಲಿನ ಶ್ಲೋಕಗಳನ್ನು ಸರಿಯಾಗಿ ಅರ್ಥೈಸಿಕೊಂಡಿಲ್ಲ. ಮುಸ್ಲಿಂ ಹುಡುಗಿಯರು ಶೈಕ್ಷಣಿಕವಾಗಿ ಹಿಂದುಳಿಯಲಿದ್ದಾರೆ ಎಂಬ ನಮ್ಮ ವಾದವನ್ನೂ ಪರಿಗಣಿಸಿಲ್ಲ. ತಪ್ಪು ಗ್ರಹಿಕೆಯಿಂದ ತೀರ್ಪು ನೀಡಿದೆ. ಇದನ್ನು ನಾವು ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಮೂಲಕ ಪ್ರಶ್ನಿಸುತ್ತಿದ್ದೇವೆ.

ರಹಮತ್ ಉಲ್ಲಾ ಕೊತ್ವಾಲ್
ಸಾರ್ವಜನಿಕ ಹಿತಾಸಕ್ತಿ ಅರ್ಜಿದಾರರಾದ, ಸಾಮಾಜಿಕ ಕಾರ್ಯಕರ್ತ ಅರೀಫ್ ಜಮೀಲ್ ಪರ ವಕೀಲ

ಅಂಗಡಿ ಮುಂಗಟ್ಟು ಮುಚ್ಚಿದ ಮುಸ್ಲಿಂ ವರ್ತಕರು

ಭಟ್ಕಳ (ಉತ್ತರ ಕನ್ನಡ ಜಿಲ್ಲೆ): ಹಿಜಾಬ್ ಕುರಿತು ಮಂಗಳವಾರ ಹೈಕೋರ್ಟ್ ತೀರ್ಪು ಬಂದ ಬಳಿಕ ಪಟ್ಟಣದಲ್ಲಿ ಮುಸ್ಲಿಂ ವರ್ತಕರು ತಮ್ಮ ಅಂಗಡಿ ಮುಂಗಟ್ಟುಗಳನ್ನು ಸ್ವಯಂಪ್ರೇರಿತರಾಗಿ ಮುಚ್ಚಿದರು.

ಪಟ್ಟಣದ ಬರ್ಮಾ ಬಝಾರ್, ಮುಖ್ಯ ರಸ್ತೆಯಲ್ಲಿರುವ ಮಳಿಗೆಗಳ ಬಾಗಿಲು ಮುಚ್ಚಿದ್ದವು. ಇದರಿಂದ ಜನರು ಗೊಂದಲಕ್ಕೀಡಾದರು.

‘ಒಂದೊಮ್ಮೆ ಹೈಕೋರ್ಟ್‌ನಲ್ಲಿ ತೀರ್ಪು ತಮ್ಮ ವಿರುದ್ಧ ಬಂದರೆ ತಮ್ಮ ಹಕ್ಕಿಗಾಗಿ ಹೋರಾಟ ನಡೆಸುವುದಾಗಿ’ ಇಲ್ಲಿನ ತಂಝೀಂ ಸೇರಿದಂತೆ ಹಲವು ಮುಸ್ಲಿಂ ಸಂಘಟನೆಗಳು ತಿಳಿಸಿದ್ದವು. ಎಲ್ಲೆಡೆ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಸಂಜೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ತಂಝೀಂ ಸಂಸ್ಥೆಯ ಅಧ್ಯಕ್ಷ ಎಸ್.ಎಂ.ಪರ್ವೇಜ್, ‘ಹೈಕೋರ್ಟ್ ತೀರ್ಪನ್ನು ಖಂಡಿಸಿ ಮಾರ್ಚ್ 16ರಂದೂ ತಮ್ಮ ಕಚೇರಿ ಬಂದ್ ಮಾಡುತ್ತಿದ್ದೇವೆ. ಇದಕ್ಕೆ ಬೆಂಬಲ ವ್ಯಕ್ತಪಡಿಸಿ ಭಟ್ಕಳದ ಮುಸ್ಲಿಂ ವರ್ತಕರು ತಮ್ಮ ಅಂಗಡಿ ಮುಂಗಟ್ಟುಗಳನ್ನು ಸ್ವಯಂ ಪ್ರೇರಿತರಾಗಿ ಬಂದ್ ಮಾಡಬಹುದು’ ಎಂದು ಕರೆ ನೀಡಿದ್ದಾರೆ.

ಭಟ್ಕಳದಲ್ಲಿ ಮಂಗಳವಾರ, ಮುಸ್ಲಿಂ ವರ್ತಕರು ಅಂಗಡಿ ಮುಂಗಟ್ಟುಗಳನ್ನು ಸ್ವಯಂ ಪ್ರೇರಿತರಾಗಿ ಮುಚ್ಚಿದ್ದರು

ಗುಂಡಣ್ಣ

ಬದುಕು ಗೊಂದಲಮಯವಲ್ಲ

ಫಲವೇನು ಹೆಣಗಾಡಿ ಹೋರಾಡಿ ಧರೆಯೊಳಗೆ? |
ಸಲಿಸದೊಂದನುವೊಂದನುಂ ದೈವ ಬಿಡದು ||
ಹೊಲಸೆಲ್ಲವೆಲ್ಲಪಾಳ್, ಬಾಳ್ಗೆ ತಳಹದಿಯಿಲ್ಲ |
ಗಲಿಬಿಲಿಯಿದೆನಬೇಡ – ಮಂಕುತಿಮ್ಮ || 585 ||

ಪದ-ಅರ್ಥ: ಸಲಿಸದೊಂದನುವೊಂದನು = ಸಲಿಸದೆ + ಒಂದನುಂ + ಒಂದನುಂ, ಹೊಲಸೆಲ್ಲವೆಲ್ಲಪಾಳ್ = ಹೊಲಸು + ಎಲ್ಲ + ಎಲ್ಲ + ಪಾಳ್ (ಹಾಳು), ಬಾಳ್ಗೆ = ಬಾಳಿಗೆ, ಗಲಿಬಿಲಿಯಿದೆನಬೇಡ = ಗಲಿಬಿಲಿ + ಇದು + ಎನಬೇಡ.

ವಾಚ್ಯಾರ್ಥ: ಈ ಭೂಮಿಯಲ್ಲಿ ಹೆಣಗಾಡಿ, ಹೋರಾಡಿ ಫಲವೇನು? ದೈವಕ್ಕೆ ಪ್ರತಿಯೊಂದನ್ನೂ ಸಲಿಸದೆ ಇರಲಾಗದು. ಎಲ್ಲ ಹೊಲಸು, ಎಲ್ಲ ಹಾಳು, ಈ ಬಾಳಿಗೆ ತಳಹದಿಯೆ ಇಲ್ಲ, ಎಲ್ಲವೂ ಗಲಿಬಿಲಿ ಎನ್ನಬೇಡ.

ವಿವರಣೆ: ಮೇಲ್ನೋಟಕ್ಕೆ ಈ ಕಗ್ಗ ನಿರಾಸೆಯನ್ನು ತೋರುತ್ತದೆ ಎನ್ನಿಸುತ್ತದೆ. ದೈವವನ್ನು ಮೀರುವುದು ಸಾಧ್ಯವಿಲ್ಲ. ನಮ್ಮಿಂದ ಪಡೆಯುವುದನ್ನೆಲ್ಲ ವಿಧಿ ಪಡೆದೇ ತೀರುತ್ತದೆ. ಆದ್ದರಿಂದ ಸುಮ್ಮನೆ ಹೊಡೆದಾಡಿ, ಒದ್ದಾಡಿ ಮಾಡುವ ಕೆಲಸಗಳಿಂದ ಏನು ಪ್ರಯೋಜನ? ಈ ಬಾಳೆ ಹೊಲಸು, ಹಾಳಾದದ್ದು. ಇದರಲ್ಲಿ ಯಾವ ತಳಪಾಯವೂ ಇಲ್ಲ. ಎಲ್ಲವೂ ಗೊಂದಲಮಯವಾದ ಪರಿಸ್ಥಿತಿ. ಆದರೆ ಕೊನೆಯ ಸಾಲಿನಲ್ಲಿ ಡಿ.ವಿ.ಜಿ ಯಾವಾಗಲೂ ಧನಾತ್ಮಕತೆಯನ್ನೇ ತುಂಬುತ್ತಾರೆ. ‘ಗಲಿಬಿಲಿಯಿದೆನಬೇಡ’. ಬಾಳನ್ನು ಒಂದು ಗೊಂದಲ, ಅವ್ಯವಸ್ಥೆ ಎನ್ನಬೇಡ, ಎಂದರೆ ಅದು ಅವ್ಯವಸ್ಥೆಯಲ್ಲ ಎಂದರ್ಥ. ನಮಗೆ ಸರಿಯಾಗಿ ಜೀವಿಸಲು ಬಂದರೆ ಅದು ವ್ಯವಸ್ಥೆ. ಬದುಕುವ ರೀತಿ ತಿಳಿಯದೆ ಹೋದರೆ ಅದು ಅವ್ಯವಸ್ಥೆ.

ಬಾಳು ನಿಷ್ಪ್ರಯೋಜಕ. ಹೋರಾಟ ನಿಷ್ಫಲ, ವಿಧಿಯ ಮುಂದೆ ಹೋರಾಟ ನಡೆದೀತೇ ಎಂದು ಚಿಂತೆ ಮಾಡಿ ಕಾರ್ಯವಿಮುಖರಾಗುವುದು ಹೇಡಿಗಳ ಮಾತು. ಹೌದು. ದೈವ ತನ್ನ ಪಾಲು ಕೇಳುತ್ತದೆ. ಹೋರಾಟಗಳು ವಿಫಲವಾಗುತ್ತವೆ. ಯಾವುದೂ ಸರಿ ಇಲ್ಲ ಎನ್ನಿಸುತ್ತದೆ. ಆದರೆ ಪರಿಶ್ರಮದ, ಮಹತ್ತಾದದ್ದರ ಅರಸುವಿಕೆ ಬದುಕಿಗೆ ಸಾರ್ಥಕ್ಯವನ್ನು ಕೊಡುತ್ತದೆ. ಆಕೆ ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಬಡಗೇರಿಯವರು. ಓದು ಬರಹ ದೊರಕಲಿಲ್ಲ. ಬಡತನ ಕಾಡಿತು. ಆಕೆಗೆ ಹದಿನಾರು ವರ್ಷವಾದಾಗ ನಲವತ್ತೈದು ವರ್ಷದವನೊಡನೆ ಮದುವೆ. ಕೆಲ ವರ್ಷಗಳಲ್ಲೇ ಗಂಡ ತೀರಿ ಹೋದ. ಆಕೆ ಯಾರನ್ನೂ ಯಾಚಿಸದೆ ಕೃಷಿಯ ಮೊರೆ ಹೋದಳು. ತನ್ನ ಕಷ್ಟಗಳನ್ನು ಬದಿಗಿಟ್ಟು, ಸಮಾಜದ ಸುಧಾರಣೆಗೆ ಧುಮುಕಿದಳು, ಹೋರಾಡಿದಳು. ಅತಿಯಾದ ಮದ್ಯ ಸೇವನೆಯಿಂದ ಮಗ ಮಡಿದಾಗ ಎದೆಗುಂದದೆ, ಮದ್ಯಪಾನದ ವಿರುದ್ಧ ಹೋರಾಡಿದಳು. ಆಕೆಗೆ ಅಗಾಧವಾದ ನೆನಪಿನ ಶಕ್ತಿ. ಸಂಪ್ರದಾಯದ, ಸಮುದಾಯದ ಹಾಡುಗಳನ್ನು ಕಲಿತು ಹಾಡತೊಡಗಿದಳು. ಹಾಡುತ್ತ ಹಾಡುತ್ತ ಸಾವಿರಾರು ಅಪರೂಪದ ಹಾಡುಗಳ ಭಂಡಾರವೇ ಆದಳು. ತಾನು ಹುಟ್ಟಿ, ಬೆಳೆದು ಬಂದ ಹಾಲಕ್ಕಿ ಸಮುದಾಯದ ಸಂಸ್ಕೃತಿಯ ಚಲಿಸುವ ರಾಯಭಾರಿಯಾದಳು. ಆಕೆಯ ಸಾಹಸಗಾಥೆಯನ್ನು, ಹೋರಾಟವನ್ನು, ಸಂಸ್ಕೃತಿಯ ಸೇವೆಯನ್ನು ಭಾರತ ಸರಕಾರ ಗುರುತಿಸಿ ವಿನಮ್ರತೆಯಿಂದ 2017ರ ಪದ್ಮಶ್ರೀ ಪುರಸ್ಕಾರವನ್ನು ಸಲ್ಲಿಸಿತು.

ಇದು ಕಗ್ಗದ ಜೀವನೋತ್ಸಾಹದ ಮಾತು. ಈ ಎಲ್ಲ ಸಮಸ್ಯೆಗಳಿದ್ದರೂ ಬದುಕು ವ್ಯರ್ಥ, ಗೊಂದಲಮಯವೆನ್ನದೆ ಅದನ್ನು ಸಂಭ್ರಮವನ್ನಾಗಿಸುವುದು ಮುಖ್ಯ ಮತ್ತು ಅವಶ್ಯ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಮಾರ್ಚ್ 16, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ –ಶಿಶಿರ ಋತು ಮೀನ ಮಾಸದ 02 ನೇ ದಿನ ತಿಥಿ: (ಫಾಲ್ಗುಣ ಶುಕ್ಲ) ತ್ರಯೋದಶಿ ಗಂ. 13-40 ನಕ್ಷತ್ರ: ಮಘಾ ಗಂ. 24-21 ಯೋಗ: ಧೃತಿ ಗಂ. 26-38, ಕರಣ: ತೈತಿಲ ಗಂ. 13-40.
ರಾಹುಕಾಲ: ಮಧ್ಯಾಹ್ನ 12:00 – 01:30 ಸೂರ್ಯೋದಯ : 06-41 ಸೂರ್ಯಾಸ್ತ : 06-38 ಮುಸ್ಲಿಂ ದಿನಾಂಕ : 12 ಶಬನ್ ಅದೃಷ್ಟ ಸಂಖ್ಯೆ: 5, 10

ಮೇಷ: ಈ ದಿನ ನೀವು ನಿಮ್ಮ ಕುಟುಂಬದ ಅಭಿವೃದ್ಧಿಗಾಗಿ ತೆಗೆದುಕೊಂಡ ಜವಾಬ್ದಾರಿಗಳನ್ನು ಕಡಿಮೆ ಮಾಡಿಕೊಳ್ಳುವುದು ಉತ್ತಮ. ಸ್ಥಾನ ಬದಲಾವಣೆಯಿಂದ ನೆಮ್ಮದಿಯ ವಾತಾವರಣ ಸೃಷ್ಟಿಯಾಗುವುದು.

ವೃಷಭ: ಹಂತ ಹಂತವಾಗಿ ನಿಧಾನಗತಿಯಲ್ಲಿ ನಿಮ್ಮ ಆಸೆಗಳು ಈಡೇರಲಿದೆ. ಕೃಷಿಗೆ ಸಂಬಂಧಿಸಿದ ಯೋಜನೆಗಳ ಬಗ್ಗೆ ಚಿಂತಿಸುವ ಅಗತ್ಯವಿಲ್ಲ. ವಿವಾಹದ ಭಾವನೆಗಳನ್ನು ತಂದೆ ತಾಯಿಯ ಬಳಿ ವ್ಯಕ್ತಪಡಿಸಲು ಸುಸಮಯ.

ಮಿಥುನ: ಮನಸ್ಸಿನ ಚಂಚಲ ಸ್ವಭಾವದಿಂದ ಇಂದಿನ ಕಾರ್ಯದಲ್ಲಿ ವಿಫಲರಾಗುವ ಸನ್ನಿವೇಶ. ಪಿತ್ತ ಪ್ರಕೋಪದಿಂದ ದೈಹಿಕವಾಗಿ ಹಲವು ಸಮಸ್ಯೆಗಳು ಕಾಡಬಹುದು. ಭೂ ವ್ಯವಹಾರದಲ್ಲಿ ವಂಚನೆಯಾಗುವ ಸಾಧ್ಯತೆ.

ಕರ್ಕಾಟಕ: ನಿಮ್ಮ ದೈನಂದಿನ ಬದುಕಿನಲ್ಲಿಯೇ ಇರುವ ದುರ್ಜನರ ಸಹವಾಸದಿಂದ ಅಪವಾದಗಳಿಗೆ ತುತ್ತಾಗುವಿರಿ. ಉತ್ಪತ್ತಿಯನ್ನು ಲೆಕ್ಕಿಸಿ ಅರಸಿ ಬಂದ ಉದ್ಯೋಗವನ್ನು ದೂರಮಾಡುವುದು ಮೂರ್ಖತನಕ್ಕೆ ಉದಾಹರಣೆ.

ಸಿಂಹ: ಹಣಕಾಸಿನ ದುರಾಸೆಯು ನಿಮ್ಮ ಗೌರವ ಕಡಿಮೆಮಾಡಲಿದೆ. ನಿಮಗೆ ಎದುರಾಗಿರುವ ಸಂದಿಗ್ಧ ಪರಿಸ್ಥಿತಿಯನ್ನು ಮಾರ್ಗದರ್ಶಕರ ಸಲಹೆ ಪಡೆದು ನಿಭಾಯಿಸಿ. ಗೃಹಿಣಿಯರಿಗೆ ವಿಶೇಷ ದಿನ.

ಕನ್ಯಾ: ನಿಮಗೆ ಎದುರಾಗುವ ಸನ್ನಿವೇಶಗಳಲ್ಲಿ ಯಾವ ದಿಕ್ಕಿನಲ್ಲಿ ಸಾಗಬೇಕೆಂಬ ಗೊಂದಲಗಳು ಕಾಡಲಿದೆ. ಪತ್ರಿಕೋದ್ಯಮದವರಿಗೆ ವೃತ್ತಿಯಲ್ಲಿ ನಾಯಕತ್ವ ಹೊಂದುವ ಅವಕಾಶ. ಗಣಪತಿಯ ಆರಾಧನೆಯಿಂದ ವಿಘ್ನ ನಿವಾರಣೆ.

ತುಲಾ: ರಾಜಕಾರಣಿಗಳು ಎಲ್ಲರೊಂದಿಗೆ ಸಹಕಾರ ಮನೋಭಾವನೆ ಮತ್ತು ಸರಳತೆಯಿಂದ ಮುಂದುವರೆದಲ್ಲಿ ಯಶಸ್ಸು ಇನ್ನೂ ಹೆಚ್ಚಿನ ರೀತಿಯಲ್ಲಿ ಕಂಡುಬರುತ್ತದೆ. ಸ್ನೇಹಿತನಿಗಾಗಿ ಹಣ ಖರ್ಚು ಮಾಡುವ ಪರಿಸ್ಥಿತಿ ಬರುವುದು.

ವೃಶ್ಚಿಕ: ನಿಮ್ಮ ಯೋಜನೆಗಳು ಕಾರ್ಯಗತಗೊಳ್ಳಲು ಹೆಚ್ಚಿನ ಪ್ರಯತ್ನ ನಡೆಸಿ. ಮನುಷ್ಯ ಪ್ರಯತ್ನದ ಜೊತೆ ದೇವರ ಮೊರೆ ಹೋಗುವುದರಿಂದ ಕಾರ್ಯಸಿದ್ಧಿ. ಬೆನ್ನುನೋವು ಹೋಗಲಾಡಿಸುವ ಸಲುವಾಗಿ ಯೋಗಾಭ್ಯಾಸ ಮಾಡಿ.

ಧನು: ಮಾರುಕಟ್ಟೆಯಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಗಮನಿಸಿ ನಂತರದಲ್ಲಿ ಷೇರು ಕೊಳ್ಳಲು ಮುಂದಾಗಿ. ಎಚ್ಚರದಿಂದ ಕಾರ್ಯ ನಿರ್ವಹಿಸಿ. ಮನಸ್ಸು ಉಲ್ಲಾಸದಾಯಕವಾಗಿ ಇರುತ್ತದೆ. ಸಂಸಾರದಲ್ಲಿ ನೆಮ್ಮದಿ ಕಾಣುವಿರಿ.

ಮಕರ: ಆಫೀಸಿನ ಕೆಲಸದ ವಿಚಾರದಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕಾಗುವುದು. ಆಭರಣಗಳಿಗಾಗಿ ಹಣ ಖರ್ಚು. ಅನಿರೀಕ್ಷಿತ ಪ್ರಯಾಣ. ನಿಮಗೆ ಒದಗಿ ಬರಲಿರುವ ಅವಕಾಶಗಳನ್ನು ಕೈತಪ್ಪಿ ಹೋಗದಂತೆ ನೋಡಿಕೊಳ್ಳಿ.

ಕುಂಭ: ನಿರ್ಧಾರ ತೆಗೆದುಕೊಳ್ಳುವ ಸಮಯದಲ್ಲಿ ಸಹವರ್ತಿಗಳ ಅಭಿಪ್ರಾಯ ಪಡೆದುಕೊಳ್ಳಿ. ಒಪ್ಪಂದ ವ್ಯವಹಾರಗಳಿಂದ ವರಮಾನ ಹೆಚ್ಚಳ. ಮಂದಗತಿಯ ನಡೆ ಕಂಡರೂ ಅಭಿವೃದ್ಧಿಯಂತೂ ಖಚಿತವಾಗಿ ಅನುಭವಕ್ಕೆ ಬರುವುದು.

ಮೀನ: ವಿದ್ಯಾಕ್ಷೇತ್ರದವರಿಗೆ ಹೆಚ್ಚಿನ ಮನ್ನಣೆ, ಗೌರವ ದೊರಕಲಿದೆ. ತೈಲ ಉತ್ಪನ್ನ ವಸ್ತುಗಳ ಮಾರಾಟದಿಂದ ಲಾಭ. ನಿಮ್ಮ ದಾಖಲೆಗಳು ಕಳೆದುಹೋಗಬಹುದು, ಆದ್ದರಿಂದ ಕಾಗದ ಪತ್ರಗಳ ನಿರ್ವಹಣೆಯಲ್ಲಿ ಎಚ್ಚರವಿರಲಿ.

ಪದಬಂಧ 4899 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಪೀಠಿಕೆಯನ್ನು ಹೀಗೆನ್ನಿ (4)
3.ನಾಲ್ಕು ಪಾದಗಳನ್ನುಳ್ಳ ಒಂದು ಪದ್ಯ ಜಾತಿ (4)
5.ನಾಣ್ಯಗಳನ್ನು ಮುದ್ರಿಸುವ ಸ್ಥಳ (3)
6.ರೀತಿಯೊಡಗೂಡುವ ಜೋಡು ನುಡಿ (3)
8.ವಿಷಯವನ್ನು ಕೂಲಂಕಷವಾಗಿ ಚರ್ಚಿಸುವುದು (3)
9.ಹೆಚ್ಚು ಪದದ ವಿರುದ್ಧ ಪದ (3)
10.ಹಾಡಿನ ಆರಂಭದ ಸಾಲು (3)
12.ಅವನಿರುವ ಭೂಮಿ! (3)
14.ಮರ ಕೊಯ್ಯಲು ಬಳಸುವ ಉಪಕರಣ (4)
15.ಓಟನ್ನು ನೀಡುವಿಕೆ (4)

ಮೇಲಿಂದ ಕೆಳಕ್ಕೆ
1.ಉರಿಯಲ್ಲಿನ ಗೋಜು ಕಾಣುತ್ತಿದೆಯೇ? (4)
2.ಅತಿಯಾದ ಕುತೂಹಲ (3)
3.ನಿಸ್ಸಾರವಾದ ವಸ್ತು (3)
4.ಎಲ್ಲಾ ಕಡೆಯಿಂದ ಉಂಟಾದ ನಿರ್ಬಂಧ (4)
7.ಒಲುಮೆಯಿಂದ ಮಾಡಿರುವ ಒತ್ತಾಯ! (3)
8.ಶುಭಕಾರ್ಯಗಳಿಗೆ ಕಟ್ಟುವ ಚಪ್ಪರ (3)
9.ವಾಡಿಕೆಯಂತೆ ಬಂದಿರುವ ಗೊಲ್ಲ (4)
11.ನಡುವೆ ಕಸವಿದ್ದಾಗ ಅರಳುವಿಕೆ! (4)
12.ಅರಸುವಾಗ ಕಾಣಿಸಿದ ದೊರೆ (3)
13.ಯಮನಿದ್ದಾಗಿನ ಸೂತ್ರ (3)



4898ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಮೂಢನಂಬಿಕೆ 4.ಜನಕ
5.ಅಂಕುಶ 9.ತತಿ
10.ಜವಳಿ 11.ಇನ
12.ಗಮಾರ 15.ಕಲಹ
16.ವಿತಂಡವಾದ

ಮೇಲಿಂದ ಕೆಳಕ್ಕೆ:
1.ವಿನಂತಿ 2.ಮೂಕ
3.ಕೆಲಂ 4.ಜಲತರಂಗ
6.ಶಯನಗೃಹ 7.ಗುಜರಿ
8.ಗಳಿಕೆ 13.ರವಿ
14.ಮಡಕೆ 15.ಕದ

ಸುಡೊಕು 5285

	6		8				1	
2							7	
		4	9		2	8	3	6
3		6				5		9
	7		3	2	4			
		1				3		7
4			6		1		9	
	3				5			
6		8	2				5	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5284 ಸುಡೊಕು

3	9	8	2	7	5	4	6	1
2	7	6	4	3	1	8	9	5
1	4	5	6	8	9	7	3	2
4	6	3	9	1	7	5	2	8
9	5	2	3	4	8	1	7	6
8	1	7	5	2	6	3	4	9
5	3	4	8	6	2	9	1	7
7	2	9	1	5	4	6	8	3
6	8	1	7	9	3	2	5	4



ಮೂರು ರಾಷ್ಟ್ರಗಳ ಪ್ರಮುಖರು ಕೀವ್‌ಗೆ ಪ್ರಯಾಣ • ರಷ್ಯಾದ ಮೇಲೆ ಹೆಚ್ಚಿದ ನಿರ್ಬಂಧ

ನೆರವಿಗೆ ಇಯು ರಾಷ್ಟ್ರಗಳ ಒಲವು

ವಾರ್ಸಾ (ಎ.ಪಿ.): ರಷ್ಯಾದ ಸೇನೆ ಉಕ್ರೇನ್‌ನಲ್ಲಿ ದಾಳಿ ತೀವ್ರಗೊಳಿಸಿರುವ ಬೆನ್ನಲ್ಲೇ, ಯುರೋಪ್ ಒಕ್ಕೂಟದ ಸದಸ್ಯ ರಾಷ್ಟ್ರಗಳಾದ ಪೋಲೆಂಡ್, ಜೆಕ್ ರಿಪಬ್ಲಿಕ್, ಸ್ಲೋವೇನಿಯಾ ಮುಖಂಡರು ಉಕ್ರೇನ್‌ನ ಉನ್ನತ ಮುಖಂಡರ ಭೇಟಿಗೆ ಕೀವ್‌ನತ್ತ ಪ್ರಯಾಣ ಬೆಳೆಸಿದ್ದಾರೆ.

ರಷ್ಯಾ ಸೇನೆಯು ಕೀವ್ ವಶಕ್ಕೆ ಪ್ರದೇಶಗಳನ್ನು ದಾಳಿಗೆ ಗುರಿಯಾಗಿಸಿರುವ ಹಿನ್ನೆಲೆಯಲ್ಲಿ ನ್ಯಾಟೊದ ಸದಸ್ಯ ರಾಷ್ಟ್ರಗಳು ಆಗಿರುವ ಈ ಮೂರು ದೇಶಗಳ ಮುಖಂಡರ ಭೇಟಿ ಮಹತ್ವವನ್ನು ಪಡೆದುಕೊಂಡಿದೆ.

ಪೋಲೆಂಡ್ ಪ್ರಧಾನಿ ಮೆಟಿಸ್ಜ್ ಮೊರಾವಿಕಿ, ಜೆಕ್ ರಿಪಬ್ಲಿಕ್ ಪ್ರಧಾನಿ ಪೀಟರ್ ಫಿಯಾಲಾ ಮತ್ತು ಸ್ಲೊವೇನಿಯಾದ ಜಾನೆಜ್ ಜಾನ್ಸಾ ಭೇಟಿ ನೀಡುತ್ತಿದ್ದಾರೆ. ಈ ಮುಖಂಡರು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಮತ್ತು ಪ್ರಧಾನಿ ಡೆನಿಸ್ ಶ್ಮಿಹಾಲ್ ಅವರನ್ನು ಭೇಟಿಯಾಗಿ ಪ್ರಸಕ್ತ ಬೆಳವಣಿಗೆ ಕುರಿತು ಚರ್ಚಿಸಲಿದ್ದಾರೆ.

ಭೇಟಿ ಕುರಿತು ವಿಶ್ವಸಂಸ್ಥೆಗೂ ಮಾಹಿತಿ ನೀಡಲಾಗಿದೆ. ಈಗಿನ ಸಂಕಷ್ಟ ಕಾಲದಲ್ಲಿ ಭೇಟಿ ಅಗತ್ಯವಾಗಿದೆ. ಇದು, ನಮಗಾಗಿ ಅಲ್ಲ. ಭವಿಷ್ಯದಲ್ಲಿ ದೌರ್ಜನ್ಯ ಮುಕ್ತವಾದ ವಾತಾವರಣದಲ್ಲಿ ಬದುಕಬೇಕಾದ ನಮ್ಮ ಮಕ್ಕಳ ಭವಿಷ್ಯಕ್ಕಾಗಿ' ಎಂದು ಮೊರಾವಿಕಿ ಅವರು ಹೇಳಿದರು.

ಉಕ್ರೇನ್‌ಗೆ ನೀಡಬಹುದಾದ ಸಮಗ್ರ, ದೃಢ ನೆರವು ಕುರಿತ ಪ್ರಸ್ತಾವನ್ನು ಉಕ್ರೇನ್ ಮುಖಂಡರಿಗೆ ನೀಡಲಾಗುವುದು ಎಂದು ತಿಳಿಸಿದ್ದಾರೆ.

ರಷ್ಯಾ ಮೇಲೆ ಇನ್ನಷ್ಟು ನಿರ್ಬಂಧ

ಈ ಮಧ್ಯೆ, ರಷ್ಯಾದ ಮೇಲೆ ಯುರೋಪ್ ಒಕ್ಕೂಟದ 27 ಸದಸ್ಯ ರಾಷ್ಟ್ರಗಳು ಇನ್ನಷ್ಟು ನಿರ್ಬಂಧಗಳನ್ನು ಹೇರಿವೆ. ಇದು, ಯುರೋಪ್ ಒಕ್ಕೂಟ ಹೇರುತ್ತಿರುವ ನಾಲ್ಕನೇ ಹಂತದ ನಿರ್ಬಂಧವಾಗಿದೆ. ಯುರೋಪ್ ಒಕ್ಕೂಟದ ಅಧ್ಯಕ್ಷ ಸ್ಥಾನದಲ್ಲಿರುವ ಫ್ರಾನ್ಸ್ ಈ ಕುರಿತು ಹೇಳಿಕೆ ನೀಡಿದೆ.

ಸದಸ್ಯ ರಾಷ್ಟ್ರಗಳು ನಿರ್ಬಂಧಕ್ಕೆ ಸಮ್ಮತಿಸಿವೆ. ವಿಶ್ವ ವಾಣಿಜ್ಯ ಸಂಘಟನೆಯೊಂದಿಗೆ (ಡಬ್ಲ್ಯು.ಟಿ.ಒ) ರಷ್ಯಾ ಅಮಾನತುಪಡಿಸುವ ಘೋಷಣೆಗೂ ಯುರೋಪ್ ಒಕ್ಕೂಟದ 27 ಸದಸ್ಯ ರಾಷ್ಟ್ರಗಳು ಸಮ್ಮತಿಸಿವೆ. ಒಂದು ವೇಳೆ ಈ ಅಮಾನತು ಜಾರಿಗೊಂಡರೆ ರಷ್ಯಾದ ಎಲ್ಲ ಕಂಪನಿಗಳು, ಈ ಸದಸ್ಯ ರಾಷ್ಟ್ರಗಳಿಗೆ ವಿಶೇಷ ಮಾನ್ಯತೆ ಪಡೆಯುವ ಅವಕಾಶ ಕಳೆದುಕೊಳ್ಳಲಿವೆ ಎಂದು ತಿಳಿಸಿದೆ.

ಬೈಡನ್, ಬ್ಲಿಂಕೆನ್‌ಗೆ ನಿಬಂಧ

ಲಂಡನ್ (ರಾಯಿಟರ್ಸ್): ಅಮೆರಿಕದ ಅಧ್ಯಕ್ಷ ಜೋ ಬೈಡನ್, ವಿದೇಶಾಂಗ ಕಾರ್ಯದರ್ಶಿ ಆಂಟನಿ ಬ್ಲಿಂಕೆನ್ ಸೇರಿದಂತೆ 13 ಪ್ರಮುಖರಿಗೆ ದೇಶ ಪ್ರವೇಶಿಸದಂತೆ ರಷ್ಯಾ ನಿರ್ಬಂಧ ಹೇರಿದೆ.

ಅಮೆರಿಕ ಹೇರಿದ್ದ ನಿರ್ಬಂಧಕ್ಕೆ ಪ್ರತಿಯಾಗಿ ರಷ್ಯಾ ಈ ಕ್ರಮ ಕೈಗೊಂಡಿದೆ. ಪಟ್ಟಿಯಲ್ಲಿ ಮಾಜಿ ವಿದೇಶಾಂಗ ಕಾರ್ಯದರ್ಶಿ ಹಿಲರಿ ಕ್ಲಿಂಟನ್, ಸಿಐಎ ಮುಖ್ಯಸ್ಥ ವಿಲಿಯಂ ಬರ್ನ್ಸ್, ರಾಷ್ಟ್ರೀಯ ಭದ್ರತಾ ಸಲಹೆಗಾರ ಜೇಕ್ ಸುಲಿವಾನ್ ಅವರ ಹೆಸರುಗಳು ಇವೆ.

'ಅಮೆರಿಕ ಜೊತೆಗಿನ ಅಧಿಕೃತ ಬಾಂಧವ್ಯ ಮುಂದುವರಿಯಲಿದೆ. ಅಗತ್ಯ ಎನಿಸಿದರೆ ಈ ಪಟ್ಟಿಯಲ್ಲಿ ಇರುವವರೊಂದಿಗೂ ಉನ್ನತ ಮಟ್ಟದ ಮಾತುಕತೆ ನಡೆಯಬಹುದು' ಎಂದು ರಷ್ಯಾದ ವಿದೇಶಾಂಗ ಸಚಿವಾಲಯವು ಸ್ಪಷ್ಟಪಡಿಸಿದೆ.

ಯುರೋಪ್ ಒಕ್ಕೂಟ ಸಮಿತಿ ಅಧ್ಯಕ್ಷ ಉರ್ಸುಲಾ ವೊನ್ ಡೆರ್ ಲೆಯೆನ್ ಅವರು, 'ಅಲ್ಲದೆ, ಯುದ್ಧದ ವಿರುದ್ಧವಾಗಿ ರಷ್ಯಾದ ಮೇಲೆ ಒತ್ತಡ ಹೇರಲು ಯುರೋಪ್ ಒಕ್ಕೂಟವು ಜಿ7 ಸದಸ್ಯ ರಾಷ್ಟ್ರಗಳ ಜೊತೆಗೆ ಚರ್ಚೆ ನಡೆಸಲಿದೆ' ಎಂದು ತಿಳಿಸಿದರು.

ನ್ಯಾಟೊ, ಜಿ7 ಹೊರತಾದ ಒಕ್ಕೂಟ ರಚನೆ? (ವಾಷಿಂಗ್ಟನ್ ವರದಿ): ಜಿ-7 ಶೃಂಗ ರಾಷ್ಟ್ರಗಳು, ನ್ಯಾಟೊಗೆ ಹೊರತಾದ ಜಾಗತಿಕ ಒಕ್ಕೂಟ ರಚನೆಗೆ ಅಮೆರಿಕ ಕಾರ್ಯತತ್ಪರವಾಗಿದೆ. ರಷ್ಯಾ ವಿರುದ್ಧ ಅಮೆರಿಕ ಸಾರಿರುವ ಆರ್ಥಿಕ ಯುದ್ಧದಲ್ಲಿ ಚೀನಾ, ಭಾರತ, ಮೆಕ್ಸಿಕೊ, ಬ್ರೆಜಿಲ್‌ನಂತಹ ದೊಡ್ಡ ರಾಷ್ಟ್ರಗಳು ಭಾಗಿಯಾಗಿಲ್ಲ. ಆದರೆ, 'ಇದರಿಂದ ಅಮೆರಿಕ ಯತ್ನಕ್ಕೆ ಹಿನ್ನಡೆಯಾಗಿಲ್ಲ' ಎಂದು ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಜೆನ್ ಪ್ಸಾಕಿ ಪ್ರತಿಕ್ರಿಯಿಸಿದರು.

'ಈಗಿನ ಸನ್ನಿವೇಶದಲ್ಲಿ ಎಲ್ಲ ದೇಶಗಳು ತಮ್ಮ ನಿಲುವು ಸ್ಪಷ್ಟಪಡಿಸಬೇಕು, ಇತಿಹಾಸ ನಮ್ಮನ್ನು ಹೇಗೆ ಗುರುತಿಸಬೇಕು ಎಂದು ಸ್ಪಷ್ಟತೆ ಇರಬೇಕು' ಎಂದು ಅವರು ಅಭಿಪ್ರಾಯಪಟ್ಟರು.

ರಷ್ಯಾದ ಶೆಲ್ ದಾಳಿಯಿಂದಾಗಿ ಉಕ್ರೇನ್‌ನ ಕೀವ್ ನಗರದಲ್ಲಿ ವಸತಿ ಸಂಕೀರ್ಣವೊಂದು ತೀವ್ರವಾಗಿ ಹಾನಿಗೊಂಡಿದ್ದು, ಬೆಂಕಿಯನ್ನು ಸಿಬ್ಬಂದಿ ನಂದಿಸಿದರು –ಎಪಿ ಚಿತ್ರ

ದಿನದ ಘಟನಾವಳಿಗಳು

- ಮೂವತ್ತು ಲಕ್ಷಕ್ಕೂ ಅಧಿಕ ಮಂದಿ ಉಕ್ರೇನ್ ತೊರೆದಿದ್ದಾರೆ. ಇವರಲ್ಲಿ 14 ಲಕ್ಷ ಮಕ್ಕಳಿದ್ದಾರೆ ಎಂದು ವಿಶ್ವಸಂಸ್ಥೆಯ ವಕ್ತಾರ ಪಾಲ್ ದಿಲ್ಲೋನ್ ತಿಳಿಸಿದ್ದಾರೆ. ಕಳೆದ 20 ದಿನಗಳಲ್ಲಿ 70 ಸಾವಿರ ಮಕ್ಕಳು ವಲಸಿಗರಾಗಿವೆ. ಪ್ರತಿ ಕ್ಷಣಕ್ಕೆ ಒಂದು ಮಗು ವಲಸಿಗನಾಗಿ ಬದಲಾಗಿದೆ. ವಲಸಿಗರಲ್ಲಿ 1,57,000 ಜನ ವಿದೇಶಿಗರು ಎಂದು ಯುನಿಸೆಫ್ ಹೇಳಿದೆ.
- ಉಕ್ರೇನ್‌ನ ಚೆರ್ನೀವ್ ಪ್ರಾಂತ್ಯದಲ್ಲಿನ ವಾಯು ಮಾರ್ಗದಲ್ಲಿ ದಾಳಿ ನಡೆಯಬಹುದು. ನಾಗರಿಕರು ಸುರಕ್ಷಿತ ತಾಣದಲ್ಲಿ ಅಡಗಿಕೊಳ್ಳಬೇಕು ಎಂದು ಉಕ್ರೇನ್‌ನ ಸರ್ಕಾರ ಎಚ್ಚರಿಕೆ.
- ಪಶ್ಚಿಮ ಉಕ್ರೇನ್‌ನಲ್ಲಿ ಟಿ.ವಿ. ಟವರ್ ಮೇಲೆ ರಷ್ಯಾ ನಡೆಸಿದ ರಾಕೆಟ್ ದಾಳಿಯಲ್ಲಿ ಮೃತಪಟ್ಟವರ ಸಂಖ್ಯೆ 19ಕ್ಕೆ ಏರಿದೆ. ರಿವ್ನೆ ವಲಯದ ಸರ್ಕಾರ ತನ್ನ ಫೇಸ್‌ಬುಕ್ ಪುಟದಲ್ಲಿ ಈ ಮಾಹಿತಿ ಹಂಚಿಕೊಂಡಿದೆ.
- ಮುಂದುವರಿದಿದೆ. ಕೀವ್‌ನಲ್ಲಿರುವ 15 ಮಹಡಿಗಳ ಕಟ್ಟಡದ ಮೇಲೆ ಶೆಲ್ ದಾಳಿ ನಡೆದಿದ್ದು, ಕಟ್ಟಡವನ್ನು ಬೆಂಕಿ ಆವರಿಸಿತ್ತು. ದಾಳಿಯಲ್ಲಿ ಒಬ್ಬ ಮೃತಪಟ್ಟಿದ್ದಾರೆ. ಹಲವರು ಕಟ್ಟಡದಲ್ಲಿ ಸಿಲುಕಿದ್ದಾರೆ.
- 'ಮೈಕೊಲಾವಿವ್ ನಗರ ವಶಕ್ಕೆ ಮುಂದಾಗಿದ್ದ ರಷ್ಯಾದ ಪಡೆಗಳ ಹಿಮ್ಮೆಟ್ಟಿಸಲಾಗಿದೆ. ದಾಳಿಯಿಂದ ಇಬ್ಬರು ಮಕ್ಕಳು ಸೇರಿ 80 ಜನ ಗಾಯಗೊಂಡಿದ್ದಾರೆ ಎಂದು ಈ ಪ್ರಾಂತ್ಯದ ಗವರ್ನರ್ ವಿಟಲಿ ಕಿಮ್ ತಿಳಿಸಿದ್ದಾರೆ.
- ಚೆರ್ನೋಬಿಲ್ ಅಣುಶಕ್ತಿ ವಿದ್ಯುತ್ ಸ್ಥಾವರದಲ್ಲಿ ವಿದ್ಯುತ್ ಪೂರೈಕೆ ಸರಿಪಡಿಸಲಾಗಿದೆ. ಅಂತರರಾಷ್ಟ್ರೀಯ ಅಣುಶಕ್ತಿ ಏಜೆನ್ಸಿಗೂ ಮಾಹಿತಿಯನ್ನು ಆಡಳಿತ ನೀಡಿದೆ ಎಂದು ಸ್ಥಳೀಯ ಟಿ.ವಿ. ವಾಹಿನಿ ವರದಿ ಮಾಡಿದೆ.
- ಉಕ್ರೇನ್‌ನಲ್ಲಿ ವಶಕ್ಕೆ ಪಡೆದಿರುವ ಕೇರ್ಸನ್‌ನಲ್ಲಿ ಮಾಸ್ಕೊ ಪರವಿರುವ ಸರ್ಕಾರ ರಚಿಸಲು ರಷ್ಯಾ ಮುಂದಾಗಬಹುದು ಎಂದು ಬ್ರಿಟನ್‌ನ ರಕ್ಷಣಾ ಸಚಿವಾಲಯ ತಿಳಿಸಿದೆ. ಡೊನೆಟ್ಸ್ಕ್, ಲುಹಾನ್ಸ್ಕ ಮಾದರಿಯಲ್ಲಿ ಪ್ರತ್ಯೇಕ ಸ್ಥಾನಮಾನ ನೀಡುವ ನಿಟ್ಟಿನಲ್ಲಿ ಜನಾಭಿಪ್ರಾಯ ಪಡೆಯಬಹುದು ಎಂದಿದೆ.
- ರಷ್ಯಾದ ಮೇಲಿನ ನಿರ್ಬಂಧ ಬಿಗಿಗೊಳಿಸಲು ಜಪಾನ್ ಸರ್ಕಾರ ರಷ್ಯಾದ 11 ಸಂಸದರು, ಬ್ಯಾಂಕ್ ನಿರ್ವಾಹಕ ಯುರಿ ಕೊವಲ್‌ಚುಕ್, ರೆನೊವೊ ಸಮೂಹದ ಅಧ್ಯಕ್ಷ, ಬಿಲಿಯನೇರ್ ವಿಕ್ಟೊರ್ ವೆಕ್ಸೆಲ್‌ಬರ್ಗ್ ಸೇರಿ 17 ಪ್ರಮುಖರ ಖಾತೆಗಳನ್ನು ಜಪ್ತಿ ಮಾಡಿದೆ ಎಂದಿದೆ.
- ನ್ಯಾಟೊ ಸದಸ್ಯತ್ವ ಪಡೆಯಲು ತನಗೆ ಮುಕ್ತ ಪ್ರವೇಶ ಇಲ್ಲ ಎಂಬುದನ್ನು ಉಕ್ರೇನ್ ಅರ್ಥಮಾಡಿಕೊಂಡಿದೆ. ಹೀಗಾಗಿ, ತನಗೆ ಭದ್ರತೆಯ ಖಾತರಿ ಬೇಕಾಗಿದೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿದ್ದಾರೆ. ನಮಗೆ ಸದಸ್ಯತ್ವ ನೀಡಲಾಗದಿದ್ದರೆ, ಭದ್ರತೆ ಖಾತರಿಗೆ ಸಹಕಾರ ನೀಡಬೇಕು ಎಂದು ತಿಳಿಸಿದ್ದಾರೆ.
- ತಾತ್ಕಾಲಿಕ ಕದನವಿರಾಮ ನೀಡಿ ಘೋಷಿಸಲಾಗಿದ್ದ ಮಾನವೀಯ ಕಾರಿಡಾರ್ ಮೂಲಕ ಸುಮಾರು 2000 ಕಾರುಗಳು ಮರಿಯುಪೋಲ್ ನಗರದಿಂದ ನಿರ್ಗಮಿಸಿವೆ ಎಂದು ಸ್ಥಳೀಯ ಆಡಳಿತ ತಿಳಿಸಿದೆ.
- ಫಾಕ್ಸ್ ನ್ಯೂಸ್ ಛಾಯಾಗ್ರಾಹಕ ಪಿಯೆರೆ ಝುಕ್ರೆಜ್ವಿಸ್ಕಿ ಸತ್ತಿದ್ದಾರೆ. ವರದಿಗೆ ಹೋಗುವಾಗ ಅವರಿದ್ದ ವಾಹನ ಶೆಲ್ ದಾಳಿಯಿಂದಾದ ಬೆಂಕಿಗೆ ಸಿಲುಕಿದೆ. ಯುದ್ಧದ ಅವಧಿಯಲ್ಲಿ ಮೂವರು ಪತ್ರಕರ್ತರು ಸತ್ತಿದ್ದಾರೆ ಎಂದು ಉಕ್ರೇನ್ ಸಂಸತ್ತಿನ ಮಾನವ ಹಕ್ಕುಗಳ ಸಮಿತಿ ಮುಖ್ಯಸ್ಥರು ತಿಳಿಸಿದ್ದಾರೆ.
- ಅಮೆರಿಕ ನೇತೃತ್ವದ 'ನ್ಯಾಟೊ' ಅನ್ನು ಉಕ್ರೇನ್ ಸೇರುವುದಿಲ್ಲ. ಇದು ಸತ್ಯ. ಉಕ್ರೇನ್‌ನ ಈ ನಿಲುವನ್ನು ಗೌರವಿಸಬೇಕು ಎಂದು ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಮಂಗಳವಾರ ಹೇಳಿದ್ದಾರೆ.

ಮೇ ತಿಂಗಳಿಗೆ ಯುದ್ಧ ಅಂತ್ಯ?

ಕೀವ್ (ರಾಯಿಟರ್ಸ್): ಉಕ್ರೇನ್ ಮೇಲಿನ ರಷ್ಯಾ ಯುದ್ಧವು ಮೇ ವೇಳೆಗೆ ಅಂತ್ಯವಾಗುವ ಸಂಭವವಿದೆ. ಮೇ ವೇಳೆಗೆ ರಷ್ಯಾಗೆ ಸಂಪನ್ಮೂಲದ ಕೊರತೆ ಬಾಧಿಸಲಿದೆ ಎಂಬುದು ಈ ಲೆಕ್ಕಾಚಾರಕ್ಕೆ ಆಧಾರ.

ಉಕ್ರೇನ್‌ನ ಮಾಧ್ಯಮಗಳಲ್ಲಿ ಪ್ರಸಾರವಾದ ವಿಡಿಯೊ ಸಂದೇಶದಲ್ಲಿ, ಅಧ್ಯಕ್ಷರ ಸಲಹೆಗಾರ ಒಕೆಕ್ಸಿ ಅರೆಸ್ಟೋವಿಚ್ ಈ ಮಾತು ಹೇಳಿದ್ದಾರೆ. ರಷ್ಯಾದ ಸೇನಾ ಕಾರ್ಯಾಚರಣೆಯೊಂದಿಗೆ ಫೆಬ್ರುವರಿ 24ರಂದು ಯುದ್ಧ ಆರಂಭವಾಗಿತ್ತು.

'ಯುದ್ಧ ಬಾಧಿತ ನಗರಗಳಲ್ಲಿ ಮಾನವೀಯ ಕಾರಿಡಾರ್‌ಗೆ ಅವಕಾಶ ಕಲ್ಪಿಸುವುದನ್ನು ಹೊರತುಪಡಿಸಿ, ಯುದ್ಧ ಅಂತ್ಯಗೊಳಿಸಲು ರಷ್ಯಾ- ಉಕ್ರೇನ್ ನಡುವೆ ಇದುವರೆಗಿನ ಚರ್ಚೆ ಆಶಾದಾಯಕ ಫಲ ನೀಡಿಲ್ಲ' ಎಂದು ಹೇಳಿದ್ದಾರೆ.

'ಯುದ್ಧ ಮುಂದುವರಿಸಲು ರಷ್ಯಾ ಎಷ್ಟರವರೆಗೆ ಸಂಪನ್ಮೂಲ ಭರಿಸಲಿದೆ ಎಂಬುದನ್ನು ಯುದ್ಧದ ಅವಧಿ ಅವಲಂಬಿಸಿದೆ. ಬಹುಶಃ ಮೇ ವೇಳೆಗೆ ಶಾಂತಿ ಒಪ್ಪಂದ ಏರ್ಪಡಬಹುದು. ಅದಕ್ಕೂ ಮೊದಲೂ ಆಗಬಹುದು. ಕಾದು ನೋಡೋಣ. ನಾನು ಆದಷ್ಟು ಹತ್ತಿರದ ಸಮಯವನ್ನು ಅಂದಾಜಿಸಿ ಈ ಮಾತು ಹೇಳುತ್ತಿದ್ದೇನೆ' ಎಂದಿದ್ದಾರೆ.

'ನಾವು ಕವಲುದಾರಿಯಲ್ಲಿದ್ದೇವೆ. ತುರ್ತಾಗಿ ಅಂದರೆ ಒಂದೆರಡು ವಾರದಲ್ಲಿ ಶಾಂತಿ ಒಪ್ಪಂದ ಏರ್ಪಡಬಹುದು. ಇದರಲ್ಲಿ ಸೇನೆ ವಾಪಸಾತಿ ಸೇರಿ ಎಲ್ಲವೂ ಒಳಗೊಂಡಿರಬಹುದು. ಒಂದು ವೇಳೆ ಶಾಂತಿ ಒಪ್ಪಂದ ಏರ್ಪಟ್ಟರೂ, ಒಂದು ವರ್ಷ ಸಣ್ಣಪುಟ್ಟ ಸಂಘರ್ಷಗಳು ಮುಂದುವರಿಯುವ ಸಾಧ್ಯತೆ ತಳ್ಳಿಹಾಕಲಾಗದು. ರಷ್ಯಾ ತನ್ನ ಸೇನೆಯನ್ನು ಪೂರ್ಣವಾಗಿ ಹಿಂಪಡೆಯಬೇಕು ಎಂಬುದು ಉಕ್ರೇನ್ ಸದ್ಯದ ಬೇಡಿಕೆಯಾಗಿದೆ' ಎಂದರು.

ಉಕ್ರೇನ್: ಶಿಕ್ಷಣ ವಂಚಿತ ಭಾರತದ ವಿದ್ಯಾರ್ಥಿಗಳು ನಿರಾಳ

ಆನ್‌ಲೈನ್ ತರಗತಿ ಆರಂಭ

ನವದೆಹಲಿ (ಪಿಟಿಐ): ಉಕ್ರೇನ್‌ನಲ್ಲಿನ ಹಲವು ವಿಶ್ವವಿದ್ಯಾಲಯಗಳು ಸೋಮವಾರ ತನ್ನ ವಿದ್ಯಾರ್ಥಿಗಳಿಗೆ ಆನ್‌ಲೈನ್ ತರಗತಿಗಳನ್ನು ಆರಂಭಿಸಿವೆ. ಯುದ್ಧದಿಂದಾಗಿ ಶಿಕ್ಷಣ ಮಸುಕಾಗಲಿದೆ ಎಂದು ಆತಂಕದಲ್ಲಿದ್ದ ಭಾರತದ ವಿದ್ಯಾರ್ಥಿಗಳಲ್ಲಿ ಇದು ಹೊಸ ಭರವಸೆ ಮೂಡಿಸಿದೆ.

'ಆನ್‌ಲೈನ್ ತರಗತಿ ನಿಜಕ್ಕೂ ಭಾವನಾತ್ಮಕವಾಗಿತ್ತು. ಬೋಧಕರೂ ಭಾವನಾತ್ಮಕವಾಗಿದ್ದರು. ಮಧ್ಯಾಹ್ನ 12.30ರಿಂದ 7 ಗಂಟೆವರೆಗೆ ತರಗತಿಗಳು ನಡೆದವು. ತರಗತಿಯ ವೇಳಾಪಟ್ಟಿಯನ್ನು ಒದಗಿಸಲಾಗಿದೆ' ಎಂದು ವಿದ್ಯಾರ್ಥಿಯೊಬ್ಬರು ಪ್ರತಿಕ್ರಿಯಿಸಿದರು.

ಪಶ್ಚಿಮ ಉಕ್ರೇನ್‌ನಲ್ಲಿ ಇರುವ ಬಹುತೇಕ ವಿಶ್ವವಿದ್ಯಾಲಯಗಳು ಸೋಮವಾರ ಆನ್‌ಲೈನ್ ತರಗತಿ ಆರಂಭಿಸಿವೆ. ರಷ್ಯಾದ ಪಡೆಗಳು ಶೆಲ್ ದಾಳಿ ಮುಂದುವರಿಸಿರುವ ಕಾರಣ ಭೌತಿಕ ತರಗತಿಗಳ ಪುನಾರಂಭ ಅಸಾಧ್ಯ ಎಂಬ ಹಿನ್ನೆಲೆಯಲ್ಲಿ ಈ ಕ್ರಮಕ್ಕೆ ಮುಂದಾಗಿವೆ.

ಶೆಲ್ ದಾಳಿಯ ನಡುವೆಯೇ ಸುರಕ್ಷಿತ ತಾಣದಿಂದ ಬೋಧಕರು ಆನ್‌ಲೈನ್ ತರಗತಿ ನಡೆಸುತ್ತಿದ್ದಾರೆ ಎಂದು ಲೀವ್‌ನ ಡಾನಿಲೊ ಹಾಲಿಟ್ಸ್ಕಿ ರಾಷ್ಟ್ರೀಯ ವಿಶ್ವವಿದ್ಯಾಲಯದ ವಿದ್ಯಾರ್ಥಿಯಾಗಿರುವ ಕನಿಷ್ಕ್ ಅವರು ಪ್ರತಿಕ್ರಿಯಿಸಿದರು.

'ಏನೂ ಇಲ್ಲದಿರುವುದಕ್ಕಿಂತಲೂ ಇದು ಒಳ್ಳೆಯದು. ಖುಷಿಯಾಗಿದೆ. ನಮ್ಮ ಶಿಕ್ಷಣದ ಭವಿಷ್ಯ ಏನಾದಿತೋ ಎಂಬ ಆತಂಕ ತುಂಬಾ ಕಾಡುತ್ತಿತ್ತು' ಎಂದು ಇನ್ನೊಬ್ಬ ವಿದ್ಯಾರ್ಥಿ ಮನೋಗ್ಯಾ ಪ್ರತಿಕ್ರಿಯಿಸಿದರು.

'ಆನ್‌ಲೈನ್ ತರಗತಿಗಳಷ್ಟೇ ಸಾಲದು ಎಂಬುದು ನಮಗೆ ಗೊತ್ತಿದೆ. ಆದರೂ, ಪರವಾಗಿಲ್ಲ. ನಾವು ಶಿಕ್ಷಣ ಮುಂದುವರಿಸಬಹುದು ಎಂದು ವಿನ್ನಿಟ್ಸಿಯಾ ನ್ಯಾಷನಲ್ ಪಿರೊಗೋವ್ ವಿಶ್ವವಿದ್ಯಾಲದಯ ವೈದ್ಯಕೀಯ ವಿದ್ಯಾರ್ಥಿ ಕಿಂಜಾಲ್ ಚೌಹಾಣ್ ಹೇಳಿದರು. ಹಾರ್ಕಿವ್‌ನ ನ್ಯಾಷನಲ್ ಮೆಡಿಕಲ್ ಯೂನಿವರ್ಸಿಟಿ ಮಾರ್ಚ್ 21ರಿಂದ ಆನ್‌ಲೈನ್ ತರಗತಿ ಆರಂಭಿಸುವ ಸಂಭವವಿದೆ.

ಭಾರತೀಯರ ಸ್ಥಳಾಂತರ, ಪ್ರಧಾನಿ ಚರ್ಚೆ

ನವದೆಹಲಿ (ಪಿಟಿಐ): ಯುದ್ಧ ಬಾಧಿತ ಉಕ್ರೇನ್‌ನಿಂದ ಭಾರತೀಯರನ್ನು ಕರೆತರುವ ಪ್ರಕ್ರಿಯೆಯಲ್ಲಿ ಭಾಗಿಯಾಗಿದ್ದ ರಾಯಭಾರ ಕಚೇರಿಯ ಅಧಿಕಾರಿಗಳು, ಸಮುದಾಯ ಸಂಘಟನೆಗಳ ಪ್ರತಿನಿಧಿಗಳ ಜೊತೆಗೆ ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಚರ್ಚೆ ನಡೆಸಿದರು.

ಕೇಂದ್ರ ಸಚಿವರಾದ ಹರ್‌ದೀಪ್ ಸಿಂಗ್ ಪುರಿ, ಜ್ಯೋತಿರಾದಿತ್ಯ ಸಿಂಧಿಯಾ, ಕಿರೇಣ್ ರಿಜಿಜು, ವಿ.ಕೆ.ಸಿಂಗ್ ಅವರೂ ಭಾಗವಹಿಸಿದ್ದರು. ರಾಯಭಾರ ಕಚೇರಿ ಅಧಿಕಾರಿಗಳು, ಸಂಘಟನೆಗಳ ಮುಖಂಡರ ಜೊತೆಗೆ ಪ್ರಧಾನಿ ವಿಡಿಯೊ ಕಾನ್ಫರೆನ್ಸ್ ಮೂಲಕ ಚರ್ಚಿಸಿದರು ಎಂದು ಹೇಳಿಕೆ ತಿಳಿಸಿದೆ.

'ವಿದ್ಯಾರ್ಥಿಗಳು ಮೊದಲೇ ನಿರ್ಗಮಿಸಲು ಬಿಡಲಿಲ್ಲ'

ನವದೆಹಲಿ (ಪಿಟಿಐ): ಉಕ್ರೇನ್‌ನಿಂದ ನಿರ್ಗಮಿಸಲು ಭಾರತದ ವಿದ್ಯಾರ್ಥಿಗಳಿಗೆ ಅಲ್ಲಿನ ವಿಶ್ವವಿದ್ಯಾಲಯಗಳು ಆರಂಭದಲ್ಲಿ ಸ್ಪಂದಿಸಲಿಲ್ಲ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಹೇಳಿದರು. ಈ ಕುರಿತ ಹೇಳಿಕೆಯಲ್ಲಿ, ಉಕ್ರೇನ್‌ನಿಂದ ಸುಮಾರು 22,500 ಭಾರತೀಯರನ್ನು ಕರೆತರಲಾಗಿದೆ ಎಂದು ತಿಳಿಸಿದ್ದಾರೆ.

'ನಮ್ಮ ಪ್ರಯತ್ನಗಳ ನಂತರವು ಹೆಚ್ಚಿನ ವಿದ್ಯಾರ್ಥಿಗಳು ಉಕ್ರೇನ್ ತೊರೆಯಲು ನಿರಾಕರಿಸಿದರು ಕಲಿಕೆಗೆ ತೊಡಕಾಗಬಹುದು ಎಂದು ಶಿಕ್ಷಣ ಸಂಸ್ಥೆ ತೊರೆಯಲು ಸಹಜವಾಗಿಯೇ ವಿರೋಧ ವ್ಯಕ್ತವಾಯಿತು. ಕೆಲ ವಿ.ವಿಗಳು ತೊರೆಯದಂತೆ ಪ್ರೇರೇಪಿಸಿದವು. ಆನ್‌ಲೈನ್ ತರಗತಿಯನ್ನು ನಡೆಸಲಾಗದು ಎಂದು ಪ್ರತಿರೋಧ ತೋರಿದವು. ಸುರಕ್ಷತೆ ಕುರಿತಂತೆ ಅನೇಕರು ನಮ್ಮ ಸಲಹೆ ಸ್ವೀಕರಿಸಲಿಲ್ಲ' ಎಂದು ಜೈಶಂಕರ್ ಹೇಳಿದ್ದಾರೆ.

'ಪರಿಸ್ಥಿತಿಯನ್ನು ನಿಭಾಯಿಸಲು ಭಾರತ ಸರ್ಕಾರವು ಮೊದಲೇ ಸಜ್ಜಾಗಿತ್ತು. ಫೆ.24ರ ವೇಳೆಗೆ ಗೊಂದಲದ ಸ್ಥಿತಿ ಇತ್ತು. ಸೇನೆಯನ್ನು ಹಿಂಪಡೆಯಲಾಗುತ್ತಿದೆ ಎಂಬ ವರದಿಗಳು ಗೊಂದಲ ಹೆಚ್ಚಿಸಿದ್ದವು. ಇದರ ಒಟ್ಟು ಪರಿಣಾಮವಾಗಿ ಸುಮಾರು 18,000 ಭಾರತೀಯರು ಯುದ್ಧಪೀಡಿತ ಉಕ್ರೇನ್‌ನಲ್ಲಿ ಸಿಕ್ಕಿಬಿದ್ದಿದ್ದರು' ಎಂದಿದ್ದಾರೆ.

ಹಿಜಾಬ್ ಹಿಂದೆ ಕಾಣದ ಕೈ: ಹೈಕೋರ್ಟ್

ಒಂದನೇ ಪುಟದಿಂದ...

ಆದರೂ, ಈ ಸಂಬಂಧ ಪೊಲೀಸ್ ತನಿಖೆ ನಡೆಯುತ್ತಿರುವ ಕಾರಣ ಈ ವಿಷಯದಲ್ಲಿ ನ್ಯಾಯಪೀಠ ಸಂಯಮ ಕಾಯ್ದುಕೊಂಡು ಹೋಗಲು ಬಯಸುತ್ತದೆ' ಎಂದು ವಿವರಿಸಲಾಗಿದೆ.

ಕುರಾನ್‌ನಲ್ಲೇ ಇಲ್ಲ: 'ಕುರಾನ್‌ನಲ್ಲಿ ಅನೇಕ ಪ್ರಕಾರದ ವ್ಯಾಖ್ಯಾನಗಳಿದ್ದು, ಯಾವ ಕುರಾನ್ ಅನ್ನು ಒಪ್ಪಬೇಕು ಎಂಬ ಪ್ರಶ್ನೆ ಎದುರಾಯಿತು. ಕಡೆಗೆ ಸುಪ್ರೀಂ ಕೋರ್ಟ್ ಈಗಾಗಲೇ ಶಾಬಾನು ಪ್ರಕರಣ, ಶಾಯಿರಾಬಾನು ಪ್ರಕರಣ ಹಾಗೂ ಸಿದ್ದಿಖಿ ಪ್ರಕರಣಗಳಲ್ಲಿ ಅಬ್ದುಲ್ಲಾ ಯೂಸುಫ್ ಅಲಿ ಅವರು ಇಂಗ್ಲಿಷ್‌ಗೆ ಭಾಷಾಂತರ ಮಾಡಿರುವ ಕುರಾನ್‌ನ ಅಧಿಕೃತತೆಯನ್ನು ಅವಲಂಬಿಸಿ ತೀರ್ಪು ನೀಡಿದ್ದನ್ನೇ ಇಲ್ಲೂ ಪರಿಗಣಿಸಿದ್ದೇವೆ. ಇದರ ಅನುಸಾರ ಅಬ್ದುಲ್ಲಾ ಯೂಸುಫ್ ಅಲಿ ಅವರ ಭಾಷಾಂತರ ಮಾಡಿರುವ ಕುರಾನ್‌ನಲ್ಲಿ ಎಲ್ಲೂ ಕೂಡಾ ಹಿಜಾಬ್ ಪ್ರಸ್ತಾಪವೇ ಇಲ್ಲ' ಎಂಬ ಅಂಶವನ್ನು ನ್ಯಾಯಪೀಠ ಎತ್ತಿ ತೋರಿಸಿದೆ.

'ಸಮವಸ್ತ್ರದ ಕಟ್ಟಳೆ ವಿಧಾನದ ಮೂಲಕ ಹಿಜಾಬ್ ನಿರ್ಬಂಧಿಸಿರುವುದು ಅರ್ಜಿದಾರರ ಧಾರ್ಮಿಕ ಸ್ವಾತಂತ್ರ್ಯ ಮತ್ತು ಖಾಸಗೀತನದ ಸ್ವಾತಂತ್ರ್ಯ ಹಕ್ಕಿನ ಉಲ್ಲಂಘನೆ' ಎಂಬ ವಾದವನ್ನು ತಳ್ಳಿ ಹಾಕಿರುವ ನ್ಯಾಯಪೀಠ, 'ಮೇಲು–ಕೀಳು, ಬಡವ–ಶ್ರೀಮಂತ ಎಂಬ ತರತಮಗಳನ್ನು ತೊರೆದು ವಿದ್ಯಾರ್ಥಿಗಳು ಅನುಶಾಸನದ ಶಿಕ್ಷಣ ಪಡೆಯಲಿ ಎಂಬ ಉದ್ದೇಶದಿಂದಲೇ ಸಮವಸ್ತ್ರ ಸಂಹಿತೆ ಇದೆ. ಹೀಗಾಗಿ, ಸಮವಸ್ತ್ರ ಕಟ್ಟಳೆ ವಿಧಿಸುವುದಕ್ಕೆ ಶಿಕ್ಷಣ ಸಂಸ್ಥೆಗಳಿಗೆ ಕರ್ನಾಟಕ ಶಿಕ್ಷಣ ಕಾಯ್ದೆ–1983 ಹಾಗೂ ಕರ್ನಾಟಕ ಶೈಕ್ಷಣಿಕ ಪಠ್ಯಕ್ರಮ ನಿಯಮಾವಳಿ–1995ರ ಅಡಿ ಅಧಿಕಾರವಿಲ್ಲ ಎಂಬ ಅರ್ಜಿದಾರರ ಮನವಿಯಲ್ಲಿ ಹುರುಳಿಲ್ಲ' ಎಂದು ನ್ಯಾಯಪೀಠ ಹೇಳಿದೆ.

'ಸಂವಿಧಾನದ 25ನೇ ವಿಧಿಯು ಧಾರ್ಮಿಕ ಆಚರಣೆಯ ರಕ್ಷಣೆಗಳ ಬಗ್ಗೆ ವಿವರಿಸುತ್ತದೆ. ಆದರೆ, ಅತ್ಯಾವಶ್ಯಕ ಧಾರ್ಮಿಕ ಆಚರಣೆಯ ಬಗ್ಗೆ ಹೇಳಿಲ್ಲ. ಆದರೂ, ಯಾವುದೇ ಧಾರ್ಮಿಕ ಚಟುವಟಿಕೆಗಳನ್ನು ನಿರ್ಬಂಧಿಸುವ ಅಧಿಕಾರ ಸಂವಿಧಾನದಲ್ಲಿ ಪ್ರದತ್ತವಾಗಿದೆ. ಈ ಅಂಶವನ್ನು ಸುಪ್ರೀಂ ಕೋರ್ಟ್ ಶಿರೂರು ಮಠದ ಪ್ರಕರಣದಿಂದ ಹಿಡಿದು ಶಬರಿಮಲೆ ಪ್ರಕರಣದವರೆಗೂ ಈಗಾಗಲೇ ಸ್ಪಷ್ಟಪಡಿಸಿದೆ' ಎಂದು ತೀರ್ಪಿನಲ್ಲಿ ವಿವರಿಸಲಾಗಿದೆ.

'ಉಭಯ ಪಕ್ಷಗಾರರು ಅನ್ಯ ದೇಶದ ಕೋರ್ಟ್‌ಗಳ ಹಲವು ಪ್ರಕರಣಗಳನ್ನು ಪೂರಕವಾಗಿ ಉಲ್ಲೇಖಿಸಿದ್ದರಾದರೂ, ಅವುಗಳು ಈ ದೇಶದ ಸಂಸ್ಕೃತಿ ಮತ್ತು ನೆಲದ ಕಾನೂನಿಗೆ ಭಿನ್ನವಾದ ಕಾರಣ ಅವುಗಳ ತೀರ್ಪುಗಳನ್ನು ಅವಲಂಬಿಸಲು ಹೋಗಿಲ್ಲ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಹುಸಿಯಾದ ನಿರೀಕ್ಷೆ: ಕಾನೂನು ಹೋರಾಟ

ಒಂದನೇ ಪುಟದಿಂದ....

'ಹಿಜಾಬ್ ಅಗತ್ಯ ಧಾರ್ಮಿಕ ಆಚರಣೆಯಲ್ಲ ಎಂದು ನ್ಯಾಯಾಲಯ ಹೇಳಿದೆ. ಆದರೆ, ಖುರಾನ್‌ನಲ್ಲಿ ಮುಸ್ಲಿಂ ಮಹಿಳೆ ಕಡ್ಡಾಯವಾಗಿ ತಲೆ ಹಾಗೂ ಎದೆಯ ಭಾಗವನ್ನು ಸಂಪೂರ್ಣವಾಗಿ ಮುಚ್ಚಬೇಕು ಎಂದು ಹೇಳಲಾಗಿದೆ. ಹಿಜಾಬ್ ನಮ್ಮ ಧಾರ್ಮಿಕ ಹಕ್ಕಾಗಿದ್ದು, ಯಾವುದೇ ಕಾರಣಕ್ಕೂ ಮೊಟಕುಗೊಳಿಸಲು ಬಿಡುವುದಿಲ್ಲ' ಎಂದು ಆಲ್ಮಾಸ್ ಹೇಳಿದರು.

'ಹಿಜಾಬ್ ಧರಿಸಲು ಅವಕಾಶ ಸಿಗದಿದ್ದರೆ ಕಾಲೇಜಿಗೆ ಹೋಗುವುದಿಲ್ಲ. ಹಿಜಾಬ್ ಬೇಕು, ಶಿಕ್ಷಣವೂ ಬೇಕು. ಇಸ್ಲಾಂನಲ್ಲಿ ಹಿಜಾಬ್ ಪ್ರಮುಖ ಧಾರ್ಮಿಕ ಆಚರಣೆಯಾಗಿದ್ದು, ಹಿಜಾಬ್‌ಗಾಗಿ ಕಾನೂನು ಹೋರಾಟ ಮುಂದುವರಿಸುತ್ತೇವೆ' ಎಂದರು.

'ರಾಜ್ಯ ಸರ್ಕಾರದ ಒತ್ತಡದಿಂದ ಹೈಕೋರ್ಟ್‌ನಲ್ಲಿ ಹಿಜಾಬ್ ವಿರುದ್ಧವಾದ ತೀರ್ಪು ಬಂದಿದೆ. ಹಿಜಾಬ್‌ಗೆ ಅನುಮತಿ ಕೋರಿ ನ್ಯಾಯಾಲಯದಲ್ಲಿ ಅರ್ಜಿ ದಾಖಲಿಸುತ್ತಿದ್ದಂತೆ, ಸರ್ಕಾರ ವಿವಾದವನ್ನು ದೊಡ್ಡದು ಮಾಡಿ, ನ್ಯಾಯಾಲಯದ ಮೇಲೆ ಒತ್ತಡ ಹಾಕಿದೆ' ಎಂದು ಆಲಿಯಾ ಅಸಾದಿ ಆರೋಪಿಸಿದರು.

ಕಾಲೇಜು ಹಂತದಲ್ಲೇ ಬಗೆಹರಿಯಬಹುದಾಗಿದ್ದ ವಿವಾದವನ್ನು ರಾಜಕೀಯಗೊಳಿಸಿ ಕೋಮುವಾದ ಬೆರಸಿ, ಸಾವಿರಾರು ಮುಸ್ಲಿಂ ಹೆಣ್ಣುಮಕ್ಕಳು ಶಿಕ್ಷಣದಿಂದ ವಂಚಿತರಾಗುವಂತೆ ಮಾಡಲಾಗಿದೆ. ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಬದುಕಿದ್ದರೆ ಸಂವಿಧಾನಕ್ಕೆ ಬಂದೊದಗಿರುವ ಸ್ಥಿತಿ ನೋಡಿ ಖಂಡಿತ ದುಃಖಪಡುತ್ತಿದ್ದರು ಎಂದರು. ಸುದ್ದಿಗೋಷ್ಠಿಯಲ್ಲಿ ಅಲಿಯಾ ಅಸಾದಿ, ರೇಷಮ್, ಮುಸ್ಕಾನ್, ಸಫಾ ಇದ್ದರು.

ಸುರಪುರ ತಾಲ್ಲೂಕಿನ ಕೆಂಭಾವಿಯ ಸರ್ಕಾರಿ ಪದವಿಪೂರ್ವ ಕಾಲೇಜು

ಪರೀಕ್ಷೆ ಬರೆಯದ 8 ವಿದ್ಯಾರ್ಥಿನಿಯರು

ಪ್ರಜಾವಾಣಿ ವಾರ್ತೆ

ಕೆಂಭಾವಿ (ಯಾದಗಿರಿ ಜಿಲ್ಲೆ): ಹಿಜಾಬ್ ವಿವಾದ ಕುರಿತು ಹೈಕೋರ್ಟ್ ಮಂಗಳವಾರ ನೀಡಿದ ಮಹತ್ವದ ತೀರ್ಪಿನ ಬಳಿಕವೂ ಸುರಪುರ ತಾಲ್ಲೂಕಿನ ಕೆಂಭಾವಿಯ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಎಂಟು ವಿದ್ಯಾರ್ಥಿನಿಯರು ಪೂರ್ವ ಸಿದ್ಧತಾ ಪರೀಕ್ಷೆ ಬರೆಯದೇ ಮನೆಗೆ ಮರಳಿದರು.

ಎರಡು ದಿನಗಳಿಂದ ದ್ವಿತೀಯ ಪಿಯು ವಿದ್ಯಾರ್ಥಿಗಳಿಗೆ ಪೂರ್ವ ಸಿದ್ಧತಾ ಪರೀಕ್ಷೆ ನಡೆಯುತ್ತಿದ್ದು, ಮಂಗಳವಾರ ಇಂಗ್ಲಿಷ್ ವಿಷಯದ ಪರೀಕ್ಷೆ ಇತ್ತು. ಒಟ್ಟು 29 ವಿದ್ಯಾರ್ಥಿನಿಯರಲ್ಲಿ ಕಾಲೇಜಿಗೆ ಬಂದ 12 ವಿದ್ಯಾರ್ಥಿನಿಯರ ಪೈಕಿ ನಾಲ್ವರು ಹಿಜಾಬ್ ತೆಗೆದು ಪರೀಕ್ಷೆ ಬರೆದರು.

ಹಿಜಾಬ್ ಕುರಿತು ಹೈಕೋರ್ಟ್ ನೀಡಿದ ತೀರ್ಪಿನ ಬಳಿಕ ಮಂಗಳವಾರ ಕೆಂಭಾವಿ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಪರೀಕ್ಷೆ ಬರೆಯದೇ ವಿದ್ಯಾರ್ಥಿನಿಯರು ಮನೆಗೆ ಮರಳಿದರು

ಆದೇಶ ಪಾಲಿಸಲ್ಲ: 'ಹಿಜಾಬ್ ಧರಿಸಿಯೇ ಪೂರ್ವ ಸಿದ್ಧತಾ ಪರೀಕ್ಷೆ ಬರೆಯುತ್ತೇವೆ. ಹಿಜಾಬ್ ತೆಗೆದು ಪರೀಕ್ಷೆ ಬರೆಯಲು ನಮಗೆ ಒಪ್ಪಿಗೆ ಇಲ್ಲ. ಹೈಕೋರ್ಟ್ ಆದೇಶ ಬಂದರೂ ಹಿಜಾಬ್ ಧರಿಸುತ್ತೇವೆ' ಎಂದು ಯಾದಗಿರಿ ಪದವಿಪೂರ್ವ ಪ್ರಥಮ ವರ್ಷದ ವಿದ್ಯಾರ್ಥಿನಿ ಆಸ್ರಾ ಹೇಳಿದರು.

'ಹಿಜಾಬ್‌ಗೆ ಅನುಮತಿ ನೀಡಿದರಷ್ಟೆ ತರಗತಿಗೆ ಹಾಜರು'

ಹಾಸನ: ಹಿಜಾಬ್ ಕುರಿತು ಹೈಕೋರ್ಟ್ ನೀಡಿರುವ ತೀರ್ಪಿಗೆ ಅಸಮಾಧಾನ ವ್ಯಕ್ತಪಡಿಸಿರುವ ನಗರದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು, 'ಹಿಜಾಬ್ ಧರಿಸಲು ಅನುಮತಿ ನೀಡುವವರೆಗೂ ತರಗತಿಗೆ ಹಾಜರಾಗುವುದಿಲ್ಲ. ಅನುಮತಿ ನೀಡದಿದ್ದರೆ ಪರೀಕ್ಷೆಗೂ ಹಾಜರಾಗುವುದಿಲ್ಲ' ಎಂದು ಹೇಳಿದ್ದಾರೆ.

'ನಾಲ್ಕು ವರ್ಷಗಳಿಂದ ಹಿಜಾಬ್ ಧರಿಸಿಯೇ ಕಾಲೇಜಿಗೆ ಹೋಗುತ್ತಿದ್ದೇವೆ. ಆದರೆ ಈಗೇಕೆ ವಿರೋಧ ವ್ಯಕ್ತವಾಯಿತು? ಈಗಾಗಲೇ ತರಗತಿಗಳಿಲ್ಲದೆ ಸರಿಯಾಗಿ ಓದಲು ಆಗಿಲ್ಲ. ಪರೀಕ್ಷೆ ಸಮೀಪಿಸುತ್ತಿದ್ದು ತೊಂದರೆಯಾಗಿದೆ. ಕೋರ್ಟ್ ತೀರ್ಪು ಸಮಾಧಾನ ತಂದಿಲ್ಲ. ಶಿಕ್ಷಣದ ಜತೆಗೆ ಹಿಜಾಬ್ ಬೇಕು' ಎಂದು ಪಟ್ಟು ಹಿಡಿದರು.

'ಒಂದು ತಿಂಗಳಿನಿಂದ ತರಗತಿ ಬಹಿಷ್ಕರಿಸಿದ್ದೇವೆ. ಈ ಆದೇಶದಿಂದ ಪೋಷಕರು ಕಾಲೇಜಿಗೆ ಹೋಗುವುದೇ ಬೇಡ ಎಂದಿದ್ದಾರೆ. ಅವರ ಮಾತು ಮೀರುವುದಿಲ್ಲ' ಎಂದರು.

'ಹೈಕೋರ್ಟ್ ತೀರ್ಪನ್ನು ಎಲ್ಲರೂ ಪಾಲಿಸಬೇಕು'

ಬೆಳಗಾವಿ: 'ಹಿಜಾಬ್ ಕುರಿತಂತೆ ನ್ಯಾಯಾಲಯ ನೀಡಿರುವ ತೀರ್ಪು ಅಂತಿಮ. ತೀರ್ಪನ್ನು ಒಂದೇ ಧರ್ಮದ ಪರವಾಗಿಯೇನೂ ನೀಡಿಲ್ಲ. ಎಲ್ಲ ರೀತಿಯ ಬಣ್ಣ ಹಾಗೂ ವಸ್ತ್ರಕ್ಕೆ ಅವಕಾಶ ಕೊಟ್ಟಿಲ್ಲ. ಆದ್ದರಿಂದ ಎಲ್ಲರೂ ಪಾಲಿಸಬೇಕು' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಹೇಳಿದರು.

ಇಲ್ಲಿ ಪತ್ರಕರ್ತರೊಂದಿಗೆ ಮಂಗಳವಾರ ಮಾತನಾಡಿದ ಅವರು, 'ಇದು ಹಿಂದಿನಿಂದಲೂ ವಿವಾದವೇನೂ ಆಗಿರಲಿಲ್ಲ. ಹಿಜಾಬ್ ವಿಚಾರದಲ್ಲಿ ರಾಜ್ಯದಲ್ಲಿ ಅಶಾಂತಿ ಉಂಟು ಮಾಡಿದವರು ನಾವಲ್ಲ. ಮಾಡಿದವರೇ ಅವರು (ಬಿಜೆಪಿಯವರು). ಈಗ 'ದಿ ಕಾಶ್ಮೀರ್ ಫೈಲ್ಸ್' ಸಿನಿಮಾ ಮೂಲಕ ಹೊಸದೊಂದು ಅಪಪ್ರಚಾರ ಪ್ರಾರಂಭಿಸಿದ್ದಾರೆ. ಅದೆಲ್ಲವನ್ನೂ ಎದುರಿಸುವಂತಹ ಸಿದ್ಧತೆಯನ್ನು ನಾವು ಮಾಡಿಕೊಳ್ಳಬೇಕಾಗುತ್ತದೆ' ಎಂದು ಪ್ರತಿಕ್ರಿಯಿಸಿದರು.

ತೀರ್ಪು ಸ್ವಾಗತಿಸಿದ ಮಹಿಳಾ ಆಯೋಗ

ನವದೆಹಲಿ: ಹಿಜಾಬ್ ಕುರಿತ ಕರ್ನಾಟಕ ಹೈಕೋರ್ಟ್‌ನ ತೀರ್ಪನ್ನು ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷೆ ರೇಖಾ ಶರ್ಮಾ ಸ್ವಾಗತಿಸಿದ್ದಾರೆ. ತರಗತಿಗಳಲ್ಲಿ ಶೈಕ್ಷಣಿಕ ಸಂಸ್ಥೆಗಳ ಆಡಳಿತ ಮಂಡಳಿಗಳು ಜಾರಿ ಮಾಡಿರುವ ವಸ್ತ್ರ ಸಂಹಿತೆಗಳನ್ನು ವಿದ್ಯಾರ್ಥಿನಿಯರು ಪಾಲಿಸಬೇಕು ಎಂದಿದ್ದಾರೆ.

'ಹೆಣ್ಣು ಮಕ್ಕಳು ಮತ್ತು ಮಹಿಳೆಯರಿಗೆ ತಮ್ಮ ಇಚ್ಛೆಗೆ ಅನುಗುಣವಾಗಿ ಉಡುಪುಗಳನ್ನು ಧರಿಸುವ ಹಕ್ಕಿದೆ. ಅವರ ಸ್ವಾತಂತ್ರ್ಯಕ್ಕೆ ಯಾವುದೇ ಧಕ್ಕೆ ಇಲ್ಲ. ಆದರೆ, ತರಗತಿಗಳಲ್ಲಿ ವಿದ್ಯಾರ್ಥಿನಿಯರು ಆಡಳಿತ ಮಂಡಳಿಗಳು ಜಾರಿಗೊಳಿಸಿರುವ ವಸ್ತ್ರ ಸಂಹಿತೆಯನ್ನು ಅನುಸರಿಸಬೇಕು' ಎಂದು ಅವರು ಹೇಳಿದ್ದಾರೆ.

'ಹೈಕೋರ್ಟ್ ತೀರ್ಪು, ಸದ್ಯ ನಡೆಯುತ್ತಿರುವ ಹಿಜಾಬ್ ವಿವಾದಗಳಿಗೆ ತೆರೆ ಎಳೆಯಲಿದೆ ಮತ್ತು ಹೆಣ್ಣುಮಕ್ಕಳು ಶಿಕ್ಷಣ ಮುಂದುವರಿಸಲು ಅನುವು ಮಾಡಿಕೊಡಲಿದೆ' ಎಂದು ನಂಬುತ್ತೇನೆ ಎಂದು ರೇಖಾ ಶರ್ಮಾ ಹೇಳಿದ್ದಾರೆ.

ಕೇರಳ ರಾಜ್ಯಪಾಲರ ಸ್ವಾಗತ (ತಿರುವನಂತರಪುರ): ಹೈಕೋರ್ಟ್ ತೀರ್ಪನ್ನು ಸ್ವಾಗತಿಸಿರುವ ಕೇರಳ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು, 'ಮುಸ್ಲಿಂ ಯುವತಿಯರನ್ನು ಮನೆಯ ನಾಲ್ಕು ಗೋಡೆಗಳೊಳಗೆ ತಳ್ಳುವ ನಿರಂತರ ಪ್ರಯತ್ನಗಳು ಯಶಸ್ವಿಯಾಗುವುದಿಲ್ಲ' ಎಂದು ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ತೀರ್ಪಿನ ಬಗ್ಗೆ ನಾನು ಸಂತೋಷಪಡುವುದಿಲ್ಲ, ಏಕೆಂದರೆ ಮುಸ್ಲಿಂ ಯುವತಿಯರೂ ತಮ್ಮ ಇತರ ಸಹೋದರಿಯರಂತೆ ರಾಷ್ಟ್ರ ನಿರ್ಮಾಣದಲ್ಲಿ ಮತ್ತು ಕುಟುಂಬ ನಿರ್ವಹಣೆಯಲ್ಲಿ ಮಹತ್ತರವಾದ ಪಾತ್ರವಹಿಸುವ ಸಾಮರ್ಥ್ಯ ಹೊಂದಿದ್ದಾರೆ' ಎಂದು ತಿಳಿಸಿದ್ದಾರೆ.

ಮುಸ್ಲಿಂ ಯುವತಿಯರನ್ನು ಮನೆಯ ನಾಲ್ಕು ಗೋಡೆಗಳಿಗೆ ಸೀಮಿತಗೊಳಿಸುವ ನಿರಂತರ ಪ್ರಯತ್ನಗಳು ವಿಫಲವಾಗಲಿ ಎಂದು ನಾನು ಪ್ರಾಮಾಣಿಕವಾಗಿ ಪ್ರಾರ್ಥಿಸುತ್ತೇನೆ ಎಂದು ಖಾನ್ ಹೇಳಿದ್ದಾರೆ.

ಒಮರ್, ಮುಫ್ತಿ ಅಸಮಾಧಾನ

ಶ್ರೀನಗರ: ಹಿಜಾಬ್‌ಗೆ ಸಂಬಂಧಿಸಿದಂತೆ ಕರ್ನಾಟಕ ಹೈಕೋರ್ಟ್ ತೀರ್ಪಿನ ಕುರಿತು ಅಸಮಾಧಾನ ವ್ಯಕ್ತಪಡಿಸಿರುವ ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿಗಳಾದ ಒಮರ್ ಅಬ್ದುಲ್ಲಾ ಮತ್ತು ಮೆಹಬೂಬಾ ಮುಫ್ತಿ ಅವರು, ಇದು 'ನಿರಾಶಾದಾಯಕ' ಎಂದು ಹೇಳಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಒಮರ್ ಅಬ್ದುಲ್ಲಾ, 'ಈ ತೀರ್ಪಿನಿಂದ ತುಂಬಾ ನಿರಾಸೆಯಾಗಿದೆ. ಮೂಲಭೂತ ಹಕ್ಕನ್ನು ನ್ಯಾಯಾಲಯ ಎತ್ತಿಹಿಡಿಯದಿರುವುದು ಅಪಹಾಸ್ಯ' ಎಂದಿದ್ದಾರೆ.

ಮೆಹಬೂಬಾ ಕೂಡ ಟ್ವೀಟ್ ಮಾಡಿದ್ದು, 'ಒಂದು ಕಡೆ ನಾವು ಮಹಿಳಾ ಸಬಲೀಕರಣದ ಬಗ್ಗೆ ಮಾತನಾಡುತ್ತೇವೆ. ಆದರೆ, ಒಂದು ಸರಳ ಆಯ್ಕೆಯ ಹಕ್ಕನ್ನು ಅವರಿಗೆ ನಿರಾಕರಿಸುತ್ತಿದ್ದೇವೆ. ಇದು ಕೇವಲ ಧರ್ಮದ ವಿಚಾರ ಅಲ್ಲ. ಬದಲಿಗೆ ಅದು ಅವರ ಆಯ್ಕೆ ಮಾಡುವ ಸ್ವಾತಂತ್ರ್ಯದ ವಿಚಾರ' ಎಂದು ಹೇಳಿದ್ದಾರೆ.

'ತೀರ್ಪು ಸಂವಿಧಾನದ ಜಯ'

ಧಾರವಾಡ: 'ಹಿಜಾಬ್ ಕುರಿತ ಹೈಕೋರ್ಟ್ ಆದೇಶ ಐತಿಹಾಸಿಕ ಮತ್ತು ಸಂವಿಧಾನದ ಜಯ' ಎಂದು ಶ್ರೀರಾಮ ಸೇನೆ ಮುಖ್ಯಸ್ಥ ಪ್ರಮೋದ ಮುತಾಲಿಕ್ ಹೇಳಿದರು. ಸುದ್ದಿಗಾರರೊಂದಿಗೆ ಮಂಗಳವಾರ ಮಾತನಾಡಿದ ಅವರು, 'ಶಾಲಾ- ಕಾಲೇಜುಗಳಲ್ಲಿ ಸಮವಸ್ತ್ರ ಎಂದರೆ ಅದು ಸಮವಸ್ತ್ರ ಮಾತ್ರ. ಅಲ್ಲಿ ಕೇಸರಿ ಶಾಲು, ಹಿಜಾಬ್‌ಗೆ ಅವಕಾಶವಿಲ್ಲ ಎಂಬುದು ಸಾಮಾನ್ಯರಿಗೂ ಗೊತ್ತಿದ್ದ ವಿಷಯವಾಗಿತ್ತು. ಆದರೆ ಅನಗತ್ಯವಾಗಿ ಅದನ್ನು ವಿವಾದ ಮಾಡಿದ್ದರು. ಅಂಥವರ ಮುಖಕ್ಕೆ ಹೊಡೆದಂತೆ ಹೈಕೋರ್ಟ್ ಆದೇಶ ನೀಡಿದೆ. ಇದನ್ನು ಮುಸ್ಲಿಮರು ಪಾಲಿಸಬೇಕು' ಎಂದರು.

ಹಿಜಾಬ್: ಹೈಕೋರ್ಟ್ ಆದೇಶ ಪ್ರಶ್ನಿಸಿ 'ಸುಪ್ರೀಂ'ಗೆ ಮೇಲ್ಮನವಿ

ಒಂದನೇ ಪುಟದಿಂದ...

ಹಿಜಾಬ್ ಧರಿಸುವುದನ್ನು ಸಂವಿಧಾನದ ಅಡಿ ಖಾತರಿಪಡಿಸಲಾದ ಗೌಪ್ಯತೆ, ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಆತ್ಮಸಾಕ್ಷಿಯ ಮೂಲಭೂತ ಹಕ್ಕುಗಳ ಅಡಿಯಲ್ಲಿ ರಕ್ಷಿಸಲಾಗಿದೆ. ಆದರೆ, ಅದನ್ನು ಅರಿಯದೇ ಹೈಕೋರ್ಟ್ ಪ್ರಮಾದವೆಸಗಿದೆ ಎಂದು ಅರ್ಜಿಯಲ್ಲಿ ತಿಳಿಸಲಾಗಿದೆ.

ಧರ್ಮವನ್ನು ಅನುಸರಿಸುವವರು ಆತ್ಮಸಾಕ್ಷಿಯ ಹಕ್ಕನ್ನು ಹೊಂದಿರುವುದಿಲ್ಲ ಎಂದು ಹೈಕೋರ್ಟ್ ತೀರ್ಮಾನಿಸಿದಂತಿದೆ. ಹಿಜಾಬ್ ಧರಿಸುವ ಹಕ್ಕನ್ನು ಆತ್ಮಸಾಕ್ಷಿಯ ಹಕ್ಕಿನ ಭಾಗವಾಗಿ ಸಂವಿಧಾನದ 25ನೇ ವಿಧಿಯ ಅಡಿ ರಕ್ಷಿಸಲಾಗಿದೆ ಎಂದು ಮನವಿಯಲ್ಲಿ ಪ್ರತಿಪಾದಿಸಲಾಗಿದೆ.

ಆತ್ಮಸಾಕ್ಷಿಯ ಹಕ್ಕು ಮೂಲಭೂತವಾಗಿ ವೈಯಕ್ತಿಕ ಹಕ್ಕಾಗಿದ್ದು, ಈ ಪ್ರಕರಣದಲ್ಲಿ 'ಅಗತ್ಯ ಧಾರ್ಮಿಕ ಆಚರಣೆ'ಯನ್ನು ಹೈಕೋರ್ಟ್ ಪರಿಗಣಿಸಬಾರದು. ಅಲ್ಲದೆ, ಭಾರತೀಯ ಕಾನೂನು ವ್ಯವಸ್ಥೆಯು ಧಾರ್ಮಿಕ ಚಿಹ್ನೆಗಳನ್ನು ಧರಿಸುವುದನ್ನು ಸ್ಪಷ್ಟವಾಗಿ ಗುರುತಿಸಿದೆ. ಇದನ್ನು ಅರಿಯುವಲ್ಲಿ ಹೈಕೋರ್ಟ್ ವಿಫಲವಾಗಿದೆ ಎಂದೂ ಮೇಲ್ಮನವಿಯಲ್ಲಿ ತಿಳಿಸಲಾಗಿದೆ.

ತಲೆಯ ಮೇಲೆ ಪಗಡಿ (ಟರ್ಬನ್) ಧರಿಸುವ ಸಿಖ್ ಸಮುದಾಯದವರಿಗೆ 1988ರ ಮೋಟಾರು ವಾಹನಗಳ ಕಾಯ್ದೆಯ ಸೆಕ್ಷನ್ 129ರ ಅಡಿ ಹೆಲ್ಮೆಟ್ ಧರಿಸುವುದರಿಂದ ವಿನಾಯಿತಿ ನೀಡಲಾಗಿದೆ. ಸಿಖ್ ಸಮುದಾಯದಲ್ಲಿ ಧಾರ್ಮಿಕ ದೀಕ್ಷೆ ಪಡೆದವರಿಗೆ ವಿಮಾನದಲ್ಲಿ ಕಿರ್ಪಾನ್ (ಚಿಕ್ಕ ಕತ್ತಿ) ಕೊಂಡೊಯ್ಯಲು ನಾಗರಿಕ ವಿಮಾನಯಾನ ಸಚಿವಾಲಯ ನಿಯಮ ರೂಪಿಸಿದೆ ಎಂಬುದನ್ನೂ ಗಮನಿಸುವುದು ಸೂಕ್ತ ಎಂದು ಹೇಳಲಾಗಿದೆ.

ಮುಸ್ಲಿಂ ಮಹಿಳೆಯರನ್ನು ಅಪಹಾಸ್ಯ ಮಾಡುವ ಮೂಲಕ ಧಾರ್ಮಿಕ ಅಲ್ಪಸಂಖ್ಯಾತರು ಮತ್ತು ನಿರ್ದಿಷ್ಟವಾಗಿ ಇಸ್ಲಾಮಿಕ್ ನಂಬಿಕೆಯ ಅನುಯಾಯಿಗಳ ಮೇಲೆ ದಾಳಿ ಮಾಡುವ ಪರೋಕ್ಷ ಉದ್ದೇಶದಿಂದ ರಾಜ್ಯ ಸರ್ಕಾರವು ಫೆ.5ರಂದು ಕರ್ನಾಟಕ ಶಿಕ್ಷಣ ಕಾಯ್ದೆ ಅಡಿ ಹಿಜಾಬ್ ನಿಷೇಧಿಸಿ ಆದೇಶಿಸಿದೆ ಎಂದೂ ಅರ್ಜಿಯಲ್ಲಿ ದೂರಲಾಗಿದೆ.

ಸಮವಸ್ತ್ರದ ಹೆಸರಿನಲ್ಲಿ ಜಾತ್ಯತೀತತೆ ಮತ್ತು ಸಮಾನತೆಯನ್ನು ಸಾರುವ ನೆಪದಲ್ಲಿ ದಾಳಿ ನಡೆಸಲಾಗಿದೆ. ಕಾಲೇಜುಗಳ ಆಡಳಿತ ಮಂಡಳಿಗಳು ಹಿಜಾಬ್ ಧರಿಸಿದ ವಿದ್ಯಾರ್ಥಿಗಳನ್ನು ಶಿಕ್ಷಣ ಸಂಸ್ಥೆ ಆವರಣಕ್ಕೆ ಪ್ರವೇಶಿಸದಂತೆ ತಡೆದಿವೆ. ಸರ್ಕಾರದ ಮಲತಾಯಿ ಧೋರಣೆಯು ವಿದ್ಯಾರ್ಥಿಗಳ ಧಾರ್ಮಿಕ ನಂಬಿಕೆಯನ್ನು ಪಾಲಿಸದಂತೆ ಹತ್ತಿಕ್ಕಲಾಗಿದೆ ಎಂದೂ ಮೇಲ್ಮನವಿ ತಿಳಿಸಿದೆ.

'ಸುಪ್ರೀಂ'ನಲ್ಲಿ ಪ್ರಶ್ನಿಸಲು ಚಿಂತನೆ: ವಕ್ಫ್ ಅಧ್ಯಕ್ಷ

ಬೆಂಗಳೂರು: 'ಹಿಜಾಬ್ ವಿಚಾರದಲ್ಲಿ ಹೈಕೋರ್ಟ್ ನೀಡಿರುವ ತೀರ್ಪು ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಲು ಚಿಂತನೆ ನಡೆದಿದೆ. ಕಾನೂನಾತ್ಮಕವಾಗಿಯೇ ನಾವು ನಮ್ಮ ಹಕ್ಕನ್ನು ಪಡೆದುಕೊಳ್ಳುತ್ತೇವೆ' ಎಂದು ರಾಜ್ಯ ವಕ್ಫ್ ಮಂಡಳಿ ಅಧ್ಯಕ್ಷ ಶಾಫಿ ಸಅದಿ ಹೇಳಿದರು.

ತೀರ್ಪಿನ ಕುರಿತು ಮಂಗಳವಾರ ಪ್ರತಿಕ್ರಿಯಿಸಿದ ಅವರು, 'ಮುಸ್ಲಿಂ ಮಹಿಳೆಯರು ಹಿಜಾಬ್ ಧರಿಸುವುದು ಕಡ್ಡಾಯ ಎಂದು ಕುರಾನ್‌ನಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಹೈಕೋರ್ಟ್ ಯಾವ ಆಧಾರದಲ್ಲಿ ತೀರ್ಪು ನೀಡಿದೆ ಎಂಬುದು ಗೊತ್ತಿಲ್ಲ' ಎಂದರು.

'ಮಹಿಳೆಯರು ಹಿಜಾಬ್ ಧರಿಸುವುದು ನಮ್ಮ ಕಟ್ಟಳೆ. ಕುರಾನ್‌ನಲ್ಲಿ ಈ ಬಗ್ಗೆ ಉಲ್ಲೇಖವಿದೆ. ಷರಿಯತ್‌ನಲ್ಲೂ ಇದನ್ನು ಸ್ಪಷ್ಟವಾಗಿ ಹೇಳಲಾಗಿದೆ' ಎಂದು ಹೇಳಿದರು.

ಜನ್ಮದಿನದ ಜೊತೆಗೆ ಸಿನಿಮಾ ಬಿಡುಗಡೆ; ಅಪ್ಪು ಅಭಿಮಾನಿಗಳಿಗೆ ಸಂಭ್ರಮ

ನಾಳೆಯಿಂದ 'ಜೇಮ್ಸ್' ಹಬ್ಬ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅಭಿಮಾನಿಗಳಿಗೆ ಗುರುವಾರ (ಮಾ.17) ಹಬ್ಬದ ಸಂಭ್ರಮ. ಒಂದೆಡೆ ನೆಚ್ಚಿನ ನಟ 'ಅಪ್ಪು'ವಿನ ಜನ್ಮದಿನ, ಇನ್ನೊಂದೆಡೆ ಅಪ್ಪು ನಟನೆಯ ಕೊನೆಯ ಸಿನಿಮಾ 'ಜೇಮ್ಸ್' ಬಿಡುಗಡೆ. ಇವೆರಡನ್ನೂ ಅದ್ಧೂರಿಯಾಗಿ ಆಚರಿಸಲು ಅಭಿಮಾನಿಗಳು ಸಿದ್ಧತೆ ನಡೆಸಿದ್ದಾರೆ.

ಚೇತನ್ ಕುಮಾರ್ ನಿರ್ದೇಶನದ 'ಜೇಮ್ಸ್', ಕರ್ನಾಟಕದಲ್ಲೇ 400ಕ್ಕೂ ಅಧಿಕ ಏಕಪರದೆ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುತ್ತಿದೆ. 'ಜೇಮ್ಸ್' ಕನ್ನಡ ಸೇರಿದಂತೆ ಐದು ಭಾಷೆಗಳಲ್ಲಿ ಏಕಕಾಲದಲ್ಲಿ ಬಿಡುಗಡೆಯಾಗುತ್ತಿದೆ. 'ತಮ್ಮ ಜನ್ಮದಿನದಂದೇ ಈ ಚಿತ್ರ ಬಿಡುಗಡೆಯ ಆಸೆಯನ್ನು ಪುನೀತ್ ಅವರು ಹೊಂದಿದ್ದರು. ಈ ಆಸೆ ಪೂರೈಸುವುದು ನಮ್ಮ ಜವಾಬ್ದಾರಿಯಾಗಿತ್ತು. ಅಮೆರಿಕದಲ್ಲಿ 72 ಕೇಂದ್ರಗಳು, ಕೆನಡಾದಲ್ಲಿ 40 ಕೇಂದ್ರಗಳು ಸೇರಿದಂತೆ 21 ದೇಶಗಳಲ್ಲಿ 'ಜೇಮ್ಸ್' ಬಿಡುಗಡೆಯಾಗುತ್ತಿದೆ. ಮೈಸೂರಿನಲ್ಲಿ ಇರುವ ಐದು ಏಕಪರದೆ ಚಿತ್ರಮಂದಿರಗಳಲ್ಲಿ ಹಾಗೂ ಮೂರು ಮಲ್ಟಿಪ್ಲೆಕ್ಸ್‌ನಲ್ಲಿ ದಿನಕ್ಕೆ 17–18 ಪ್ರದರ್ಶನಗಳ ಟಿಕೆಟ್ ಮಾರಾಟವಾಗಿವೆ' ಎಂದಿದ್ದಾರೆ ಚೇತನ್ ಕುಮಾರ್.

ಕಲೆಕ್ಷನ್‌ನಲ್ಲಿ ಹೊಸ ದಾಖಲೆ: ಬೆಳಗ್ಗೆ 4ರಿಂದಲೇ ಹಲವು ಚಿತ್ರಮಂದಿರಗಳಲ್ಲಿ 'ಫ್ಯಾನ್ಸ್ ಶೋ' ಆರಂಭವಾಗಲಿದ್ದು, ತಡರಾತ್ರಿಯವರೆಗಿನ ಪ್ರದರ್ಶನಗಳೂ ನಿಗದಿಯಾಗಿವೆ. ಬೆಂಗಳೂರಿನ ಹಲವು ಚಿತ್ರಮಂದಿರಗಳಲ್ಲಿ ಫಸ್ಟ್ ಶೋಗಳ ಟಿಕೆಟ್ ಪೂರ್ಣವಾಗಿ ಬಿಕರಿಯಾಗಿವೆ. ನಗರದ ಕೆಲವು ಮಲ್ಟಿಪ್ಲೆಕ್ಸ್‌ಗಳಲ್ಲಿ ದಿನಕ್ಕೆ 20–22 ಪ್ರದರ್ಶನಗಳಿವೆ. 'ಜೇಮ್ಸ್' ಮೊದಲ ದಿನದ ಗಳಿಕೆ ಈ ಹಿಂದಿನ ಎಲ್ಲ ದಾಖಲೆಗಳನ್ನು ಮುರಿಯುವುದು ಖಚಿತ ಎನ್ನುತ್ತಿದೆ ಗಾಂಧಿನಗರ.

'ಜೇಮ್ಸ್' ಬಿಡುಗಡೆಯನ್ನು ಹಬ್ಬವನ್ನಾಗಿ ಆಚರಿಸಲು ಈಗಾಗಲೇ ಅಭಿಮಾನಿಗಳು ಸಿದ್ಧತೆ ಆರಂಭಿಸಿದ್ದು, ಚಿತ್ರಮಂದಿರಗಳ ಮುಂದೆ 'ಅಪ್ಪು' ಕಟೌಟ್‌ಗಳು ರಾರಾಜಿಸುತ್ತಿವೆ. ಬೆಂಗಳೂರಿನ ವೀರೇಶ್ ಚಿತ್ರಮಂದಿರದ ಎದುರು ಪುನೀತ್ ನಟನೆಯ ಎಲ್ಲ ಸಿನಿಮಾಗಳ ಕಟೌಟ್ ನಿಲ್ಲಿಸಲಾಗಿದೆ. ರಾಜ್ಯದೆಲ್ಲೆಡೆ ಚಿತ್ರಮಂದಿರಕ್ಕೆ ಸಾಗುವ ದಾರಿಯಲ್ಲಿ ಅಪ್ಪು ಜನ್ಮದಿನಕ್ಕೆ ಶುಭಾಶಯ ಕೋರಿ, 'ಜೇಮ್ಸ್' ಚಿತ್ರಕ್ಕೆ ಹಾರೈಸಿ ಫ್ಲೆಕ್ಸ್‌ಗಳ ತೋರಣವೇ ಕಾಣಿಸುತ್ತಿದೆ. ಹಲವು ಚಿತ್ರಮಂದಿರಗಳಲ್ಲಿ ಗುರುವಾರ ಬೆಳಗ್ಗಿನಿಂದ ರಾತ್ರಿಯವರೆಗೂ ಪ್ರೇಕ್ಷಕರಿಗೆ ಹಲವು ಬಗೆಯ ಭಕ್ಷ್ಯ ಭೋಜನವನ್ನು ಉಣಬಡಿಸಲು ಅಭಿಮಾನಿಗಳು ನಿರ್ಧರಿಸಿದ್ದಾರೆ. ಹಲವು ಜಿಲ್ಲೆಗಳಲ್ಲಿ ಪುನೀತ್ ಅವರ ಜನ್ಮದಿನದ ಅಂಗವಾಗಿ ಅನ್ನಸಂತರ್ಪಣೆ, ರಕ್ತದಾನ ಶಿಬಿರ ನಡೆಸಲು ಅಭಿಮಾನಿಗಳು ಸಿದ್ಧತೆ ನಡೆಸಿದ್ದಾರೆ.

ಒಂದೇ ತೆರೆಯಲ್ಲಿ 'ದೊಡ್ಮನೆ':

ಈ ಸಿನಿಮಾ ಮುಖಾಂತರ ಇದೇ ಮೊದಲ ಬಾರಿಗೆ ಯೋಧನ ಪಾತ್ರದಲ್ಲಿ 'ಅಪ್ಪು' ಕಾಣಿಸಿಕೊಳ್ಳುತ್ತಿರುವುದೂ ಅಭಿಮಾನಿಗಳ ಸಂಭ್ರಮ ಮುಗಿಲುಮುಟ್ಟುವುದಕ್ಕೆ ಇನ್ನೊಂದು ಕಾರಣ. ಚಿತ್ರದ 'ಸಲಾಂ ಸೋಲ್ಜರ್' ಹಾಗೂ 'ಟ್ರೇಡ್ ಮಾರ್ಕ್' ಹಾಡುಗಳು ಈಗಾಗಲೇ ಅಭಿಮಾನಿಗಳನ್ನು ಹುಚ್ಚೆದ್ದು ಕುಣಿಸಿವೆ. ಅಪ್ಪು ಅಭಿಮಾನಿಗಳಿಗಷ್ಟೇ ಅಲ್ಲದೆ, ನಟ ಶಿವರಾಜ್‌ಕುಮಾರ್ ಅವರ ಅಭಿಮಾನಿಗಳಿಗೂ ಜೇಮ್ಸ್ ವಿಶೇಷ ಚಿತ್ರ. ಏಕೆಂದರೆ, ಶಿವರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್ ಹಾಗೂ ಪುನೀತ್ ರಾಜ್‌ಕುಮಾರ್ ಅವರನ್ನು ಒಂದೇ ಸಿನಿಮಾದಲ್ಲಿ ನೋಡುವ ಅಭಿಮಾನಿಗಳ ಆಸೆಯೂ ಈ ಸಿನಿಮಾ ಮುಖಾಂತರ ಈಡೇರುತ್ತಿದೆ. ಮಾ.17ರಂದೇ 'ಜೇಮ್ಸ್' ಬಿಡುಗಡೆಯಾಗುತ್ತಿರುವ ಎಲ್ಲ ಚಿತ್ರಮಂದಿರಗಳಲ್ಲಿ ಶಿವರಾಜ್‌ಕುಮಾರ್ ನಟನೆಯ 123ನೇ ಸಿನಿಮಾ 'ಬೈರಾಗಿ'ಯ ಟೀಸರ್ ಬಿಡುಗಡೆಯಾಗಲಿದೆ. ಟೀಸರ್ ಅನ್ನು ಚಿತ್ರತಂಡವು ಅಪ್ಪುಗೆ ಅರ್ಪಿಸಿದೆ.

ಹೀಗೆ ಚಂದನವನದಲ್ಲಿ ಹಿಂದೆಂದೂ ನೋಡದ ಸಿನಿಮಾ ಹಬ್ಬ ಗುರುವಾರ ಆರಂಭವಾಗಲಿದೆ.

ಬೆಂಗಳೂರಿನ ವೀರೇಶ್ ಚಿತ್ರಮಂದಿರದ ಎದುರು ಪುನೀತ್ ರಾಜಕುಮಾರ್ ಅಭಿನಯದ ವಿವಿಧ ಚಿತ್ರಗಳ ಕಟೌಟ್‌ಗಳನ್ನು ನಿಲ್ಲಿಸಿರುವುದು ಪ್ರಜಾವಾಣಿ ಚಿತ್ರ

> **ಅಪ್ಪು ನಮ್ಮನ್ನು ಬಿಟ್ಟು ಎಲ್ಲಿಗೂ ಹೋಗಿಲ್ಲ. ಆತ ನಮ್ಮೆಲ್ಲರ ಹೃದಯದಲ್ಲಿದ್ದಾನೆ. ನಾವು ಅವನನ್ನು ಜೀವಂತವಾಗಿ ಜೊತೆಯಾಗಿ ಕರೆದುಕೊಂಡು ಹೋಗೋಣ**
> **ಶಿವರಾಜ್‌ಕುಮಾರ್,** ನಟ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

'ಜಿಎಸ್‌ಟಿ: ₹ 53,600 ಕೋಟಿಗೂ ಹೆಚ್ಚು ಬಾಕಿ'

ನವದೆಹಲಿ (ಪಿಟಿಐ): 'ಪ್ರಸಕ್ತ ಹಣಕಾಸು ವರ್ಷಕ್ಕೆ ಸಂಬಂಧಿಸಿ ರಾಜ್ಯಗಳಿಗೆ ₹ 53,600 ಕೋಟಿಗೂ ಅಧಿಕ ಜಿಎಸ್‌ಟಿ ಪರಿಹಾರ ಮೊತ್ತ ಬಿಡುಗಡೆ ಮಾಡಬೇಕಿದೆ' ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ರಾಜ್ಯಸಭೆಗೆ ಮಂಗಳವಾರ ತಿಳಿಸಿದರು.

'ಜಿಎಸ್‌ಟಿ ಪರಿಹಾರಕ್ಕೆ ಸಂಬಂಧಿಸಿ ಪ್ರಸಕ್ತ ಹಣಕಾಸು ವರ್ಷದಲ್ಲಿ ಈ ವರೆಗೆ ₹ 96,576 ಕೋಟಿ ಬಿಡುಗಡೆ ಮಾಡಲಾಗಿದೆ. ಜಿಎಸ್‌ಟಿ ಅನುಷ್ಠಾನ ಸಂದರ್ಭದಲ್ಲಿ ಆಗುವ ವರಮಾನ ಕೊರತೆಗೆ ಸಂಬಂಧಿಸಿ ಹೆಚ್ಚುವರಿಯಾಗಿ ₹ 1.59 ಲಕ್ಷ ಕೋಟಿ ಸಾಲವಾಗಿ ನೀಡಲಾಗಿದೆ' ಎಂದು ಅವರು ಸದನಕ್ಕೆ ತಿಳಿಸಿದರು.

'ನಾಯಕರ ಮಕ್ಕಳಿಗೆ ಟಿಕೆಟ್ ನೀಡದ್ದು ಉದ್ದೇಶಪೂರ್ವಕ'

ಜನತಂತ್ರದ ಹಬ್ಬ 2022

ನವದೆಹಲಿ (ಪಿಟಿಐ): ವಂಶಾಡಳಿತವು ಪ್ರಜಾಪ್ರಭುತ್ವಕ್ಕೆ ಅಪಾಯಕಾರಿಯಾಗಿದೆ. ಬಿಜೆಪಿ ವಂಶಾಡಳಿತದ ವಿರೋಧಿಯಾಗಿದೆ. ಹಾಗಾಗಿಯೇ, ಬಿಜೆಪಿ ಸಂಸದರ ಮಕ್ಕಳಿಗೆ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಉದ್ದೇಶಪೂರ್ವಕವಾಗಿಯೇ ಟಿಕೆಟ್ ನೀಡಲಾಗಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿಯ ಭಾರಿ ಗೆಲುವಿನ ಬಳಿಕ, ಮಂಗಳವಾರ ನಡೆದ ಬಿಜೆಪಿ ಸಂಸದೀಯ ಪಕ್ಷದ ಸಭೆಯಲ್ಲಿ ಮೋದಿ ಅವರು ಮಾತನಾಡಿದರು. ಇತ್ತೀಚೆಗೆ ಚುನಾವಣೆ ನಡೆದ ಐದು ರಾಜ್ಯಗಳ ಸಂಸದರು ತಮ್ಮ ಕ್ಷೇತ್ರಗಳಲ್ಲಿ ಬಿಜೆಪಿ ಅತಿ ಕಡಿಮೆ ಮತ ಪಡೆದ ಕನಿಷ್ಠ ನೂರು ಮತಗಟ್ಟೆಗಳನ್ನು ಗುರುತಿಸಬೇಕು. ಕಡಿಮೆ ಮತ ಪಡೆಯಲು ಕಾರಣಗಳೇನು ಎಂಬುದನ್ನು ಕಂಡು ಹಿಡಿಯಬೇಕು ಎಂದು ಅವರು ಕರೆ ಕೊಟ್ಟಿದ್ದಾರೆ.

ನಾಲ್ಕು ರಾಜ್ಯಗಳ ಚುನಾವಣಾ ಗೆಲುವಿಗಾಗಿ ಮೋದಿ ಮತ್ತು ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಸನ್ಮಾನಿಸಲಾಯಿತು. ಬಜೆಟ್ ಅಧಿವೇಶನ ಆರಂಭವಾದ ಬಳಿಕ ಇದೇ ಮೊದಲಿಗೆ ಸಂಸದೀಯ ಪಕ್ಷದ ಸಭೆ ನಡೆದಿದೆ. ಸಭೆಯಲ್ಲಿ ನಡ್ಡಾ ಅವರೂ ಮಾತನಾಡಿದರು.

'ದೇಶದಲ್ಲಿ ಈಗ ವಂಶಾಡಳಿತ ವಿರೋಧಿ ವಾತಾವರಣ ಇದೆ. ಜನರ ಈ ಭಾವನೆಯನ್ನು ಬಿಜೆಪಿ ಗೌರವಿಸಿದೆ. ಹಾಗಾಗಿಯೇ ಪಕ್ಷದ ನಾಯಕರ ಕುಟುಂಬದ ಸದಸ್ಯರಿಗೆ ಟಿಕೆಟ್ ನೀಡದಿರಲು ನಿರ್ಧರಿಸಲಾಯಿತು. ಈ ನಿರ್ಧಾರವನ್ನು ಪಕ್ಷದ ನಾಯಕರು ಬೆಂಬಲಿಸಿದ್ದಾರೆ ಎಂದು ಮೋದಿ ಹೇಳಿದ್ದಾರೆ' ಎಂದು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ತಿಳಿಸಿದರು.

ಉಕ್ರೇನ್‌ನಲ್ಲಿರುವ ಭಾರತೀಯರನ್ನು ಸುರಕ್ಷಿತವಾಗಿ ತಾಯ್ನಾಡಿಗೆ ಕರೆತರಲು ಸರ್ಕಾರವು ಪ್ರಯತ್ನಿಸುತ್ತಿದ್ದಾಗ, ಕೆಲವು ನಾಯಕರು ಅದನ್ನು ರಾಜಕೀಯಯಕ್ಕೆ ಬಳಸಿಕೊಳ್ಳಲು ಯತ್ನಿಸಿದರು. ಸರಿಯಾದ ಮತ್ತು ನಿಖರವಾದ ಮಾಹಿತಿ ಇಲ್ಲದೆ ಮಾತನಾಡಿದರು ಎಂದು ಮೋದಿ ಹೇಳಿದ್ದಾಗಿ ಜೋಶಿ ತಿಳಿಸಿದರು.

ಆಡಳಿತ ವಿರೋಧಿ ಅಲೆಯನ್ನು ಆಡಳಿತ ಪರ ಅಲೆಯನ್ನಾಗಿ ಪರಿವರ್ತಿಸುವ ಹೊಸ ಶೈಲಿಯ ರಾಜಕಾರಣವನ್ನು ಬಿಜೆಪಿ ಆರಂಭಿಸಿದೆ ಎಂದು ನಡ್ಡಾ ಹೇಳಿದ್ದಾರೆ ಎಂದು ಜೋಶಿ ಮಾಹಿತಿ ಅವರು ನೀಡಿದರು.

ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರನ್ನು ಬಿಜೆಪಿ ಸಂಸದೀಯ ಮಂಡಳಿ ಸಭೆಯಲ್ಲಿ ಮಂಗಳವಾರ ಸನ್ಮಾನಿಸಲಾಯಿತು ಪಿಟಿಐ ಚಿತ್ರ

'ದಿ ಕಾಶ್ಮೀರ್ ಫೈಲ್ಸ್' ಚಿತ್ರಕ್ಕೆ ಪ್ರಧಾನಿ ನರೇಂದ್ರ ಮೋದಿ ಮೆಚ್ಚುಗೆ

1990ರ ದಶಕದಲ್ಲಿ ಕಾಶ್ಮೀರ ಕಣಿವೆಯಿಂದ ಕಾಶ್ಮೀರ ಪಂಡಿತರ ವಲಸೆಯ ಬಗ್ಗೆ ನಿರ್ಮಿಸಲಾದ 'ದಿ ಕಾಶ್ಮೀರಿ ಫೈಲ್ಸ್' ಸಿನಿಮಾವನ್ನು ಪ್ರಧಾನಿ ನರೇಂದ್ರ ಮೋದಿ ಹೊಗಳಿದ್ದಾರೆ. 'ಸತ್ಯವನ್ನು ಸರಿಯಾದ ರೀತಿಯಲ್ಲಿ ಸಿನಿಮಾವು ಹೇಳಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಚರಿತ್ರೆಯನ್ನು ಕಾಲ ಕಾಲಕ್ಕೆ ಸರಿಯಾದ ರೀತಿಯಲ್ಲಿ ಕಟ್ಟಿಕೊಡಬೇಕು ಎಂದಿದ್ದಾರೆ.

'ದಿ ಕಾಶ್ಮೀರಿ ಫೈಲ್ಸ್ ಸಿನಿಮಾದ ಬಗೆಗಿನ ಚರ್ಚೆಯನ್ನು ನೀವು ಕೇಳಿಯೇ ಇರುತ್ತೀರಿ. ಅಭಿವ್ಯಕ್ತಿ ಸ್ವಾತಂತ್ರ್ಯದ ಧ್ವಜ ಹಿಡಿದು ಸಾಗುತ್ತಿದ್ದ ಇಡೀ ಗುಂಪು ಕಳೆದ ಕೆಲವು ದಿನಗಳಲ್ಲಿ ಆಘಾತಗೊಂಡಿದೆ. ಸತ್ಯ ಮತ್ತು ವಾಸ್ತವದ ಆಧಾರದಲ್ಲಿ ಸಿನಿಮಾವನ್ನು ವಿಶ್ಲೇಷಿಸುವ ಬದಲು ಸಿನಿಮಾದ ಹೆಸರು ಕೆಡಿಸಲು ಯತ್ನಿಸುತ್ತಿದ್ದಾರೆ' ಎಂದು ಮೋದಿ ಹೇಳಿದ್ದಾರೆ.

ಸಿನಿಮಾಕ್ಕೆ ಸಂಬಂಧಿಸಿ ರಾಜಕೀಯ ಕೆಸರೆರಚಾಟ ಆರಂಭವಾಗಿದೆ. ಕಾಂಗ್ರೆಸ್ ಮತ್ತು ಇತರ ಕೆಲವು ಪಕ್ಷಗಳು ಈ ಸಿನಿಮಾವನ್ನು ವಿರೋಧಿಸಿವೆ. ಬಿಜೆಪಿ ಸರ್ಕಾರ ಇರುವ ಹಲವು ರಾಜ್ಯಗಳಲ್ಲಿ ಸಿನಿಮಾಕ್ಕೆ ತೆರಿಗೆ ವಿನಾಯಿತಿ ಪ್ರಕಟಿಸಲಾಗಿದೆ. ಆ ಸಾಲಿಗೆ ಉತ್ತರ ಪ್ರದೇಶವೂ ಮಂಗಳವಾರ ಸೇರ್ಪಡೆಯಾಗಿದೆ.

ಸಂಸತ್‌ನಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿಕೆ

ಕ್ಷಿಪಣಿಗಳ ನಿರ್ವಹಣೆ: 'ಎಸ್‌ಒಪಿ' ಮರುಪರಿಶೀಲನೆಗೆ ಆದೇಶ

ಪ್ರಜಾವಾಣಿ ವಾರ್ತೆ

ರಾಜನಾಥ್ ಸಿಂಗ್

ನವದೆಹಲಿ: ಕ್ಷಿಪಣಿಗಳು ಸೇರಿದಂತೆ ಶಸ್ತ್ರಾಸ್ತ್ರಗಳ ಕಾರ್ಯಾಚರಣೆ ಹಾಗೂ ನಿರ್ವಹಣೆಗೆ ಸಂಬಂಧಿಸಿದ ಪ್ರಮಾಣಿತ ಕಾರ್ಯಾಚರಣಾ ವಿಧಾನಗಳ (ಎಸ್ಒಪಿ) ಮರುಪರಿಶೀಲನೆಗೆ ಕೇಂದ್ರ ಸರ್ಕಾರ ಆದೇಶಿಸಿದೆ.

ಸಂಸತ್‌ನ ಉಭಯ ಸದನಗಳಿಗೆ ಮಂಗಳವಾರ ಈ ವಿಷಯ ತಿಳಿಸಿದ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು, 'ನಮ್ಮ ಶಸ್ತ್ರಾಸ್ತ್ರಗಳ ಸುರಕ್ಷತೆ ಹಾಗೂ ಭದ್ರತೆಗೆ ಗರಿಷ್ಠ ಆದ್ಯತೆ ನೀಡಲಾಗುತ್ತದೆ. ಈ ವಿಷಯದಲ್ಲಿ ಯಾವುದೇ ಲೋಪ ಕಂಡುಬಂದರೂ, ಕೂಡಲೇ ನಿವಾರಿಸಲಾಗುತ್ತದೆ' ಎಂದರು.

ಕ್ಷಿಪಣಿ ವ್ಯವಸ್ಥೆಗಳ ಕುರಿತ ಪಾಕಿಸ್ತಾನದ ಆರೋಪಗಳನ್ನು ತಳ್ಳಿ ಹಾಕಿದ ರಾಜನಾಥಸಿಂಗ್, 'ದೇಶದ ಕ್ಷಿಪಣಿ ವ್ಯವಸ್ಥೆ ಅತ್ಯಂತ ಸುರಕ್ಷಿತ ಹಾಗೂ ನಂಬಿಕೆ ಅರ್ಹವಾಗಿದೆ' ಎಂದು ಉಭಯ ಸದನಗಳಿಗೆ ತಿಳಿಸಿದರು.

'ಇಂಥ ಕ್ಷಿಪಣಿ ವ್ಯವಸ್ಥೆಯ ನಿರ್ವಹಣೆಯಲ್ಲಿ ನಮ್ಮ ಪಡೆಗಳು ಉತ್ತಮ ತರಬೇತಿ ಜೊತೆ ಸಾಕಷ್ಟು ಅನುಭವ ಹೊಂದಿವೆ. ಈ ಬಗ್ಗೆ ಕಾಲಕಾಲಕ್ಕೆ ಪರಿಶೀಲನೆಯನ್ನೂ ನಡೆಸಲಾಗುತ್ತಿದೆ' ಎಂದರು.

'ಈ ಘಟನೆ ಬಗ್ಗೆ ವಿಷಾದ ವ್ಯಕ್ತಪಡಿಸಿದ್ದೇವೆ. ಅಲ್ಲದೇ, ಅಂದಿನ ಘಟನೆಯಲ್ಲಿ ಯಾರಿಗೂ ಹಾನಿಯಾಗಿಲ್ಲ ಎಂಬುದೂ ಸಮಾಧಾನ ತಂದಿದೆ. ಕ್ಷಿಪಣಿಯು ಆಕಸ್ಮಿಕವಾಗಿ ಹಾರಲು ನಿಖರ ಕಾರಣಗಳನ್ನು ಪತ್ತೆ ಮಾಡುವ ಸಲುವಾಗಿ ಉನ್ನತ ಮಟ್ಟದ ತನಿಖೆಗೆ ಆದೇಶಿಸಲಾಗಿದೆ' ಎಂದೂ ಅವರು ತಿಳಿಸಿದರು.

ಮಾರ್ಚ್ 9ರಂದು ನಿರ್ವಹಣೆ ಸಂದರ್ಭದಲ್ಲಿ ಕ್ಷಿಪಣಿಯೊಂದು ಆಕಸ್ಮಿಕವಾಗಿ ಹಾರಿ ಪಾಕಿಸ್ತಾನದ ನೆಲಕ್ಕೆ ಅಪ್ಪಳಿಸಿದ ಘಟನೆ ಹಿನ್ನೆಲೆಯಲ್ಲಿ ರಕ್ಷಣಾ ಸಚಿವಾಲಯದಿಂದ ಈ ಆದೇಶ ಹೊರಬಿದ್ದಿದೆ.

ಅಲ್ಲದೇ, ಮಾರ್ಚ್ 11ರಂದು ಈ ಕುರಿತು ಪ್ರತಿಕ್ರಿಯಿಸಿದ್ದ ಭಾರತ, ಘಟನೆ ಬಗ್ಗೆ ತನಿಖೆಗೆ ಆದೇಶಿಸಲಾಗಿದೆ ಎಂದು ಹೇಳಿತ್ತು.

ಕ್ಷಿಪಣಿ ಬಗ್ಗೆ ಹೆಚ್ಚಿನ ವಿವರಗಳನ್ನು ಸಚಿವಾಲಯ ಬಹಿರಂಗಪಡಿಸಿಲ್ಲ. ಆದರೆ, ಬ್ರಹ್ಮೋಸ್ ಸೂಪರ್ ಸಾನಿಕ್ ಕ್ರೂಸ್ ಕ್ಷಿಪಣಿಯೇ ಆಕಸ್ಮಿಕವಾಗಿ ಹಾರಿತ್ತು ಎಂದು ಮೂಲಗಳು ಹೇಳಿವೆ.

ವಿಧಾನಸಭಾ ಚುನಾವಣೆ: ಹೀನಾಯ ಸೋಲಿಗೆ ತಲೆದಂಡ

ಐದು ರಾಜ್ಯ ಘಟಕಗಳ ಅಧ್ಯಕ್ಷರ ರಾಜೀನಾಮೆ ಕೇಳಿದ ಸೋನಿಯಾ

ನವದೆಹಲಿ (ಪಿಟಿಐ): ವಿಧಾನಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಹೀನಾಯ ಪ್ರದರ್ಶನ ನೀಡಿದ್ದು, ರಾಜೀನಾಮೆ ನೀಡುವಂತೆ ಐದು ರಾಜ್ಯ ಘಟಕಗಳ ಅಧ್ಯಕ್ಷರಿಗೆ ಅಧ್ಯಕ್ಷೆ ಸೋನಿಯಾ ಗಾಂಧಿ ಮಂಗಳವಾರ ಸೂಚಿಸಿದ್ದಾರೆ.

ಪ್ರದೇಶ ಕಾಂಗ್ರೆಸ್ ಸಮಿತಿಗಳ ಮರು ಸಂಘಟನೆಗೆ ಅನುಕೂಲವಾಗುವ ಉದ್ದೇಶದಿಂದ ಉತ್ತರ ಪ್ರದೇಶ, ಗೋವಾ, ಉತ್ತರಾಖಂಡ, ಮಣಿಪುರ ಹಾಗೂ ಪಂಜಾಬ್‌ನ ರಾಜ್ಯ ಕಾಂಗ್ರೆಸ್ ಘಟಕಗಳ ಅಧ್ಯಕ್ಷರು ರಾಜೀನಾಮೆ ನೀಡಬೇಕು ಎಂದು ಸೋನಿಯಾ ಸೂಚಿಸಿದ್ದಾರೆ ಎಂದು ಕಾಂಗ್ರೆಸ್ ಮುಖ್ಯ ವಕ್ತಾರ ರಣದೀಪ್ ಸುರ್ಜೇವಾಲಾ ಅವರು ಟ್ವೀಟ್ ಮಾಡಿದ್ದಾರೆ.

> **ಪಕ್ಷದ ಸೂಚನೆ ಮೇರೆಗೆ ರಾಜೀನಾಮೆ ನೀಡಿದ್ದೇನೆ. ಕಾರ್ಯಕರ್ತನಾಗಿ ಪಕ್ಷದ ಕೆಲಸ ಮುಂದುವರಿಸುತ್ತೇನೆ**
> **ಗಣೇಶ್ ಗೋಡಿಯಾಲ್,** ಉತ್ತರಾಖಂಡ ಕಾಂಗ್ರೆಸ್ ಘಟಕದ ಅಧ್ಯಕ್ಷ

ಚುನಾವಣೆಯಲ್ಲಿ ಪಕ್ಷದ ಸೋಲಿನ ಕಾರಣಗಳ ಬಗ್ಗೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿ (ಸಿಡಬ್ಲ್ಯುಸಿ) ಸಭೆಯಲ್ಲಿ ಚರ್ಚೆ ನಡೆಸಿದ ಎರಡು ದಿನಗಳ ಬಳಿಕ ಸೋನಿಯಾ ಈ ನಿರ್ಧಾರ ತೆಗೆದುಕೊಂಡಿದ್ದಾರೆ. ಕಾಂಗ್ರೆಸ್‌ಗೆ ಯಾವ ರಾಜ್ಯದಲ್ಲೂ ಗೆಲುವು ಸಾಧಿಸಲು ಸಾಧ್ಯವಾಗಲಿಲ್ಲ. ಪಕ್ಷ ಅಧಿಕಾರದಲ್ಲಿದ್ದ ಪಂಜಾಬ್ ಅನ್ನು ಎಎಪಿ ಗೆದ್ದುಕೊಂಡಿದೆ. ಮೂಲಗಳ ಪ್ರಕಾರ, ಈ ರಾಜ್ಯಗಳಲ್ಲಿ ಪಕ್ಷವನ್ನು ಪುನರ್‌ರಚಿಸಲು ಸೋನಿಯಾ ಗಾಂಧಿ ನಿರ್ಧರಿಸಿದ್ದಾರೆ ಎನ್ನಲಾಗಿದೆ.

ನವಜೋತ್ ಸಿಂಗ್ ಸಿಧು ಅವರು ಪಂಜಾಬ್ ರಾಜ್ಯ ಘಟಕದ ಅಧ್ಯಕ್ಷರಾಗಿ ಕೆಲವೇ ತಿಂಗಳ ಹಿಂದೆ ನೇಮಕವಾಗಿದ್ದರು. ಉತ್ತರಾಖಂಡದಲ್ಲಿ ಪಕ್ಷದ ಅಧ್ಯಕ್ಷ ಗಣೇಶ್ ಗೋಡಿಯಾಲ್ ಹಾಗೂ ಮಣಿಪುರದಲ್ಲಿ ಪಕ್ಷದ ಅಧ್ಯಕ್ಷ ಲೋಕೆನ್ ಸಿಂಗ್ ಅವರು ವಿಧಾನಸಭಾ ಚುನಾವಣೆ ಘೋಷಣೆಯಾಗುವ ಮುನ್ನ ನೇಮಕಗೊಂಡಿದ್ದರು. ಗೋವಾ ಘಟಕದ ಅಧ್ಯಕ್ಷ ಗಿರೀಶ್ ಚೋಡಣ್‌ಕರ್ ಹಾಗೂ ಉತ್ತರ ಪ್ರದೇಶದ ಅಜಯ್ ಕುಮಾರ್ ಲಲ್ಲು ಅವರಿಗೂ ರಾಜೀನಾಮೆಗೆ ಸೂಚಿಸಲಾಗಿದೆ.

ಪಕ್ಷದ ಸೋಲಿನ ಹೊಣೆ ಹೊತ್ತು ಗಿರೀಶ್ ಚೋಡಣ್‌ಕರ್ ಹಾಗೂ ಗಣೇಶ್ ಗೋಡಿಯಾಲ್ ಅವರು ಮಂಗಳವಾರ ರಾಜೀನಾಮೆ ಸಲ್ಲಿಸಿದರು.

ಪ್ರಿಯಾಂಕಾ ಸಭೆ: ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಹಾಗೂ ಉತ್ತರ ಪ್ರದೇಶ ಉಸ್ತುವಾರಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ರಾಜ್ಯದಲ್ಲಿ ಪಕ್ಷದ ಸೋಲಿನ ಕುರಿತು ಮಂಗಳವಾರ ಪರಾಮರ್ಶೆ ನಡೆಸಿದರು. ಸಭೆಯಲ್ಲಿ ರಾಜ್ಯದ ಮುಖಂಡರು ಭಾಗಿಯಾಗಿದ್ದರು.

ಸಿಬಲ್ ಮೇಲೆ ಮುಗಿಬಿದ್ದ ಕಾಂಗ್ರೆಸ್ ಮುಖಂಡರು

ನವದೆಹಲಿ (ಪಿಟಿಐ): ಪಕ್ಷದ ನಾಯಕತ್ವವನ್ನು ಟೀಕಿಸಿ ಹೇಳಿಕೆ ನೀಡಿರುವ ಕಪಿಲ್ ಸಿಬಲ್ ವಿರುದ್ಧ ಕಾಂಗ್ರೆಸ್‌ನ ಮುಖಂಡರು ಹರಿಹಾಯ್ದಿದ್ದಾರೆ. ಸಿಬಲ್ ಅವರು ಬಿಜೆಪಿ ಮತ್ತು ಆರ್‌ಎಸ್‌ಎಸ್‌ನವರ ರೀತಿಯಲ್ಲಿ ಮಾತನಾಡುತ್ತಿದ್ದಾರೆ ಎಂದು ಲೋಕಸಭೆಯಲ್ಲಿ ಕಾಂಗ್ರೆಸ್ ಮುಖ್ಯ ಸಚೇತಕ ಮಣಿಕಮ್ ಟ್ಯಾಗೋರ್ ಆರೋಪಿಸಿದ್ದಾರೆ.

ಕಾಂಗ್ರೆಸ್‌ನ ನಾಯಕತ್ವದ ಸ್ಥಾನದಲ್ಲಿ ಗಾಂಧಿ ಕುಟುಂಬದವರು ಇರಬಾರದು ಎಂಬುದು ಆರ್‌ಎಸ್‌ಎಸ್ ಮತ್ತು ಬಿಜೆಪಿಯ ಬಯಕೆಯಾಗಿದೆ. ಕಾಂಗ್ರೆಸ್ ಪಕ್ಷ ಮತ್ತು ಭಾರತ ಎಂಬ ಪರಿಕಲ್ಪನೆಯನ್ನು ನಾಶ ಮಾಡಲು ಅದು ಅಗತ್ಯವಾಗಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ನಿಷ್ಠರಾಗಿರುವ ಟ್ಯಾಗೋರ್ ಹೇಳಿದ್ದಾರೆ.

'ನೆಹರೂ–ಗಾಂಧಿ ಕುಟುಂಬದವರು ನಾಯಕತ್ವದಲ್ಲಿ ಇರಬಾರದು ಎಂದು ಆರ್‌ಎಸ್‌ಎಸ್ ಮತ್ತು ಬಿಜೆಪಿ ಬಯಸಲು ಕಾರಣವೇನು? ಗಾಂಧಿ ಕುಟುಂಬದ ನಾಯಕತ್ವ ಇಲ್ಲದೇ ಇದ್ದರೆ ಕಾಂಗ್ರೆಸ್ ಪಕ್ಷವು ಜನತಾ ಪಕ್ಷದಂತಾಗುತ್ತದೆ. ಆಗ ಕಾಂಗ್ರೆಸ್ ಪಕ್ಷವನ್ನು ಮತ್ತು ಭಾರತದ ಪರಿಕಲ್ಪನೆಯನ್ನು ನಾಶ ಮಾಡುವುದು ಸುಲಭ' ಎಂದು ಟ್ಯಾಗೋರ್ ಟ್ವೀಟ್ ಮಾಡಿದ್ದಾರೆ.

ಪಾಕ್ ನೆಲಕ್ಕೆ 'ಆಕಸ್ಮಿಕವಾಗಿ' ಕ್ಷಿಪಣಿ ಅಪ್ಪಳಿಸಿದ ಘಟನೆ

ಭಾರತದ ಪ್ರತಿಕ್ರಿಯೆ ತಿರಸ್ಕರಿಸಿದ ಪಾಕ್: ಜಂಟಿ ತನಿಖೆಗೆ ಒತ್ತಾಯ

ಇಸ್ಲಾಮಾಬಾದ್: 'ನಿರ್ವಹಣೆಯ ಸಂದರ್ಭದಲ್ಲಿ ತಾಂತ್ರಿಕ ದೋಷದಿಂದ ಆಕಸ್ಮಿಕವಾಗಿ ಹಾರಿದ ಕ್ಷಿಪಣಿ ಪಾಕಿಸ್ತಾನದ ನೆಲಕ್ಕೆ ಅಪ್ಪಳಿಸಿದೆ ಎಂಬ ಭಾರತದ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ಹೇಳಿಕೆಯನ್ನು ಒಪ್ಪಲಾಗದು. ಈ ವಿಷಯ ಕುರಿತು ಜಂಟಿ ತನಿಖೆ ನಡೆಸಬೇಕು' ಎಂದು ಪಾಕಿಸ್ತಾನ ವಿದೇಶಾಂಗ ಸಚಿವ ಶಾ ಮಹಮೂದ್ ಖುರೇಷಿ ಮಂಗಳವಾರ ಹೇಳಿದ್ದಾರೆ.

'ಈ ಘಟನೆ ಕುರಿತು ರಾಜನಾಥ್ ಸಿಂಗ್ ಅವರು ಸಂಸತ್‌ನಲ್ಲಿ ನೀಡಿರುವ ಪ್ರತಿಕ್ರಿಯೆ ಅಸಮರ್ಪಕ. ಘಟನೆ ಕುರಿತು ಜಂಟಿ ತನಿಖೆಯೇ ಆಗಬೇಕು ಎಂಬುದು ನಮ್ಮ ಬೇಡಿಕೆ' ಎಂದು ಅವರು ಸುದ್ದಿಗೋಷ್ಠಿಯಲ್ಲಿ ಪುನರುಚ್ಚರಿಸಿದರು.

'ರಾಜನಾಥ್ ಸಿಂಗ್ ಅವರ ಪ್ರತಿಕ್ರಿಯೆ ತೃಪ್ತಿಕರವಾಗಿಲ್ಲ. ಕ್ಷಿಪಣಿ ಹಾರಿ ನಮ್ಮ ನೆಲದ ಮೇಲೆ ಬಿದ್ದಿರುವುದು ಬೇಜವಾಬ್ದಾರಿಯನ್ನು ತೋರಿಸುತ್ತದೆ. ಈ ಘಟನೆ ಕುರಿತು ಭಾರತ ನೀಡಿರುವ ಉತ್ತರ ಸಹ ಬೇಜವಾಬ್ದಾರಿಯಿಂದ ಕೂಡಿದೆ' ಎಂದರು.

'ಪಾಕಿಸ್ತಾನದ ನೆಲದ ಮೇಲೆ ಬಿದ್ದಿರುವ ಭಾರತದ ಕ್ಷಿಪಣಿ ಅಣ್ವಸ್ತ್ರ ಸಿಡಿತಲೆಗಳನ್ನು ಹೊತ್ತೊಯ್ಯಬಲ್ಲ ಸಾಮರ್ಥ್ಯ ಹೊಂದಿದ್ದು, ಭಾರಿ ಅನಾಹುತಕ್ಕೂ ಕಾರಣವಾಗಬಹುದಿತ್ತು. ಅಲ್ಲದೇ, ಘಟನೆಯ ಗಂಭೀರತೆಯನ್ನು ಗ್ರಹಿಸುವಲ್ಲಿ ಜಾಗತಿಕ ಸಮುದಾಯ ಕೂಡ ವಿಫಲವಾಗಿದೆ' ಎಂದು ಖುರೇಷಿ ವಿಷಾದಿಸಿದರು.

ಭಾರತದ ಕ್ಷಿಪಣಿ ದಾಳಿ ಆಕಸ್ಮಿಕ ಅಮೆರಿಕ ಸಮರ್ಥನೆ

ವಾಷಿಂಗ್ಟನ್ (ಪಿಟಿಐ): 'ಭಾರತದ ಕ್ಷಿಪಣಿಯು ಇತ್ತೀಚೆಗೆ ಪಾಕಿಸ್ತಾನದ ನೆಲವನ್ನು ಅಪ್ಪಳಿಸಿದ್ದು ಆಕಸ್ಮಿಕ ಘಟನೆಯಲ್ಲದೇ ಮತ್ತೇನೂ ಅಲ್ಲ' ಎಂದು ಅಮೆರಿಕ ಹೇಳಿದೆ. ಮಾರ್ಚ್ 9ರಂದು ನಡೆದಿದ್ದ ಈ ಘಟನೆ ಆಕಸ್ಮಿಕವಾದುದು ಎಂದು ಭಾರತವೂ ಈಚೆಗೆ ಸ್ಪಷ್ಟಪಡಿಸಿತ್ತು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಅಮೆರಿಕ ವಿದೇಶಾಂಗ ಇಲಾಖೆಯ ವಕ್ತಾರರು ಈ ವಿಷಯ ತಿಳಿಸಿದ್ದು, ಭಾರತ ಈಗಾಗಲೇ ಸ್ಪಷ್ಟನೆ ನೀಡಿದೆ. ಅದರ ಹೊರತಾಗಿ ಚರ್ಚಿಸಲು ನಾವು ಬಯಸುವುದಿಲ್ಲ ಎಂದು ತಿಳಿಸಿದ್ದಾರೆ.

ಸರ್ಕಾರ ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸಿದೆ. ತನಿಖೆಗೂ ಆದೇಶಿಸಿದೆ ಎಂದು ಭಾರತ ಸರ್ಕಾರ ತಿಳಿಸಿತ್ತು.

ಪಾಕಿಸ್ತಾನ ಸರ್ಕಾರ ಇಸ್ಲಾಮಾಬಾದ್‌ನಲ್ಲಿ ಭಾರತದ ಅಧಿಕಾರಿಗಳನ್ನು ಕರೆಸಿ, ಒಟ್ಟು ಬೆಳವಣಿಗೆ ಕುರಿತು ಪ್ರತಿರೋಧ ದಾಖಲಿಸಿತ್ತು.

ಈ ಅಪ್ರಚೋದಿತ ದಾಳಿಯು, ವಾಯುಗಡಿಯ ಉಲ್ಲಂಘನೆಯಾಗಿದೆ ಎಂದು ತಿಳಿಸಿತ್ತು.

ಭಗತ್ ಸಿಂಗ್ ಪೂರ್ವಜರ ಊರಲ್ಲಿ ಸಮಾರಂಭ

ಪಂಜಾಬ್: ಮಾನ್ ಇಂದು ಪ್ರಮಾಣ

ಎಸ್‌ಬಿಎಸ್ ನಗರ (ಪಂಜಾಬ್) (ಪಿಟಿಐ): ಪಂಜಾಬ್‌ನ ನೂತನ ಮುಖ್ಯಮಂತ್ರಿಯಾಗಿ ಭಗವಂತ ಮಾನ್ ಅವರು ಬುಧವಾರ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಸ್ವಾತಂತ್ರ್ಯ ಹೋರಾಟಗಾರ ಭಗತ್ ಸಿಂಗ್ ಅವರ ಪೂರ್ವಜರ ಊರಾದ ಶಹೀದ್ ಭಗತ್‌ಸಿಂಗ್ ನಗರ ಜಿಲ್ಲೆಯ (ಎಸ್‌ಬಿಎಸ್) ಖಟಕಡ್ ಕಲಂನಲ್ಲಿ ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ಸಿದ್ಧತೆಗಳು ಪೂರ್ಣಗೊಂಡಿವೆ.

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಅನಿರುದ್ಧ್ ತಿವಾರಿ, ಡಿಜಿಪಿ ವಿ.ಕೆ. ಭವರಾ, ಮುಖ್ಯಮಂತ್ರಿಯವರ ಹೆಚ್ಚುವರಿ ಕಾರ್ಯದರ್ಶಿ ಎ. ವೇಣು ಪ್ರಸಾದ್ ಅವರು ಸಿದ್ಧತೆಯ ಪರಿಶೀಲನೆ ನಡೆಸಿದರು.

ಸಮಾರಂಭದಲ್ಲಿ ಭಾಗಿಯಾಗುವಂತೆ ರಾಜ್ಯದ ಜನರನ್ನು ಮಾನ್ ಆಹ್ವಾನಿಸಿದ್ದಾರೆ. 'ನಾನೊಬ್ಬನೇ ಅಲ್ಲ, ರಾಜ್ಯದ ಮೂರು ಕೋಟಿ ಜನರು ನನ್ನೊಂದಿಗೆ ಪ್ರಮಾಣವಚನ ಸ್ವೀಕರಿಸಲಿದ್ದಾರೆ' ಎಂದು ಮಾನ್ ಹೇಳಿದ್ದಾರೆ. ಪುರುಷರು ಹಳದಿ (ಬಸಂತಿ) ಟರ್ಬನ್ ಹಾಗೂ ಮಹಿಳೆಯರು ಹಳದಿ ದುಪಟ್ಟಾ ಧರಿಸುವಂತೆ ಅವರು ಮನವಿ ಮಾಡಿದ್ದಾರೆ.

ಐಜಿ ಶ್ರೇಣಿಯ ಅಧಿಕಾರಿಗಳನ್ನು ಒಳಗೊಂಡಂತೆ ಹಿರಿಯ ಪೊಲೀಸ್ ಅಧಿಕಾರಿಗಳನ್ನು ಭದ್ರತೆಗೆ ನಿಯೋಜಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಕಾರ್ಯಕ್ರಮದ ಭದ್ರತೆಗೆ 10 ಸಾವಿರ ಪೊಲೀಸರನ್ನು ನಿಯೋಜಿಸಲಾಗಿದೆ. ಸ್ಥಳದಲ್ಲಿ ಆರೋಗ್ಯ ಸಿಬ್ಬಂದಿ ಹಾಗೂ ಆಂಬುಲೆನ್ಸ್‌ಗಳನ್ನು ನಿಯೋಜಿಸಲಾಗಿದೆ.

50 ಎಕರೆ ಜಾಗದಲ್ಲಿ ಪ್ರಮಾಣವಚನ ಸಮಾರಂಭ ನಡೆಯಲಿದ್ದು, ವಾಹನಗಳ ನಿಲುಗಡೆಗೆಂದೇ 50 ಎಕರೆ ಜಾಗ ಗೊತ್ತುಪಡಿಸಲಾಗಿದೆ. ಕಾರ್ಯಕ್ರಮಕ್ಕೆ ಭಾರಿ ಸಂಖ್ಯೆಯಲ್ಲಿ ಜನರು ಸೇರುವ ನಿರೀಕ್ಷೆಯಿದ್ದು, ಮುನ್ನೆಚ್ಚರಿಕೆ ಕ್ರಮವಾಗಿ ಜಿಲ್ಲೆಯ ಶಾಲೆಗಳಿಗೆ ಬುಧವಾರ ರಜೆ ನೀಡಲಾಗಿದೆ.

ರಾಜೀನಾಮೆ ಅಂಗೀಕಾರ: ಭಗವಂತ ಮಾನ್ ಅವರು ಲೋಕಸಭೆ ಸದಸ್ಯ ಸ್ಥಾನಕ್ಕೆ ನೀಡಿದ್ದ ರಾಜೀನಾಮೆಯನ್ನು ಸ್ಪೀಕರ್ ಓಂ ಬಿರ್ಲಾ ಅಂಗೀಕರಿಸಿದ್ದಾರೆ. ಮಾನ್ ಅವರು ಸಂಗ್ರೂರ್ ಲೋಕಸಭಾ ಕ್ಷೇತ್ರದ ಸಂಸದರಾಗಿದ್ದರು.

टीआईएफआर–अनुप्रयुक्त गणित केन्द्र, बैंगलुरु–560065, भारत
TIFR-CENTRE FOR APPLICABLE MATHEMATICS, Bengaluru-560065, India
टाटा मूलभूत अनुसंधान संस्थान
TATA INSTITUTE OF FUNDAMENTAL RESEARCH
(भारत सरकार के परमाणु ऊर्जा विभाग की स्वायत्त संस्थान एवं समविश्वविद्यालय
(An Autonomous Institution under the Department of Atomic Energy, Government of India and Deemed-to-be-University)

Advt. No. 1/2022

TIFR Center for Applicable Mathematics, Bangalore, one of the units of Tata Institute of Fundamental Research, an autonomous organization under the Department of Atomic Energy, Govt. Of India and a Deemed to be University, invites **online applications** from Indian Nationals for the following positions on regular basis.

Third Attempt

Sl. No	Name of Post and Post Code	Number of posts	Reservation	Pay Level and Minimum Pay	Age below*
1	Administrative Assistant B (AAB)	1 (One)	Reserved for PWD	Pay Level 6 of Pay Matrix ₹35400	33 Years

Temporary Position for a period of one year

Sl. No	Name of Post and Post Code	Number of posts	Consolidated Stipend per month	Age below*
1	Engineer Trainee	1(one)	₹25000	28 Years

* Relaxation in upper age limit will be as per rules. For further details with regard to educational qualification, experience, relaxation of age, general information etc., please visit **https://math.tifrbng.res.in.** Last date for submission of application on line is **18th April 2022**.

12 ರಿಂದ 14 ವರ್ಷದ ಮಕ್ಕಳಿಗೆ ಇಂದಿನಿಂದ ಲಸಿಕೆ

ಲಸಿಕೆ: ಮಾರ್ಗಸೂಚಿ ಬಿಡುಗಡೆ

ನವದೆಹಲಿ (ಪಿಟಿಐ): 12-14 ವರ್ಷ ವಯೋಮಾನದ ಮಕ್ಕಳಿಗೆ ಲಸಿಕೆ ನೀಡುವ ಕುರಿತಂತೆ ಕೇಂದ್ರ ಸರ್ಕಾರ ಮಾರ್ಗಸೂಚಿ ಬಿಡುಗಡೆ ಮಾಡಿದ್ದು, ಎಲ್ಲ ರಾಜ್ಯಗಳಿಗೆ ಕಳುಹಿಸಿಕೊಟ್ಟಿದೆ.

12ರಿಂದ 13 ವರ್ಷ ಹಾಗೂ 13ರಿಂದ 14 ವರ್ಷ ವಯೋಮಾನದ ಮಕ್ಕಳಿಗೆ ಕೊರ್ಬೆವ್ಯಾಕ್ಸ್ ಲಸಿಕೆಯನ್ನು ಮಾತ್ರ ನೀಡಲಾಗುತ್ತದೆ. ಈ ಲಸಿಕೆಯನ್ನು ಎರಡು ಡೋಸ್‌ಗಳನ್ನು ನೀಡಲು ಉದ್ದೇಶಿಸಿದ್ದು, ಇವುಗಳ ನಡುವೆ 28 ದಿನಗಳ ಅಂತರವಿರಬೇಕು ಎಂದು ಮಾರ್ಗಸೂಚಿ ತಿಳಿಸಿದೆ.

2010ಹಾಗೂಅದಕ್ಕೂಮುನ್ನಜನಿಸಿರುವವರು ಅಂದರೆ, 12 ವರ್ಷ ಪೂರ್ಣಗೊಂಡ ಮಕ್ಕಳು 'ಕೋವಿನ್'ನಲ್ಲಿ ನೋಂದಣಿ ಮಾಡಿಕೊಳ್ಳಲು ಅರ್ಹರಾಗಿದ್ದಾರೆ. ನೋಂದಣಿ ಆಧಾರದಲ್ಲಿ ಲಸಿಕೆ ನೀಡುವ ದಿನಾಂಕ ಹಾಗೂ ಸಮಯ ನಿಗದಿಯಾಗುತ್ತದೆ. ಲಸಿಕೆ ಪಡೆಯುವ ದಿನಾಂಕಕ್ಕೆ ಸರಿಯಾಗಿ 12 ವರ್ಷ ತುಂಬಿರುವುದು ಕಡ್ಡಾಯ. ಒಂದು ವೇಳೆ ಕೋವಿನ್‌ನಲ್ಲಿ ನೋಂದಣಿ ಮಾಡಿಕೊಂಡಿದ್ದರೂ, ಮಗುವಿಗೆ 12 ವರ್ಷ ತುಂಬದಿದ್ದ ಪಕ್ಷದಲ್ಲಿ, ಲಸಿಕೆ ನೀಡುವುದಿಲ್ಲ ಎಂದು ಸರ್ಕಾರ ತಿಳಿಸಿದೆ.

ನೋಂದಣಿಗೆ ಹಲವು ವಿಧಾನಗಳನ್ನು ಸೂಚಿಸಲಾಗಿದೆ. ಕೋವಿನ್‌ನಲ್ಲಿ ಹೊಸ ಖಾತೆ ತೆರೆದು ನೋಂದಣಿ ಮಾಡಿಕೊಳ್ಳಬಹುದು. ಕುಟುಂಬ ಸದಸ್ಯರು ಈಗಾಗಲೇ ಕೋವಿನ್ ಖಾತೆ ಹೊಂದಿದ್ದರೆ, ಅದರ ಮೂಲಕವೂ ನೋಂದಣಿ ಮಾಡಿಕೊಳ್ಳಬದು. ಅಥವಾ ಲಸಿಕಾ ಕೇಂದ್ರದಲ್ಲೇ ನೋಂದಣಿ ಮಾಡಿಕೊಳ್ಳಬಹುದು.

ಬೇರೆ ವಯೋಮಾನದ ಗುಂಪಿನ ಮಕ್ಕಳಿಗೂ ಲಸಿಕಾ ಕಾರ್ಯಕ್ರಮ ನಡೆಯುತ್ತಿದ್ದು, ಗೊಂದಲ ತಡೆಯಲು, 12-14 ವರ್ಷ ವಯೋಮಾನದ ಮಕ್ಕಳಿಗೆ ಪ್ರತ್ಯೇಕ ಲಸಿಕಾ ಕೇಂದ್ರಗಳನ್ನು ತೆರೆಯಲಾಗಿದೆ. ಈ ಲಸಿಕೆಗಳು ಉಚಿತವಾಗಿವೆ.

9 ತಿಂಗಳ ಅಂತರ

60 ವರ್ಷ ವಯಸ್ಸಾದವರಿಗೆ 'ಮುನ್ನೆಚ್ಚರಿಕೆ ಡೋಸ್' ನೀಡಲಾಗುತ್ತದೆ. ಇದು ಮೂರನೇ ಡೋಸ್ ಆಗಿದ್ದು, ಎರಡನೇ ಡೋಸ್ ಪಡೆದು 39 ವಾರ ಅಥವಾ 9 ತಿಂಗಳು ಕಳೆದಿರುವವರು ಮಾತ್ರ ಮುನ್ನೆಚ್ಚರಿಕೆ ಡೋಸ್ ಪಡೆದುಕೊಳ್ಳಬಹುದು. ಈ ಹಿಂದೆ ಪಡೆದಿದ್ದ ಕಂಪನಿಯ ಲಸಿಕೆಯನ್ನೇ ಮೂರನೇ ಡೋಸ್ ವೇಳೆ ಪಡೆಯಬೇಕು ಎಂದು ಮಾರ್ಗಸೂಚಿ ಉಲ್ಲೇಖಿಸಿದೆ.

76.58 ಲಕ್ಷ ಮಂದಿಗೆ 3ನೇ ಡೋಸ್

ಬೆಂಗಳೂರು: ರಾಜ್ಯದಲ್ಲಿ 60 ವರ್ಷಗಳು ಮೇಲ್ಪಟ್ಟ 76.58 ಲಕ್ಷ ಮಂದಿ ಕೋವಿಡ್ ಲಸಿಕೆಯ ಮುನ್ನೆಚ್ಚರಿಕೆ ಡೋಸ್ (3ನೇ ಡೋಸ್) ಪಡೆಯಲು ಅರ್ಹರಾಗಿದ್ದಾರೆ. ಕೋವಿನ್ ಪೋರ್ಟಲ್ ನೋಂದಣಿ ಪ್ರಕಾರ, ಎರಡನೇ ಡೋಸ್ ಲಸಿಕ ಪಡೆದು 9 ತಿಂಗಳು ಪೂರೈಸಿದ 60 ವರ್ಷಗಳು ಮೇಲ್ಪಟ್ಟ ಎಲ್ಲ ಫಲಾನುಭವಿಗಳು ಮುನ್ನೆಚ್ಚರಿಕೆ ಡೋಸ್ ಲಸಿಕ ಪಡೆಯಬಹುದು. ಮುನ್ನೆಚ್ಚರಿಕೆ ಡೋಸ್ ಲಸಿಕೆಗೆ ಹೊಸದಾಗಿ ನೋಂದಣಿ ಮಾಡಲಾಗುವುದಿಲ್ಲ. ಮೊದಲೆರಡು ಡೋಸ್ ಪಡೆದ ಕಂಪನಿಯ ಲಸಿಕೆಯನ್ನೇ ಮೂರನೆ ಡೋಸ್‌ಗೂ ಪಡೆಯಬೇಕು ಎಂದು ಆರೋಗ್ಯ ಇಲಾಖೆ ತಿಳಿಸಿದೆ.

12–14 ವರ್ಷದ 20 ಲಕ್ಷ ಮಕ್ಕಳಿಗೆ ಲಸಿಕೆ

ಬೆಂಗಳೂರು: ರಾಜ್ಯದಲ್ಲಿ 12–14 ವರ್ಷ ವಯೋಮಾನದ ಮಕ್ಕಳಿಗೆ ಕೋವಿಡ್ ಲಸಿಕೆ ವಿತರಣೆ ಬುಧವಾರದಿಂದ ಪ್ರಾರಂಭವಾಗಲಿದ್ದು, ಈ ವಯೋಮಾನದ 20 ಲಕ್ಷ ಮಕ್ಕಳನ್ನು ಗುರುತಿಸಲಾಗಿದೆ.

ಇಲ್ಲಿನ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಸಂಸ್ಥೆಯಲ್ಲಿ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್, ಲಸಿಕೆ ವಿತರಣೆಗೆ ಚಾಲನೆ ನೀಡಲಿದ್ದಾರೆ.

2010ರ ಮಾ.15 ಹಾಗೂ ಅದಕ್ಕೂ ಮೊದಲು ಜನಿಸಿದ ಮಕ್ಕಳು ಲಸಿಕೆ ಪಡೆಯಲು ಅರ್ಹರಾಗಿರುತ್ತಾರೆ. ಪ್ರತಿಯೊಬ್ಬ ಫಲಾನುಭವಿಗೂ ಎರಡು ಡೋಸ್ 'ಕೊರ್ಬೆವ್ಯಾಕ್ಸ್' ಲಸಿಕೆ ನೀಡಲಾಗುವುದು. ಮೊದಲ ಡೋಸ್ ಪಡೆದ 28 ದಿನಗಳ ನಂತರ ಎರಡನೇ ಡೋಸ್ ಲಸಿಕೆ ನೀಡಲಾಗುವುದು. ಮಕ್ಕಳಿಗೆ ನೀಡಲು ರಾಜ್ಯದಲ್ಲಿ 20 ಲಕ್ಷ ಡೋಸ್‌ಗಳಷ್ಟು ಲಸಿಕೆಯ ದಾಸ್ತಾನು ಇದೆ. ಪ್ರಾರಂಭದಲ್ಲಿ ಲಸಿಕಾ ಅಭಿಯಾನಗಳನ್ನು ಆರೋಗ್ಯ ಕೇಂದ್ರಗಳಲ್ಲಿ ನಡೆಸಲಾಗುವುದು. ನಂತರ ಶಾಲೆಗಳಲ್ಲಿ ಈ ಅಭಿಯಾನ ಹಮ್ಮಿಕೊಳ್ಳಲಾಗುವುದು ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಅಸ್ವಸ್ಥತೆ ಹೊಂದಿರುವ ಮಕ್ಕಳಿಗೆ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಮೇಲ್ವಿಚಾರಣೆ ಬಳಿಕ ಲಸಿಕ ನೀಡಲಾಗುವುದು. ಲಸಿಕೆ ಪಡೆದ ಮಕ್ಕಳ ಲಸಿಕಾ ಪ್ರಮಾಣ ಪತ್ರ ಕೋವಿನ್ ಪೋರ್ಟಲ್‌ನಲ್ಲಿ ಲಭ್ಯವಾಗುತ್ತವೆ. ಆನ್‌ಲೈನ್ ತರಗತಿಗಳು ನಡೆಯುವ ಶಾಲೆಗಳಲ್ಲಿ ದಿನಾಂಕ ನಿಗದಿಪಡಿಸಿ, ಮಕ್ಕಳಿಗೆ ಲಸಿಕೆ ಪಡೆಯಲು ಬರಹೇಳಬೇಕು. ಶಾಲೆಯಿಂದ ಹೊರಗುಳಿದ ಅಥವಾ ಶಾಲೆ ಬಿಟ್ಟ ಮಕ್ಕಳನ್ನು ಗುರುತಿಸಿ, ಕಾರ್ಮಿಕ ಇಲಾಖೆ, ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ ನಗರಾಭಿವೃದ್ಧಿ ಇಲಾಖೆಯ ಬೆಂಬಲದೊಂದಿಗೆ ಹತ್ತಿರದ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಅಭಿಯಾನ ನಡೆಸಬೇಕು ಎಂದು ಪ್ರಕಟಣೆ ತಿಳಿಸಿದೆ.

Infosys®
Navigate your next
Infosys Limited
Corporate Identity Number (CIN): L85110KA1981PLC013115
Regd. Office: Electronics City, Hosur Road, Bengaluru - 560 100.
Phone: 91 80 2852 0261, Fax: 91 80 2852 0362
investors@infosys.com, www.infosys.com

NOTICE

Notice is hereby given that a meeting of the Board of Directors of the Company will be held on Tuesday and Wednesday, April 12 and 13, 2022 inter alia to:

1. Approve and take on record the audited consolidated financial results of the Company and its subsidiaries as per Indian Accounting Standards (INDAS) for the quarter and year ending March 31, 2022.
2. Approve and take on record the audited standalone financial results of the Company as per INDAS for the quarter and year ending March 31, 2022.
3. Approve and take on record the audited financial statements of the Company and its subsidiaries as per INDAS and IFRS for the quarter and year ending March 31, 2022.
4. Approve and take on record the audited financial statements of the Company and its subsidiaries as per INDAS for the year ending March 31, 2022.
5. Approve and take on record the audited financial statements of the Company as per INDAS for the year ending March 31, 2022.
6. Recommend a final dividend for the financial year ending March 31, 2022.

The financial results will be presented to the Board of Directors on April 13, 2022 for their approval.

The details will be made available on the website of the Company- www.infosys.com

For **Infosys Limited**
Sd/-
A.G.S. Manikantha
Company Secretary

March 15, 2022
Bengaluru, India

ಚಿನ್ನದ ಬೆಲೆ ₹ 668ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ಬೆಲೆಯು ಮಂಗಳವಾರ 10 ಗ್ರಾಂಗೆ ₹ 668ರಷ್ಟು ಇಳಿಕೆಯಾಗಿ, ₹ 51,727ರಂತೆ ಮಾರಾಟವಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ಇಳಿಕೆಯಾಗಿದ್ದು, ಅದು ದೇಶಿ ಮಾರುಕಟ್ಟೆಯ ಮೇಲೆಯೂ ಪರಿಣಾಮ ಬೀರಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ಹೇಳಿದೆ. ಬೆಳ್ಳಿಯ ಬೆಲೆಯು ಕೆ.ಜಿ.ಗೆ ₹ 1,390ರಷ್ಟು ಇಳಿಕೆಯಾಗಿ ₹ 67,997ರಂತೆ ಮಾರಾಟವಾಗಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,871
ಇಂದಿನ ಅಂತ್ಯ	16,663
▲	208
ದಿನದ ಗರಿಷ್ಠ	16,927

ವಿನಿಮಯ ದರ

$ ಡಾಲರ್	76.62
£ ಪೌಂಡ್	99.92
€ ಯುರೊ	84.32
¥ ಯೆನ್ (100ಕ್ಕೆ)	64.65

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹390
12 ಮೊಟ್ಟೆಗೆ ₹55
ಮೈಸೂರು
100 ಮೊಟ್ಟೆಗೆ ₹390

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1610 (1680)
ಸೋಯಾ (ರಿಫೈನ್ಡ್)	₹1560 (1572)
ಸೂರ್ಯಕಾಂತಿ (ರಿಫೈನ್ಡ್)	₹1900 (1850)
ಪಾಮೋಲಿನ್	₹1547 (1570)

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹18000-20000
2ನೇ ದರ್ಜೆ ₹10000-16000

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಭಾವಪೂರ್ಣ ಶ್ರದ್ಧಾಂಜಲಿ

ನನ್ನ ಪೂಜ್ಯ ಮಾತೃಶ್ರೀ ಯವರಾದ ಶ್ರೀಮತಿ ಹೆಚ್.ಜಿ. ಲಕ್ಷ್ಮಮ್ಮ ರಾಜುರವರು ಇಂದು 15.3.2022 ರಂದು ಮಂಗಳವಾರ ಬೆಳಿಗ್ಗೆ 11-00 ಗಂಟೆಗೆ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ.
ಮೃತರ ಅಂತ್ಯಕ್ರಿಯೆನ್ನು 16.3.2022 ರಂದು ಬುಧವಾರ ಬೆಳಿಗ್ಗೆ 10 ಗಂಟೆಗೆ ಬೆಸ್ತರ ಪಾಳ್ಯ, ಹುಲಿಕಟ್ಟೆ, ಹುಲಿಯೂರು ದುರ್ಗಮಾರ್ಗ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ ಇಲ್ಲಿ ನೆರವೇರಿಸಲಾಗುವುದು
ಶ್ರೀಮತಿ ಹೆಚ್.ಜಿ.ಲಕ್ಷ್ಮಮ್ಮ ರಾಜು (88)
ಇಂತಿ, ದುಃಖತಪ್ತರು : ಶ್ರೀ ನೀಲಕಂಠ ಆರ್.ಗೌಡ, ಶ್ರೀಮತಿ ದೇವಿಕ ಮತ್ತು ಶಿವರಾಂ ಶ್ರೀಮತಿ ಪ್ರಿಯದರ್ಶಿನಿ ಕೃಷ್ಣಪ್ಪ ಮತ್ತು ಶ್ರೀ ಎಂ. ಕೃಷ್ಣಪ್ಪ, ಎಂ.ಎಲ್.ಎ.
ವಿಜಯನಗರ, ಬೆಂಗಳೂರು

ಭಾವಪೂರ್ಣ ಶ್ರದ್ಧಾಂಜಲಿ

ಡಿ.ವಿ ಜಯಲಕ್ಷ್ಮಿ
27.09.1941 - 14.03.2022
W/o ಡಾ.ಕೆ. ಶ್ರೀಕಂಠಯ್ಯ, ಬಸವೇಶ್ವರನಗರ
ದುಃಖತಪ್ತರು
ಪತಿ, ಮಕ್ಕಳು, ಮೊಮ್ಮಕ್ಕಳು & ಕುಟುಂಬವರ್ಗ

13 x 365 DAYS PASSED

CHETAN B.E. MBA
18-4-80 16-3-09
'ಓ ನನ್ನ ಚೇತನ ಆಗು ನೀ ಅನಿಕೇತನ'
ಎಂ. ಮಹಾಲಕ್ಷ್ಮಿ ನಾಗರಾಜ್

1st Anniversary

S. Ramakrishna Gandhi
Retd. Drug Controller, Govt. of Karnataka
(09.06.1947 - 16.03.2021)
You left us with loving memories which we cherish forever. You are always in our hearts and we love you so very much. We miss you every day.
Remembered by: Hemalatha Devi, Shubha, Prafulla Gandhi, Madhusudhan, Chandrashekar, Sindhura, Bharath, Siddhanth, Sirisha. Mob.: 9448285467

ಹೂಡಿಕೆ ಹಣ ವಾಪಸ್ ಕೇಳಿದ್ದು ಕಾರಣ
ಮುರಿದುಬಿದ್ದ ಅಮೆಜಾನ್ ಫ್ಯೂಚರ್ ಮಾತುಕತೆ

ಮುಖ್ಯಾಂಶಗಳು
- ಹೂಡಿಕೆ ಹಣ ಮರಳಿಸುವುದು ಕಷ್ಟ ಎಂದ ಫ್ಯೂಚರ್
- 2019ರಲ್ಲಿ ಅಮೆಜಾನ್‌ನಿಂದ ಫ್ಯೂಚರ್‌ನಲ್ಲಿ ಹೂಡಿಕೆ

ನವದೆಹಲಿ (ರಾಯಿಟರ್ಸ್): ಅಮೆಜಾನ್ ಮತ್ತು ಫ್ಯೂಚರ್ ರಿಟೇಲ್ ನಡುವಿನ ವ್ಯಾಜ್ಯವನ್ನು ಬಗೆಹರಿಸುವ ಉದ್ದೇಶದಿಂದ ನಡೆದ ಮಾತುಕತೆಯು ಮುರಿದುಬಿದ್ದಿದೆ. ಅಮೆಜಾನ್ ಕಂಪನಿಯು ಫ್ಯೂಚರ್ ರಿಟೇಲ್‌ನಿಂದ ₹ 1,527 ಕೋಟಿಯನ್ನು ಕೇಳಿದ್ದು ಇದಕ್ಕೆ ಕಾರಣ ಎಂದು ಮೂಲಗಳು ಹೇಳಿವೆ. ಅಮೆಜಾನ್ ತಾನು ಫ್ಯೂಚರ್ ರಿಟೇಲ್‌ನಲ್ಲಿ ಮಾಡಿದ್ದ ಹೂಡಿಕೆಯಲ್ಲಿ ಇಷ್ಟು ಮೊತ್ತವನ್ನು ವಾಪಸ್ ಕೇಳಿದೆ ಎನ್ನಲಾಗಿದೆ.

ತನ್ನ ಜೊತೆಗಿನ ಕೆಲವು ಒಪ್ಪಂದಗಳ ಉಲ್ಲಂಘನೆ ಆಗಿದೆ ಎಂದು ದೂರಿರುವ ಅಮೆಜಾನ್, ಫ್ಯೂಚರ್ ರಿಟೇಲ್‌ಅನ್ನು ರಿಲಯನ್ಸ್ ಕಂಪನಿಗೆ ಮಾರಾಟ ಮಾಡುವುದನ್ನು ತಡೆದಿದೆ. ಆದರೆ, ತನ್ನ ಕಡೆಯಿಂದ ಯಾವುದೇ ತಪ್ಪು ಆಗಿಲ್ಲ ಎಂದು ಫ್ಯೂಚರ್ ರಿಟೇಲ್ ಹೇಳಿದೆ. ಅಮೆಜಾನ್ ಮತ್ತು ಫ್ಯೂಚರ್ ಕಂಪನಿಯ ಪ್ರತಿನಿಧಿಗಳು ಮಾತುಕತೆಗೆ ಒಪ್ಪಿದ ನಂತರದಲ್ಲಿ, ಈ ಎರಡು ಕಂಪನಿಗಳ ನಡುವಿನ ವ್ಯಾಜ್ಯವು ನ್ಯಾಯಾಲಯದ ಹೊರಗಡೆ ಇತ್ಯರ್ಥ ಕಾಣಬಹುದು ಎಂದು ನಿರೀಕ್ಷಿಸಲಾಗಿತ್ತು.

ಆದರೆ, ಮಾತುಕತೆ ಮುರಿದುಬಿದ್ದಿದೆ ಎಂದು ಎರಡೂ ಕಂಪನಿಗಳು ಸುಪ್ರೀಂ ಕೋರ್ಟ್‌ಗೆ ಮಂಗಳವಾರ ತಿಳಿಸಿವೆ. ಅಮೆಜಾನ್ ಕಂಪನಿಯು ರಿಲಯನ್ಸ್ ಹಾಗೂ ಫ್ಯೂಚರ್ ಸಮೂಹವನ್ನು ಟೀಕಿಸಿ ಕೆಲವು ಪತ್ರಿಕೆಗಳಲ್ಲಿ ಜಾಹೀರಾತು ನೀಡಿದೆ.

ಫ್ಯೂಚರ್ ಕಂಪನಿಯ ಘಟಕವೊಂದರಲ್ಲಿ ಅಮೆಜಾನ್ 2019ರಲ್ಲಿ ಹಣ ಹೂಡಿಕೆ ಮಾಡಿದೆ. ಅದರಲ್ಲಿ ಕನಿಷ್ಠ ₹ 1,527 ಕೋಟಿಯನ್ನು ವಾಪಸ್ ಕೊಟ್ಟರೆ ಈಗಿನ ವ್ಯಾಜ್ಯವು ಕೊನೆಗೊಳ್ಳಬಹುದು ಎಂದು ಅಮೆಜಾನ್ ಪ್ರತಿನಿಧಿಗಳು ಮಾತುಕತೆ ಸಂದರ್ಭದಲ್ಲಿ ತಿಳಿಸಿದರು. ಆದರೆ, ಹಣದ ಬದಲಿಗೆ ತನ್ನ ಯಾವುದಾದರೂ ಒಂದು ಘಟಕದ ಷೇರುಗಳನ್ನು ಕೊಡಲಾಗುವುದು ಎಂದು ಫ್ಯೂಚರ್ ಕಂಪನಿಯು ಅಮೆಜಾನ್‌ಗೆ ಹೇಳಿತು. ಇದು ಅಮೆಜಾನ್‌ಗೆ ಒಪ್ಪಿಗೆ ಆಗಲಿಲ್ಲ ಎಂದು ಮೂಲಗಳು ಹೇಳಿವೆ.

ಈ ವಿಚಾರವಾಗಿ ಪ್ರತಿಕ್ರಿಯೆ ಕೋರಿ ಕಳುಹಿಸಿದ ಇ-ಮೇಲ್‌ಗೆ ಅಮೆಜಾನ್, ಫ್ಯೂಚರ್ ಉತ್ತರಿಸಿಲ್ಲ. ಮಾತುಕತೆ ಸಂದರ್ಭದಲ್ಲಿ ಇತರ ಹಲವು ಅಂಶಗಳೂ ಪರಿಗಣನೆಗೆ ಬಂದಿದ್ದವು. ಆದರೆ, ಕನಿಷ್ಠಪಕ್ಷ ಹಣವಾದರೂ ವಾಪಸ್ ಸಿಗಬೇಕು ಎಂಬುದು ಅಮೆಜಾನ್ ಬೇಡಿಕೆಯಾಗಿತ್ತು ಎಂದು ಗೊತ್ತಾಗಿದೆ.

99 ಡಾಲರ್‌ಗೆ ತಗ್ಗಿದ ತೈಲ ದರ

ನವದೆಹಲಿ (ಪಿಟಿಐ): ಎರಡು ವಾರಗಳ ಕಾಲ ಪ್ರತಿ ಬ್ಯಾರೆಲ್‌ಗೆ 100 ಡಾಲರ್‌ಗಿಂತ ಹೆಚ್ಚಿನ ಮಟ್ಟದಲ್ಲಿದ್ದ ಬ್ರೆಂಟ್ ಕಚ್ಚಾ ತೈಲ ಬೆಲೆಯು ಮಂಗಳವಾರ 99.84 ಡಾಲರ್‌ಗೆ ಇಳಿಕೆಯಾಗಿದೆ.

ಕಚ್ಚಾ ತೈಲದ ಬೆಲೆಯು ಫೆಬ್ರುವರಿ 28ರಂದು 100 ಡಾಲರ್ ದಾಟಿತ್ತು. ಮಂಗಳವಾರ ಇದರ ಬೆಲೆಯು ಶೇ 7ಕ್ಕಿಂತ ಹೆಚ್ಚು ಕುಸಿದಿದೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಎಸ್.ಕೆ. ಜೈನ್, ಬೊಮ್ಮಾಪುರ ರಸ್ತೆ, ಹುಬ್ಬಳ್ಳಿ

- **ಪ್ರಶ್ನೆ: ಕೆಲವು ಸ್ಮಾರ್ಟ್‌ಫೋನ್ ಆ್ಯಪ್‌ಗಳ ಮೂಲಕ ಮ್ಯೂಚುವಲ್ ಫಂಡ್‌ಗಳ ವ್ಯವಸ್ಥಿತ ಹೂಡಿಕೆ ಯೋಜನೆಗೆ (ಎಸ್‌ಐಪಿ) ನಾವೇ ನೇರವಾಗಿ ಹಣ ಕಟ್ಟುತ್ತಿದ್ದರೆ ಅಪಾಯ ಇದೆಯೇ? ಈ ಹೂಡಿಕೆ ಸರಿಯೇ, ತಪ್ಪೇ? ಇಲ್ಲಿ ಸಂಪರ್ಕಕ್ಕೆ ಯಾರೂ ಸಿಗುವುದಿಲ್ಲ.**

ಉತ್ತರ: ಇಂದಿನ ಎಲೆಕ್ಟ್ರಾನಿಕ್ ಹಾಗೂ ತಂತ್ರಜ್ಞಾನ ಯುಗದಲ್ಲಿ ಮೊಬೈಲ್ ಹಾಗೂ ಕಂಪ್ಯೂಟರ್‌ಗಳು ನಮ್ಮ ದೈನಂದಿನ ಬದುಕಿನ ಮಹತ್ವದ ಭಾಗವಾಗಿರುವ ಬಗ್ಗೆ ಹೆಚ್ಚೇನೂ ಹೇಳಬೇಕಾಗಿಲ್ಲ. ಅದರ ಗುಣ-ಅವಗುಣಗಳು ಎಲ್ಲರಿಗೂ ಗೊತ್ತಿರುವ ವಿಚಾರ. ಈ ತಂತ್ರಜ್ಞಾನ ಬಳಸಿ ವ್ಯಾಪಾರ ವಹಿವಾಟು, ಆರ್ಥಿಕ ವ್ಯವಹಾರಗಳು ನಡೆಯುತ್ತಿರುವುದು ನಾವು ಅಲ್ಲಗಳೆಯಲಾಗದ ವಾಸ್ತವ. ಇಲ್ಲಿ ಒಳಿತು-ಕೆಡುಕು ಎರಡೂ ಇವೆ.

ಇಂತಹ ಸಂದರ್ಭದಲ್ಲಿ ಯಾವುದೇ ಹೂಡಿಕೆ ಮಾಡುವ ಮುನ್ನ ನೀವು ಆಯಾ ಆ್ಯಪ್‌ಗಳಲ್ಲಿ ಮ್ಯೂಚುವಲ್ ಫಂಡ್ ವಿತರಕರು ನೋಂದಾಯಿತ ಸಂಖ್ಯೆಯನ್ನು ಹೊಂದಿ ವ್ಯವಹರಿಸುತ್ತಿದ್ದಾರೆಯೇ ಎಂಬುದನ್ನು ಮೊದಲು ಖಾತ್ರಿಪಡಿಸಿಕೊಳ್ಳಿ. ನೋಂದಣಿ ಇಲ್ಲದ ವಿತರಕರೊಡನೆ ವ್ಯವಹರಿಸದಿರಿ.

ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟದ ವೆಬ್‌ಸೈಟ್‌ನಲ್ಲಿ (www.amfiindia.com) ವಿತರಕರ ನೋಂದಾಯಿತ ಸಂಖ್ಯೆಯನ್ನು ಹಾಕಿ ಅವರ ಪೂರ್ಣ ಮಾಹಿತಿಯನ್ನು ಖಚಿತಪಡಿಸಿಕೊಳ್ಳಬಹುದು. ಮಾತ್ರವಲ್ಲ, ಇಂದು ಯಾವುದೇ ಕ್ಷೇತ್ರದಲ್ಲಿ ಹೂಡಿಕೆ ಮಾಡುವ ಮುನ್ನ, ನಾವು ನಮ್ಮನ್ನು ಹೂಡಿಕೆಯ ಪ್ರಪಂಚದ ವ್ಯವಹಾರಕ್ಕೆ ಅಣಿ ಮಾಡಿಕೊಳ್ಳಬೇಕು. ಹೂಡಿಕೆದಾರರು ತಮ್ಮ ಹಕ್ಕು-ಜವಾಬ್ದಾರಿ ಅರಿತು ವ್ಯವಹರಿಸಬೇಕಾದುದು ಇಂದಿನ ಯುಗದಲ್ಲಿ ಅನಿವಾರ್ಯ.

ಸುಭಾಶ್ಚಂದ್ರ, ಚಾಲುಕ್ಯ ನಗರ, ಬಾದಾಮಿ

- **ಪ್ರಶ್ನೆ: ನಾನು ಸರ್ಕಾರಿ ಸೇವೆಯಿಂದ ನಿವೃತ್ತಿ ಹೊಂದಿದ್ದು ಪ್ರತಿ ತಿಂಗಳು ನಿವೃತ್ತಿ ವೇತನ ಪಡೆಯುತ್ತಿದ್ದೇನೆ. ನನಗೆ ಒಬ್ಬ ಮಗ ಹಾಗೂ ಇಬ್ಬರು ಹೆಣ್ಣು ಮಕ್ಕಳಿದ್ದು ಎಲ್ಲರೂ ಒಳ್ಳೆಯ ನೌಕರಿಯಲ್ಲಿದ್ದಾರೆ. ಹಿರಿಯ ಮಗಳಿಗೆ ಒಬ್ಬ ಮಗ (12 ವರ್ಷ ವಯಸ್ಸು), ಎರಡನೆಯ ಮಗಳಿಗೆ ಒಬ್ಬ ಮಗ (12 ವರ್ಷ) ಹಾಗೂ ಒಬ್ಬಳು ಮಗಳು (5 ವರ್ಷ). ನನ್ನ ಮಗನಿಗೆ ಹೆಣ್ಣು ಮಗು (1 ವರ್ಷ). ನಾಲ್ಕು ಜನ ಮೊಮ್ಮಕ್ಕಳಿದ್ದಾರೆ. ಈ ವರ್ಷದಲ್ಲಿ ಮೊಮ್ಮಕ್ಕಳಿಗೆ ಅವರ ಹುಟ್ಟುಹಬ್ಬಕ್ಕೆ ನನ್ನ ಪಿಂಚಣಿ ಉಳಿತಾಯದ ಹಣದಲ್ಲಿ ಪ್ರತಿಯೊಬ್ಬರಿಗೆ ₹ 50,000 ಕೊಡಬೇಕೆಂದಿದ್ದೇನೆ. ಯಾವ ವಿಧದಿಂದ ಕೊಟ್ಟರೆ ಹೆಚ್ಚು ಅನುಕೂಲ? ಅಂದರೆ, ಎಫ್.ಡಿ. ಅಥವಾ ಮ್ಯೂಚುವಲ್ ಫಂಡ್ ಹೀಗೆ ಯಾವ ರೂಪದಲ್ಲಿ ಕೊಡಬೇಕು ಎಂಬುದನ್ನು ತಿಳಿಸಿ.**

ಉತ್ತರ: ನೀವು ಪ್ರಶ್ನೆಯಲ್ಲಿ ಉಲ್ಲೇಖಿಸಿದಂತೆ ತಲಾ ₹ 50,000 ಹಣವನ್ನು ನಿಮ್ಮ ನಾಲ್ವರು ಮೊಮ್ಮಕ್ಕಳಿಗೆ ಉಡುಗೊರೆಯಾಗಿ ಕೊಡಬೇಕೆಂದಿದ್ದೀರಿ. ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 56ರ ಪ್ರಕಾರ, ಸಂಬಂಧಿಕರಿಂದ ಪಡೆದ ಉಡುಗೊರೆಗಳಿಗೆ ತೆರಿಗೆ ವಿಧಿಸಲಾಗುವುದಿಲ್ಲ. ಆ ಸೆಕ್ಷನ್‌ನಲ್ಲಿ ಉಲ್ಲೇಖಿಸಿರುವ ಸಂಬಂಧಿಗಳ ನಿರ್ದಿಷ್ಟ ಪಟ್ಟಿಯು ಅಜ್ಜ-ಅಜ್ಜಿಯರು, ಮೊಮ್ಮಕ್ಕಳ ಹೆಸರಲ್ಲಿ ಕೊಡುವ ಉಡುಗೊರೆಯನ್ನೂ ಒಳಗೊಂಡಿದೆ.

ಪ್ರಸ್ತುತ ಇರುವ ಕಾನೂನಿನಂತೆ, 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಹೆಸರಲ್ಲಿ ಯಾವುದೇ ಬ್ಯಾಂಕ್ ಅಥವಾ ಮ್ಯೂಚುವಲ್ ಫಂಡ್ ಖಾತೆ ತೆರೆದರೆ ಅವರ ಪೋಷಕರ ಸಹಾಯದಿಂದ ಅದರಲ್ಲಿ ವ್ಯವಹಾರ ನಡೆಸಬೇಕಾಗುತ್ತದೆ. ಅವರಿಗೆ 18 ವರ್ಷ ಪ್ರಾಯ ತುಂಬಿದ ನಂತರ ಅಗತ್ಯ ದಾಖಲೆಗಳನ್ನು ನೀಡುವ ಮೂಲಕ ಆ ಖಾತೆಗಳಲ್ಲಿ ಅವರೇ ಖುದ್ದಾಗಿ ವ್ಯವಹರಿಸಲು ಅವಕಾಶ ಮಾಡಿಕೊಡಬಹುದು. ಅಲ್ಲಿಯ ತನಕ ಹೆತ್ತವರು / ಪೋಷಕರು ತಮ್ಮ ಆದಾಯದೊಡನೆ ಮಕ್ಕಳ ಖಾತೆಯಲ್ಲಿ ಬರುವ ಯಾವುದೇ ಹೂಡಿಕೆಯ ಮೇಲಿನ ಆದಾಯಕ್ಕೆ ತೆರಿಗೆ ಕಟ್ಟಬೇಕಾಗುತ್ತದೆ. ಆದರೂ ವಾರ್ಷಿಕವಾಗಿ ₹ 1500ರ ತನಕದ ಆದಾಯಕ್ಕೆ ವಿನಾಯಿತಿ ಇದೆ.

ಬ್ಯಾಂಕ್‌ಗಳಲ್ಲಿಡುವ ಎಫ್.ಡಿ. ನಿಶ್ಚಿತ ಆದಾಯ ನೀಡಬಲ್ಲುದು. ಆದರೆ ಉತ್ತಮ ಮ್ಯೂಚುವಲ್ ಫಂಡ್‌ಗಳು ದೀರ್ಘಾವಧಿಯಲ್ಲಿ ಎಫ್.ಡಿ.ಗಿಂತ ಹೆಚ್ಚಿನ ಲಾಭ ನೀಡಬಹುದು. ಅದು ಷೇರುಪೇಟೆಯ ಏರಿಳಿತಕ್ಕೆ ಅನುಗುಣವಾಗಿ ಇರುತ್ತದೆ ಎಂಬುದನ್ನು ಅರಿತಿರಿ. ಖಾತೆಗಳ ನಿರ್ವಹಣೆಯ ದೃಷ್ಟಿಯಿಂದ, ನೀವು ಮೊದಲ ಹಂತದಲ್ಲಿ ಆ ಮೊತ್ತವನ್ನು ನಿಮ್ಮ ಮಕ್ಕಳಿಗೆ ನೀಡಿ, ತದನಂತರ ಅವರು ಅದೇ ಮೊತ್ತವನ್ನು ನಿಶ್ಚಿತ ಕಂತುಗಳಲ್ಲಿ ಮುಂದಿನ 12 ತಿಂಗಳ ಸಮ ಕಂತುಗಳಲ್ಲಿ ಎಸ್.ಐ.ಪಿ ಹೂಡಿಕೆ ಮಾಡುವ ಯೋಜನೆ ಮಾಡಿಸಿ. ಅದೇ ಹೂಡಿಕೆ ಮುಂದಿನ 5-10 ವರ್ಷಗಳಲ್ಲಿ ಒಳ್ಳೆಯ ಲಾಭ ನೀಡಬಲ್ಲುದು.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ
ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಮುಂಬೈ ಧಾರಣೆ

ಶೇಂಗಾ
15-3-2022

ಜಾವಾ 70/80(ಹೊಸ)	11300-11350
ಜಾವಾ 80/90(ಹೊಸ)	10500-10550
ದಪ್ಪ ಮಧ್ಯಪ್ರದೇಶ(ಹೊಸ)	10450-10500
ದಪ್ಪ ಗುಜರಾತ್(ಹೊಸ)	9200-9300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1620 (1630)
ಒಂದು ವಾರದ ಡೆಲಿವರಿ	1615 (1625)
ಸೋಯಾ ಕಚ್ಚಾ	1550 (1555)
ಪಾಮ್ ವಾರದ ಡೆಲಿವರಿ	1545 (1568)
ಸೂರ್ಯಕಾಂತಿ ಎಣ್ಣೆ ಕಚ್ಚಾ	----(1800)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	51,200 (51,650)
ಬೆಳ್ಳಿ ಕೆ.ಜಿ	67,250 (68,300)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಐದು ದಿನಗಳ ಗಳಿಕೆಯ ಓಟಕ್ಕೆ ತಡೆ

ಮುಂಬೈ (ಪಿಟಿಐ): ಐದು ದಿನಗಳಿಂದ ಏರುಗತಿಯಲ್ಲಿ ಇದ್ದ ದೇಶದ ಷೇರುಪೇಟೆ ಸೂಚ್ಯಂಕಗಳು ಮಂಗಳವಾರ ಕುಸಿತ ಕಂಡವು. ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿ ದರಕ್ಕೆ ಸಂಬಂಧಿಸಿದಂತೆ ಕೈಗೊಳ್ಳಬಹುದಾದ ತೀರ್ಮಾನ, ರೂಪಾಯಿ ಮೌಲ್ಯ ಕುಸಿತ ಹಾಗೂ ವಿದೇಶಿ ಬಂಡವಾಳದ ಹೊರಹರಿವು ಮುಂದುವರಿದಿದ್ದು ಷೇರುಪೇಟೆಗಳ ಮೇಲೆ ಪ್ರಭಾವ ಬೀರಿದವು ಎಂದು ವರ್ತಕರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್, 709 ಅಂಶ ಇಳಿಕೆ ಕಂಡಿತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 208 ಅಂಶ ಕುಸಿಯಿತು. 'ಅನಿಲ ಆಮದು ಅಮಾನತು ಮಾಡಿರುವುದು ಮಾತ್ರವೇ ಅಲ್ಲದೆ ರಷ್ಯಾದ ಮೇಲೆ ಹೊಸದಾಗಿ ಒಂದಿಷ್ಟು ನಿರ್ಬಂಧಗಳನ್ನು ವಿಧಿಸಿದ ಕಾರಣದಿಂದಾಗಿ ಜಾಗತಿಕ ಷೇರು ಮಾರುಕಟ್ಟೆಗಳಲ್ಲಿ ಏರುಗತಿಯ ಚಲನೆಗೆ ತಡೆ ಬಿತ್ತು. ರಷ್ಯಾ-ಉಕ್ರೇನ್ ನಡುವೆ ಕದನ ವಿರಾಮ ಘೋಷಣೆಯಾಗುತ್ತದೆ ಎಂಬ ನಿರೀಕ್ಷೆಯಲ್ಲಿದ್ದ ಮಾರುಕಟ್ಟೆಗಳ ಪಾಲಿಗೆ ಇದು ನಕಾರಾತ್ಮಕ ಸುದ್ದಿಯಾಗಿ ಬಂತು' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಹೊಸ ಗ್ಲಾನ್ಸಾ

ಹೊಸ ಗ್ಲಾನ್ಸಾ ಬಿಡುಗಡೆ

ಬೆಂಗಳೂರು: ಟೊಯೊಟಾ ಕಿರ್ಲೋಸ್ಕರ್ ಮೋಟರ್ (ಟಿಕೆಎಂ) ಕಂಪನಿಯು ತನ್ನ ಪ್ರೀಮಿಯಂ ಹ್ಯಾಚ್‌ಬ್ಯಾಕ್ ಕಾರು 'ಗ್ಲಾನ್ಸಾ'ದ ಹೊಸ ಆವೃತ್ತಿಯನ್ನು ಮಂಗಳವಾರ ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಈ ಕಾರಿನ ಎಕ್ಸ್‌ಷೋರೂಂ ಬೆಲೆಯು ₹ 6.39 ಲಕ್ಷದಿಂದ ಆರಂಭ ಆಗುತ್ತದೆ.

ಹೆಚ್ಚಿನ ಇಂಧನ ದಕ್ಷತೆ ಒದಗಿಸುವ ಕೆ-ಸರಣಿಯ 1.2 ಲೀಟರ್ ಸಾಮರ್ಥ್ಯದ ಎಂಜಿನ್ ಇದರಲ್ಲಿ ಇದೆ. ಈ ಎಂಜಿನ್ ಪ್ರತಿ ಲೀಟರ್ ಪೆಟ್ರೋಲ್‌ಗೆ 22 ಕಿಲೋ ಮೀಟರ್ ದಕ್ಷತೆಯನ್ನು ನೀಡಬಲ್ಲದು. ಈ ಕಾರು ಆಟೊಮ್ಯಾಟಿಕ್ ಹಾಗೂ ಮ್ಯಾನುವಲ್ ಟ್ರಾನ್ಸ್‌ಮಿಷನ್ ಆಯ್ಕೆಗಳಲ್ಲಿ ಲಭ್ಯವಿದೆ ಎಂದು ಕಂಪನಿ ಹೇಳಿದೆ.

ಆರು ಏರ್‌ಬ್ಯಾಗ್‌ಗಳು, ಆ್ಯಂಟಿಲಾಕ್ ಬ್ರೇಕಿಂಗ್ ವ್ಯವಸ್ಥೆ (ಎಬಿಎಸ್), ಇಬಿಡಿ ಇದೆ. ಕಾರಿನಲ್ಲಿ 45ಕ್ಕೂ ಹೆಚ್ಚಿನ ಫೀಚರ್‌ಗಳು ಇವೆ. ಕೆಂಪು, ಬೂದು, ಸಿಲ್ವರ್, ನೀಲಿ ಮತ್ತು ಬಿಳಿ ಬಣ್ಣಗಳಲ್ಲಿ ಲಭ್ಯವಿರಲಿದೆ. ಐದು ವರ್ಷಗಳವರೆಗೆ ಅಥವಾ 2.20 ಲಕ್ಷ ಕಿಲೋ ಮೀಟರ್‌ಗಳವರೆಗೆ ವಾರಂಟಿ ಸೌಲಭ್ಯ ಪಡೆದುಕೊಳ್ಳುವ ಅವಕಾಶ ಇದೆ.

₹ 11 ಸಾವಿರ ಪಾವತಿಸಿ ಕಾರು ಬುಕ್ ಮಾಡಬಹುದು. www.toyotabharat.com ವೆಬ್‌ಸೈಟ್ ಮೂಲಕ ಆನ್‌ಲೈನ್ ಬುಕಿಂಗ್ ಅವಕಾಶವೂ ಇದೆ. ಆನ್‌ಲೈನ್ ಮೂಲಕವೇ ವಾಹನ ಸಾಲಕ್ಕೆ ಅರ್ಜಿ ಸಲ್ಲಿಸಬಹುದು. ಕಾರಿನ ವಿತರಣೆಯನ್ನು ಈ ತಿಂಗಳ ಕೊನೆಯಲ್ಲಿ ಆರಂಭಿಸಲಾಗುತ್ತದೆ ಎಂದು ಕಂಪನಿ ಹೇಳಿದೆ.

'ಗ್ಲಾನ್ಸಾ ಕಾರು ಹಲವು ಗ್ರಾಹಕರ ಹೃದಯ ಗೆದ್ದಿದೆ. ಹೊಸ ಗ್ಲಾನ್ಸಾಕ್ಕೆ ಕೂಡ ಒಳ್ಳೆಯ ಸ್ಪಂದನ ದೊರೆತಿದ್ದು, ಗ್ರಾಹಕರು ದೊಡ್ಡ ಸಂಖ್ಯೆಯಲ್ಲಿ ಕಾರು ಬುಕ್ ಮಾಡಿದ್ದಾರೆ' ಎಂದು ಟಿಕೆಎಂ ಕಂಪನಿಯ ಮಾರಾಟ ಮತ್ತು ಗ್ರಾಹಕ ಸೇವೆಗಳ ಕಾರ್ಯನಿರ್ವಾಹಕ ಉಪಾಧ್ಯಕ್ಷ ತದಾಶಿ ಅಸಾಜುಮಾ ಹೇಳಿದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ
ಕೂಳೆ 430- 450
ನಡುಗೋಲು 500-550
ರಾಶಿ 600-650
ರಾಶಿ ಉತ್ತಮ 650-700
ಜರಡಿ 750 - 800
ಹೆರಕಿದ್ದು 1,100-1,150
ಹಸಿರು ಸಾಧಾರಣ 600-700
ಹಸಿರು ಉತ್ತಮ 900-950
ಹಸಿರು ಅತಿ ಉತ್ತಮ 1,200-1,250
ಕಾಳು ಮೆಣಸು - 505

ಅಡಿಕೆ
ಬಂಟ್ವಾಳ
ಕೋಕ 12500-25000
ಹೊಸತು 27500-45000
ಹಳತು 46000-53000
ಚನ್ನಗಿರಿ
ರಾಶಿ 45039-45969
ಚಿತ್ರದುರ್ಗ
ಆಪಿ 45629-46069
ಬೆಟ್ಟೆ 36439-36889
ಕೆಂಪುಗೋಟು 30609-31010
ರಾಶಿ 45119-45559
ಕಾರ್ಕಳ
ಹೊಸತು 40000-45000
ಹಳತು 46000-53000
ಮಂಗಳೂರು
ಕೋಕ 29200-50860
ಪುತ್ತೂರು
ಕೋಕ 11000-26000
ಹೊಸತು 27500-45000
ಸಾಗರ
ಬಿಳಿಗೋಟು 9809-27599
ಚಾಲಿ 33599-37459
ಕೋಕ 26899-29609
ಕೆಂಪುಗೋಟು 31899-34099
ರಾಶಿ 44809-45769
ಸಿಪ್ಪೆಗೋಟು 18399-20389
ಶಿವಮೊಗ್ಗ
ಬೆಟ್ಟೆ 47000-51363
ಗೊರಬಲು 18950-34069
ರಾಶಿ 42819-45919
ಸರಕು 51000-77399
ಸಿದ್ದಾಪುರ
ಬಿಳಿಗೋಟು 22799-29669
ಚಾಲಿ 45959-45959
ಕೋಕ 21061-33699
ಹೊಸಚಾಲಿ 35599-41099
ಕೆಂಪುಗೋಟು 26099-38089
ರಾಶಿ 43109-46599
ತಟ್ಟಿಬೆಟ್ಟೆ 34689-45399
ಶಿರಸಿ
ಬೆಟ್ಟೆ 13296-44899
ಬಿಳಿಗೋಟು 14899-32399
ಚಾಲಿ 32899-40035
ರಾಶಿ 38699-47199
ತುಮಕೂರು
ರಾಶಿ 44100-45800
ಯಲ್ಲಾಪುರ
ಆಪಿ 53899-54765
ಬಿಳಿಗೋಟು 26899-32899
ಚಾಲಿ 35829-40500
ಕೋಕ 18899-29299
ಕೆಂಪುಗೋಟು 26919-35969
ರಾಶಿ 46899-52300
ತಟ್ಟಿಬೆಟ್ಟೆ 38369-46875
ರೇಷ್ಮೆಗೂಡು ಮಾರುಕಟ್ಟೆ
ರಾಮನಗರ
ಮಿಶ್ರ ತಳಿ: ₹ 400-661
ದ್ವಿತಳಿ; ₹ 411-920

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15750	15400	15450	218.80
ಎಸಿ	7560	7,700	7,900	
ಆರ್‌ಪಿ	8400	8,525	8,525	ಲಂಡನ್
ಆರ್‌ಸಿ	4025	3,950	3,950	2115 ಡಾಲರ್ಸ್

ಇ.ವಿ: ಟಾಟಾ ₹ 15 ಸಾವಿರ ಕೋಟಿ ಹೂಡಿಕೆ

ಔರಂಗಾಬಾದ್ (ಪಿಟಿಐ): ವಿದ್ಯುತ್ ಚಾಲಿತ ವಾಹನಗಳ (ಇ.ವಿ.) ವಿಭಾಗದಲ್ಲಿ ಮುಂದಿನ ಐದು ವರ್ಷಗಳಲ್ಲಿ ₹ 15 ಸಾವಿರ ಕೋಟಿ ಹೂಡಿಕೆ ಮಾಡುವ ಆಲೋಚನೆ ಟಾಟಾ ಮೋಟರ್ಸ್‌ಗೆ ಇದೆ ಎಂದು ಕಂಪನಿಯ ಪ್ರಯಾಣಿಕ ವಾಹನ ವಿಭಾಗದ ಅಧ್ಯಕ್ಷ ಶೈಲೇಶ್ ಚಂದ್ರ ಹೇಳಿದ್ದಾರೆ. ಇ.ವಿ. ವಿಭಾಗದಲ್ಲಿ ಕಂಪನಿಯು ಹೊಸದಾಗಿ 10 ಮಾದರಿಗಳನ್ನು ಅಭಿವೃದ್ಧಿಪಡಿಸುವ ಇರಾದೆ ಹೊಂದಿದೆ ಎಂದೂ ಅವರು ಹೇಳಿದ್ದಾರೆ. 'ಬೇರೆ ಬೇರೆ ವಿನ್ಯಾಸ, ಬೆಲೆ, ಕ್ರಮಿಸುವ ಸಾಮರ್ಥ್ಯದ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಲಾಗುವುದು' ಎಂದಿದ್ದಾರೆ.'ಚಾರ್ಜಿಂಗ್ ಮೂಲಸೌಕರ್ಯಗಳ ಜೊತೆಯಲ್ಲೇ ಇ.ವಿ.ಗೆ ಅಗತ್ಯವಿರುವ ಹಲವು ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವ ಕೆಲಸಕ್ಕೆ ವೇಗ ನೀಡಬೇಕಿದೆ. ನಾವು ಇ.ವಿ.ಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದಾಗ, ತಮ್ಮ ಮೊದಲ ಕಾರು ಇ.ವಿ. ಆಗಿರಲಿ ಎಂದು ಬಯಸುವ ಗ್ರಾಹಕರ ಪ್ರಮಾಣವು ಶೇಕಡ 20ರಿಂದ ಶೇ 25ರಷ್ಟು ಮಾತ್ರ ಇತ್ತು. ಈಗ ಅದು ಶೇ 65ಕ್ಕೆ ಏರಿಕೆ ಆಗಿದೆ' ಎಂದಿದ್ದಾರೆ.

'ಮೀಡಿಯಾ ಒನ್' ಪ್ರಸಾರ ನಿಷೇಧಿಸುವ ಆದೇಶಕ್ಕೆ ತಡೆ

ನವದೆಹಲಿ (ಪಿಟಿಐ): ಭದ್ರತೆಯ ಕಾರಣವೊಡ್ಡಿ ಮಲಯಾಳಂ ಸುದ್ದಿವಾಹಿನಿ 'ಮೀಡಿಯಾ ಒನ್' ಪ್ರಸಾರವನ್ನು ನಿಷೇಧಿಸಿ ಕೇಂದ್ರ ಸರ್ಕಾರ ಜನವರಿ 31ರಂದು ಹೊರಡಿಸಿದ್ದ ಆದೇಶಕ್ಕೆ ಸುಪ್ರೀಂ ಕೋರ್ಟ್ ಮಂಗಳವಾರ ತಡೆ ನೀಡಿದೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್, ಸೂರ್ಯಕಾಂತ್ ಮತ್ತು ವಿಕ್ರಂನಾಥ್ ಅವರನ್ನೊಳಗೊಂಡ ನ್ಯಾಯಪೀಠವು ಸುದ್ದಿ ಮತ್ತು ಪ್ರಚಲಿತ ವಿದ್ಯಮಾನಗಳ ಕುರಿತ ಚಾನೆಲ್ ಪ್ರಸಾರವನ್ನು ಮುಂದುವರಿಸಬಹುದು ಎಂದು ಹೇಳಿದೆ.

ಕೇರಳ ಹೈಕೋರ್ಟ್ ಆದೇಶದ ವಿರುದ್ಧ ಚಾನೆಲ್ ಸಲ್ಲಿಸಿರುವ ಮೇಲ್ಮನವಿಗಳ ಕುರಿತು ಇದೇ 26ರೊಳಗೆ ವಿವರವಾದ ಪ್ರಮಾಣಪತ್ರ ಸಲ್ಲಿಸುವಂತೆ ಸುಪ್ರೀಂ ಕೋರ್ಟ್ ಕೇಂದ್ರಕ್ಕೆ ವಿಚಾರಣೆ ವೇಳೆ ತಿಳಿಸಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8139955155/ 8139988588

ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊ.ಮಾದವರು 16,600- 62000/- (ಮನೆಯಲ್ಲಿಯೇಕೆಲಸ) ವಸತಿಯೂಟದೊಂದಿಗೆ 9035363706, 9035364696

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC, Degree ಸಂಬಳ15000 to 28000 ಸಂಪರ್ಕಿಸಿರಿ 9980814578, 9980812378

Cook

ಬೇಕಾಗಿದ್ದಾರೆ ಬೆಂಗಳೂರು - ಮೈಸೂರು ಹೆದ್ದಾರಿಯಲ್ಲಿ ಮದ್ದೂರು ಸಮೀಪ ನಿಡಘಟ್ಟದ ಶ್ರೀ ಸೋಮಸಾಯಿ ಸ್ಕಂದಾಶ್ರಮದಲ್ಲಿ ನೈವೇದ್ಯ ಮತ್ತು ಆಶ್ರಮವಾಸಿಗಳಿಗೆ ಪ್ರತಿ ನಿತ್ಯ ಉಪಹಾರ-ಭೋಜನ ತಯಾರಿಸಲು, ಸ್ಮಾರ್ಥ ಬ್ರಾಹ್ಮಣ ಅಡುಗೆಯವರು ಬೇಕಾಗಿದ್ದಾರೆ. ಬ್ರಹ್ಮಚಾರಿ ಅಥವಾ 50 ವರ್ಷ ಮೇಲ್ಪಟ್ಟ ದಂಪತಿಗಳಿಗೆ ಆದ್ಯತೆ. ಆಸಕ್ತರು ಈ ಕೆಳಗಿನ ದೂರವಾಣಿಗೆ ಕರೆ ಮಾಡಿ ಹೆಚ್ಚಿನ ಮಾಹಿತಿ ಪಡೆಯಬಹುದು. 9845456605 .

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000/- ವರೆಗೆ ಸಂಪಾದಿಸಿ.(ಕೊರಿಯರ್ ಯಿದೆ). 8884686861, 8884686860.

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

WANTED Delivery Executive! Earn Upto 35000 / Month . Joining Bonus 5000/ - and 3000* Referral Bonus . Call Now : 080 - 46805961

ಭವಿಷ್ಯ

Astrology

★||ವಶೀಕರಣ ಸ್ಪೆಷಲಿಸ್ಟ್||★ ಇಷ್ಟಪಟ್ಟವರು ನಿಮ್ಮಂತೆ ಆಗಲು ನೋಡುವ ಮೂಲಕ, ಮಾತನಾಡುವ ಮೂಲಕ, ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಶಾಶ್ವತ ಪರಿಹಾರ. 9900511008"

ಪಂಡಿತ್ ಕಾಳಿ ಪ್ರಸಾದ್ ಕೊಳ್ಳೇಗಾಲದ ಪ್ರಖ್ಯಾತ ಜ್ಯೋತಿಷ್ಯರು ಕೊಳ್ಳೇಗಾಲಕ್ಕೆ ಬಂದು ನೇರ ಭೇಟಿಗೆ ಸದಾ ಅವಕಾಶ ನಿಮ್ಮ ಸರ್ವ ಸಮಸ್ಯೆಗೆ ಪರಿಹಾರ ಮಾಟ ಮಂತ್ರ ಸ್ತ್ರೀ ಪುರುಷ ಗುಪ್ತ ಸಮಸ್ಯೆ ಶತ್ರು ಕಾಟ ವಿವಾಹ ವಿಳಂಬಕ್ಕೆ ಕಚಿತ ಪರಿಹಾರ ಸರ್ವ ವಶೀಕರಣ ಸ್ಪೆಷಲಿಸ್ಟ್. 7338244377

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

★ನಂ.1 ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್* ನಿಮ್ಮ ಯಾವುದೇ ಸಮಸ್ಯೆಗಳಿದ್ದರು ಶ್ರೀಕ್ಷೇತ್ರದಿಂದ ಪಂಡಿತ್.ದೇವೇಂದ್ರಭಟ್‌ಅವರಿಂದ ನೇರಪರಿಹಾರ ಒಮ್ಮೆ ಕರೆಮಾಡಿ ನಿಮ್ಮ ಜೀವನ ಬದಲಾಯಿಸಿಕೊಳ್ಳಿ. 9845333808

ಸಮಾಜಸೇವೆ

Old Age Home

ಸೇವಾ ಮನೋಭಾವವುಳ್ಳ ಯುವಕ, ಯುವತಿಯರು ಹಾಗೂ ದಂಪತಿಗಳು ಬೆಂಗಳೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ, ಉಚಿತ ಊಟ ವಸತಿಯೊಂದಿಗೆ ಉತ್ತಮ ಸಂಬಳ, ತರಬೇತಿ ನೀಡಲಾಗುವುದು ಸಂಪರ್ಕಿಸಿ: 9900371597, 9739320897, 9916551457, 9916544057, 9620761222

ಪ್ರವಾಸ

Travel

27.04.2022, 06.05.2022, 22.05.2022 ರಿಂದ 14/20/26 ದಿನಗಳ ಪೂರಿಜಗನ್ನಾಥ್, ಗಯಾ,ಕಾಶಿ,ಪ್ರಯಾಗ, ನೈಮಿಶಾರಣ್ಯ, ಅಯೋಧ್ಯ, ಬದರಿನಾಥ್, ಕೇದಾರನಾಥ್, ಗಂಗೋತ್ರಿ, ಯಮುನೋತ್ರಿ, ದೆಹಲಿ,ಅಮೃತ್‌ಸರ್, ವೈಷ್ಣೋದೇವಿ/ ಹಾಗು ಜುಲೈ, ಅಗಸ್ಟ್ ಸೆಪ್ಟಂಬರ್ ತಿಂಗಳಲ್ಲಿ ಅಮರನಾಥ್‌ಯಾತ್ರೆ/ ಮುಕ್ತಿನಾಥ್, ಗ್ಯಾಂಗ್‌ಟಾಕ್, ಡಾರ್ಜಲಿಂಗ್ ಪ್ರವಾಸಗಳನ್ನು ಏರ್ಪಡಿಸಲಾಗುತ್ತದೆ 'ಶ್ರೀಸುಧಾ ಟ್ರಾವಲ್ಸ್' 080-22429289, 9448119290, 9019301300

★17.04.2022 10ದಿನಗಳು★ ಆಗ್ರಾ, ಮಥುರಾ, ಅಲಹಾಬಾದ್, ಗಯಾ,ಕಾಶಿ,ಸೀತಾಮಡಿ, ವಿಂಧ್ಯಾಚಲಂ ಪ್ರವಾಸ. ರೂ.13,500 ಒಬ್ಬರಿಗೆ. ಆರ್.ಗಾಂಧಿ ಟೂರ್ಸ್. 9945445809/ 9902433500

19.4.2022 ಕಾಶಿ, ಗಯ, ದೆಹಲಿ 13ದಿನಗಳು. 24.5.2022 ಡಾರ್ಜಿಲಿಂಗ್, ಗ್ಯಾಂಗ್ಟಾಕ್, ಕಲ್ಕತ್ತಾ, ಭುವನೇಶ್ವರ 12ದಿನಗಳು. 20.6.2022 ಚಾರ್ ಧಾಮ್ ಯಾತ್ರೆ. ನಂದಿನಿ ಟೂರಿಸ್ಟ್.9916574089.

ಸೋಮನಾಥ್, ದ್ವಾರಕಾ, ಮಾತ್ರಗಯಾ ಉಜ್ಜಯಿನಿ, ಓಂಕಾರೇಶ್ವರ್, 08.04.2022 ರಿಂದ 10/15 ದಿನಗಳು. ಗಂಗೋತ್ರಿ, ಯಮುನೋತ್ರಿ, ಬದರಿನಾಥ್, ಕೇದಾರನಾಥ್, ದೆಹಲಿ 29.04.2022, 06.05.2022, 14.05.2022 ರಿಂದ 14/18 ದಿನಗಳು. ಕಾಶಿ,ಗಯಾ, ನೈಮಿಶಾರಣ್ಯ, ಅಯೋಧ್ಯ, ದೆಹಲಿ,ಹರಿದ್ವಾರ್ 08.04.2022, 13.04.2022,23.04.2022 ರಿಂದ 7/13 ದಿನಗಳು. ಸಂಪರ್ಕಿಸಿ: 26508925, 9980993631 ಶ್ರೀಚೈತನ್ಯ ಟ್ರಾವಲ್ಸ್, ಚಾಮರಾಜಪೇಟೆ, ಬೆಂಗಳೂರು-18

ಚಾರ್‌ಧಾಮ್‌ಯಾತ್ರೆ. 08.05.2022, 24.05.2022 ರಿಂದ ವಿಮಾನದಲ್ಲಿ 15ದಿನಗಳು ಬದರಿನಾಥ್, ಕೇದಾರನಾಥ್, ಯಮುನೋತ್ರಿ, ಗಂಗೋತ್ರಿ,ದೆಹಲಿ. ಇತ್ಯಾದಿ. ಅಮರನಾಥ್‌ಯಾತ್ರೆ 22.06.2022 ರಿಂದ ವಿಮಾನ/A/C ಬಸ್ಸಿನಲ್ಲಿ 14/18ದಿನಗಳು. ಊಟ,ವಸತಿಯೊಂದಿಗೆ ಸಂಪರ್ಕಿಸಿ: ಜೈರಾಮ್ ಟೂರ್ಸ್ ವಿ.ವಿ.ಪುರಂ, ಬೆಂಗಳೂರು-4. 9342514289, 9686721196

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 30/04/22 ದೆಹಲಿ, ಹರಿದ್ವಾರ್, ವೈಷ್ಣೋದೇವಿ, ಕುಲು, ಮನಾಲಿ, ಅಮೃತ್ಸರ್. 21/04/22 ನೇಪಾಳ್, ಮುಕ್ತಿನಾತ್, ಕಾಶಿ, ಪಶುಪತಿನಾಥ. 9964527782

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	60	85	70	115
CD Per Sqcm	Single Col	Double Col	Multi Col	
	430	450	475	

SPECIAL OFFER

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
condition apply*
dhclassifieds@deccanherald.co.in www.dhclassifieds.com

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಎಸ್‌ಕೆಎಮ್‌ಇ ಐಟಿಎಫ್ ಓಪನ್ ಟೆನಿಸ್ ಟೂರ್ನಿ: ನಿಶಾಂತ್ ದಬಾಸ್‌ಗೆ ಮಣಿದ ನಿಕ್ಷೇಪ್

ರಿಷಭ್ ಸವಾಲು ಮೀರಿದ ಶಶಿಕುಮಾರ್

ಪ್ರಜಾವಾಣಿ ವಾರ್ತೆ

ಶಶಿಕುಮಾರ್ ಮುಕುಂದ್

ಬೆಂಗಳೂರು: ಎರಡೂವರೆ ತಾಸಿನ ಜಿದ್ದಾಜಿದ್ದಿ ಹಣಾಹಣಿಯಲ್ಲಿ ರಿಷಭ್ ಅಗರವಾಲ್ ಸವಾಲು ಮೀರಿದ ಭಾರತದ ಶಶಿಕುಮಾರ್ ಮುಕುಂದ್ ಎಸ್‌ಕೆಎಮ್‌ಇ ಐಟಿಎಫ್ ಓಪನ್ ಟೆನಿಸ್ ಟೂರ್ನಿಯ ಪ್ರೀಕ್ವಾರ್ಟರ್‌ಫೈನಲ್‌ಗೆ ಕಾಲಿಟ್ಟರು.

ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ (ಕೆಎಸ್‌ಎಲ್‌ಟಿಎ) ಆಶ್ರಯದಲ್ಲಿ ನಡೆಯುತ್ತಿರುವ ಟೂರ್ನಿಯ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಸೆಣಸಾಟದಲ್ಲಿ ಮಂಗಳವಾರ ಅಗ್ರಶ್ರೇಯಾಂಕದ ಶಶಿಕುಮಾರ್ ಅವರಿಗೆ 5-7, 6-3, 6-3ರಿಂದ ಭಾರತದವರೇ ಆದ ರಿಷಭ್ ಎದುರು ಜಯ ಒಲಿಯಿತು. ತೀವ್ರ ಪೈಪೋಟಿಯಿಂದ ಕೂಡಿದ್ದ ಮತ್ತೊಂದು ಪಂದ್ಯದಲ್ಲಿ ನಿಶಾಂತ್ ದಬಾಸ್ 6-1, 7-6 (12-10)ರಿಂದ ಕರ್ನಾಟಕದ ಬಿ.ಆರ್. ನಿಕ್ಷೇಪ್ ಅವರಿಗೆ ಸೋಲುಣಿಸಿದರು.

ರಿಷಭ್ ಎದುರಿನ ಪಂದ್ಯದ ಮೊದಲ ಸೆಟ್‌ನ 11ನೇ ಗೇಮ್‌ನಲ್ಲಿ 25 ವರ್ಷದ ಶಶಿಕುಮಾರ್ ಸರ್ವ್ ಕಳೆದುಕೊಂಡರು. ದೀರ್ಘರ್‍ಯಾಲಿಗಳಿಂದ ಕೂಡಿದ್ದ ಗೇಮ್‌ಗಳಲ್ಲಿ ಉಭಯ ಆಟಗಾರರು ಬೆವರು ಹರಿಸಿದರು. ಕೇವಲ ಒಂದು ಪಾಯಿಂಟ್ ಮಾತ್ರ ಕೈಚೆಲ್ಲಿದ ರಿಷಭ್ ಮೊದಲ ಸೆಟ್ ತಮ್ಮದಾಗಿಸಿಕೊಂಡರು. ಎರಡನೇ ಸೆಟ್‌ನ ಆರಂಭದಲ್ಲಿ ಶಶಿಕುಮಾರ್ 4-1ರಿಂದ ಮುನ್ನಡೆದಾಗ ಆಟ ರಂಗೇರಿತು. ಆದರೆ ನಂತರದ ಎರಡು ಗೇಮ್‌ಗಳನ್ನು ಗೆದ್ದ ರಿಷಭ್ ತಿರುಗೇಟಿನ ಸೂಚನೆ ನೀಡಿದರು. ಎಂಟನೇ ಗೇಮ್‌ನಲ್ಲಿ ಶಶಿಕುಮಾರ್, ಎದುರಾಳಿಯ ಸರ್ವ್ ಮುರಿದರಲ್ಲದೆ, ಮುಂದಿನ ಹಂತದಲ್ಲಿ ಪಾರಮ್ಯ ಮೆರೆದು ಸೆಟ್ ಕೈವಶಮಾಡಿಕೊಂಡರು.

ಮೂರನೇ ಸೆಟ್‌ನಲ್ಲಿ 2-1ರ ಮೇಲುಗೈ ಪಡೆದ ರಿಷಭ್ ಪುಟಿದೇಳುವ ನಿರೀಕ್ಷೆ ಮೂಡಿಸಿದ್ದರು. ಆದರೆ ಸ್ವಯಂಕೃತ ತಪ್ಪುಗಳು ಅವರಿಗೆ ಮುಳುವಾದವು. ಸತತ ಐದು ಗೇಮ್‌ಗಳ ಬಲದೊಂದಿಗೆ ಮುನ್ನುಗ್ಗಿದ ಶಶಿಕುಮಾರ್ ಸೆಟ್ ಹಾಗೂ ಪಂದ್ಯ ಗೆದ್ದ ಸಂಭ್ರಮ ಆಚರಿಸಿದರು.

ಮೊದಲ ಸುತ್ತಿನ ಸಿಂಗಲ್ಸ್ ವಿಭಾಗದ ಇನ್ನುಳಿದ ಪಂದ್ಯಗಳಲ್ಲಿ ಭಾರತದ ದಲ್ವಿಂದರ್ ಸಿಂಗ್ 6-4, 6-4ರಿಂದ ಪೋಲೆಂಡ್‌ನ ಯಾನ್ ವೊಜ್‌ಸಿಕ್ ಎದುರು, ಪೋಲೆಂಡ್‌ನ ಮಾಕ್ಸ್ ಕಸ್ನಿವೊಸ್ಕಿ 6-1, 6-4ರಿಂದ ಜರ್ಮನಿಯ ರಾಬರ್ಟ್ ಸ್ಟ್ರೊಂಬಾಸ್ ವಿರುದ್ಧ, ಅಭಿನವ್ ಸಂಜೀವ್ ಷಣ್ಮುಗಂ 6-2, 6-1ರಿಂದ ತಥಾಗತ್ ಚರಂತಿಮಠ ಎದುರು ಗೆದ್ದು 16ರ ಘಟ್ಟಕ್ಕೆ ಲಗ್ಗೆಯಿಟ್ಟರು.

ನಿಶಾಂತ್ ದಬಾಸ್ ಆಟದ ಪರಿ– ಪ್ರಜಾವಾಣಿ ಚಿತ್ರ/ ಬಿ.ಎಚ್. ಶಿವಕುಮಾರ್

ಡಬಲ್ಸ್ ಕ್ವಾರ್ಟರ್‌ಫೈನಲ್‌ಗೆ ಸೂರಜ್– ಅರ್ಣವ್

ಕರ್ನಾಟಕದ ಸೂರಜ್ ಆರ್. ಪ್ರಬೋಧ್ ಹಾಗೂ ಅರ್ಣವ್ ಪತಂಗೆ ಜೋಡಿಯು ಡಬಲ್ಸ್ ವಿಭಾಗದಲ್ಲಿ ಕ್ವಾರ್ಟರ್‌ಫೈನಲ್ ತಲುಪಿತು. 16ರ ಘಟ್ಟದ ಹಣಾಹಣಿಯಲ್ಲಿ ಭಾರತದ ಜೋಡಿಯು 6-4, 4-6, 10-8ರಿಂದ ಗ್ರೇಟ್ ಬ್ರಿಟನ್‌ನ ಅಲೆಕ್ಸಿಸ್ ಕ್ಯಾಂಟರ್– ಕಜಕಸ್ತಾನದ ದೊಸ್ತನ್‌ಬೆಕ್ ತಷ್ಬುಲತೊವ್ ಅವರನ್ನು ಮಣಿಸಿದರು. ಪ್ರೀಕ್ವಾರ್ಟರ್‌ನ ಇನ್ನುಳಿದ ಪಂದ್ಯಗಳಲ್ಲಿ ಯೂಕಿ ಭಾಂಬ್ರಿ–ಸಾಕೇತ್ ಮೈನೇನಿ 6-2, 6-1ರಿಂದ ಆದಿಲ್ ಕಲ್ಯಾಣಪುರ್ ಮತ್ತು ಕರಣ್ ಸಿಂಗ್ ಅವರಿಗೆ ಸೋಲುಣಿಸಿದರೆ, ಭಾರತದ ಪರೀಕ್ಷಿತ್ ಸೋಮಾನಿ– ಫ್ರಾನ್ಸ್‌ನ ಎಂಜೊ ವಾಲಾರ್ಟ್ 7-6 (2), 6-3ರಿಂದ ಜಪಾನ್‌ನ ದೈಸುಕ್ ಸುಮಿಜಾವ ಮತ್ತು ಫ್ರಾನ್ಸ್‌ನ ನಿಕೋಲಸ್ ಟೆಪ್‌ಮಾಕ್ ಎದುರು ಗೆದ್ದರು.

ಗ್ರೇಟ್ ಬ್ರಿಟನ್‌ನ ಜೂಲಿಯನ್ ಕಾಶ್– ಭಾರತದ ಅರ್ಜುನ್ ಖಾಡೆ, ಭಾರತದ ಪಾರಸ್ ದಹಿಯಾ–ಜಗಮೀತ್ ಸಿಂಗ್, ಶಶಿಕುಮಾರ್ ಮುಕುಂದ್–ವಿಷ್ಣುವರ್ಧನ್, ಅನಿರುದ್ಧ ಚಂದ್ರಶೇಖರ್– ವಿನಾಯಕ್ ಶರ್ಮಾ ಕಜಾ, ಫ್ರಾನ್ಸ್‌ನ ಕಾನ್‌ಸ್ಟಂಟೈನ್ ಬಿಟ್ಟೌನ್ ಕೌಜ್‌ಮೈನ್– ಎಸ್.ಡಿ. ಪ್ರಜ್ವಲ್ ದೇವ್ ಡಬಲ್ಸ್‌ನಲ್ಲಿ ಎಂಟರಘಟ್ಟ ತಲುಪಿದರು.

ಫೈನಲ್‌ಗೆ ಕೇರಳ ಬ್ಲಾಸ್ಟರ್ಸ್ ಲಗ್ಗೆ

ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿ

ವಾಸ್ಕೊ (ಪಿಟಿಐ): ಜೆಮ್ಷೆಡ್‌ಪುರ ಎಫ್‌ಸಿ ವಿರುದ್ಧ ಮತ್ತೆ ಪಾರಮ್ಯ ಮೆರೆದ ಕೇರಳ ಬ್ಲಾಸ್ಟರ್ಸ್ ಎಫ್‌ಸಿ ತಂಡ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಫೈನಲ್ ಪ್ರವೇಶಿಸಿತು. ತಿಲಕ್ ಮೈದಾನ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಮೊದಲ ಸೆಮಿಫೈನಲ್‌ನ ಎರಡನೇ ಲೆಗ್ ಪಂದ್ಯ 1-1ರಲ್ಲಿ ಸಮ ಆಯಿತು.

ಎರಡೂ ಲೆಗ್‌ಗಳ ಒಟ್ಟಾರೆ ಗೋಲು ಗಳಿಕೆ ಆಧಾರದಲ್ಲಿ ಕೇರಳ ಪ್ರಶಸ್ತಿ ಸುತ್ತಿಗೆ ಲಗ್ಗೆ ಇರಿಸಿತು. ಮೊದಲ ಲೆಗ್‌ನಲ್ಲಿ ಈ ತಂಡ 1-0ಯಿಂದ ಜಯ ಗಳಿಸಿತ್ತು. ಒಟ್ಟಾರೆ 2-1ರ ಮುನ್ನಡೆ ಸಾಧಿಸಿತು.

ಮಂಗಳವಾರದ ಪಂದ್ಯದ 18ನೇ ನಿಮಿಷದಲ್ಲಿ ಅಡ್ರಿಯನ್ ಲೂನಾ ಗಳಿಸಿದ ಗೋಲಿನೊಂದಿಗೆ ಕೇರಳ ಬ್ಲಾಸ್ಟರ್ಸ್ ಮುನ್ನಡೆ ಸಾಧಿಸಿತು. ಎಡಭಾಗದಲ್ಲಿದ್ದ ಅಲ್ವಾರೊ ವಜ್ಕಿಜ್ ಚೆಂಡನ್ನು ನಿಯಂತ್ರಿಸಿ ಅಡ್ರಿಯನ್ ಕಡೆಗೆ ಫ್ಲಿಕ್ ಮಾಡಿದರು. ಅಡ್ರಿಯನ್ ನಿರಾಯಾಸವಾಗಿ ಡ್ರಿಬಲ್ ಮಾಡುತ್ತ ಮುನ್ನುಗ್ಗಿದರು. ಎದುರಾಳಿ ತಂಡದ ಡಿಫೆಂಡರ್ ಒಬ್ಬರನ್ನು ತಪ್ಪಿಸಿಕೊಂಡು ಸಾಗಿ ಗುರಿ ಮುಟ್ಟಿಸಿದರು.

0-1ರ ಹಿನ್ನಡೆಯೊಂದಿಗೆ ವಿರಾಮಕ್ಕೆ ತೆರಳಿದ ಜೆಮ್ಷೆಡ್‌ಪುರ್ ದ್ವಿತೀಯಾರ್ಧದಲ್ಲಿ ಆಕ್ರಮಣಕಾರಿ ಆಟಕ್ಕೆ ಮುಂದಾಯಿತು. 50ನೇ ನಿಮಿಷದಲ್ಲಿ ಪ್ರಣಯ್ ಹಲ್ದರ್ ಗೋಲು ಗಳಿಸಿ ಸಮಬಲ ತಂದುಕೊಟ್ಟರು. ಬಲ ಕಾರ್ನರ್‌ನಿಂದ ಗ್ರೆಗ್ ಸ್ಟಿವರ್ಟ್ ನೀಡಿದ ಕ್ರಾಸ್‌ನಲ್ಲಿ ಹಲ್ದರ್ ಯಶಸ್ಸು ಕಂಡರು.

ನಂತರ ಉಭಯ ತಂಡಗಳು ಜಿದ್ದಾಜಿದ್ದಿಯ ಪೈಪೋಟಿಗಿಳಿದವು. ಗೋಲು ಬಿಟ್ಟುಕೊಡದೆ ಫೈನಲ್‌ನತ್ತ ಹೆಜ್ಜೆ ಇರಿಸುವಲ್ಲಿ ಕೇರಳ ಬ್ಲಾಸ್ಟರ್ಸ್ ಯಶಸ್ವಿಯಾಯಿತು. ಲೀಗ್ ಹಂತದಲ್ಲಿ 13 ಪಂದ್ಯಗಳನ್ನು ಗೆದ್ದು ಅಗ್ರ ಸ್ಥಾನ ಗಳಿಸಿದ್ದ ಜೆಮ್ಷೆಡ್‌ಪುರ್ ನಿರಾಸೆಗೆ ಒಳಗಾಯಿತು.

ಇಂದು ಎಟಿಕೆಎಂಬಿ–ಎಚ್‌ಎಫ್‌ಸಿ ಮುಖಾಮುಖಿ: ಎರಡನೇ ಸೆಮಿಫೈನಲ್‌ನ ಎರಡನೇ ಲೆಗ್ ಪಂದ್ಯ ಬುಧವಾರ ನಡೆಯಲಿದೆ. ಎಟಿಕೆ ಮೋಹನ್ ಬಾಗನ್ ಮತ್ತು ಹೈದರಾಬಾದ್ ಎಫ್‌ಸಿ ತಂಡಗಳು ಮುಖಾಮುಖಿಯಾಗಲಿವೆ. ಮೊದಲ ಲೆಗ್‌ನಲ್ಲಿ ಹೈದರಾಬಾದ್ 3-1ರಲ್ಲಿ ಜಯ ಗಳಿಸಿತ್ತು. ಹೀಗಾಗಿ ಎಟಿಕೆಎಂಬಿಯ ಹಾದಿ ಕಠಿಣವಾಗಿದೆ.

ಪಂದ್ಯ ಆರಂಭ: ರಾತ್ರಿ 7.30

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಗೋಲು ಗಳಿಸಿದ ಕೇರಳ ಬ್ಲಾಸ್ಟರ್ಸ್‌ನ ಅಡ್ರಿಯನ್ ಲೂನಾ ಸಂಭ್ರಮಿಸಿದ ಪರಿ

ಮಿಥಾಲಿ ಬಳಗಕ್ಕೆ ಜಯದ ತವಕ

ಮಹಿಳೆಯರ ವಿಶ್ವಕಪ್: ಭಾರತ–ಇಂಗ್ಲೆಂಡ್ ಮುಖಾಮುಖಿ

ಮೌಂಟ್ ಮಾಂಗನುಯಿ (ಪಿಟಿಐ): ವೆಸ್ಟ್ ಇಂಡೀಸ್ ಎದುರಿನ ಪಂದ್ಯದಲ್ಲಿ ಭರ್ಜರಿ ಗೆಲುವು ದಾಖಲಿಸಿರುವ ಭಾರತ ತಂಡ ಮಹಿಳೆಯರ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಮಹತ್ವದ ಪಂದ್ಯದಲ್ಲಿ ಬುಧವಾರ ಇಂಗ್ಲೆಂಡ್ ವಿರುದ್ಧ ಸೆಣಸಲಿದೆ.

ಹಾಲಿ ಚಾಂಪಿಯನ್ ಇಂಗ್ಲೆಂಡ್ ಆಡಿರುವ ಎಲ್ಲ ಮೂರು ಪಂದ್ಯಗಳನ್ನು ಸೋತಿದೆ. ಪ್ಲೇ ಆಫ್ ಹಂತಕ್ಕೇರುವ ಆಸೆಯನ್ನು ಜೀವಂತವಾಗಿರಿಸಿಕೊಳ್ಳಬೇಕಾದರೆ ಹೀದರ್ ನೈಟ್ ಬಳಗ ಉಳಿದ ಪಂದ್ಯಗಳಲ್ಲಿ ಉತ್ತಮ ಸಾಮರ್ಥ್ಯ ತೋರಬೇಕು. ಹೀಗಾಗಿ ಭಾರತದ ವಿರುದ್ಧ ಪ್ರಬಲ ಪೈಪೋಟಿ ನಡೆಸುವ ಸಾಧ್ಯತೆ ಇದೆ.

ವೆಸ್ಟ್ ಇಂಡೀಸ್ ಎದುರಿನ ಪಂದ್ಯದಲ್ಲಿ 155 ರನ್‌ಗಳ ಗೆಲುವು ಸಾಧಿಸಿರುವ ಮಿಥಾಲಿ ರಾಜ್ ಬಳಗ ಭರವಸೆಯ ಅಲೆಯಲ್ಲಿದೆ. ಸ್ಮೃತಿ ಮಂದಾನ ಮತ್ತು ಹರ್ಮನ್‌ಪ್ರೀತ್ ಕೌರ್ ಅವರು ಬ್ಯಾಟಿಂಗ್‌ನಲ್ಲಿ ಲಯ ಕಂಡುಕೊಂಡಿರುವುದು ಭಾರತದ ಪಾಳಯದಲ್ಲಿ ಸಂತಸ ಮೂಡಿಸಿದೆ. ಆರಂಭಿಕ ಬ್ಯಾಟರ್ ಯಾಸ್ತಿಕಾ ಭಾಟಿಯಾ ಕೂಡ ವೆಸ್ಟ್ ಇಂಡೀಸ್ ವಿರುದ್ಧ ಉತ್ತಮ ಆಟವಾಡಿದ್ದರು. ಹೀಗಾಗಿ ಇಂಗ್ಲೆಂಡ್ ಎದುರು ಭರವಸೆಯಿಂದಲೇ ತಂಡ ಕಣಕ್ಕೆ ಇಳಿಯಲಿದೆ.

ಬ್ಯಾಟಿಂಗ್ ಕ್ರಮಾಂಕದಲ್ಲಿ ಬಡ್ತಿ ಪಡೆದಿರುವ ದೀಪ್ತಿ ಶರ್ಮಾ ಮತ್ತು ನಾಯಕಿ ಮಿಥಾಲಿ ರಾಜ್ ಅವರಿಗೆ ಇನ್ನೂ ನಿರೀಕ್ಷೆಗೆ ತಕ್ಕಂತೆ ಸಾಮರ್ಥ್ಯ ತೋರಲು ಆಗಲಿಲ್ಲ ಎಂಬುದು ತಂಡವನ್ನು ಕಾಡುತ್ತಿರುವ ಸಮಸ್ಯೆ. ರಿಚಾ ಘೋಷ್ ವಿಕೆಟ್ ಹಿಂದೆ ತಮ್ಮ ಕೈಚಳಕ ತೋರಲು ಯಶಸ್ವಿಯಾಗಿದ್ದಾರೆ. ಆದರೆ ಬ್ಯಾಟಿಂಗ್‌ನಲ್ಲಿ ಅವರ ಮೇಲೆ ಇನ್ನಷ್ಟು ನಿರೀಕ್ಷೆಗಳು ಇವೆ. ಆಲ್‌ರೌಂಡರ್‌ಗಳಾದ ಸ್ನೇಹ್ ರಾಣಾ ಮತ್ತು ಪೂಜಾ ವಸ್ತ್ರಕರ್ ತಂಡದ ಆಸ್ತಿಯಾಗಿದ್ದಾರೆ.

ಇಂಗ್ಲೆಂಡ್‌ಗೆ ಸಿಡಿದೇಳುವ ತವಕ

ಆರಂಭದಿಂದಲೇ ನಿರಾಸೆ ಕಂಡಿರುವ ಇಂಗ್ಲೆಂಡ್ ಪಾಯಿಂಟ್ ಪಟ್ಟಿಯಲ್ಲಿ ಏಳನೇ ಸ್ಥಾನಕ್ಕೆ ಕುಸಿದಿದ್ದು ಸಿಡಿದೇಳುವ ತವಕದಲ್ಲಿದೆ. ಬುಧವಾರದ ಪಂದ್ಯದಲ್ಲಿ ಸೋತರೆ ತಂಡದ ಪ್ಲೇ ಆಫ್ ಹಂತಕ್ಕೇರುವ ಆಸೆ ಕಮರಿ ಹೋಗಲಿದೆ.

ಪಂದ್ಯ ಆರಂಭ: ಬೆಳಿಗ್ಗೆ 6.30 (ಭಾರತೀಯ ಕಾಲಮಾನ)

ಹರ್ಮನ್‌ಪ್ರೀತ್ ಕೌರ್ –ಎಎಫ್‌ಪಿ ಚಿತ್ರ

ಎಲಿಸ್, ಆ್ಯಶ್ಲಿ ದಾಳಿಗೆ ನಲುಗಿದ ವೆಸ್ಟ್ ಇಂಡೀಸ್; ಮೋಹಕ ಅರ್ಧಶತಕ ಗಳಿಸಿದ ರಾಚೆಲ್

ಆಸ್ಟ್ರೇಲಿಯಾ ಮಹಿಳೆಯರ ಅಜೇಯ ಓಟ

ವೆಲಿಂಗ್ಟನ್ (ಪಿಟಿಐ): ಆಸ್ಟ್ರೇಲಿಯಾ ತಂಡ, ಮಹಿಳೆಯರ ವಿಶ್ವಕಪ್ ಟೂರ್ನಿಯಲ್ಲಿ ಅಜೇಯ ಓಟ ಮುಂದುವರಿಸಿದೆ. ಮಂಗಳವಾರ ನಡೆದ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಏಳು ವಿಕೆಟ್‌ಗಳಿಂದ ಜಯ ಗಳಿಸಿದ ಮೆಗ್ ಲ್ಯಾನಿಂಗ್ ಬಳಗ ಆಡಿದ ನಾಲ್ಕೂ ಪಂದ್ಯಗಳನ್ನು ಗೆದ್ದುಕೊಂಡು ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ಮುಂದುವರಿಯಿತು.

ಮಧ್ಯಮ ವೇಗಿ ಎಲಿಸ್ ಪೆರಿ ಮತ್ತು ಆಫ್ ಬ್ರೇಕ್ ಬೌಲರ್ ಆ್ಯಶ್ಲಿ ಗಾರ್ಡನರ್ ದಾಳಿಗೆ ನಲುಗಿದ ವೆಸ್ಟ್ ಇಂಡೀಸ್ ಕೇವಲ 131 ರನ್ ಕಲೆ ಹಾಕಿತ್ತು. ಗುರಿ ಬೆನ್ನತ್ತಿದ ಆಸ್ಟ್ರೇಲಿಯಾ 30.2 ಓವರ್‌ಗಳಲ್ಲಿ ಗೆಲುವಿನ ದಡ ಸೇರಿತು. ರಾಚೆಲ್ ಹೇನ್ಸ್ (83; 95 ಎ, 9 ಬೌಂಡರಿ) ಅಮೋಘ ಅರ್ಧಶತಕ ಸಿಡಿಸಿ ಮಿಂಚಿದರು.

ಟೂರ್ನಿಯಲ್ಲಿ ಅತಿ ಹೆಚ್ಚು ಬಾರಿ ಪ್ರಶಸ್ತಿ ಗೆದ್ದುಕೊಂಡಿರುವ ಆಸ್ಟ್ರೇಲಿಯಾ ಹಿಂದಿನ ಮೂರು ಪಂದ್ಯಗಳಂತೆ ಈ ಪಂದ್ಯದಲ್ಲೂ ಆಧಿಪತ್ಯ ಮೆರೆಯಿತು. ಮೆಗ್ ಲ್ಯಾನಿಂಗ್ ನಾಯಕತ್ವದ ಕಾಂಗರೂ ನಾಡಿನ ಬಳಗ ಗುರಿ ಬೆನ್ನತ್ತುವುದರಲ್ಲಿ ಸಮರ್ಥ ತಂಡ ಎಂಬುದನ್ನು ಸಾಬೀತು ಮಾಡಿತು. ಆರಂಭಿಕ ಬ್ಯಾಟರ್ ರಾಚೆಲ್ ಹೇನ್ಸ್ ಇದಕ್ಕೆ ಪುಷ್ಟಿ ನೀಡಿದರು.

ತಂಡದ ಮೊತ್ತ ಏಳು ರನ್ ಆಗುವಷ್ಟರಲ್ಲಿ ವಿಕೆಟ್ ಕೀಪರ್ ಅಲಿಸಾ ಹೀಲಿ ಮತ್ತು ನಾಯಕಿ ಮೆಗ್ ಲ್ಯಾನಿಂಗ್ ಅವರ ವಿಕೆಟ್ ಉರುಳಿದರೂ ರಾಚೆಲ್ ಎದೆಗುಂದದೆ ಬ್ಯಾಟ್ ಬೀಸಿದರು. ಎಲಿಸ್ ಪೆರಿ ಜೊತೆ 51 ರನ್ ಸೇರಿಸಿದ ಅವರು ಬೆತ್ ಮೂನಿ ಜೊತೆ ಮುರಿಯದ ನಾಲ್ಕನೇ ವಿಕೆಟ್‌ಗೆ 74 ರನ್ ಕಲೆ ಹಾಕಿದರು.

ಸ್ಟೆಫಾನಿ ದಿಟ್ಟ ಬ್ಯಾಟಿಂಗ್: ಟಾಸ್ ಗೆದ್ದ ಬ್ಯಾಟಿಂಗ್ ಆಯ್ದುಕೊಂಡ ವೆಸ್ಟ್ ಇಂಡೀಸ್ ಪದೇ ಪದೇ ವಿಕೆಟ್‌ಗಳನ್ನು ಕಳೆದುಕೊಂಡಿತು. ನಾಯಕಿ ಸ್ಟೆಫಾನಿ ಟೇಲರ್ ಮಾತ್ರ ದಿಟ್ಟ ಆಟವಾಡಿದರು. ತಂಡ ನಾಲ್ಕು ರನ್ ಗಳಿಸಿದ್ದಾಗ ಆರಂಭಿಕ ಬ್ಯಾಟರ್ ಮತ್ತು ಹೇಲಿ ಮ್ಯಾಥ್ಯೂಸ್ ಮತ್ತು ಮೂರನೇ ಕ್ರಮಾಂಕದ ಕಿಸಿಯಾ ನೈಟ್ ಅವರ ವಿಕೆಟ್ ಕಳೆದುಕೊಂಡಿತ್ತು. ಕ್ರೀಸ್‌ನಲ್ಲಿದ್ದ ಸ್ಟೆಫಾನಿ ಅವರಿಗೆ ಜೊತೆ ನೀಡಿದ ಡಿಯಾಂಡ್ರ ದಾಟಿನ್ ಹಾಗೂ ಶೆಮೈನ್ ಕ್ಯಾಂಬೆಲ್ ಸ್ವಲ್ಪ ಪ್ರತಿರೋಧ ಒಡ್ಡಿದರು.

ಉಳಿದ ಯಾರಿಗೂ ನಿರೀಕ್ಷೆಗೆ ತಕ್ಕಂತೆ ಆಡಲು ಸಾಧ್ಯವಾಗಲಿಲ್ಲ. ಮೂವರು ಶೂನ್ಯಕ್ಕೆ ಔಟಾದರೆ ಮೂವರಿಗೆ ಎರಡಂಕಿ ಮೊತ್ತ ದಾಟಲು ಆಗಲಿಲ್ಲ.

ಕಿಸಿಯಾ ನೈಟ್ ವಿಕೆಟ್ ಗಳಿಸಿದ ಎಲಿಸ್ ಪೆರಿ (ಎಡ) ಸಹ ಆಟಗಾರ್ತಿ ತಹಿಲಾ ಮೆಗ್ರಾ ಜೊತೆ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ವೆಸ್ಟ್ ಇಂಡೀಸ್ 131 (45.5 ಓವರ್)
ಡಿಯಾಂಡ್ರ ದಾಟಿನ್ ಸಿ ಲ್ಯಾನಿಂಗ್ ಬಿ ಪೆರಿ 16 (36 ಎ, 4x2), ಹೇಲಿ ಮ್ಯಾಥ್ಯೂಸ್ ಬಿ ಪೆರಿ 0 (4 ಎ), ಕಿಸಿಯಾ ಸಿ ಹೀಲಿ ಬಿ ಪೆರಿ 0 (1 ಎ), ಸ್ಟೆಫಾನಿ ಎಲ್‌ಬಿಡಬ್ಲ್ಯು ಬಿ ಗಾರ್ಡನರ್ 50 (91 ಎ, 4x3), ಶೆಮೈನ್ ಸಿ ಮೂನಿ ಬಿ ಗಾರ್ಡನರ್ 20 (51 ಎ, 4x2), ಚೆಡೀನ್ ಬಿ ಗಾರ್ಡನರ್ 0 (4 ಎ), ಚಿನೆಲಿ ರನೌಟ್ (ನೈಟ್/ ಹೀಲಿ) 10 (11 ಎ, 4x2), ಆಲಿಯಾ ಸಿ ಸುದರ್ಲ್ಯಾಂಡ್ ಬಿ ಶುಟ್ 10 (34 ಎ), ಶಕೇರಾ ಬಿ ಜೊನಾಸೆನ್ 6 (19 ಎ), ಕರಿಶ್ಮಾ ಸಿ ಗಾರ್ಡನರ್ ಬಿ ಜೊನಾಸೆನ್ 4 (17 ಎ), ಶಮಿಲಿಯಾ ಔಟಾಗದೆ 2 (7 ಎ)
ಇತರೆ (ಲೆಗ್‌ಬೈ 8, ವೈಡ್ 5) 13
ವಿಕೆಟ್ ಪತನ: 1-4 (ಹೇಲಿ ಮ್ಯಾಥ್ಯೂಸ್, 1.2), 2-4 (ಕಿಸಿಯಾ ನೈಟ್, 1.3), 3-34 (ಡಿಯಾಂಡ್ರ ದಾಟಿನ್, 9.5), 4-70 (ಶೆಮೈನ್ ಕ್ಯಾಂಬೆಲ್, 22.2), 5-70 (ಚೆಡೀನ್ ನೇಷನ್, 22.6), 6-85 (ಚಿನೇಲಿ ಹೆನ್ರಿ, 26.5), 7-111 (ಆಲಿಯಾ ಅಲೀನ್, 36.5), 8-119 (ಸ್ಟೆಫಾನಿ ಟೇಲರ್, 40.3), 9-126 (ಶಕೇರಾ ಸೆಲ್ಮನ್, 43.1), 10-131 (ಕರಿಶ್ಮಾ ರಮರಕ್, 45.5)
ಬೌಲಿಂಗ್: ಮೆಗನ್ ಶುಟ್ 9-2-23-1, ಎಲಿಸ್ ಪೆರಿ 8-0-22-3, ತಹಿಲಾ ಮೆಗ್ರಾ 4-0-17-0, ಅಲಾನ ಕಿಂಗ್ 7-1-18-0, ಆ್ಯಶ್ಲಿ ಗಾರ್ಡನರ್ 10-1-25-3, ಜೆಸ್ ಜೊನಾಸೆನ್ 7.5-1-18-2

ಆಸ್ಟ್ರೇಲಿಯಾ 3ಕ್ಕೆ 132 (30.2 ಓವರ್))
ಅಲಿಸಾ ಹೀಲಿ ಸಿ ಮತ್ತು ಬಿ ಮ್ಯಾಥ್ಯೂಸ್ 3 (8 ಎ), ರಚೆಲ್ ಹೇನ್ಸ್ ಔಟಾಗದೆ 83 (95 ಎ, 4x9), ಮೆಗ್ ಲ್ಯಾನಿಂಗ್ ಸಿ ಮಾಥ್ಯೂಸ್ ಬಿ ಕಾನೆಲ್ 0 (6 ಎ), ಎಲಿಸ್ ಪೆರಿ ಸಿ ಮ್ಯಾಥ್ಯೂಸ್ ಬಿ ಹೆನ್ರಿ 10 (31ಎ) ಬೆತ್ ಮೂನಿ ಔಟಾಗದೆ 28 (42 ಎ, 4x3)
ಇತರೆ (ಲೆಗ್‌ಬೈ 2, ವೈಡ್ 6) 8
ವಿಕೆಟ್ ಪತನ: 11-6 (ಅಲಿಸಾ ಹೀಲಿ, 2.1), 2-7 (ಮೆಗ್ ಲ್ಯಾನಿಂಗ್, 3.2), 3-58 (ಎಲಿಸ್ ಪೆರಿ, 15.6)
ಬೌಲಿಂಗ್: ಹೇಲಿ ಮ್ಯಾಥ್ಯೂಸ್ 8-2-31-1, ಶಮಿಲಿಯಾ ಕಾನೆಲ್ 6-0-32-1, ಕರಿಶ್ಮಾ ರಮರಕ್ 6-0-21-0, ಚಿನೇಲಿ ಹೆನ್ರಿ 5-0-20-1, ಶಕೇರ ಸೆಲ್ಮನ್ 4-0-18-0, ಸ್ಟೆಫಾನಿ ಟೇಲರ್ 1.2-0-8-0

ಫಲಿತಾಂಶ: ಆಸ್ಟ್ರೇಲಿಯಾ ತಂಡಕ್ಕೆ 7 ವಿಕೆಟ್‌ಗಳ ಜಯ

ಐಪಿಎಲ್: ಮೊದಲ ಪಂದ್ಯಕ್ಕೆ ಸೂರ್ಯ ಅಲಭ್ಯ?

ನವದೆಹಲಿ (ಪಿಟಿಐ): ಸ್ಫೋಟಕ ಬ್ಯಾಟರ್ ಸೂರ್ಯಕುಮಾರ್ ಯಾದವ್ ಅವರು ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಮುಂಬೈ ಇಂಡಿಯನ್ಸ್ ತಂಡದ ಮೊದಲ ಪಂದ್ಯಕ್ಕೆ ಅಲಭ್ಯರಾಗುವ ಸಾಧ್ಯತೆ ಇದೆ. ಇದೇ 27ರಂದು ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಮುಂಬೈ ಇಂಡಿಯನ್ಸ್ ಸೆಣಸಲಿದೆ.

ವೆಸ್ಟ್ ಇಂಡೀಸ್ ಎದುರಿನ ಟ್ವೆಂಟಿ20 ಸರಣಿಯ ಸಂದರ್ಭದಲ್ಲಿ ಯಾದವ್ ಅವರ ಹೆಬ್ಬೆರಳಿಗೆ ಗಾಯವಾಗಿತ್ತು. ಹೀಗಾಗಿ ಶ್ರೀಲಂಕಾ ಎದುರಿನ ಸರಣಿಯಲ್ಲಿ ಆಡಿರಲಿಲ್ಲ. ಮುಂಬೈ ಇಂಡಿಯನ್ಸ್ ಫ್ರಾಂಚೈಸ್ ಉಳಿಸಿಕೊಂಡಿರುವ ನಾಲ್ವರು ಆಟಗಾರರಲ್ಲಿ ಸೂರ್ಯಕುಮಾರ್ ಕೂಡ ಒಬ್ಬರು.

ನಾಯಕ ರೋಹಿತ್ ಶರ್ಮಾ ಮತ್ತು ಈ ಬಾರಿ ಹರಾಜಿನಲ್ಲಿ ಗರಿಷ್ಠ ₹ 15.25 ಕೋಟಿ ಮೊತ್ತಕ್ಕೆ ಖರೀದಿಸಿರುವ ಇಶಾನ್ ಕಿಶನ್ ಅವರೊಂದಿಗೆ ಸೂರ್ಯಕೂಡ ತಂಡದ ಅತ್ಯಮೂಲ್ಯ ಆಟಗಾರನಾಗಿದ್ದಾರೆ. ಮೊದಲ ಪಂದ್ಯ ಮತ್ತು ಎರಡನೇ ಪಂದ್ಯದ ನಡುವೆ ಮುಂಬೈ ಇಂಡಿಯನ್ಸ್‌ಗೆ ಐದು ದಿನಗಳ ವಿರಾಮ ಇದೆ.

ಎರಡು ಡಿಆರ್‌ಎಸ್‌ಗಳಿಗೆ ಅವಕಾಶ

ಈ ಬಾರಿಯ ಟೂರ್ನಿಯ ಪಂದ್ಯಗಳಲ್ಲಿ ಪ್ರತಿ ತಂಡಕ್ಕೆ ಎರಡು ಬಾರಿ ಅಂಪೈರ್ ತೀರ್ಪು ಮರುಪರಿಶೀಲನೆ (ಡಿಆರ್‌ಎಸ್) ಅವಕಾಶಗಳನ್ನು ನೀಡಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ನಿರ್ಧರಿಸಿದೆ. ಚೆಂಡಿಗೆ ಎಂಜಲು ತಾಗಿಸುವುದರ ಮೇಲೆ ನಿಷೇಧ ಸೇರಿದಂತೆ ಎಂಸಿಸಿ ಈಚೆಗೆ ಜಾರಿಗೆ ತಂದಿರುವ ಎಲ್ಲ ನಿಯಮಗಳೂ ಐಪಿಎಲ್‌ನಲ್ಲಿ ಪಾಲನೆಯಾಗಲಿವೆ.
ಬೌಲರ್ ಚೆಂಡು ರಿಲೀಸ್ ಮಾಡುವ ಮೊದಲೇ ನಾನ್ ಸ್ಟ್ರೈಕರ್ ಕ್ರೀಸ್ ಬಿಟ್ಟರೆ ರನೌಟ್ ಮಾಡುವುದಕ್ಕೂ (ಮಂಕಡಿಂಗ್) ಹೊಸ ನಿಯಮದಲ್ಲಿ ಅವಕಾಶವಿದೆ.

ಕ್ರೀಡಾಶಾಲೆಯಲ್ಲಿ ಆಯ್ಕೆ ಟ್ರಯಲ್ಸ್

ಬೆಂಗಳೂರು: ಕೇರಳದ ಕೋಯಿಕ್ಕೋಡ್ ಜಿಲ್ಲೆಯ ಬಾಲುಶ್ಶೇರಿಯಲ್ಲಿರುವ ಉಷಾ ಸ್ಕೂಲ್ ಆಫ್ ಅಥ್ಲೆಟಿಕ್ಸ್‌ನಲ್ಲಿ ಕ್ರೀಡಾಪಟುಗಳ ಆಯ್ಕೆ ಟ್ರಯಲ್ಸ್ ಏಪ್ರಿಲ್ 10ರಂದು ನಡೆಯಲಿದೆ. ದೇಶದ ಯಾವುದೇ ಭಾಗದ ಮಹಿಳಾ ಟ್ರ್ಯಾಕ್ ಮತ್ತು ಫೀಲ್ಡ್ ಕ್ರೀಡಾಪಟುಗಳು ಇದರಲ್ಲಿ ಪಾಲ್ಗೊಳ್ಳಬಹುದಾಗಿದೆ.

ಒಲಿಂಪಿಯನ್ ಪಿ.ಟಿ.ಉಷಾ ಅವರು ನಡೆಸುತ್ತಿರುವ ಕ್ರೀಡಾಶಾಲೆಯಲ್ಲಿ ತರಬೇತಿಗಾಗಿ 14ರಿಂದ 18 ವರ್ಷ ವಯಸ್ಸಿನವರನ್ನು ಆಯ್ಕೆ ಮಾಡಲಾಗುತ್ತದೆ. ರಾಜ್ಯಮಟ್ಟದ ಕ್ರೀಡಾಕೂಟಗಳಲ್ಲಿ ಉತ್ತಮ ಸಾಧನೆ ಮಾಡಿದವರಿಗೆ ಅವಕಾಶವಿದೆ ಎಂದು ಪ್ರಕಟಣೆ ತಿಳಿಸಿದೆ.

ಆಸಕ್ತರು ವೈಯಕ್ತಿಕ ಮಾಹಿತಿ, ಜನನ ಪ್ರಮಾಣಪತ್ರದ ಮೂಲಪ್ರತಿ, ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ, ಕ್ರೀಡಾ ಕಿಟ್ ಮತ್ತು ಸಾಧನೆಗೆ ಸಂಬಂಧಿಸಿದ ಪ್ರಮಾಣಪತ್ರದೊಂದಿಗೆ ಏಪ್ರಿಲ್ 10ರ ಬೆಳಿಗ್ಗೆ 8 ಗಂಟೆಯ ಒಳಗೆ ಶಾಲೆಯ ಆವರಣದಲ್ಲಿ ಹಾಜರಿರಬೇಕು ಎಂದು ತಿಳಿಸಲಾಗಿದೆ.

ಮಾಹಿತಿಗೆ 0496-2645811 ಅಥವಾ 9539007640 ಸಂಪರ್ಕಿಸಬಹುದು.

ಸೇಂಟ್ ಜೋಸೆಫ್ ವಾಣಿಜ್ಯ ಕಾಲೇಜಿನ ಸುವರ್ಣ ಮಹೋತ್ಸವದ ಅಂಗವಾಗಿ ಅಂತರಬ್ಯಾಚ್ ಹಾಕಿ ಟೂರ್ನಿಯ ಭಾಗವಾಗಿ ಸೋಮವಾರ ಭಾರತ ಹಾಕಿ ತಂಡದ ಮಾಜಿ ಆಟಗಾರರು ಫೈವ್ ಎ ಸೈಡ್ ಪ್ರದರ್ಶನ ಪಂದ್ಯದಲ್ಲಿ ಪಾಲ್ಗೊಂಡರು. ಒಂದು ತಂಡಕ್ಕೆ ಧನರಾಜ ಪಿಳ್ಳೈ ಮತ್ತು ಇನ್ನೊಂದಕ್ಕೆ ಗೋಲ್‌ಕೀಪರ್ ಜೂಡ್ ಫೆಲಿಕ್ಸ್ ನಾಯಕತ್ವ ವಹಿಸಿದ್ದರು. ಧನರಾಜ್ ಅವರ ತಂಡದಲ್ಲಿ ಆಶಿಶ್ ಬಲ್ಲಾಳ್, ಅನಿಲ್ ಆಲ್ಡ್ರಿನ್, ಸಂದೀಪ್ ಸೋಮೇಶ್, ಅರ್ಜುನ್ ಹಾಲಪ್ಪ, ನಿಕಿನ್ ತಿಮ್ಮಯ್ಯ, ಬಿ.ಸಿ. ಪೂನಚ್ಚ ದೇವೀಂದರ್‌ಕುಮಾರ್ ಇದ್ದರು. ಫೆಲಿಕ್ಸ್ ಅವರ ತಂಡವು ಸಾಬು ವರ್ಕೆ, ರವಿ ನಾಯ್ಕರ್, ಭರತ್ ಚೆಟ್ರಿ, ಲೆನ್ ಅಯ್ಯಪ್ಪ, ಎಸ್.ಕೆ. ಉತ್ತಪ್ಪ ಮತ್ತು ಪ್ರಕಾಶ್ ಎಂ.ಕೆ. ಅವರನ್ನು ಒಳಗೊಂಡಿತ್ತು. ಪಂದ್ಯವು 4–4ರಲ್ಲಿ ಡ್ರಾ ಆಯಿತು.

ಢಾಕಾ ಪ್ರೀಮಿಯರ್ ಲೀಗ್‌ಗೆ ಹನುಮ

ಕೋಲ್ಕತ್ತ (ಪಿಟಿಐ): ಟೆಸ್ಟ್ ಪರಿಣತ ಬ್ಯಾಟರ್ ಹನುಮ ವಿಹಾರಿ ಮತ್ತು ಬಂಗಾಳ ಕ್ರಿಕೆಟ್ ತಂಡದ ನಾಯಕ ಅಭಿಮನ್ಯು ಈಶ್ವರನ್ ಸೇರಿದಂತೆ ಭಾರತದ ಏಳು ಮಂದಿ ಆಟಗಾರರು ಢಾಕಾ ಪ್ರೀಮಿಯರ್ ಲೀಗ್ (ಡಿಪಿಎಲ್) ಏಕದಿನ ಟೂರ್ನಿಯಲ್ಲಿ ಆಡಲಿದ್ದಾರೆ.

ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯಲ್ಲಿ ಹರಾಜಾಗದೆ ಉಳಿದ ಭಾರತದ ಆಟಗಾರರಿಗೆ ಡಿಪಿಎಲ್ ಒಂದು ಮುಕ್ತ ಅವಕಾಶವಾಗಿದೆ.

ರಣಜಿ ಕ್ರಿಕೆಟ್: ಜಾರ್ಖಂಡ್‌ಗೆ ಬೃಹತ್ ಮುನ್ನಡೆ

ಕೋಲ್ಕತ್ತ (ಪಿಟಿಐ): ಜಾರ್ಖಂಡ್ ತಂಡ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಪ್ರೀ ಕ್ವಾರ್ಟರ್ ಫೈನಲ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ 591 ರನ್‌ಗಳ ಮೊದಲ ಇನಿಂಗ್ಸ್ ಮುನ್ನಡೆ ಸಾಧಿಸಿತು. ಆದರೆ ಫಾಲೊ ಆನ್ ಹೇರದೆ ಎರಡನೇ ಇನಿಂಗ್ಸ್ ಆರಂಭಿಸಿ ಸೋಮವಾರ ಅಚ್ಚರಿ ಮೂಡಿಸಿದೆ.

ನಾಗಾಲ್ಯಾಂಡ್ ವಿರುದ್ಧ ಇಲ್ಲಿನ ಈಡನ್ ಗಾರ್ಡನ್ಸ್‌ನಲ್ಲಿ ನಡೆಯುತ್ತಿರುವ ಪ್ಲೇಟ್ ಗುಂಪಿನ ಪ್ರೀ ಕ್ವಾರ್ಟರ್ ಫೈನಲ್‌ನ ಎರಡನೇ ಇನಿಂಗ್ಸ್‌ನಲ್ಲಿ 2 ವಿಕೆಟ್‌ಗಳಿಗೆ 132 ರನ್ ಗಳಿಸಿರುವ ಜಾರ್ಖಂಡ್ ಒಟ್ಟಾರೆ 723 ರನ್‌ಗಳ ಮುನ್ನಡೆ ಸಾಧಿಸಿದೆ. ಆರಂಭಿಕ ಬ್ಯಾಟರ್ ಉತ್ಕರ್ಷ್ 50 ರನ್‌ಗಳೊಂದಿಗೆ ಕ್ರೀಸ್‌ನಲ್ಲಿದ್ದಾರೆ. ಸೋಮವಾರದ ಅಂತ್ಯಕ್ಕೆ 4ಕ್ಕೆ 130 ರನ್ ಗಳಿಸಿದ್ದ ನಾಗಾಲ್ಯಾಂಡ್ ತಂಡದ ಪರ ವಿಕೆಟ್ ಕೀಪರ್ ಬ್ಯಾಟರ್ ಚೇತನ್ ಬಿಶ್ಠ್ ಮಂಗಳವಾರ ಮಿಂಚಿದರು. ಅವರ ಅಜೇಯ ಶತಕದ (122; 253 ಎಸೆತ, 13 ಬೌಂಡರಿ, 1 ಸಿಕ್ಸರ್) ನೆರವಿನಿಂದ ತಂಡ 289 ರನ್ ಕಲೆ ಹಾಕಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಜಾರ್ಖಂಡ್: 880; ನಾಗಾಲ್ಯಾಂಡ್: 103.3 ಓವರ್‌ಗಳಲ್ಲಿ 289 (ಚೇತನ್ ಬಿಷ್ಠ್ ಔಟಾಗದೆ 122, ಶ್ರೀಕಾಂತ್ ಮುಂಡೆ 39, ಶಹಬಾಜ್ ನದೀಮ್ 70ಕ್ಕೆ3);2ನೇ ಇನಿಂಗ್ಸ್: ಜಾರ್ಖಂಡ್: 37 ಓವರ್‌ಗಳಲ್ಲಿ 2ಕ್ಕೆ 132 (ಉತ್ಕರ್ಷ್ ಸಿಂಗ್ 50, ನಜೀಮ್ ಸಿದ್ದಿಕಿ 42).

ಕೋಲ್ಕತ್ತ ರೇಸ್

ಸಿಲ್ವರ್ ಫ್ಲೇಮ್ಸ್ ಗೆಲ್ಲುವ ನಿರೀಕ್ಷೆ

ನೆರೋ ಕಪ್ ಬುಧವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಸಿಲ್ವರ್ ಫ್ಲೇಮ್ಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.30ಕ್ಕೆ ಆರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಆಟಮ್ 4, ಡಿ ನೈಟ್ ಮೈಸೂರು 2, ಎಕ್ಸಾಟಿಕ್ ಕ್ವೀನ್ 1
2ನೇ ರೇಸ್: ಸೋಷಿಯಲ್ ಟ್ರೂಥ್ 1, ಬಿಗ್ ಬ್ರೌನ್ 3, ಮೆರಾಕಿ 6
3ನೇ ರೇಸ್: ಡೆಲ್ಫಿನಿ 6, ಫೆನ್ಸಿಯಾ ಗ್ಲಿಂಟ್ 1, ಗೇಲನ್ 7
4ನೇ ರೇಸ್: ವೆನ್‌ಚೆಂಗ್ 1, ಲೇಡಿ ಲಾರೇನ್ 8, ಅಗ್ರೆಷನ್ 4
5ನೇ ರೇಸ್: ಸಿಲ್ವರ್ ಫ್ಲೇಮ್ಸ್ 1, ಲೆಜೆಂಡರ್ ಸ್ಟ್ರೈಕರ್ 6, ಅಗ್ನಾಸ್ಟಿಕ್ 7
6ನೇ ರೇಸ್: ಯುವಿ 3, ಶಿವಾಲಿಕ್ ಸಿಲ್ಕ್ 4, ಅಮೆಜಾನಿಯಾ 76

ಉತ್ತಮ ಬೆಟ್: ಡೆಲ್ಫಿನಿ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

ಸೃಜನಾತ್ಮಕ ದೃಶ್ಯೀಕರಣ. ಹಾರ್ಲಿಕ್ಸ್ ದೈನಂದಿನ ಆಹಾರದ ಭಾಗವಾಗಿ ಸೇವಿಸಬೇಕಾದ ಪೌಷ್ಟಿಕ ಪಾನೀಯವಾಗಿದೆ.

ಬಾಕ್ಸಿಂಗ್: 39 ಪದಕ ಜಯಿಸಿದ ಭಾರತ

ನವದೆಹಲಿ (ಪಿಟಿಐ): ವಿಶ್ವನಾಥ್ ಸುರೇಶ್ ಮತ್ತು ವಂಶಜ್ ಅವರು ಚಿನ್ನದ ಪದಕಗಳಿಗೆ ಮುತ್ತಿಟ್ಟರು. ಇದರೊಂದಿಗೆ ಏಷ್ಯನ್ ಯೂತ್ ಮತ್ತು ಜೂನಿಯರ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ಅನ್ನು ಭಾರತ ತಂಡವು ಅಮೋಘ 39 ಪದಕಗಳೊಂದಿಗೆ ಕೊನೆಗೊಳಿಸಿತು.

ಜೋರ್ಡಾನ್‌ನ ಅಮ್ಮಾನ್‌ನಲ್ಲಿ ನಡೆದ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಬಾಕ್ಸರ್‌ಗಳಿಗೆ 15 ಚಿನ್ನ, 10 ಬೆಳ್ಳಿ ಮತ್ತು 14 ಕಂಚಿನ ಪದಕಗಳು ಒಲಿದವು. ಯೂತ್ ವಿಭಾಗದಲ್ಲಿ ಏಳು ಚಿನ್ನ, ಮೂರು ಬೆಳ್ಳಿ ಮತ್ತು ಎಂಟು ಕಂಚು ಭಾರತದ ಪಾಲಾದರೆ, ಜೂನಿಯರ್ ವಿಭಾಗದಲ್ಲಿ ಎಂಟು ಚಿನ್ನ, ಏಳು ಬೆಳ್ಳಿ ಮತ್ತು ಆರು ಕಂಚಿನ ಪದಕಗಳು ಮುಡಿ ಸೇರಿದವು.

ಪುರುಷರ ಯೂತ್ ವಿಭಾಗದ 48 ಕೆಜಿ ವಿಭಾಗದಲ್ಲಿ ವಿಶ್ವನಾಥ್ ಮತ್ತು 63.5 ಕೆಜಿ ವಿಭಾಗದಲ್ಲಿ ವಂಶಜ್ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಚಿನ್ನದ ಪದಕಗಳೊಂದಿಗೆ ಸಂಭ್ರಮಿಸಿದ ವಿಶ್ವನಾಥ್ ಸುರೇಶ್ (ಎಡ) ಮತ್ತು ವಂಶಜ್– ಟ್ವಿಟರ್ ಚಿತ್ರಗಳು

ಚೆನ್ನೈನ ವಿಶ್ವನಾಥ್ ಅವರು ಸೋಮವಾರ ರಾತ್ರಿ ನಡೆದ ಫೈನಲ್ ಬೌಟ್‌ನಲ್ಲಿ 5–0ಯಿಂದ ಕಿರ್ಗಿಸ್ತಾನದ ಎರ್ಗೆಶೋವ್ ಬೆಕ್ಷತ್ ಅವರನ್ನು ಪರಾಭವಗೊಳಿಸಿದರು.

ವಂಶಜ್ ಅವರು ಚಿನ್ನದ ಪದಕ ಸುತ್ತಿನಲ್ಲಿ 4–1ರಿಂದ ಉಜ್ಬೆಕಿಸ್ತಾನದ ಜಾವೊಕಿರ್ ಉಮ್ಮತಾಲಿಯೆವ್ ಎದುರು ಗೆದ್ದರು.

ಸೆಕ್ಸ್ ಸಮಸ್ಯೆ
ಪೌರುಷ ದೌರ್ಬಲ್ಯ ದೂರ ಮಾಡಿಕೊಳ್ಳಿ. ಇಂದ್ರಿಯದ ಆಕಾರ ಹೆಚ್ಚಿಸಿಕೊಳ್ಳಿ. ದಾಂಪತ್ಯ ಜೀವನದ ಅಸಲಿ ಆನಂದ ಪಡೆಯಿರಿ.
ಆಯುರ್ವೇದಿಕ್ ಪರಿಹಾರಕ್ಕಾಗಿ ಸತ್ಯ ಹಾಗೂ ಉಚಿತ ಸಲಹೆ ಪಡೆದುಕೊಳ್ಳಿ.
08097099064
07506062785

‘ಅಟ್ಲೆಟಿಕೊಗೆ ಜಯದ ಅವಕಾಶ’

ಬೆಂಗಳೂರು: ಮ್ಯಾಂಚೆಸ್ಟರ್ ಯುನೈಟೆಡ್ ತಂಡವು ಈಗ ಉತ್ತಮ ಲಯದಲ್ಲಿ ಇಲ್ಲ. ಹೀಗಾಗಿ ಬುಧವಾರ ನಡೆಯಲಿರುವ ಯುಇಎಫ್‌ಎ ಚಾಂಪಿಯನ್ಸ್ ಲೀಗ್‌ನ ಪಂದ್ಯದಲ್ಲಿ ಎದುರಾಳಿ ಅಟ್ಲೆಟಿಕೊ ಮ್ಯಾಡ್ರಿಡ್‌ಗೆ ಜಯದ ಅವಕಾಶ ಹೆಚ್ಚು ಎಂದು ಭಾರತ ತಂಡದ ಫುಟ್‌ಬಾಲ್ ಆಟಗಾರ್ತಿ ಅದಿತಿ ಚೌಹಾನ್ ಹೇಳಿದ್ದಾರೆ.

ಯುಇಎಫ್‌ಎ ಚಾಂಪಿಯನ್ಸ್ ಲೀಗ್‌ನ 16ನೇ ಸುತ್ತು ಎರಡನೇ ಲೆಗ್ ಪಂದ್ಯಗಳ ಕುರಿತು ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್ ಮಂಗಳವಾರ ಆಯೋಜಿಸಿದ್ದ ‘ಗ್ರೂಪ್ ಕಾಲ್’ನಲ್ಲಿ ಅವರು ಮಾತನಾಡಿದರು.

ಗುರುವಾರ ರಾತ್ರಿ 1.30ಕ್ಕೆ ನಡೆಯಲಿರುವ ಪಂದ್ಯದಲ್ಲಿ ಸ್ಪೋರ್ಟಿಂಗ್ ಕ್ಲಬ್ (ಎಲ್‌ಒಸಿಎ)– ಚೆಲ್ಸಿಯಾ ಮುಖಾಮುಖಿಯಾಗಲಿವೆ. ಸೋನಿ ಟೆನ್ ವಾಹಿನಿಯಲ್ಲಿ ಈ ಪಂದ್ಯ ನೇರ ಪ್ರಸಾರವಾಗಲಿದೆ.

ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಇಂದಿನಿಂದ: ಕಣದಲ್ಲಿ ಸಿಂಧು, ಸೇನ್, ಶ್ರೀಕಾಂತ್

ನೀಗುವುದೇ 21 ವರ್ಷದ ಪ್ರಶಸ್ತಿ ಬರ?

ಬರ್ಮಿಂಗ್‌ಹ್ಯಾಮ್ (ಪಿಟಿಐ): 21 ವರ್ಷಗಳ ಪ್ರಶಸ್ತಿ ಬರ ನೀಗುವ ನಿರೀಕ್ಷೆಯೊಂದಿಗೆ ಭಾರತದ ಬ್ಯಾಡ್ಮಿಂಟನ್ ಪಟುಗಳು ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್‌ನಲ್ಲಿ ಕಣಕ್ಕಿಳಿಯಲಿದ್ದಾರೆ.

ಬುಧವಾರ ಇಲ್ಲಿ ಆರಂಭವಾಗುವ ಚಾಂಪಿಯನ್‌ಷಿಪ್‌ನಲ್ಲಿ ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತೆ ಪಿ.ವಿ.ಸಿಂಧು, ವಿಶ್ವ ಚಾಂಪಿಯನ್‌ಷಿಪ್ ಬೆಳ್ಳಿ ಪದಕ ವಿಜೇತ ಕಿದಂಬಿ ಶ್ರೀಕಾಂತ್, ಫಾರ್ಮ್‌ನಲ್ಲಿರುವ ಯುವ ಆಟಗಾರ ಲಕ್ಷ್ಯ ಸೇನ್ ಅವರು ಭಾರತದ ಭರವಸೆ ಎನಿಸಿದ್ದಾರೆ.

ಭಾರತದ ಪುಲ್ಲೇಲ ಗೋಪಿಚಂದ್ (2001) ಮತ್ತು ಪ್ರಕಾಶ್ ಪಡುಕೋಣೆ (1980) ಅವರಿಗೆ ಇದುವರೆಗೆ ಪ್ರತಿಷ್ಠಿತ ಪ್ರಶಸ್ತಿ ಒಲಿದಿತ್ತು. ಪ್ರಮುಖ ಆಟಗಾರರಾದ ಶ್ರೀಕಾಂತ್, ಸಿಂಧು ಮತ್ತು ಸೈನಾ ಅವರಿಗೆ ಮರೀಚಿಕೆಯಾಗಿದೆ.

2015ರಲ್ಲಿ ಸೈನಾ ಅವರು ಫೈನಲ್ ತಲುಪಿದ್ದರು.

2019ರ ವಿಶ್ವ ಚಾಂಪಿಯನ್ ಸಿಂಧು ಅವರಿಗೆ ಮಹಿಳಾ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಚೀನಾದ ವಾಂಗ್ ಝಿ ಯಿ ಸವಾಲು ಎದುರಾಗಿದೆ. ಇತ್ತೀಚೆಗೆ ಕೊನೆಗೊಂಡ ಜರ್ಮನ್ ಓಪನ್ ಟೂರ್ನಿಯಲ್ಲಿ ಭಾರತದ ಆಟಗಾರ್ತಿ ಎರಡನೇ ಸುತ್ತಿನಲ್ಲೇ ಎಡವಿದ್ದರು. ಜರ್ಮನ್ ಓಪನ್ ಟೂರ್ನಿಯಲ್ಲಿ ಥಾಯ್ಲೆಂಡ್‌ನ ರಚನಾಕ್ ಇಂತನಾನ್ ಎದುರು ಪರದಾಡಿದ್ದ ಸೈನಾ ಅವರಿಗೂ ಇಲ್ಲಿಯೂ ಮೊದಲ ಸುತ್ತಿನಲ್ಲಿ ಭಾರಿ ಸವಾಲು ಎದುರಾಗಿದೆ. ವಿಶ್ವ ಕ್ರಮಾಂಕದಲ್ಲಿ 10ನೇ ಸ್ಥಾನದಲ್ಲಿರುವ ಥಾಯ್ಲೆಂಡ್ ಆಟಗಾರ್ತಿ ಪಾರ್ನ್‌ಪವಿ ಚೊಚುವಾಂಗ್ ಅವರು ಸೈನಾ ವಿರುದ್ಧ ಸೆಣಸುವರು.

ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಪಂದ್ಯದಲ್ಲಿ ಲಕ್ಷ್ಯ ಅವರು ಭಾರತದವರೇ ಆದ ಸೌರಭ್ ವರ್ಮಾ ಎದುರು ಆಡಲಿದ್ದಾರೆ. ಉತ್ತಮ ಲಯದಲ್ಲಿರುವ ಶ್ರೀಕಾಂತ್ ಅವರು ಥಾಯ್ಲೆಂಡ್‌ನ ಕಾಂತಫೋನ್ ವಾಂಗ್‌ಚೆರೊನ್ ವಿರುದ್ಧ ಕಣಕ್ಕಿಳಿಯುವರು.

ಬಿ.ಸಾಯಿ ಪ್ರಣೀತ್ ಅವರು ವಿಕ್ಟರ್ ಅಕ್ಸೆಲ್ಸೆನ್ ವಿರುದ್ಧ, ಸಮೀರ್ ವರ್ಮಾ ನೆದರ್ಲೆಂಡ್ಸ್‌ನ ಮಾರ್ಕ್ ಕಾಲ್ಜೊ ಎದುರು ಆಡಲಿದ್ದು ಶುಭಾರಂಭದ ಹಂಬಲದಲ್ಲಿದ್ದಾರೆ.

ಸಿಂಗಲ್ಸ್ ವಿಭಾಗದಲ್ಲಿ ಎಚ್.ಎಸ್. ಪ್ರಣಯ್, ಡಬಲ್ಸ್‌ನಲ್ಲಿ ಚಿರಾಗ್ ಶೆಟ್ಟಿ–ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ, ಧ್ರುವ ಕಪಿಲ– ಎಂ.ಆರ್.ಅರ್ಜುನ್, ಮಹಿಳಾ ಡಬಲ್ಸ್‌ನಲ್ಲಿ ಕರ್ನಾಟಕದ ಅಶ್ವಿನಿ ಪೊನ್ನಪ್ಪ– ಎನ್.ಸಿಕ್ಕಿರೆಡ್ಡಿ ಅದೃಷ್ಟಪರೀಕ್ಷೆಗೆ ಸಜ್ಜಾಗಿದ್ದಾರೆ.

ಪಿ.ವಿ.ಸಿಂಧು– ಪಿಟಿಐ ಚಿತ್ರ

ಲಕ್ಷ್ಯ ಸೇನ್– ಪಿಟಿಐ ಚಿತ್ರ

ಬಾಬರ್ ಶತಕ; ಆಸ್ಟ್ರೇಲಿಯಾ ಕನಸಿಗೆ ಅಡ್ಡಿ

ಕರಾಚಿ (ಎಎಫ್‌ಪಿ): ನಾಯಕ ಬಾಬರ್ ಆಜಂ ಅವರು ಮೋಹಕ ಶತಕ ಸಿಡಿಸಿ ಆಸ್ಟ್ರೇಲಿಯಾದ ಗೆಲುವಿನ ಕನಸಿಗೆ ಅಡ್ಡಿಯಾದರು. ಮಾತ್ರವಲ್ಲದೆ ಪಾಕಿಸ್ತಾನ ತಂಡದಲ್ಲಿ ಜಯದ ಭರವಸೆ ಮೂಡಿಸಿದರು.

ಇಲ್ಲಿ ನಡೆಯುತ್ತಿರುವ ಟೆಸ್ಟ್ ಪಂದ್ಯದಲ್ಲಿ 506 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಪಾಕಿಸ್ತಾನ ನಾಲ್ಕನೇ ದಿನದಾಟದ ಮುಕ್ತಾಯಕ್ಕೆ ಎರಡು ವಿಕೆಟ್‌ಗಳಿಗೆ 192 ರನ್ ಗಳಿಸಿದೆ. ಗೆಲುವಿಗೆ ಕೊನೆಯ ದಿನ ತಂಡ 314 ರನ್ ಗಳಿಸಬೇಕಾಗಿದೆ. ಗೆದ್ದರೆ ಟೆಸ್ಟ್ ಇತಿಹಾಸದಲ್ಲಿ ಹೊಸ ದಾಖಲೆ ಮೂಡಲಿದೆ.

2 ರನ್ ಗಳಿಸುವಷ್ಟರಲ್ಲಿ ಪಾಕಿಸ್ತಾನ ಮೊದಲ ವಿಕೆಟ್ ಕಳೆದುಕೊಂಡಿತ್ತು. ಇಮಾಮ್ ಉಲ್ ಹಕ್ ಒಂದು ರನ್ ಗಳಿಸಿ ಸ್ಪಿನ್ನರ್ ನೇಥನ್ ಲಯನ್ ಎಸೆತದಲ್ಲಿ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದಿದ್ದರು. 21 ರನ್ ಗಳಿಸುವಷ್ಟರಲ್ಲಿ ಅಜರ್ ಅಲಿ ಕೂಡ ವಾಪಸಾದರು. ಈ ಸಂದರ್ಭದಲ್ಲಿ ಅಬ್ದುಲ್ಲ ಶಫೀಕ್ ಅವರ ಜೊತೆಗೂಡಿದ ಬಾಬರ್ ಎದುರಾಳಿ ಬೌಲರ್‌ಗಳನ್ನು ದಿಟ್ಟವಾಗಿ ಎದುರಿಸಿದರು. 12 ಬೌಂಡರಿ ಗಳೊಂದಿಗೆ 197 ಎಸೆತಗಳಲ್ಲಿ 102 ರನ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 9ಕ್ಕೆ 556 ಡಿಕ್ಲೇರ್ಡ್; ಪಾಕಿಸ್ತಾನ: 148; ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ: 2ಕ್ಕೆ 97 (ಉಸ್ಮಾನ್ ಖ್ವಾಜಾ ಔಟಾಗದೆ 44, ಮಾರ್ನಸ್ ಲಾಬುಶೇನ್ ಔಟಾಗದೆ 44; ಶಹೀನ್ ಶಾ ಅಫ್ರಿದಿ 21ಕ್ಕೆ1, ಹಸನ್ ಅಲಿ 23ಕ್ಕೆ1); ಪಾಕಿಸ್ತಾನ: 82 ಓವರ್‌ಗಳಲ್ಲಿ 2ಕ್ಕೆ 192 (ಅಬ್ದುಲ್ಲ ಶಫೀಕ್ ಬ್ಯಾಟಿಂಗ್ 71, ಬಾಬರ್ ಆಜಂ ಬ್ಯಾಟಿಂಗ್ 102; ನೇಥನ್ ಲಯನ್ 50ಕ್ಕೆ1, ಕ್ಯಾಮರಾನ್ ಗ್ರೀನ್ 15ಕ್ಕೆ1).

‘ಅಂತರರಾಷ್ಟ್ರೀಯ ಮಹಿಳಾ ದಿನದಂದು’ ಭಾರತದಲ್ಲಿ ‘ನಂಬಲಸಾಧ್ಯ ದಾಖಲೆ’ ನಿರ್ಮಿಸಿದ ‘ಸಚ್ಚಿ ಸಹೇಲಿ’

1,16,241 ಮಹಿಳೆಯರ ಮನೆಗೆ ಉಚಿತ ಉಡುಗೊರೆ ರವಾನಿಸುವ ಮೂಲಕ

ಚಂದೀಗಢ್. ದಿವಿಸಾ ಹರ್ಬಲ್ಸ್ ಪ್ರೈ. ಲಿ., ಸಂಸ್ಥೆಯು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ದಿನದಂದು ಭಾರತದ ಸಮಸ್ತ ಮಹಿಳೆಯರಿಗಾಗಿ “ಮೇರಾ ಗಿಫ್ಟ್” ಎಂಬ ಒಂದು ಅಭಿಯಾನ ಹಮ್ಮಿಕೊಂಡಿತ್ತು. ಈ ಅಭಿಯಾನದ ಕುರಿತಂತೆ, ಮಾರ್ಚ್ 8 ರಂದು ಭಾರತದ ವಿವಿಧ ಜನಪ್ರಿಯ ದಿನಪತ್ರಿಕೆಗಳ, ಪ್ರಸಿದ್ಧ ಟಿವಿ ವಾಹಿನಿಗಳ ಮತ್ತು ವಿಭಿನ್ನ ಡಿಜಿಟಲ್ ಮೀಡಿಯಾ ಮಾಧ್ಯಮಗಳ ಮುಖಾಂತರ ಸಾಕಷ್ಟು ಮಾಹಿತಿ ಪ್ರಸಾರ ಮಾಡಲಾಗಿತ್ತು. ಈ ಉಡುಗೊರೆಯನ್ನು ಪಡೆಯಲು, ಕಂಪನಿಯು ಒದಗಿಸಿದ ಕ್ಯೂಆರ್ ಕೋಡ್ ಒಂದನ್ನು ಮಹಿಳೆಯರು ಸ್ಕ್ಯಾನ್ ಮಾಡಬೇಕಿತ್ತಷ್ಟೆ. ಕೋಡ್ ಸ್ಕ್ಯಾನ್ ಮಾಡಿದ ಬಳಿಕ, ಆಯಾ ಮಹಿಳೆಯರಿಗೆ ಸಚ್ಚಿ ಸಹೇಲಿ ಆಯುರ್ವೇದಿಕ ಟಾನಿಕ್ ಬಾಟಲಿ ಒಂದನ್ನು ಅವರ ಮನೆ ಬಾಗಿಲಿನಲ್ಲೇ ಸುಲಭವಾಗಿ ಲಭಿಸುವಂತೆ ರವಾನಿಸಲಾಯಿತು.

ಕಂಪನಿಯ ಪ್ರತಿನಿಧಿ ಸೋನಿಯಾ ಬಜಾಜ್ ಹೇಳಿಕೆಯ ಪ್ರಕಾರ, ಈ ಕೊಡುಗೆ ಮಾರ್ಚ್ 8 ರಂದು ರಾತ್ರಿ 12:01 ಗಂಟೆಗೆ ಆರಂಭವಾಯಿತು ಮತ್ತು ಕೆಲವೇ ಗಂಟೆಗಳಲ್ಲಿ ಲಕ್ಷಾಂತರ ಮಹಿಳೆಯರು ಸಚ್ಚಿ ಸಹೇಲಿ ಜಾಲತಾಣಕ್ಕೆ ಭೇಟಿ ನೀಡಿದ್ದರು. ಪ್ರತಿ ನಿಮಿಷಕ್ಕೂ ಸಾವಿರಾರು ಆರ್ಡರ್‌ಗಳು ಕಂಪನಿಗೆ ಲಭಿಸತೊಡಗಿದ್ದವು. ಇದನ್ನು ಕಂಡು, ಮುಂದೆ ಎದುರಾಗಬಹುದಾದ ಆಗು ಹೋಗುಗಳನ್ನು ಮನಗಂಡ ಕಂಪನಿಯು ಅನಿವಾರ್ಯವಾಗಿ ಸದರಿ ಅಭಿಯಾನವನ್ನು ರಾತ್ರಿ 2 ಗಂಟೆಗೆ ಅಂತ್ಯಗೊಳಿಸಬೇಕಾಯಿತು.

ಈ ಅಭಿಯಾನದಲ್ಲಿ ಯಾವುದೇ ಗ್ರಾಹಕರಿಂದ, ಯಾವುದೇ ರೀತಿಯ ಶುಲ್ಕ ಪಡೆಯಲಾಗಿಲ್ಲ ಮತ್ತು ಶಿಪ್ಪಿಂಗ್ ಶುಲ್ಕ ಕೂಡ ಆಕರಿಸಿಲ್ಲ. ಉಚಿತ ಸಚ್ಚಿ ಸಹೇಲಿ ಆಯುರ್ವೇದಿಕ ಟಾನಿಕ್ ಉತ್ಪನ್ನವನ್ನು ಆರ್ಡರ್ ಮಾಡುವ ವಿಧಾನವು ಅತ್ಯಂತ ಸರಳವಾಗಿದ್ದರಿಂದ, ಅಪಾರ ಮಹಿಳೆಯರು ಸದರಿ ಅಭಿಯಾನದ ಲಾಭ ಪಡೆದುಕೊಂಡಿದ್ದಾರೆ. ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ದಿನದಂದು, ಈ ಉತ್ಪನ್ನವನ್ನು ಆರ್ಡರ್ ಮಾಡಿ ತಮ್ಮ ಆರೋಗ್ಯ ನಿರ್ವಹಣೆ ಮಾಡಿಕೊಳ್ಳಬೇಕೆಂದು ಉತ್ಸುಕರಾಗಿದ್ದ 1,16,241 ಮಹಿಳೆಯರಿಗೆ ಕಂಪನಿಯಿಂದ ಈ ಉಡುಗೊರೆ ಕಳುಹಿಸಲಾಗಿದೆ.

ಕೊರಿಯರ್ ಶುಲ್ಕವನ್ನು ಕೂಡ ಕಂಪನಿಯೇ ಭರಿಸಿದೆ.

ಈ ಅಭಿಯಾನಕ್ಕೆ ಕೋಟ್ಯಾಂತರ ರೂಪಾಯಿ ವ್ಯಯಿಸಲಾಗಿದೆ.

ಎಲ್ಲರಿಗೂ ತಿಳಿದಿರುವಂತೆ, ಮಹಿಳೆಯರು ತಮ್ಮ ಜಂಜಟಭರಿತ ಜೀವನಶೈಲಿಯ ಕಾರಣದಿಂದಾಗಿ ತಮ್ಮದೇ ಆರೋಗ್ಯದ ಬಗ್ಗೆ ಕಾಳಜಿ ವಹಿಸುವಲ್ಲಿ ವಿಫಲರಾಗುತ್ತಾರೆ. ಅದಾಗ್ಯೂ, ಈ ಅಭಿಯಾನದ ಸಂದರ್ಭದಲ್ಲಿ ಭಾರತದ ಸುಮಾರು ಒಂದು ಲಕ್ಷಕ್ಕೂ ಅಧಿಕ ಮಹಿಳೆಯರು ಸಚ್ಚಿ ಸಹೇಲಿ ಆರ್ಡರ್ ಮಾಡುವ ಮೂಲಕ, ತಾವು ಕೂಡ ಆರೋಗ್ಯದ ಬಗ್ಗೆ ಕಾಳಜಿವಹಿಸಬಲ್ಲೆವು ಎಂಬುದನ್ನು ಸಾಬೀತುಪಡಿಸಿದ್ದಾರೆ.

ತಮ್ಮ ಮಾತು ಮುಂದುವರಿಸಿದ ಸೋನಿಯಾ, ಇದು ಮಹಿಳೆಯರು ಹಲವಾರು ವರ್ಷಗಳಿಂದ ಸಚ್ಚಿ ಸಹೇಲಿ ಮಾತ್ರ ತಮ್ಮ ನಿರೀಕ್ಷೆಯವರೆಗೆ ಜೀವಿಸಲು ನೆರವಾಗಬಲ್ಲದು ಎಂಬ ವಿಶ್ವಾಸರ್ಹತೆಯ ಬಗ್ಗೆ ರುಜುವಾತುಪಡಿಸಿದೆ. ಭಾರತ ಮೂಲೆ ಮೂಲೆಗಳಲ್ಲಿರುವ ಮಹಿಳೆಯರು ಇದನ್ನು ಸೇವಿಸುತ್ತಿದ್ದಾರೆ ಮತ್ತು ಈ ಉತ್ಪನ್ನವು ಪ್ರತಿ ಮನೆಯ ಅಗತ್ಯ ವಸ್ತುವಾಗಿ ಪರಿಣಮಿಸುತ್ತಿದೆ.

ದಯವಿಟ್ಟು ನಿಮ್ಮ ಗಮನದಲ್ಲಿರಲಿ, ದಿವಿಸಾ ಹರ್ಬಲ್ಸ್ ಸಂಸ್ಥೆಯ ಉತ್ಪನ್ನವಾದ ‘ಸಚ್ಚಿ ಸಹೇಲಿ ಆಯುರ್ವೇದಿಕ ಟಾನಿಕ್’ ಅನ್ನು 67 ನೈಸರ್ಗಿಕ ಮೂಲಿಕೆಗಳಿಂದ ತಯಾರಿಸಲಾಗಿದ್ದು, ಈ ಮೂಲಿಕೆಗಳು ಮಹಿಳೆಯರನ್ನು ಬಾಧಿಸುವ ನೋವು, ಸಿಡುಕು, ಸುಸ್ತು, ಅಶಕ್ತತೆ, ಕೆಳ ಬೆನ್ನುನೋವು ಮತ್ತು ಇಮ್ಯುನಿಟಿ ಮುಂತಾದ ಸಮಸ್ಯೆಗಳನ್ನು ನಿವಾರಿಸುವಲ್ಲಿ ಸಹಕಾರಿಯಾಗಿದೆ. ಭಾರತೀಯ ಸಿನೆಮಾ ರಂಗದ ಪ್ರಸಿದ್ಧ ಚಿತ್ರನಟಿ ರವೀನಾ ಟಂಡನ್ ಕೂಡ ಇದನ್ನು ಉಪಯೋಗಿಸುತ್ತಿರುವುದು ಹೆಮ್ಮೆಯ ಸಂಗತಿಯಲ್ಲವೆ! ಎನ್ನುತ್ತ ತಮ್ಮ ಮಾತು ಮುಗಿಸಿದರು.

-Advt.

with you hamesha Mahindra 1800-209-6006 customercare@mahindra.com
UDAY
ಹತ್ತು ಲಕ್ಷ ಮೊತ್ತದ ಅಪಘಾತ ವಿಮೆ ಮತ್ತು ಇತರ ಅನೇಕ ಆಕರ್ಷಕ ಲಾಭಗಳು, ಕೇವಲ ಉದಯ್ ಸದಸ್ಯರಿಗಾಗಿ.
ತೋರಿಸಿರುವ ಆ್ಯಕ್ಸೆಸರೀಸ್, ಸ್ಟ್ಯಾಂಡರ್ಡ್ ಎಕ್ವಿಪ್‌ಮೆಂಟ್‌ನ ಭಾಗಗಳಲ್ಲ.
*ನಿಬಂಧನೆಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ.
ANANT CARS AUTO PVT LTD: MYSORE ROAD, KR PURAM – 8884499043; 8884499042 **INDIA GARAGE BANGALORE:** LALBAUG ROAD, CHIKKABALLAPURA, PEENYA, BIDADI, NELAMANGALA-8884498958; **SIDDHANTH MOTORS BANGALORE:** HOSUR ROAD, ANEKAL, HOSKOTE , YESHWANTPUR- 8448481362; **PPS MOTORS:** KENGERI, KANAKPURA ROAD, DEVANAHALLI, HBR LAYOUT & KANAKPURA TOWN - 9311243644; **HONNASARI MOTORS:** TUMKUR – 9513353925

24x7 Helpline: 85568 09999

*Gain weight according to your body capability to absorb extra calories from Accumass, Results may vary.
ಅಕ್ಯೂಮಾಸ್ ಆಯುರ್ವೇದಿಕ್ ಹರಳುಗಳು

ರಾಷ್ಟ್ರೀಯ ಆರೋಗ್ಯ ಅಭಿಯಾನ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು – 560 023.
e-mail : ddehospital-hfws@karnataka.gov.in, Ph.: 080-23295626

ನಂ.: e-H/Tablet Devices/87/2018-19 (Part) ದಿನಾಂಕ: 14.03.2022

ಟೆಂಡರ್ ಪ್ರಕಟಣೆ

ರಾಷ್ಟ್ರೀಯ ಆರೋಗ್ಯ ಅಭಿಯಾನದ ಇ–ಆರೋಗ್ಯ ವಿಭಾಗದಡಿ ಟ್ಯಾಬ್ಲೆಟ್ ಡಿವೈಸ್‌ಗಳನ್ನು ಖರೀದಿಸಲು ಇ–ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ಟೆಂಡರ್ ಕರೆಯಲಾಗಿದೆ.

ತಾಂತ್ರಿಕ ವಿವರಣೆ, ಇ.ಎಂ.ಡಿ ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಇ–ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ: https://eproc.karnataka.gov.in ನಲ್ಲಿ ಈ ಕೆಳಕಂಡಂತೆ ಟೆಂಡರ್‌ಗಳ ದಸ್ತಾವೇಜನ್ನು ಡೌನ್‌ಲೋಡ್ ಹಾಗೂ ಅಪ್‌ಲೋಡ್ ಮಾಡಬಹುದು.

(1) ಟೆಂಡರ್ ಅಧಿಸೂಚನೆ ಸಂಖ್ಯೆ: **NRHM/2021-22/IND282**. ಟೆಂಡರ್ ದಸ್ತಾವೇಜನ್ನು ಡೌನ್‌ಲೋಡ್ ಮಾಡುವ **ದಿನಾಂಕ: 14.03.2022**. ಟೆಂಡರ್‌ಗಳ ದಸ್ತಾವೇಜನ್ನು ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ: 12.04.2022ರ ಸಂಜೆ 5:30 ಗಂಟೆಯವರೆಗೆ.**

ಇತರೆ ಮಾಹಿತಿಯನ್ನು ಟೆಂಡರ್ ದಸ್ತಾವೇಜುವಿನಲ್ಲಿ ಪಡೆಯಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.

ಸಹಿ/– ಉಪ ನಿರ್ದೇಶಕರು
(ಇ–ಆರೋಗ್ಯ)

DIPR/DDU/BCPL/3777/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

Dr. Juneja's
ಡಾ.ಆರ್ಥೋ®
Ayurvedic Oil, Capsules, Spray & Ointment

KNEE CAP

ಮಂಡಿಗಳಿಗೆ ಆಧಾರ ಮತ್ತು ಅನುಕೂಲ



ಇತ್ತೀಚೆಗಿನ ಜಡಭರಿತ, ನಿಷ್ಕ್ರಿಯ ಅಥವಾ ಸೆಡೆಂಟರಿ ಜೀವನಶೈಲಿಯು ಬಹುತೇಕ ಜನರ ಜೀವನದ ಮೇಲೆ ಗಂಭೀರ ಪರಿಣಾಮ ಬೀರಿದೆ. ಇದರಿಂದಾಗಿ ಹಿರಿಯ ನಾಗರಿಕರು ಮಾತ್ರವಲ್ಲದೆ, ಯುವಜನಾಂಗ ಕೂಡ ಕೀಲುಗಳ ನೋವಿಗೆ, ವಿಶೇಷವಾಗಿ ಮಂಡಿಗಳ ನೋವಿನ ಸಮಸ್ಯೆಗೆ ಈಡಾಗಿದ್ದಾರೆ. ಇಂತಹ ಸಂಕಷ್ಟದ ಪರಿಸ್ಥಿತಿಯಲ್ಲಿ **ಡಾ. ಆರ್ಥೋ ಪೇನ್ ರಿಲೀಫ್ ನೀ ಕ್ಯಾಪ್** ನಿಮಗೆ ನೆರವಾಗಬಲ್ಲದು. ಇದು ನಿಮ್ಮ ಮಂಡಿಗಳಿಗೆ ಸಮರ್ಪಕ ಶಾಖ ಒದಗಿಸುವ ಮೂಲಕ ಮಂಡಿ ನೋವು ನಿವಾರಿಸಲು ಸಹಕರಿಸುತ್ತದೆ. ಅಲ್ಲದೆ, ಇದು ಫ್ಲೆಕ್ಸಿಬಲ್ ಆಗಿರುವುದರಿಂದ ನಿಮ್ಮ ಸಹಜ ಚಲನವಲನಗಳಿಗೆ ಕೂಡ ಅನುಕೂಲಕರವಾಗಿದೆ.

ಡಾ. ಆರ್ಥೋ ನೀ ಕ್ಯಾಪ್ ಹಗುರವಾಗಿದ್ದು, ಬಳಸಲು ಅನುಕೂಲಕರವಾಗಿದೆ ಮತ್ತು ಇದನ್ನು ಉತ್ಕೃಷ್ಟ ಗುಣಮಟ್ಟದ ಪದಾರ್ಥಗಳಿಂದ ತಯಾರಿಸಲ್ಪಟ್ಟಿದೆ. ನೀವು ಇದನ್ನು ವ್ಯಾಯಾಮ ಮಾಡುವಾಗ, ಓಡುವಾಗ ಅಥವಾ ನಡೆದಾಡುವಾಗ ಕೂಡ ಧರಿಸಬಹುದು. ಇದು ನಿಮಗೆ ನೋವುರಹಿತವಾಗಿ ಚಟುವಟಿಕೆಗಳನ್ನು ನಿರ್ವಹಿಸಲು ನೆರವಾಗುತ್ತದೆ. ಇದು ರಕ್ತ ಪರಿಚಲನೆಯನ್ನು ಹೆಚ್ಚಿಸುವ ಮತ್ತು ಸುಸ್ತು ಅಥವಾ ಆಯಾಸವನ್ನು ಕಡಿಮೆಗೊಳಿಸುವ ಮೂಲಕ ನೀವು ಮಂಡಿ ನೋವಿನಿಂದ ಬಳಲುವಿಕೆಯನ್ನು ನಿವಾರಿಸುತ್ತದೆ. ಇದನ್ನು ನೀವು ಆಟಗಳನ್ನು ಆಡುವಾಗಲೂ ಧರಿಸಬಹುದು. ಒಂದು ವೇಳೆ ನಿಮ್ಮ ದೇಹದ ತೂಕದ ಅಧಿಕವಾಗಿದ್ದಲ್ಲಿ, **ಡಾ. ಆರ್ಥೋ ನೀ ಕ್ಯಾಪ್** ಬಳಸಿರಿ, ಇದು ನಿಮ್ಮ ಮಂಡಿಗಳು ದೇಹದ ಅಧಿಕ ಭಾರದ ಒತ್ತಡಕ್ಕೆ ಈಡಾಗಿರುವ ಬಳಲಿಕೆಯನ್ನು ಕಡಿತಗೊಳಿಸುತ್ತದೆ. ಇದು ನಿಮ್ಮ ಚಲನವಲನಗಳು ಸಹಜವಾಗಿರಲು ಮಂಡಿಗಳಿಗೆ ಅನುಕೂಲ, ಆಕುಂಚನ ಮತ್ತು ಸಡಿಲತೆಯನ್ನು ಒದಗಿಸುತ್ತದೆ.

BUY NOW
One Pair
MRP ₹320/-
Wanted Distributors all over India
For more information please mail :
teamsales@divisa.in, M. 8146145555

Karnataka S.S.: Rakesh Enterprises (Banglore) : 23579251, Shree Rama sales (Yellapur) : 9449138897, 8495044717, Bagalkot : 9448227557, 8354224860, 9448227557, 8892691166, 9743831913, 9449624037, Bangalore : 9845474878, 26617033, 40933079, 9739106157, 26710008, 9449723416, 9448081790, 22257385, 26677013, 9844140253, 22874575, 9482220974, 9449647135, 9242253210, 22264329, 22241647, 22235533, 9036021900, 9845350230, 8025523763, 9448219410, 8147573584, 8022870983, 8694021912, 8050741006, 9845725339, 9902706395, 9845257154, 22876452, Belgaum : 9481747964, 4206784, 4203187, 9686551066, 2462656, 9243219520, 4205691, 9845817152, 9845817152, 9902564635, 9620891375, 9242804049, 9902713070, 9916313433, Bellary : 9448072810, 272810, 7204572834, 274640, 9902877330, 9844059284, 227195, Bidar : 230200, 84822302, 9902237421, 9448350146, Bijapur : 9343234482, 9972087727, 9036542764, 9448013005, 9448652451, 7795193422, 9035107399, Chikkaballapura : 9845616394, 9980420024, 9845366649, 9845623253, 9880241465, Chikmagalur : 9242899048, Chitradurga : 8150073566, 9880031266, Dakshina Kannada : 9480842900, 2496963, 9844077991, 9480842900, 9448452134, 9845225521, 9845142812, 2453353, 9739641159, 9448123933, 8971222132, Davanagere : 295021, 272600, 2272685, 9880708064, 235741, 9902999359, 9449814423, 9845035121, 9844285033, Dharwad : 2221201, 9880212686, 2221331, 4258371, 2221292, 2221344, 8362360870, 9844770060, 9900430413, Gadag : 9343938893, Gulbarga : 9845808570, 9845808570, 9343834519, 9242239281, 7899958055, 9739699688, 8088175001, 9880801434, 9449618981, Hassan : 231048, 9480375846, 325058 9980842664, 9448957465, 9448885697, Haveri : 9844323973, 8147498820, 9448232120, 9739144449, 9900071761, Hubli : 9945093823, Kolar : 224583, Koppal : 220713, Mandya : 223951, Mysore : 8214000156, 242799, 9980615431, 9243580210, 9845445430, 8050655443, Raichur : 227756, 9886945550, 9900932939, 9880336111, 9983661742, Ramanagara : 9686815278, Shimoga : 9242312949, 222642, 270738, 8951733781, 271692, 228944, 9480473867, Tumkur : 4011453, 4014475, 9632446447, Udupi : 802535188, 9483153633, 9844292250, 9483153633, 9880143804, Uttara Kannada : 9916250217, 9980872214, Vijayapura : 8352258886